UNIVERSAL
LIBRARY
OU_200571
UNIVERSAL
LIBRARY

University of Mysore

Oriental Library Publications
KANNADA SERIES No 21

ಕುಮಾರವ್ಯಾಸ ಮಹಾಕವಿ ವಿರಚಿತ

ಕರ್ಣಾಟಕ ಮಹಾಭಾರತ

ಎಂಟನೆಯ ಸಂಪುಟ

ದ್ರೋಣಪರ್ವ

THE

KARNATAKA MAHABHARATA

BY

KUMARA VYASA

DRONAPARVA

Vol. VIII

EDITED BY
M S BASAVALINGAYYA, M.A., B.T.,
Acting Curator, Govt. Oriental Library, Mysore

AND

N. ANANTARANGACHAR M.A., B.T.,
Pandit, Govt. Oriental Library, Mysore

MYSORE
PRINTED BY THE ASST. SUPT., GOVT. BRANCH PRESS
1936

ಮುನ್ನುಡಿ

ಮೈಸೂರು ಪ್ರಾಚ್ಯಕೋಶಾಗಾರದಿಂದ ಹಿಂದೆ ಪ್ರಕಟವಾದ ಭೀಷ್ಮಪರ್ವದಂತೆಯೇ ಈ ದ್ರೋಣಪರ್ವವೂ ಪ್ರಾಚ್ಯಕೋಶಾಗಾರದ ಕಾರ್ಯನಿರ್ವಾಹಕ ಸಮಿತಿಯಿಂದ ಭಾರತದ ಶೋಧನೆಗಾಗಿ ಏರ್ಪಟ್ಟಿದ್ದ ಈ ಕೆಳಗೆ ಕಾಣುವ ಸದಸ್ಯರನ್ನುಳ್ಳ ಸಂಪಾದಕಮಂಡಲಿಯ ಸಹಾಯದಿಂದ ಶೋಧಿತವಾಗಿ ಮುದ್ರಿತವಾಗಿದೆ :—

ಸಂಪಾದಕಮಂಡಲಿಯ ಸದಸ್ಯರು.-

ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.
,, ಟಿ. ಎಸ್. ವೆಂಕಣ್ಣಯ್ಯ, ಎಂ.ಎ.
,, ಡಿ. ಶ್ರೀನಿವಾಸಾಚಾರ್ಯ, ಎಂ.ಎ.
,, ಟಿ. ಎನ್. ಶ್ರೀಕಂಠಯ್ಯ, ಎಂ.ಎ.

ಈ ಪರ್ವವನ್ನು ಒಂಬತ್ತು ಕೈಬರಹದ ಪ್ರತಿಗಳ ಆಧಾರದಿಂದ ತಿದ್ದಿದೆ. ಇವುಗಳಲ್ಲಿ (ಚ.ತ.ನ.ಪ.ಬ.) ಪ್ರತಿಗಳನ್ನು ಬಿಟ್ಟು ಉಳಿದುವು ಕೋಶಾಗಾರದಲ್ಲಿರತಕ್ಕುವು. (ಚ.) ಎಂಬುದು ಅಳಿಲುಘಟ್ಟದ ಶ್ಯಾನುಭೋಗರು ಕೊಟ್ಟ ಪ್ರತಿ. (ತ.) ಎಂಬುದು ಶಾಸನದ ಇಲಾಖೆಯ ಅಸಿಸ್ಟೆಂಟರಾದ ಶ್ರೀಮಾನ್ ಆರ್. ರಾಮರಾಯರು, ಬಿ.ಎ., ಅವರ ಮೂಲಕ ಗೌಮುಗ್ರಾಮದ ಬ್ರ॥ ಶ್ರೀ॥ ಗಣೇಶಭಟ್ಟರಿಂದ ಬಂದ ಪ್ರತಿ ; ಸಾಮಾನ್ಯವಾಗಿ ಶುದ್ಧವಾಗಿದೆ. (ನ.) ಎಂಬುದು ಮಹಾರಾಜರವರ ಕಾಲೇಜಿನ ಕನ್ನಡ ಪಂಡಿತರಾದ ಶ್ರೀಮಾನ್ ಡಿ. ಎಲ್. ನರಸಿಂಹಾಚಾರ್ಯರು ಕೊಟ್ಟ ಪ್ರತಿ. (ಪ) ಮತ್ತು (ಬ.) ಎಂಬುವು ಕ್ರಮವಾಗಿ ಮದ್ರಾಸ್ ಪ್ರಾಚ್ಯಕೋಶಾಗಾರದ ೧೭–೮–೧೦ ಮತ್ತು ೧೮–೧–೨೦ ನೆಯ ನಂಬರಿನ ಪ್ರತಿಗಳು. ಇವೆರಡೂ ಪ್ರಾಚೀನ ಪ್ರತಿಗಳಂತೆ ತೋರುತ್ತವೆ.

ಕೋಶಾಗಾರದ ಪ್ರತಿಗಳಲ್ಲಿ :—

ಕ. ಇದು ಕೈಬರಹದ ಕೆ. ೨೦೫ನೆಯ ನಂಬರಿನ ಪ್ರತಿ. ಕ್ರಿ. ಶ. ೧೫೫೪ರಲ್ಲಿ ಪ್ರತಿಯಾದುದು. ಇದುವರೆಗೆ ನಮಗೆ ದೊರೆತಿರುವ ಕನ್ನಡ ಮಹಾಭಾರತದ ಕೈಬರಹದ ಪ್ರತಿಗಳಲ್ಲಿ ಇದೇ ಅತ್ಯಂತ ಪ್ರಾಚೀನವಾದುದೆಂದು ಹೇಳಬಹುದು. ಸಾಮಾನ್ಯವಾಗಿ ಇದರ ಪಾಠವನ್ನೇ ಮೂಲ ಪಾಠವನ್ನಾಗಿ ಅಂಗೀಕರಿಸಿದೆ.

ಗ. ಇದು ಕೆ. ೭೦ನೆಯ ನಂಬರಿನ ಪ್ರತಿ. ಶಾ. ಶ. ೧೭೬೩ರಲ್ಲಿ ಪ್ರತಿಯಾದುದು.

ಟ. ಇದು ಕೆ. ೩೫೧ನೆಯ ನಂಬರಿನ ಪ್ರತಿ.

ದ. ಇದು ಕೆ. ೧೬೩ನೆಯ ನಂಬರಿನ ಪ್ರತಿ. ಪಾಠವು ಶುದ್ಧವಾಗಿದೆ.

ಭೀಷ್ಮಪರ್ವದಂತೆಯೇ ಈ ಪರ್ವವನ್ನು ಶೋಧನೆ ಮಾಡುವುದರಲ್ಲಿಯೂ ಎಲ್ಲ ಪ್ರತಿಗಳಲ್ಲಿಯೂ ದೊರೆಯುವ ಪದ್ಯಗಳನ್ನೇ ಮೂಲಪಾಠವನ್ನಾಗಿಟ್ಟುಕೊಂಡು ಕೆಲವು ಪ್ರತಿಗಳಲ್ಲಿ ಮಾತ್ರ ದೊರೆಯುವ ಪದ್ಯಗಳಲ್ಲಿ ಸೂಕ್ತವಾಗಿ ಕಂಡುಬಂದುವುಗಳನ್ನು ಒಂದೆರಡು ಪದ್ಯಗಳಾಗಿದ್ದರೆ ಪುಟದಡಿಯಲ್ಲಿಯೂ ಅನೇಕ ಪದ್ಯಗಳಾಗಿದ್ದರೆ ಕೊನೆಯಲ್ಲಿ ಪರಿಶಿಷ್ಟವಾಗಿಯೂ ಕೊಟ್ಟಿದೆ.

ಪಾಠಗಳನ್ನು ಶೋಧಿಸುವುದಕ್ಕೆ ಪ್ರತಿಗಳನ್ನು ದಯವಿಟ್ಟು ಕೊಟ್ಟು ಸಹಾಯಮಾಡಿದ ಮಹನೀಯರೆಲ್ಲರಿಗೂ ಪ್ರಾಚ್ಯಕೋಶಾಗಾರವು ಋಣಿಯಾಗಿದೆ.

ವಿಷಯಾನುಕ್ರಮಣಿಕೆ

ಸಂಧಿ	ವಿಷಯ	ಪುಟ.
೧.	ದ್ರೋಣಾಚಾರ್ಯರ ಸೇನಾಧಿಪತ್ಯಾಭಿಷೇಕ	೧–೧೮
೨.	ಧರ್ಮರಾಯನನ್ನು ಹಿಡಿದು ತರುತ್ತೇನೆಂಬುದಾಗಿ ದ್ರೋಣಾಚಾರ್ಯರು ಪ್ರತಿಜ್ಞೆ ಮಾಡುವುದು	೧೯–೩೮
೩.	ಭಗದತ್ತ ಭೀಮಾರ್ಜುನರ ಯುದ್ಧ	೩೯–೫೬
೪.	ಪದ್ಮವ್ಯೂಹರಚನೆ ಮತ್ತು ಅಭಿಮನ್ಯುವಿನ ಪದ್ಮವ್ಯೂಹ ಪ್ರವೇಶ	೫೭–೭೧
೫.	ಪದ್ಮವ್ಯೂಹದಲ್ಲಿ ಅಭಿಮನ್ಯುವಿನ ಯುದ್ಧ	೭೨–೯೦
೬.	ಅಭಿಮನ್ಯುವಿನ ಮರಣ	೯೧–೧೦೭
೭.	ಅಭಿಮನ್ಯುವಿನ ಮರಣವನ್ನು ಕುರಿತು ಧರ್ಮರಾಯನ ಪ್ರಲಾಪ	೧೦೮–೧೧೭
೮.	ಮಗನ ಮರಣವಾರ್ತೆಯನ್ನು ಕೇಳಿದ ಅರ್ಜುನನ ಪ್ರಲಾಪ ಮತ್ತು ಸೈಂಧವ ಸಂಹಾರ ಪ್ರತಿಜ್ಞೆ	೧೧೮–೧೩೪
೯.	ದ್ರೋಣಾಚಾರ್ಯರ ಯುದ್ಧಸನ್ನಾಹ	೧೩೫–೧೪೬
೧೦.	ಅರ್ಜುನನ ಯುದ್ಧ ಮತ್ತು ದುರ್ಯೋಧನನು ಸೋತು ಹಿಮ್ಮೆಟ್ಟುವುದು	೧೪೭–೧೬೧
೧೧.	ಸಾತ್ಯಕಿ ಚಕ್ರವ್ಯೂಹವನ್ನು ಪ್ರವೇಶಿಸಿ ಅರ್ಜುನನನ್ನು ಕಾಣುವುದು	೧೬೨–೧೬೬
೧೨.	ಭೀಮಸೇನನ ಯುದ್ಧ	೧೬೭–೧೭೪
೧೩.	ಭೀಮನು ದ್ರೋಣಾಚಾರ್ಯರನ್ನು ಸಂಧಿಸುವುದು, ಬಳಿಕ ಚಕ್ರವ್ಯೂಹವನ್ನು ಪ್ರವೇಶಿಸಿ ಕರ್ಣನೊಡನೆ ಯುದ್ಧ ಮಾಡಿ ನೋಯುವುದು	೧೭೫–೧೯೦
೧೪.	ಸೈಂಧವನ ವಧೆ	೧೯೧–೨೦೨
೧೫.	ಘಟೋತ್ಕಚನ ಕಾಳಗ	೨೦೩–೨೧೮
೧೬.	ಕರ್ಣನು ಘಟೋತ್ಕಚನನ್ನು ಕೊಲ್ಲುವುದು	೨೧೯–೨೩೧
೧೭.	ದ್ರೋಣಾಚಾರ್ಯರ ಯುದ್ಧ	೨೩೨–೨೪೨
೧೮.	ದ್ರೋಣಾಚಾರ್ಯರ ಮರಣ	೨೪೩–೨೫೯
೧೯.	ಅಶ್ವತ್ಥಾಮನು ಪ್ರಯೋಗಿಸಿದ ನಾರಾಯಣಾಸ್ತ್ರದಿಂದ ಶ್ರೀಕೃಷ್ಣನು ಪಾಂಡವರನ್ನು ಕಾಪಾಡುವುದು	೨೬೦–೨೭೩
	ಪರಿಶಿಷ್ಟ	೨೭೫–೨೯೬

ಕನ್ನಡ ಮಹಾಭಾರತ

ದ್ರೋಣಪರ್ವ

ಒಂದನೆಯ ಸಂಧಿ

ಸೂಚನೆ || ರಾಯ ಕಟಕ ಪಿತಾಮಹನ ತಱು
ವಾಯಲಭಿಷೇಕವನು ಕೌರವ
ರಾಯ ಮಾಡಿಸಿ ಪತಿಕರಿಸಿದನು ಕುಂಭಸಂಭವನ ||

ಸೋಲಿಸಿತೆ ಕರ್ಣಾಮೃತದ ಮಳೆ
ಗಾಲ ನಿನ್ನಯ ಕಿವಿಗಳನು ನೆಱೆ
ಕೇಳಿದೈ ಕೌರವನ ಕದನದ ಬಾಲಕೇಳಿಗಳ |
ಹೇಳುವುದು ತಾನೇನು ಕೆಂಗಱು
ಗೋಲ ಮಂಚದ ಮಹಿಮನಿರವನು
ಮೇಲುಪೋಗಿನ ಕಥೆಯನವಧಾನದಲಿ ಕೇಳೆಂದ || ೧

ಬತ್ತಿತಂಬುಧಿ ನಿನ್ನ ಮಗ ಹೊಗು
ವತ್ತ ಕಾದುದು ನೆಲನು ನೃಪ ತಲೆ
ಗುತ್ತಿ ಹೊಗಲೊಳಕೊಳ್ಳದಂಬರವೇನನುಸುರುವೆನು |
ಮೃತ್ಯು ನಿನಗೊಲಿದಿಹಳು ಬಳಿಕಿ
ನ್ನುತ್ತರೋತ್ತರವೆಲ್ಲಿಯದು ನೆಱೆ
ಚಿತ್ತವಿಸುವುದು ಜೀಯ ದ್ರೋಣಂಗಾಯ್ತು [1]'ಹಱು'ವೆಂದ || ೨

ಐದು ದಿವಸದೊಳಹಿತ ಬಲವನು
ಹೊಯ್ದು ಹೊಡೆಕುಟ್ಟಾಡಿ ರಿಪುಗಳೊ
ಳೈದೆ ದೊರೆಗಳನಿಱಿದು ಮೆಱೆದನು ಭುಜ ಮಹೋನ್ನತಿಯ |
ಕೈದುಕಾಱರ ಗುರು ಛಡಾಳಿಸಿ
ಮೈದೆಗೆದು ನಿರ್ಜರರ ನಗರಿಗೆ
ಹಾಯ್ದನನಲುರಿ ಜಠರದಲಿ ಮೋಹರಿಸಿತವನಿಪನ || ೩

[1] ಪಱು (ಗ.ಚ.ತ).

ಶಿವಶಿವಾ ಭೀಷ್ಮಾವಸಾನ
ಶ್ರವಣ ವಿಷವಿದೆ ಮತ್ತೆ ಕಳಶೋ
ದ್ಭವನ ದೇಹವ್ಯಥೆಯ ಕೇಳ್ದೆನೆ ಪೂತು ವಿಧಿಯೆನುತ ।
ಅವನಿಪತಿ ದುಗುಡದಲಿ ಮೋಱೆಯ
ಲವುಚಿದನು ಕರತಳವ ಚಿತ್ತದ
ಬವಣಿಗೆಯ ಭಾರಣೆಯ ಕಡುಶೋಕದಲಿ ಮೈಮಱೆದ ॥ ೪

ಶೋಕವೇತಕೆ ಜೀಯ ನೀನವಿ
ವೇಕಿತನದಲಿ ಮಗನ ಹೆಚ್ಚಿಸಿ
ಸಾಕಿ ಕಲಿಸಿದೆ ಕುಟಿಲತನವನು [1]ಕುಹಕ[1]ವಿದ್ಯೆಗಳ ।
ಆಕೆವಾಳರು ಹೊಱಗೆಯುಳ್ಳ ವಿ
ವೇಕಿಗಳು ನಿಮ್ಮಲ್ಲಿ ಸಲ್ಲರು
ಸಾಕಿದೇತಕೆ ಸೈರಿಸೆಂದನು ಸಂಜಯನು ನೃಪನ ॥ ೫

ಆರು ಕುಹಕಿಗಳಾರು ದುರ್ಜನ
ರಾರು ಖುಲ್ಲರು ನೀತಿ ಬಾಹಿರ
ರಾರು ದುರ್ಬಲರವರು ನಿನ್ನರಮನೆಯ ಮಂತ್ರಿಗಳು ।
ಆರು ಹಿತವರು ನೀತಿ ಕೋವಿದ
ರಾರು ಸುಜನರು ಬಹುಪರಾಕ್ರಮ
ರಾರವರ ಹೊಱ[2]ಬೀಸಿ[2]ಕಾಬುದು ನಿನ್ನ ಮತವೆಂದ ॥ ೬

ಹಱದುದ್ದೈ ಕುರು ಸೇನೆ ಬತ್ತಿದ
ಕೆಱೆಯೊಳಗೆ ಬಲೆಯೇಕೆ ಹಗೆ ಹೊ
ಕ್ಕಿಱವರಿನ್ನಾರಡ್ಡಬೀಳ್ವರು ನಿನ್ನ ಮಕ್ಕಳಿಗೆ ।
ಬಱದೆ ಮನ ನೋಯದಿರು ಸಾಕೆ
ಚ್ಚಱುವುದೆನೆ ತನ್ನೊಳಗೆ ಹದುಳಿಸಿ
ನಱುಹೃದಯನೀ ಮಾತನೆಂದನು ಮತ್ತೆ ಸಂಜಯಗೆ ॥ ೭

ಘಾಸಿಯಾದೆನು ಮಗನ ಮೇಲಿ
ನ್ನಾಸೆ ಬೀತುದು ಬೆಂದ ಹುಣ್ಣಲಿ
ಸಾಸಿವೆಯ ಬಳಿಯದಿರು ಸಂಜಯ ನಿನಗೆ ದಯವಿಲ್ಲ ।

[1] ಖುಲ್ಲ (ಪ). [2] ಗಿಕ್ಕಿ (ಬ).

ಏಸು ಬಲುಹುಂಟಾದರೆಯು ಹಗೆ
ವಾಸುದೇವನ ಹರಿಬವೆಂದಾ
ನೇಸನೊರಲಿದೆನೇನಮಾಡುವೆನೆಂದನಂಧನೃಪ ॥ ೮

ಬೇಡ ಮಗನೇ ಪಾಂಡುಸುತರಲಿ
ಮಾಡು ಸಂಧಿಯನಸುರ ರಿಪುವಿನ
ಕೂಡೆ ವಿಗ್ರಹವೊಳ್ಳಿತೇ ಹಗೆ ಹೊಲ್ಲ ದೈವದಲಿ ।
ಪಾಡು ತಪ್ಪಿದ ಬಳಿಕ ವಿನಯವ
ಮಾಡಿ ಮೆಱೆವುದು ಬಂಧು ವರ್ಗದ
ಕೂಡೆ ವಾಸಿಗಳೇತಕೆನ್ನೆನೆ ನಿನ್ನ ಮಾನವಱಿಯೆ ॥ ೯

ಹೋಗಲಿನ್ನಾ ಮಾತು ಖೂಳರು
ತಾಗಿ ಬಾಗರು ಸುಕೃತ ದುಷ್ಕೃತ
ಭೋಗವದು ಮಾಡಿದರಿಗಪ್ಪುದು ಖೇದ ನಮಗೇಕೆ ।
ಈಗಲೀ ಕದನದಲಿ ವಜ್ರಕೆ
ಬೇಗಡೆಯ ಮಾಡಿದನದಾವನು
ತಾಗಿ ದ್ರೋಣನ ಮುಱಿದ ಪರಿಯನು ರಚಿಸಿ ಹೇಳೆಂದ ॥ ೧೦

ಚಿತ್ತವಿಸು ಧೃತರಾಷ್ಟ್ರ ಮಲಗಿದ
ಮುತ್ತಯನ ಬೀಳ್ಕೊಂಡು ಕೌರವ
ರಿತ್ತ ಸರಿದರು ಪಾಂಡುನಂದನರತ್ತ ತಿರುಗಿದರು ।
ಹೊತ್ತ ಮೋನದ ವಿವಿಧ ವಾದ್ಯದ
ಕೆತ್ತ ಬಾಯ್ಗಳ ಪಾಠಕರ ಕೈ
ಹತ್ತುಗೆಯ ಮೋಱೆಯ ಮಹೀಪತಿ ಹೊಕ್ಕನರಮನೆಯ ॥ ೧೧

ಗಾಹು ಕೊಳ್ಳದ ಭೀಮ ಪಾರ್ಥರ
ಸಾಹಸವನೆಣಿಸುತ ಕಠಾರಿಯ
ಮೋಹಳದ ಮೇಲಿಟ್ಟ ಗಲ್ಲದ ಮಕುಟದೊಲಹುಗಳ ।
ಊಹೆದೆಗಹಿನ ಕಂಬನಿಯ ತನಿ
ಮೋಹರದ ಘನ ಶೋಕ ವಹ್ನಿಯ
ಮೇಹುಗಾಡಿನ ಮನದ ಕೌರವನಿತ್ತನೋಲಗವ ॥ ೧೨

ಗುರುತನುಜ ವೃಷಸೇನ ಮಾದ್ರೇ
ಶ್ವರ ಕಳಿಂಗ ವಿಕರ್ಣ ದುಸ್ಸಹ
ದುರುಳ ಶಕುನಿ ಸುಕೇತು ಭೂರಿಶ್ರವ ಜಯದ್ರಥರು ।
ವರ ಸುಲೋಚನ ವಿಂದ್ಯ ಯವನೇ
ಶ್ವರರು ಕೃಪ ಕೃತವರ್ಮ ಭಗದ
ತ್ತರು ಮಹಾಮಂತ್ರಿಗಳು ಬಂದರು ರಾಯನೋಲಗಕೆ ॥ ೧೩

ತೊಡರ ಝಣಝಣ ರವದ ಹೆಗಲಲಿ
ಜಡಿವ ಹಿರಿಯುಬ್ಬಣದ ಹೆಚ್ಚಿದ
ಮುಡುಹುಗಳ ಮಿಗೆ ಹೊಳೆವ ಹೀರಾವಳಿಯ [1]ಕೊರಳುಗಳ ।
ಕಡು ಮನದ ಕಲಿ ರಾಜಪುತ್ರರ
ನಡುವೆ ಮೈಪರಿಮಳದಿ ದೆಸೆ ಕಂ
ಪಿಡಲು ಭಾರವಣೆಯಲಿ ಬಂದನು ಕರ್ಣನೋಲಗಕೆ ॥ ೧೪

ಇತ್ತ ಬಾರೈ ಕರ್ಣ ಕುರುಕುಲ
ಮತ್ತವಾರಣ ಕುಳ್ಳಿರೈ ಬಾ
ಯಿತ್ತ ಬಾ ತನ್ನಾಣೆಯೆನುತವೆ ಸೆಱಗ ಹಿಡಿದೆಳೆದು ।
ಹತ್ತಿರಾತನ ನಿಲಿಸಿ ಬಟ್ಟಲ
ಲಿತ್ತು ವೀಳೆಯವನು ಸುಯೋಧನ
ಕೆತ್ತುಕೊಂಡಿರೆ ನುಡಿಸಿದನು ಕಲಿಕರ್ಣನವನಿಪನ ॥ ೧೫

ಜೀಯ ದುಗುಡವಿದೇಕೆ ಬಿಡು ಗಾಂ
ಗೇಯನಳುಕಿದರೇನು ಕಾಣಿಯ
ಬೀಯದಲಿ ಬಡವಹುದೆ ಕನಕಾಚಲ ನಿಧಾನಿಸಲು ।
ರಾಯ ಜಗಜಟ್ಟಿಗಳು ರಣದೊಳ
ಜೇಯರಿದೆ ಪರಿವಾರವನು ನಿ
ರ್ದಾಯದಲಿ ದಣಿಸುವೆನು ರಿಪುಗಳ ಸಿರಿಯ ಸೂಱೆಯಲಿ ॥ ೧೬

ಕರ್ಣ ಕರ್ಣ ಕಠೋರ ಸಾಹಸ
ನಿರ್ಣಯಿಸು ಪರಸೈನ್ಯ ಸುಭಟ ಮ
ಹಾರ್ಣವಕೆ ಬಿಡು ನಿನ್ನ ವಿಕ್ರಮ-ಬಾಡಬಾನಳನ ।

[1] ಪದಕ (ಗ.ಚ.ಪ).

ಪೂರ್ಣಕಾಮನು ನೀನು ಕುರುಬಲ
ಕರ್ಣಧಾರನು ನೀನು ವಿಶ್ವ ವಿ
ಕರ್ಣ ನೀನೇ ರಕ್ಷಿಸೆಂದುದು ನಿಖಿಳ ಪರಿವಾರ ॥ ೧೭

ಕಾದುವೆನು ರಿಪುಭಟರ ಜೀವವ
ಸೇದುವೆನು ಸಮರಂಗಭೂಮಿಯು
ನಾದುವೆನು ನೆಣಗೊಬ್ಬಿನಹಿತರ ಗೋಣ ರಕುತದಲಿ ।
ಹೋದ ದಿವಸಂಗಳಲಿ ಕಾಳೆಗ
ಮಾದುದಂದಿನ ಭೀಷ್ಮರೊಡನೆ ವಿ
ವಾದಕಾರಣ ಬೇಡಿಕೊಳಬೇಹುದು ನದೀಸುತನ ॥ ೧೮

ಎಂದು ನೃಪತಿಯ ಬೀಳುಕೊಂಡಿನ
ನಂದನನು ಬೊಂಬಾಳದೀಪದ
ಸಂದಣಿಗಳಲಿ ಸೆಳೆದ[1]ಡಾಯ್ದದ[1] ಭಟರ [2]ಮುತ್ತಿಗೆಯ[2] ।
ಮುಂದೆ ಪಾಯುವಧಾರು ರಿಪುನೃಪ
ಬಂದಿಕಾಱವಧಾರು ಧಿರುಪಯ
ವೆಂದು ಕಳಕಳ ಗಜಱು ಮಿಗೆ ಕುರುಭೂಮಿಗೈತಂದ ॥ ೧೯

ಹಾಯಿದವು ನರಿನಾಯಿಗಳು ಕಟ
ವಾಯಲೆಳಲುವ ಕರುಳಿನಲಿ ಬಸಿ
ವಾಯ ರಕುತದಲೋಡಿದವು ರಣಭೂತ ದೆಸೆದೆಸೆಗೆ ।
ಆಯುಧದ ಹರಹುಗಳ ತಲೆಗಳ
[3]ಡೋಯಿಗೆಯ[3] ಕಡಿಖಂಡಮಯದ ಮ
ಹಾಯತದ ರಣದೊಳಗೆ ಬಂದನು ಭೀಷ್ಮನಿದ್ದೆಡೆಗೆ ॥ * ೨೦

[1] ಡಾಯುಧ (ಕ.ಗ.ಚ), [2] ಮುಂಗುಡಿಯ. (ಕ.ಟ.ತ.ದ.ಪ). [3] ದೋಯಿಗಳ (ದ), * ಈ ಕೆಳಗಿರುವ ಪದ್ಯವು (ಟ) ಪ್ರತಿಯಲ್ಲಿ ಮಾತ್ರ ೨೦ನೆಯ ಪದ್ಯವಾದಮೇಲೆ ಇದೆ.

ಬರುತ ಕಂಡನು ಭೀಷ್ಮನಿರವನು
ಮರಣವದು ತನ್ನಿಚ್ಛೆಯಿಂದಿರೆ
ಧುರಕೆ ತಲೆಗೊಡುವಂತೆ ಮಾಡಿತೆ ವಿಧಿ ಸಮರ್ಥನಲ ।
ವರವು ಬಾಹಿರವಹುದು ದೈವದ
ಕರುಣ ತಪ್ಪಿದ ಬಳಿಕ ಜನನವೆ
ಮರಣ ನಿಶ್ಚಯವೆನುತ ಭೀಷ್ಮನ ಕಂಡನಾ ಕರ್ಣ ॥

ಸರಳ ಮಂಚವ ಹೊದ್ದಿ ಭೀಷ್ಮನ
ಚರಣ ಕಮಲವ ಹಿಡಿದು ನೊಸಲಿನೊ
ಳೊರಸಿಕೊಂಡನು ನಾದಿದನು ಕಂಬನಿಯೊಳಂಘ್ರಿಗಳ ।
ಕರುಣಿಸೈ ಗಾಂಗೇಯ ಕರುಣಾ
ಶರಧಿಯೈ ಖಳ ತಿಲಕ ಕರ್ಣನ
ದುರುಳತನವನು ಮಱೆದು ಮೆಱೆವುದು ನಿಮ್ಮ ಸದ್ಗುಣವ ॥ ೨೧

ಎನಲು ಹೃದಯಾಂಬುಜದ ಪೀಠದ
ವನಜನಾಭ ಧ್ಯಾನ ಸುಧೆಯಲಿ
ನನೆದು ಹೊಂಗಿದ 'ಕರಣ[1] [2]ಹೊರೆಯೇಱಿತ್ತು' ನಿಮಿಷದಲಿ ।
ತನು ಪುಳಕ [3]ತಲೆದೋಱೆ[3] ರೋಮಾಂ
ಚನದ ಬಿಗುಹಡಗಿತ್ತು ಕಂಗಳ
ನನೆಗಳರಳಿದವಾಯ್ತು ಭೀಷ್ಮಂಗಿತ್ತಣವಧಾನ ॥ ೨೨

ಅಳಲದಿರು ಬಾ ಮಗನೆ ಕುರುಕುಲ
ತಿಲಕನವಸರದಾನೆ ರಿಪು ಮಂ
ಡಳಿಕ ಮಸ್ತಕ ಶೂಲ ಬಾರೈ ಕರ್ಣ ಬಾಯೆನುತ ।
ತುಳುಕಿದನು ಕಂಬನಿಯ ಕೋಮಳ
ತಳದಿ ಮೈದಡವಿದನು ಕೌರವ
ನುಳಿವು ನಿನ್ನದು ಕಂದ ಕದನವ ಜಯಿಸು ಹೋಗೆಂದ ॥ ೨೩

ಗಾಱುಗೆಡೆದೆನು ನಿಮ್ಮನೋಲೆಯು
ಕಾಱತನದುಬ್ಬಿನಲಿ ತನಿ ಮದ
ವೇಱಿ ನಿಮ್ಮಲಿ ಸೆಣಸಿದೆನು ಸೇನಾಧಿಪತ್ಯದಲಿ ।
ದೂಱಿ ಹೊತ್ತೆನು ರಣದ ಮಿಾಸಲಿ
ನೇಱು ತಪ್ಪಿತು ನೀಲ ಮಣಿ ತಲೆ
ಗೇಱಿಸಿದ ತೃಣವದಕೆ ಸರಿಯೇ ಭೀಷ್ಮ ಹೇಳೆಂದ ॥ * ೨೪

ತನುಜ ತಪ್ಪೇನದಕೆ ಕಾಳೆಗ
ವೆನಗೆ ತನಗೆನಬೇಕು ವೀರರು
ಮನದ ಕಲಿತನದುಬ್ಬುಗೊಬ್ಬಿನಲೆಂಬರಿದಕೇನು ।

---

[1] ಕರುಣ (ಕ). [2] ಹೊಗರೇಱಿತ್ತು (ಕ), ಹೊಡೆದೋರಿದುದು (ಪ ಬ). [3] ವಡಗಿದವು (ಗ.ಪ), ವರಳಿದವು (ಚ), ವುಬ್ಬಿದುದು (ಟ.ತ). * ಈ ಪದ್ಯವು (ನ) ಪ್ರತಿಯಲ್ಲಿಲ್ಲ.

ಮನದೊಳಗೆ ಖತಿಯಿಲ್ಲ ದುರಿಯೋ
ಧನ ನೃಪತಿಯೋಪಾದಿ ನೀ ಬೇ
ಱೆನೆಗೆ ಲೋಗನೆ [1]ಕಂದ[1] [2]ಕದನವ ಜಯಿಸು[2] ಹೋಗೆಂದ ||* ೨೫

ಆಳುತನದ ದೊಠಾರತನ ಸರಿ
ಯಾಳಿನಲಿ ಸೆಣಸಾದೊಡೊಳ್ಳಿತು
ಮೇಳವೇ ಗುರು ದೈವದಲಿ ಕಟ್ಟುವರೆ ಬಿರುದುಗಳ |
ಹಾಳಿ ಹಸುಗೆಯನಱಿಯದಾ ಹೀ
ಹಾಳಿಗೆಡಿಸಿದೆನಂದು ಸಭೆಯಲಿ
ಖೂಳನವಗುಣ ಶತವ ನೋಡದೆ [3]ನಿಮ್ಮ ಮೆಱೆ[3]ಯೆಂದ || ೨೬

ನೋವು ಮನದೊಳಗುಳ್ಳಡಾ ರಾ
ಜೀವಲೋಚನನಾಣೆ ಮಗನೇ
ಜೀವ ಕೌರವನಲ್ಲಿ ಕರಗುವುದೇನ ಹೇಳುವೆನು |
ಆವನಾತನ ಬಂಧುವಾತನೆ
ಜೀವವೆನ್ನಯ ದೆಸೆಯ ಭಯ ಬೇ
ಡಾವ ಪರಿಯಿಂದವನನುಳುಹುವ ಹದನ ಮಾಡೆಂದ || ೨೭

ಎನ್ನ ಹವಣೇ ಹಗೆಯ ಗೆಲುವಡೆ
ನಿನ್ನ ವಂದಿಗರಿರಲು ನೂಕದು
ತನ್ನ ಸಾಹಸವೆಲ್ಲಿ ಪರಿಯಂತಹುದು ಕದನದಲಿ |
ಗನ್ನಕಾಱನು ಕೃಷ್ಣನವರಿಗೆ
ತನ್ನನೊಚ್ಚತಗೊಟ್ಟನಹಿತರ
ನಿನ್ನು ಗೆಲುವವರಾರು ಜಯವೆಲ್ಲಿಯದು ನಮಗೆಂದ || ೨೮

ಆಲವಟ್ಟದ ಗಾಳಿಯಲಿ ಮೇ
ಘಾಳಿ ಮುರಿವುದೆ ಮಿಂಚುಬುಳುವಿಗೆ
ಸೋಲುವುದೆ ಕತ್ತಲೆಯ ಕಟಕವು ಜೀಯ ಚಿತ್ತೈಸು |
ಸೀಳಬಹುದೇ ಸೀಸದುಳಿಯಲಿ
ಶೈಲವನು ಹರಿಯೊಲಿದ ಮನುಜರ
ಮೇಲೆ ಮುನಿದೇಗುವರು ಕೆಲಬರು ಭೀಷ್ಮ ಹೇಳೆಂದ || ೨೯

[1] ತಂದೆ (ದ). [2] ಚಿಂತಿಸಬೇಡ (ಗ.ಟ.ತ.ದ.ಬ). * ಈ ಪದ್ಯವು (ನ) ಪ್ರತಿಯಲ್ಲಿಲ್ಲ. [3] ನೀವು ಮಱೆ (ತ.ನ).

ಲೇಸನಾಡಿದೆ ಕರ್ಣ ದಿಟ ನೀ
ನೀಸು ಸಮ್ಯಜ್ಞಾನಿಯೆಂಬುದ
ನೀಸು ದಿನ ನಾವಱಿಯೆವೈ ನೀ ಸತ್ಕುಲೀನನಲಾ ।
ಆ ಸುಯೋಧನಗಱುಹಿ ಸಂಧಿಯ
ನೀ ಸಮಯದಲಿ ಘಟಿಸು ನೀನೆನ
ಲೈಸ ಮಿಾಱನು ಪಾಂಡವರ ಸಂಪ್ರತಿಯ ಮಾಡೆಂದ ॥ ೩೦

ಜೀಯ [1]ಮಂತ್ರದ[1] ಮಾತು ರಾವುತ
ಪಾಯಕರಿಗೊಪ್ಪುವುದೆ ಅವರವ
ರಾಯತದಲೋಲೈಸಬೇಹುದು ಮೇರೆ ಮಾರ್ಗದಲಿ ।
ರಾಯನೊಲಿದುದ ಹಿಡಿವೆನೊಲ್ಲದ
ದಾಯವನು ಬಿಡುವೆನು ನಿಜಾಭಿ
ಪ್ರಾಯವಿದು ಸಂಪ್ರತಿಯ ನುಡಿ ತನಗಂಗವಲ್ಲೆಂದ ॥ ೩೧

ಭಾನು[2]ಸನ್ನಿಭ[2] ಮರಳು ಭೂಪನ
ಹಾನಿ ವೃದ್ಧಿಗಳೆಲ್ಲ ನಿನ್ನದು
ನೀನು ಪಂಥದ ಜಾಣನಲ್ಲಾ ವಿಜಯನಾಗೆನಲು ।
ಆ ನದೀಸುತನಡಿಗೆಱಗಿ ರವಿ
ಸೂನು ಕಳುಹಿಸಿಕೊಂಡು ಬಹಳ ಮ
ನೋನುರಾಗದಲೈದಿದನು ಕುರುರಾಯನೋಲಗವ ॥ ೩೨

[3]ಭಾನುಸುತ[3] ಕುಳ್ಳಿರು ನದೀಸುತ
ನೇನನೆಂದನು ತನ್ನ ಚಿತ್ತ
ಗ್ಲಾನಿಯನು ಬಿಸುಟೇನ ನುಡಿದನು ಭಾವ ಶುದ್ಧಿಯಲಿ ।
ಏನನೆಂದನು ಜೀಯ ಬಹಳ ಕೃ
ಪಾನಿಧಿಯಲಾ ಭೀಷ್ಮನನುಸಂ
ಧಾನವಿಲ್ಲದೆ ಬೆಸಸಿ ಕಳುಹಿದನೆಂದನಾ ಕರ್ಣ ॥ ೩೩

ಇನ್ನು [4]ಸೇನಾಪತಿಯದಾರೈ[4]
ನಿನ್ನ ಮತವೇನುದಯವಾಗದ
ಮುನ್ನ ಬವರವ ಹಿಡಿಯಬೇಹುದು ವೈರಿ ರಾಯರೊ ।

[1] ಸಂಧಿಯ (ಕ.ಜ.ತ.ಪ). [2] ನಂದನ (ಬ). [3] ಮಾನನಿಧಿ (ಟ).
[4] ದಳವಾಯ್ತನವದಾರಿಗೆ (ಕ.ತ.ನ).

ಎನ್ನು ನಿನ್ನಭಿಮತವನೆನೆ ಸಂ
ಪನ್ನ ಭುಜ ಬಲ ದ್ರೋಣನಿರಲಾ
ರಿನ್ನು ಸೇನಾಪತಿಗಳೆಂದನು ಭೂಪತಿಗೆ ಕರ್ಣ ॥ ೩೪

ಪ್ರಭೆಯದಾರಿಗೆ ಸೂರ್ಯನಿದಿರಿನೊ
ಳಭವನಿರೆ ತಾನಾರು ಭುವನಕೆ
ವಿಭುಗಳೈ ವೈಕುಂಠನಿದಿರಿನೊಳಾರು ದೇವತೆಯೈ ।
ವಿಭವ ನದಿಗಳಿಗುಂಟೆ ಜಲಧಿಯ
ರಭಸದಿದಿರಲಿ ನಮ್ಮ ಬಲದಲಿ
ಸುಭಟರಾರೈ ದ್ರೋಣನಿರುತಿರಲೆಂದನಾ ಕರ್ಣ ॥ ೩೫

ಜಾಗು ಜಾಗುರೆ ಕರ್ಣ ಪರರ ಗು
ಣಾಗಮವ ಪತಿಕರಿಸಿ ನುಡಿವವ
ನೀಗಳಿನ ಯುಗದಾತನೇ ಮಝು ಪೂತು ಭಾಪೆನುತ ।
ತೂಗು ವೆರಳಿನ ಮಕುಟದೊಲಹಿನೊ
ಳಾ ಗರುವ ಭಟರುಲಿಯೆ ಲಹರಿಯ
ಸಾಗರದ ಸೌರಂಭದಂತಿರೆ ಮಸಗಿತಾಸ್ಥಾನ ॥ ೩೬

ನುಡಿಸು ನಿಸ್ಸಾಳವನು ಕರೆ ಹೊಂ
ಗೊಡನ ಹಿಡಿದೈತರಲಿ ನಾರಿಯ
ರೆಡ ಬಲನು ತೆಱಹಾಗಲಿಕ್ಕಲಿ ಸಿಂಹ ವಿಷ್ಟರವ ।
ತಡವು ಬೇಡೆನೆ ಕೌರವೇಂದ್ರನ
ನುಡಿಗೆ ಮುನ್ನನುವಾಯ್ತು ವಿಪ್ರರ
ಗಡಣ ಬಂದುದು ರಚಿಸಿದರು ಮೂರ್ಧಾಭಿಷೇಚನವ ॥ * ೩೭

---

[1] ಈ ಕೆಳಗಿನ ಪದ್ಯವು (ಟ) ಪ್ರತಿಯಲ್ಲಿ ಮಾತ್ರ ೩೭ನೆಯ ದಾದಮೇಲೆ ಇದೆ :—

ಒಡನೊಡನೆ ಸುಮುಹೂರ್ತದಲಿ ಬಿರು
ನುಡಿಯ ನಿಸ್ಸಾಳದಲಿ ಮೋಹಿದ
ಪುಡುಗೊರೆಯನೀಡಿದರು ಹಱೆಯಲಿ ವಿವಿಧ ಪಟ್ಟವನು ।
ಮೃಡನ ತೇಜದಲೊಲೆವ ದ್ರೋಣಗೆ
ಮಡದಿಯರು ಹರಿವಾಣದಾರತಿ
ಹಿಡಿದು ತಂದೆತ್ತಿದರು ಸಂತಸಬಡಲು ಸಕಲಜನ ॥

ಸಕಲ ಸಾವಂತರು ಮಹೀಪಾ
ಲಕರು ಬಂದುದು ಚರಣದಲಿ ಕಾ
ಣಿಕೆಯನಿಕ್ಕಿತು ಕೈಯ ಮುಗಿದುದು ನಿಖಿಳ ಪರಿವಾರ ।
ಮಕುಟ ರತ್ನದ ಲಹರಿ ಖಡುಗದ
ವಿಕಟ ಧಾರಾರಶ್ಮಿ ದೀಪ
ಪ್ರಕರದಲಿ ಥಳಥಳಿಸೆ ರವಿಯವೊಲೆಸೆದನಾ ದ್ರೋಣ ॥ ೩೮

ಅರಸ ಬೇಡ್ಕೈ ವರವನೆನ್ನನು
ಕರೆದು ಮಿಗೆ ಪತಿಕರಿಸೆ ಬಳಿಕಾ
ಬಱಿದೆ ಹೋಹೆನೆ ಮೆಚ್ಚಿದುದ ನುಡಿ ಖೇಡತನವೇಕೆ ।
ಹೊರೆ ಹೊಗದೆ ಹೇಳೆನಲು ನಗೆ ಮೊಗ
ವರಳಿ ಹೊಂಪುಳಿ[1][ವೋ][1]ಗಿ ಕೌರವ
ರರಸ ನುಡಿದನು ಕಟ್ಟಿಕೊಡಿ ಧರ್ಮಜನ ನನಗೆಂದು ॥ ೩೯

ಮರಣ ಮಂತ್ರಾನುಗ್ರಹವನವ
ಧರಿಸಬಹುದೇ ಮಗನೆ ಪಾರ್ಥನ
ಪರಿಯನಱಿಯಾ ಹಿಡಿಯಲೀವನೆ ಧರ್ಮನಂದನನ ।
ಅರಿದ ಬೇಡಿದೆ ತನಗೆ ನೂಕದ
ವರವ ವಚನಿಸಿ ಮಾಡದಿಹ ಬಾ
ಹಿರರು ನಾವಲ್ಲೆನಲು ಕೌರವರಾಯನಿಂತೆಂದ ॥ ೪೦

ಕೊಡುವಡಿದು ವರವಲ್ಲದಿದ್ದರೆ
ನುಡಿಗೆ ಮೊಳೆ ಹೊಮ್ಮುವರೆ ನಿಮ್ಮಯ
ತೊಡಕನೊಲುವವನಲ್ಲ ನೀವೇ ಬಲ್ಲಿರೆನೆ ನಗುತ ।
ಹಿಡಿದು ಬಿಗಿವೆನು ಪಾರ್ಥನನು ಕೆಲ
ಕಡೆಗೆ ತಪ್ಪಿ[2]ಸಿ[2] ಧರ್ಮಪುತ್ರನ
ಬಿಡೆನು ನಿನ್ನಯ ಪುಣ್ಯದಳತೆಯನಱಿಯಬಹುದೆಂದ ॥ ೪೧

ಸಾಕಿದೊಳ್ಳಿತು ಚಾಪ ತಂತ್ರ ವಿ
ನಾಕಿಯೇಱಿಸಿ ನುಡಿದ ನುಡಿಗಳು
ಕಾಕಹುದೆ ಕೈಕೊಂಡೆವೆನುತವನೀಶ ಹರುಷದಲಿ ।

---

[1] ಯೋ (ನ). [2] ಸು (ಕ.ಚ.ತ).

ಆ ಕೃಪಾದಿ ಮಹಾಪ್ರಧಾನಾ
ನೀಕವನು ಕಳುಹಿದನು ಮನೆಗೆ ದಿ
ವಾಕರನು ಹೆಡತಲೆಗೆ ಹಗಱಿಕ್ಕಿದನು ಚಂದ್ರಮನ ॥ ೪೨

ಜಗವರಾಜಕವಾಯ್ತು ಕುಮುದಾ
ಳಿಗಳ ಬಾಗಿಲು ಹೂಡಿದವು ಸೂ
ಱೆಗರು ಕವಿದುದು ತುಂಬಿಗಳು ಸಿರಿವಂತರರಮನೆಯ ।
ಉಗಿದವಂಬರವನು ಮಯೂಖಾ
ಳಿಗಳು ಭುವನದ ಜನದ ಕಂಗಳ
ತಗಹು ತೆಗೆದುದು ಸೆಱೆಯ ಬಿಟ್ಟರು ಜಕ್ಕವಕ್ಕಿಗಳ ॥ * ೪೩

[1] ಸೂಳವಿಸಿ ಬೊಬ್ಬಿಱಿದ[1]ವುರು ನಿ
ಸ್ಸಾಳ ಚಯವದ್ರಿಗಳ ಹೆಡತಲೆ
ಸೀಳೆ ಸಿಡಿಲೇಳಿಗೆಯಲೆದ್ದವು ವಿವಿಧ ವಾದ್ಯ ರವ ।

' ಈ ಪದ್ಯವಾದ ಮೇಲೆ (ಟ) ಪ್ರತಿಯಲ್ಲಿ ಕೆಳಗಿನ ಎರಡು ಪದ್ಯಗಳೂ, (ಚ.ನ.ಪ.) ಪ್ರತಿಗಳಲ್ಲಿ ಮೊದಲನೆಯ ಪದ್ಯಮಾತ್ರವೂ ಇವೆ.

ಬೆಳಗ ಬೆಸಲಾದುದು ನಭೋಮಂ
ಡಲವು ತಿಮಿರನ ಸತಿಯರೋಲೆಯು
ಕಳಚಿದರು ಕೈಯೊಡನೆ ಮುಗಿದವು ಕೈರವಾದಿಗಳು ।
ಜಲಜ ನಗುತಿರ್ದುದು ಪಯೋನಿಧಿ
ಕಳಕಳವ ತುಂಬಿತು ರಥಾಂಗಾ
ವಳಿ ಮನೋರಥವಡೆಯೆ ರವಿಯುದಯಾಚಲಕೆ ಬಂದ ॥

ಮೂಡಣಾಚಲದೊಳಗೆ ಕೆಂಪಿನ
ಬೀಡು ಬಿಟ್ಟುದು ಕಮಲ ಪಂಗ್ತಿಯೊ
ಳಾಡಿದವು ತುಂಬಿಗಳು ಕ್ಕೈರವದೆಸಳು ಮಸುಳಿಸಿತು ।
ಕೋಡಿದವು ಚಕ್ರಾಂಕಯುಗ ಥಗೆ
ಯೋಡಿ ನಲಿದು ಚಕೋರಿಗಳು ರವ
ಮಾಡಿದವು ಕೆದರಿದವು ಕಿರಣವನರುಣನಗಲದಲಿ ॥

ಅಲ್ಲದೆ ಈ ಪದ್ಯಗಳಾದಮೇಲೆ (ಕ.ಚ.ಟ.ನ.ಪ.ಬ.) ಪ್ರತಿಗಳಲ್ಲಿ ಮೊದಲನೆಯ ಸಂಧಿ ಮುಗಿದು ಕೆಳಗಿನ ಸೂಚನೆ ಇದೆ :—

ಸೂಚನೆ ॥ ಕಡಗಿ ಬರೆ ದ್ರುಪದಜನ ರಥವನು
ಕಡಿದು ಸಮರಥರುಗಳು ಕೆಡಹಿದು
ಕೊಡನ ಮಗ ಧರ್ಮಜನ ತುಡುಕಲು ತಡೆದನಾ ಪಾರ್ಥ ।

[1] ಕೇಳಿದ್ಯೆ ಧೃತರಾಷ್ಟ್ರ (ಗ), ಸೂಳವಿಸಿದವುಲಗ್ಗೆಯಲಿ (ಟ.ತ.ದ.ನ), ಸೂಳುಮಿಗಲಳ್ಳಿಱಿದ (ಚ.ಪ).

ಆಳು ನೆರೆದುದು ನೆಲ ಕುಸಿಯೆ ರಥ
ಜಾಲ ಜಡಿದುದು ಹಣ್ಣಿದಾನೆಯು
ಸಾಲು ಮೆಱೆದುವು ಕುಣಿವುತಿದ್ದುವು ಕೂಡೆ ವಾಜಿಗಳು ॥ ೪೪

ತಳಿತ ಝುಲ್ಲರಿಗಳಿಗೆ ಗಗನದ
ವಳಯವೈದದು ನೆರೆದ ಸೇನೆಗೆ
ನೆಲನಗಲ ನೆಱೆಯದು ನಿರೂಢಿಯ ಭಟರ ವಿಕ್ರಮಕೆ ।
ಅಳವು ಕಿಱಿದರಿರಾಯರಿಗೆ ದಿಗು
ವಳಯವಿಟ್ಟೆಡೆಯಾಗೆ ರಥ ಹಯ
ದಳವುಳಕೆ ಕುರು ಸೇನೆ ನಡೆದುದು ದೊರೆಯ ನೇಮದಲಿ ॥ ೪೫

ಹರಿಗೆ ಹರಿದವು ಮುಂದೆ ಬಿಲ್ಲಾ
ಳುರವಣಿಸಿದರು [1]ಮೋಹರವ ಮಿ
ಕ್ಕು[1]ಱುಬಿದರು ಸಬಳಿಗರು ಮುಂಚಿತು ರಣಕೆ ಖಡ್ಗಿಗಳು ।
ತುರಗ ಕವಿದವು ದಂತಿ ಘಟೆಗಳು
ತುಱುಗಿದವು ರಥ ರಾಜಿ ಮುಂಗುಡಿ
ವರಿದುದವನೀಪತಿಯ ಚೂಣಿಯ ನೃಪರ ಜೋಕೆಯಲಿ ॥ ೪೬

ಸಿಡಿಲ ಕುಡುಹುಗಳಿಂದ ಕಮಲಜ
ಹೊಡೆಯುಲಬುಜಭವಾಂಡ ಭೇರಿಯು
ಕಡು ದನಿಗಳೆನಲೊದಱಿದವು ನಿಸ್ಸಾಳ ಕೋಟಿಗಳು ।
ತುಡುಕಿದವು ತಂಬಟದ ದನಿ ಜಗ
ದಡಕಿಲನು ಫಡ ಕೌರವೇಂದ್ರನ
ತೊಡಕು ಬೇಡೆಂದೊದಱುತಿದ್ದುವು ಗೌರುಗಹಳೆಗಳು ॥ ೪೭

ಬಿಗಿದ ಝುಲ್ಲರಿ ಮುಗಿಲ ಹೊಸ ಕೈ
ದುಗಳ ಮಿಂಚಿನ ಮಕುಟ ಮಣಿ ಕಾಂ
ತಿಗಳ ಸುರಧನುವಿನ ಚತುರ್ಬಲ ರವದ ಸಿಡಿಲುಗಳ ।
ವಿಗಡ ಕುಂಭಜ ಮೇಘ ಋತು ತನಿ
ಹೊಗರಿಱಿದು ಪರ ಬಲದ ಕಡು ವೇ
ಸಗೆಗೆ ಕವಿದುದು ರಾಜ ಹಂಸ[2] ಪ್ರಕರವೋಸರಿಸೆ[2] ॥ ೪೮

[1] ಮೊರೆವ ಮುರಜದಿನು (ಕ.ಚ.ಪ.ಬ). [2] ಪ್ರಭೆಗಳೊಳಸರಿಯೆ (ಕ).

ಕಳನ ಗೆಲಿದುದು ಬಂದು ಕೌರವ
ಬಲ ಯುಧಿಷ್ಠಿರ ರಾಯ ದಳ ಮುಂ
ಕೊಳಿಸಿ ಹೊಕ್ಕುದು ಜಯದ ಸುಮ್ಮಾನದ ಸಘಾಡದಲಿ |
ಬಲಿದರೊಡ್ಡನು ಮಂಡಳಾಕೃತಿ
ಗೊಳಿಸಿ ಕೌರವರಿವರು ಥಟ್ಟನು
ನಿಲಿಸಿದರು ಚಂದ್ರಾರ್ಧ ಸದೃಶದಲಖಿಳ ಮೋಹರವ ‖ ೪೯

ಚೌರಿಗಳು ಬಲವೆರಡಱೊಳಗೊ
ಯ್ಯಾರದಲಿ ತೂಗಿದವು ಚೂಣಿಯ
ವೀರರುರವಣೆ ಮಿಗಲು ಹೊಯ್ದರು ಹೊಕ್ಕು ಪರ ಬಲವ |
ಮಾರಿ ಮೊಗವಡದೆಱೆದವೊಲು ಜ
ಜ್ಝಾರ ಮಾಸಾಳುಗಳು ನಿಜದಾ
ತಾರನವಸರಕೊದಗಿ ಹಣವಿನ ಋಣ[1]ನ[1] ನೀಗಿದರು ‖ * ೫೦

ಬಿಟ್ಟ ಸೂಠಿಯೊಳೇಱಿ ಕುದುರೆಗ
ಳಟ್ಟಿದವು ಕಿವಿಗೌಂಕಿದುಂಗುಟ
ವಿಟ್ಟ ಸನ್ನೆಯೊಳೊಲೆದು ಕವಿದವು ಸೊಕ್ಕಿದಾನೆಗಳು |
ನಿಟ್ಟುವರಿಯಲು ಕೂಡೆ ರಥ ಸಾ
ಲಿಟ್ಟು ಹರಿದವು [2]ಬಿಡದೆ[2] ಸುಭಟರು
ಮುಟ್ಟಿ ಮೂದಲಿಸುತ್ತ ಹೊಯ್ದರು ಹೊಕ್ಕು ಪರ ಬಲವ ‖ ೫೧

ಏಱುವಡೆದರು ಹೊಕ್ಕವರು ಕ್ಷ್ವೆ
ಡೋಱಿ ಕಳಕಳಕಾಱರಸುಗಳ
ಕಾಱಿದರು ಕೈಮಾಡಿ [3]ಕೊಂಡರು ಸುರರ ಕೋಟೆಗಳ[3]

[1] ವ (ತ.ದ). * ಈ ಪದ್ಯವಾದಮೇಲೆ (ಟ.ಬ) ಪ್ರತಿಯಲ್ಲಿ ಈ ಕೆಳಗಿನ ಪದ್ಯವು ಹೆಚ್ಚಾಗಿದೆ.

ತಿರುಗಿ ಚೂಣಿಗೆ ಮಲೆತು ನಿಜಮೋ
ಹರವ ಶಕಟವ್ಯೂಹದಲಿ ವಿ
ಸ್ತರಿಸಿ ಸಿಂಧವ ನೆಗಹಿ ನಿಂದನು ದ್ರೋಣನಿದಿರಾಗಿ |
ಧುರಕೆ ಧೃಷ್ಟದ್ಯುಮ್ನ ಪಾಂಚಾ
ಲರು ಮಹಾಕೈಕಯರು ಮತ್ಸ್ಯರು
ಹರಿಬದಲಿ ತಾಗಿದರು ಪಾಂಡವ ಬಲದ ನಾಯಕರು ‖

[2] ತೇರು (ಕ). [3] ಕೊಂದರುಕವಿವದೊದ್ದೆಗರ (ಕ.ಚ.ಪ).

ತಾಱು ಥಟ್ಟಿನೊಳಟ್ಟಿ ಮೈಮುಸೆ
ಸೂಱೆಕಾಱರು ಮಿದುಳ ಜೊಂಡಿನ
ಜೋಱುಗಳ ಬೀಱಿದವು ಭೇತಾಳರಿಗೆ ಭಟ ನಿಕರ ॥ ೫೨

ತೆಗೆಸು ದೊದ್ದೆಯನುರವಣಿಸದಿರಿ
ವಿಗಡ ಸುಭಟರು ಸಾಹಸದ ತನಿ
ಹೊಗರಿನಾತಗಳೆಲ್ಲಿ ಭೀಮಾರ್ಜುನರ ಬರಹೇಳು ।
ಹೊಗುವ ಬಿನುಗನು ಹೊಯ್ಯದಿರಿ ತೆಗೆ
ತೆಗೆಯೆನುತ ಸಾವಿರ ಮಹಾರಥ
ರಗಲದಲಿ ಬರಲುಱುಬಿ ಹೊಕ್ಕನು ದ್ರೋಣ ಪರ ಬಲವ ॥ ೫೩

ಸಾರಿರೈ ಸಾಹಸಿಕರಿರ ಕೆಲ
ಸಾರಿರೈ ಪಾಂಚಾಲ ಮತ್ಸ್ಯರು
ವೀರರಹುದಲ್ಲೆಂಬೆವೇ ಶಿವ ಶಿವ ಮಹಾದೇವ ।
ಸಾರಿರೈ ನಮ್ಮೊಡನೆ ಕೈ ಮನ
ವಾರೆ ಕಾದುವ ಬಳಿಕ ಮೊದಲೊಳು
ದಾರ ಭೀಮಾರ್ಜುನರ ನೋಡುವೆನೆನುತ ಕೈಕೊಂಡ ॥ ೫೪

ಬಿನುಗು ಹಾರುವ ನಿನಗೆ ಭೀಮಾ
ರ್ಜುನರ ಪರಿಯಂತೇಕೆಯಂಬಿನ
ಮೊನೆಯುಲುಣಲಿಕ್ಕುವೆನು ರಣ ಭೂತಕ್ಕೆ ನಿನ್ನೊಡಲ ।
ಎನುತ ಧೃಷ್ಟದ್ಯುಮ್ನನಿದಿರಾ
ದನು ಶರೌಘದ ಸೋನೆಯಲಿ ಮು
ಮ್ಮೊನೆಯ ರಥಿಕರ ಮುಱಿದು ದ್ರೋಣನ [1]ರಥಕೆ[1] ಮಾಱಾಂತ ॥ ೫೫

ಕಡಗಿದಡೆ ಕೋದಂಡ ರುದ್ರನ
ತೊಡಕಿ ಬದುಕುವರಾರು ಸಾರೆಂ
ದೊಡನೊಡನೆ ನಾರಾಚ ಜಾಲದಲರಿ ಭಟನ ಬಿಗಿದು ।
ಕಡಿದು ಬಿಸುಟನು ದ್ರುಪದ ತನಯನು
ಹಿಡಿದ ಬಿಲ್ಲನು ಸಾರಥಿಯ ನಡೆ
ಗೆಡಹಿದನು ಚಂದ್ರಾರ್ಧ ಶರದಲಿ ನೊಸಲನೊಡೆಯೆಚ್ಚ ॥ ೫೬

[1] ಮುಸುಕಿ (ಗ).

ಎಸಲು ಧೃಷ್ಟದ್ಯುಮ್ನ ದ್ರೋಣನ
ವಿಶಿಖ ಹತಿಯಲಿ ನೊಂದು ರಥದಲಿ
ಬಸವಳಿಯೆ ಬಳಿ ಸಲಿಸಿದರು ಪಾಂಚಾಲ ನಾಯಕರು ।
ಮುಸುಡ ಬಿಗುಹಿನ ಸೆಳೆದಡಾಯುಧ
ಹೊಸ ಪರಿಯ ಬಿರುದುಗಳ ಗಜ ರಥ
ವಿಸರ ಮಧ್ಯದಲೆಂಟು ಸಾವಿರ ರಥಿಕರೌಂಕಿದರು ॥ ೫೭

ರಾಯರೊಳು ಪಾಂಚಾಲರುಬ್ಬಟೆ
ಕಾಯಗಟ್ಟಿತು ಪೂತು ಮಝ ಕುರು
ರಾಯ [1]ನಾಡಿ [ತು] ದಿಟವೆನುತ ಹೊಗರಂಬ ಹೊದೆಗೆದಱಿ[1] ।
ನೋಯಿಸಿದನುರವಣಿಸಿ ಹರಿತಹ
ನಾಯಕರ[2]ನುಬ್ಬೆದ್ದ[2] ಬಿರುದರ
ಬೀಯಮಾಡಿದನಹಿತ ರಥಿಕರನೆಂಟು ಸಾವಿರವ ॥ ೫೮

ಆಳುತನವುಳ್ಳವರ ಕರೆ ಪಾಂ
ಚಾಲರೊಳ್ಗೆಗರವದಿರಂಬಿನ
ಕೋಲ ಕಾಣದ ಮುನ್ನ ಹಮ್ಮೈಸುವರು ಹುರಿಯೊಡೆದು ।
ಖೂಳರಿವರಂತಿರಲಿ ದೊರೆ ಕ
ಟ್ಟಾಳಹನು ಕರೆ ಧರ್ಮಪುತ್ರನ
ತೋಳ ಬಲುಹನು ನೋಡಬೇಕೆಂದುಱುಬಿದನು ದ್ರೋಣ ॥ ೫೯

ಸವಱಿ ಹೊಕ್ಕನು ಕೆಲ ಬಲದ ಪಾಂ
ಡವ ಮಹಾರಥರನು ವಿಭಾಡಿಸಿ
ಪವನಜನ ಮುಱಿಯೆಚ್ಚು ನಕುಲನ ರಥವ ಹುಡಿಮಾಡಿ ।
ಕವಲುಗೋಲಲಿ ದ್ರುಪದ ಮತ್ಸ್ಯರ
ನವಗಡಿಸಿ ಹೈಡಿಂಬನಭಿಮ
ನ್ಯುವನು ಮಸೆಗಾಣಿಸಿ ಮಹೀಶನ ರಥಕೆ ಮಾಱಾಂತ ೬೦

ಅರಸ ಫಡ ಹೋಗದಿರು ಸಾಮದ
ಸರಸ ಕೊಳ್ಳದು ಬಿಲ್ಲ ಹಿಡಿ ಹಿಡಿ
ಹರನ ಮಱೆ[3][ವೊ][3]ಗು ನಿನ್ನ ಹಿಡಿವೆನು ಹೋಗು ಹೋಗೆನುತ ।

[1] ನಾಡಿದು ದಿಟವೆನುತ ಹೊಗರಂಬ ಹೊದೆಗೆದಱಿ (ಕ), ನಾಣೆಯೆನುತ್ತ ತನಿ ಹೊಗರಂಬ ಹೊದೆಗೆದಱಿ (ಚ. ಪ.), ರೊಡೆತನವಿಂದಲೇ ದಿಟ ನೋಡು ನೋಡೆನುತ (ಬ). [2] ನುಬ್ಬಟೆಯ (ಗ), ನುಬ್ಬಾಳು (ಟ. ದ. ನ). [3] ಯೊ (ಸ).

ಸರಳ ಮುಷ್ಟಿಯು ಕೆನ್ನೆಯೋರೆಯು
ಗುರು ಛಡಾಳಿ[1] [ಸೆ][1] ಧನುವನೊದಱಿಸಿ
ಧರಣಿಪತಿ ಹಳಚಿದನು ಹೂಳಿದನಂಬಿನಲಿ ರಥವ ॥ ೬೧

ಶಿವಶಿವಾ ಬೆಳುದಿಂಗಳಲಿ ಮೈ
ಬೆವರುವುದೆ ಕಲಿ ಧರ್ಮಪುತ್ರನ
ಬವರದಲಿ ಬೆಂಡಹರೆ ವೀರರು ಕಂಡೆವದುಭುತವ ।
ನಿವಗಿದೆತ್ತಣ ಕ್ಷಮೆ ಕೋಲ್ಗಳ
ಕವಿಸುವಂದವಿದೊಳ್ಳಿತಿದಲೇ
ನವಗಭೀಷ್ಟವೆನುತ್ತ ಕಟ್ಟಳವಿಯಲಿ ಕೈಕೊಂಡ ॥ ೬೨

ಎಲೆಲೆ ದೊರೆ ಸಿಕ್ಕಿದನು ಕರೆ ಪಡಿ
ತಳಿಸ ಹೇಳೋ ಸ್ವಾಮಿ ದ್ರೋಹರು
ದಳದಲಿದ್ದವರೆತ್ತ ಹೋದರು ನಾಯಕಿತ್ತಿಯರು ।
ಕಳವಳಿಸಿ ಸಾತ್ಯಕಿ ಘಟೋತ್ಕಚ
ರುಲಿದು ಹರಿತರೆ ಕೇಳಿದಾಕ್ಷಣ
ದಲಿ ಮುರಾಂತಕ ಸಹಿತ ವಹಿಲದಿ ಬಂದನಾ ಪಾರ್ಥ ॥ ೬೩

ಕಾಳಕೂಟದ ಬಹಳ ಧಾಳಿಗೆ
ಶೂಲಿಯೊಡ್ಡೈಸುವವೊಲವನೀ
ಪಾಲಕನ ಹಿಂದಿಕ್ಕಿ ತಡೆದನು ಕಳಶಜನ ರಥವ ।
ಆಲಿಯಳುಕಿತು ತಿರುಹಿದಂಬಿನ
ಕೋಲ ಝಳಪಿಸಿ ಪೂತು ಮಝು ಮೇ
ಲಾಳು ಬಂದುದೆ ಅಕಟೆನುತ ಹಲುಮೊರೆದನಾ ದ್ರೋಣ ॥ ೬೪

ಮಂದಭಾಗ್ಯನು ಕೌರವನು ನಾ
ವೆಂದು ಮಾಡುವುದೇನು ನಿಮಿಷವು
ನಿಂದನಾದರೆ ಹಿಡಿವೆನಾಗಳೆ ಧರ್ಮನಂದನನ ।
ಬಂದು ಫಲುಗುಣನಡ್ಡವಿಸಲಿ
ನ್ನಿಂದುಧರ ಮುಳಿದೇನ ಮಾಡುವ
ನೆಂದು ಖಾತಿಯ ಹಿಡಿದು ರಥವನು ತಿರುಹಿದನು ದ್ರೋಣ ॥ ೬೫

[1] ಸಿ (ಸ).

ಎರಡು ಬಲದಲಿ ವೀರ ನೀ ಮಡ
ಮುರಿಯಲಿವನೇಸಱವನಂಧಾ
ಸುರನೊ ತಾರಕನೋ ಹಿರಣ್ಯಾಸುರನೊ ಕೈಟಭನೊ ।
[1]ಗುರುಗಳಿದಿರಲಿ ವೀರವೇ[1] ಸಾ
ಕಿರಲಿ ಮೂದಲೆಯೆನುತಲಾ ಬಿಲು
ದಿರುವ ಮಿಡಿದೈದಿದರು ನಾಸಾವಿರ ಮಹಾರಥರು ॥ ೬೬

ಫಡಫಡೆಲವೋ ಪಾರ್ಥ ಭೀಷ್ಮನ
ಕೆಡಹಿದುಬ್ಬಟೆ ನಮ್ಮ ಕೂಡಳ
ವಡದು ತೆಗೆತೆಗೆಯೆನುತ ತುಳುಕಿದನಂಬಿನಂಬುಧಿಯು ।
ಗಡಣವೊಳ್ಳಿತು ಗಾಢ ಮಿಗೆ ಬಿಲು
ವಿಡಿಯ ಬಲ್ಲಿರಿ ಸಮರಜಯವಳ
ವಡುವುದಳವಡದಿಹುದು ತಪ್ಪೇನೆನುತ ನರನೆಚ್ಚ ॥ ೬೭

ಜೋಡು ಜರಿಯದೆ ಹುರುಳುಗೆಡದೆ
ಚ್ಚಾಡಿದರು ಫಲುಗುಣನ ರಥದಲಿ
ಹೂಡಿದರು ಹೊಗರಂಬುಗಳನುಬ್ಬೆದ್ದು ತಮುತಮಗೆ ।
ನೋಡಿದನು ಸಾಕಿವದಿರನು ಕೊಂ
ಡಾಡಲೇಕೆನುತನಿಬರಸುಗಳ
ತೋಡಿದನು ಕೂರಂಬಿನಲಿ ಸಾವಿರ ಮಹಾರಥರ ॥ ೬೮

ಮಡಿದು ಕೆಲಬರು ಕೊರಳಲಸುಗಳ
ಹಿಡಿದು ಕೆಲಬರು ಘಾಯವಡೆದೆಲು
ವೊಡೆದು ಕೆಲಬರು ಕೈದು ರಥವನು ಬಿಸುಟು ಕೆಲಕೆಲರು ।
ಹೊಸೆವ ಬಿಱುಗಾಳಿಯಲಿ ಮುಗಿಲೊ
ಡ್ಡೊಡೆದವೊಲು ಮೈಮಱಿಱಿಗಳು ಹಿಂ
ಡೊಡೆದುದೈ ಹೇರಾಳದಲಿ ಹೊಕ್ಕೆಚ್ಚನಾ ಪಾರ್ಥ ॥ ೬೯

ನಿಮಗೆ ಸದರವೆ ಪಾರ್ಥನೆಲೆ ವಿ
ಕ್ರಮದರಿದ್ರರಿರಾ ವೃಥಾ ಸಂ
ಭ್ರಮಿತರಿರ ಭಂಡಾಟವೇತಕೆ ರಣಕೆ ಹೆಱತೆಗೆಯಿ ।

[1] ಗುರುಗಳರೆ ಸಾಹಸಿಗಳೈ (ಟ)

ಸಮರ ವಿಜಯ ತ್ಯಾಗಿಯೇ ತಾ
ನಮರಪತಿ ನಂದನನು ಸಾಕೀ
ಕುಮತಿಗಳ ತಡೆಯದಿರಿ ಹೋಗಲಿ ಎಂದನಾ ದ್ರೋಣ ॥ ೭೦

ಸೋಲದಲಿ ಕೌರವನ ಸೇನಾ
ಜಾಲ ಚೆಲ್ಲಿತು ವೀರ ಪಾರ್ಥನ
ಕೋಲು ಕಾಲನ ದಣಿಸಿದವು ಚತುರಂಗ ಸೇನೆಯಲಿ ।
ಕೋಲು ಧರಿಸಿದವೆಟಿಕೆಗಳನೆನೆ
ಚಾಳಿಸಿತು ಪಡೆ ರವಿಯ ರಶ್ಮಿಯ
ಗೂಳೆಯವು ತೆಗೆಯಿತ್ತು ಪಡುವಣ ಕಡಲೊಳಿನನಿಳಿದ ॥ * ೭೧

ಮೊದಲನೆಯ ಸಂಧಿ ಮುಗಿದುದು.

* ಈ ಕೆಳಗಿನ ಪದ್ಯವು (ಗ) ಪ್ರತಿಯಲ್ಲಿ ಕೊನೆಯಪದ್ಯವಾಗಿ—೭೧ನೆಯ ಪದ್ಯವಾದಮೇಲೆ ಇದೆ:—

ಬಂದು ಬಿಡಿಸಿದ ಪಾರ್ಥ ದೊರೆಯನು
ಯೆಂದು ದ್ರೋಣನ ಮನದ ಬೆರಗಿನೊ
ಳಂದು ತಿರುಗಿದವೆರಡುಬಲ ನಿಜಪಾಳಯಂಗಳಿಗೆ ।
ಸಂದು ರವಿಯಪರಾಬ್ಧಿ ಗಿಳಿಯಲು
ಮಂದಭಾಗ್ಯನು ಕೌರವೇಂದ್ರನು
ಹಿಂದಿನಿರುಳೋಲಗವನಿತ್ತನು ಕೇಳು ಧೃತರಾಷ್ಟ್ರ ॥

ಇಲ್ಲಿಗೆ (ಕ.ಚ.ಟ.ನ.ಪ.ಬ) ಪ್ರತಿಗಳಲ್ಲಿ ಎರಡನೆಯ ಸಂಧಿ ಮುಗಿದಿದೆ.

ಎರಡನೆಯ ಸಂಧಿ

ಸೂಚನೆ || ಉಭಯ ಕಟಕಾಚಾರ್ಯ ಪಾಂಡವ
ವಿಭುವ ಹಿಡಿತಹೆನೆಂದು ಕೌರವ
ಸಭೆಗೆ ಭಾಷೆಯ ಕೊಟ್ಟು ಸಮರಕೆ ದ್ರೋಣನನುವಾದ || *

ಕೇಳು ಜನಮೇಜಯ ಧರಿತ್ರೀ
ಪಾಲ ತೆಗೆದವು ಬಲವೆರಡು ನಿಜ
ಪಾಳಯಂಗಳಿಗಿರುಳು ಕೌರವನಿತ್ತನೋಲಗವ |
ಹೇಳು ಕರ್ಣ ದ್ರೋಣ ರಿಪು ಭೂ
ಪಾಲಕನನಱಿಯಟ್ಟಿದನು ಗಡ
ಕಾಳೆಗದ ಹದನೇನೆನುತ ಕುರುರಾಯ ಬೆಸಗೊಂಡ || ೧

ಏನು ಹೇಳಲುಬಹುದು ಜೀಯ ಕೃ
ಶಾನುವಡವಿಯಲಾಡಿದಂದದಿ
ನಾ ನಿರೂಢಿಯ ಭಟರ ಮುಱಿದನು ಮುಱಿದ ಮಾರ್ಗದಲಿ |
ಸೇನೆ ಕಲಕಿತು ಬತ್ತಿದುದಧಿಯ
ಮೀನಿನಂತಿರೆ ಮಱುಗಿದರು ಭಟ
ರಾ ನರೇಂದ್ರನನಳವಿಯಲಿ ಬೆಂಬತ್ತಿದನು ದ್ರೋಣ || ೨

ಅಳವಿಗೊಟ್ಟನು ನೃಪತಿ ಗುರು ಕೈ
ಚಳಕದಲಿ ತೆಗೆದೆಸುತ ನಡೆದಿ
ಟ್ಟಳಿಸಿ ಹಿಡಿಹಿಂಗೊಳಗುಮಾಡಿ ವಿಘಾತಿಯಲಿ ತಡೆಯೆ |
ಎಲೆಲೆ ದೊರೆ ಸಿಕ್ಕಿದನು ಸಿಕ್ಕಿದ
ನಳಿದುದೋ ದ್ರೌಪದಿಯ ಸಿರಿಯೆಂ
ಬುಲುಹ ಕೇಳುತ ಪಾರ್ಥ ಬಂದನು ಬಿಟ್ಟ ಸೂಠಿಯಲಿ || ೩

---

* (ಕ) ಪ್ರತಿಯಲ್ಲಿ ಮೇಲಿನ ಸೂಚನೆಗೆ ಬದಲಾಗಿ ಈ ಕೆಳಗಿನ ಸೂಚನೆ ಇದೆ:—

ಜಿತಮದನ ಸೌರಂಭಬಳನ
ಪ್ರತಿಮ ಕೌರವ ಮೋಹರದೊಳ
ದ್ಭುತ ಕಳಿಂಗನ ಕರಿಘಟೆಯ ಸೀಳಿದನು ಕಲಿ ಭೀಮ ||

ವೀರರಿದ್ದೇಗುವರು ದೈವದ
ಕೂರುಮೆಯ ನೆಲೆ ಬೇಱೆ ನಮಗೊಲಿ
ದಾರು ಮಾಡುವುದೇನೆನುತ ಕಲಿ ಕರ್ಣ ಬಿಸುಸುಯ್ಯೆ ।
ಭೂರಿ ಭೂಪರು ವಿಸ್ತರದ ಗಂ
ಭೀರ ಸಾಗರದಂತಿರಲು ರಣ
ಧೀರರೆದ್ದರು ವರ ತ್ರಿಗರ್ತರು ರಾಜ ಸಭೆಯೊಳಗೆ ॥ ೪

ಕೇಳು ಸೇನಾನಾಥ ಕುರುಪತಿ
ಕೇಳು ಕೇಳೈ ಕರ್ಣ ಸುಭಟರು
ಕೇಳಿರೈ ದೇಶಾಧಿನಾಥರು ವೀರ ಪರಿವಾರ ।
ನಾಳೆ ಮೊದಲಾಗರ್ಜುನನ ನಾವ್
ಕಾಳೆಗಕೆ ಬರಲೀಯೆವೆಂಮಯ
ಕಾಳೆಗದಲೇ ಸವೆಯಬೇಹುದ್ ಪಾರ್ಥನಂಬುಗಳು ॥ ೫

ಹಿಂದೆ ಹಿಡಿ ನೀ ಮೇಣು ಬಿಡು ಯಮ
ನಂದನನನೊಲಿದಂತೆ ಮಾಡಿ
ಲ್ಲಿಂದ ಮೇಲರ್ಜುನನ ಭಯ ನಿಮಗಿಲ್ಲ ನಂಬುವುದು ।
ಎಂದು ಶಪಥವ ತಮ್ಮನಿಬರೈ
ತಂದು ವಿಪ್ರರ ಕರಸಿ ವೈದಿಕ
ದಿಂದ ರಚಿಸಿದರಗ್ನಿಯನು ಮಾಡಿದರು ಭಾಷೆಗಳ ॥ ೬

ನರನ ಬಿಡಲಾಗದು ಮಹಾಸಂ
ಗರದೊಳೊಬ್ಬರನೊಬ್ಬರೊಪ್ಪಿಸಿ
ತೆರಳಲಾಗದು ಮುರಿಯಲಾಗದು ಕೊಂಡ ಹೆಜ್ಜೆಗಳ ।
ಹೊರಳಿವೆಣನನು ಮೆಟ್ಟಿ ಮುಂದಣಿ
ಗುರವಣಿಸುವುದು ತಪ್ಪಿದವರಿಗೆ
ನರಕವೀ ಪಾತಕರ ಗತಿ ನಮಗೆಂದು ಸಾಱಿದರು ॥ ೭

ನುಡಿದ ನುಡಿಗೇಡುಗನ ವಿಪ್ರರ
ಮಡುಹಿದಾತನನಮಳ ಗುರುವಿನ
ಮಡದಿಯರಿಗಳುಪಿದನ ಸಾಕಿದ ಪತಿಗೆ ತಪ್ಪಿದನ ।
ಹಿಡಿದ ಶರಣಾಗತರ ಕಾಯದೆ
[1]ಬಿಡುವವನ ನಾಸ್ತಿಕನ ವಿಪ್ರರ
ಜಡಿದು ನುಡಿದನ ಗತಿಗಳಾಗಲಿ ರಣದೊಳೋಡಿದರೆ ॥ ೮

[1] ಮಡುಹಃ (ಕ.ಗ.ಚ.ದ).

ಎಂದು ಸಮಸಪ್ತಕರು ತಮ್ಮೊಳ
ಗಂದು ಶಪಥವ ಮಾಡಿ ವಿಪ್ರರ
ಮಂದಿಗಿತ್ತರು ಗೋ ಹಿರಣ್ಯ ಸಮಸ್ತ ವಸ್ತುಗಳ ।
ಇಂದು ರವಿ ಜಲ ವಹ್ನಿಯನಿಲ ಪು
ರಂದರಾದಿ ಸುರೌಘ ಸಾಕ್ಷಿಗ
ಳೆಂದು ಸೂಳೈಸಿದರು ಭುಜವನು ಸಿಡಿಲು ತನಿ ಹೆದಱೆ ॥ ೯

ಇವರ ಮೊದಲಿಗ ಸತ್ಯರಥನಿಂ
ತಿವನ ಬಳಿ ರಥ ಹತ್ತು ಸಾವಿರ
ವಿವನೊಡನೆ ಸೇರುವೆಯ ರಥ ಮೂವತ್ತು ಸಾವಿರದ ।
ಭುವನ ವೀರ ಸುಶರ್ಮ ಮಾಳವ
ಯವನರತಿರಥ ಹತ್ತು ಸಾವಿರ
ಬವರಕಿಂತೈವತ್ತು ಸಾವಿರ ರಥಗಳೊಗ್ಗಾಯ್ತು ॥ ೧೦

ಸಭೆ ಬೆದಱೆ ಕಲ್ಪಾಂತ ಶರಧಿಯ
ರಭಸವಲ್ಲಿಯೆ ಕೇಳಲಾದುದು
ಸುಭಟರಹುದೋ ಜಾಗು ಜಾಗೆನುತೊಲೆದನಾ ದ್ರೋಣ ।
ಅಭವನಡಹಾಯ್ದಿರಲಿ ಪಾಂಡವ
ವಿಭುವ ಹಿಡಿವೆನು ಪಾರ್ಥನೊಬ್ಬನ
ಪ್ರಭೆಗೆ ಹೆದಱುವೆನುಳಿದ ವೀರರ ಬಗೆವನಲ್ಲೆಂದ ॥ ೧೧

ನಯವಿದನು ಹೊಂಬಟ್ಟಲಲಿ ವೀ
ಳೆಯವನನಿಬರಿಗಿತ್ತು ಕುರುಸೇ
ನೆಯಲಿ ಮಱುಮಾತೇಕೆ ನೀವೇ ವಿಜಯವುಳ್ಳವರು ।
ಜಯವನಿನ್ನಾಹವದೊಳಗೆ ನಿ
ರ್ಣಯಿಸಬಹುದೆಮಗೆನುತ ಗುರು ಪಾ
ಳಯಕೆ ನೇಮವ ಕೊಟ್ಟನೋಲಗ ಹರೆದುದಾಕ್ಷಣಕೆ ॥ * ೧೨

ಸಸಿ ವರುಣ ದಿಗುವಧುವನಾಲಿಂ
ಗಿಸಲು ಕುಮುದಿನಿ ಖತಿಯ ಹಿಡಿದಳು
ಮಸುಳಿದವು ತಾರೆಗಳು ರಜನೀ ನಾರಿ ಹಿಂಗಿದಳು ।

* ಇಲ್ಲಿಗೆ (ಗ) ಪ್ರತಿಯಲ್ಲಿ ೨ನೆಯ ಸಂಧಿ ಮುಗಿದು 'ಜಿತಸಮರ' ಎಂಬ ಸೂಚನೆಯ ಪದ್ಯವಿದೆ.

ಒಸೆದು ಕಮಲಿನಿ ನಗಲು ಮಿಗೆ ಹುರು
ಡಿಸುತ ಪೂರ್ವ ದಿಶಾ ನಿತಂಬಿನಿ
ನಿಶಿತ ಕೋಪದ ಕಿಡಿಯನುಗುಳಿದಳೆನಲು ರವಿ ಮೆಱೆದ ॥ * ೧೩

ಜೋಡು ಮಾಡಿತು ನೃಪರು ನಿಮಿಷಕೆ
ಹೂಡಿದವು ತೇರುಗಳು ಹಯ ತತಿ
ಕೂಡೆ ಹಲ್ಲಣಿಸಿದವು ಗುಳದಲಿ ಜಡಿದವಾನೆಗಳು ।
ಕೂಡೆ ಘುಮ್ಮಿಡೆ ದೆಸೆ ದೆಸೆಗಳ
ಲ್ಲಾಡಿದವು ಗಿರಿ ನಿಕರ ಬಿಱುದನಿ
ಮಾಡಿದವು ನಿಸ್ಸಾಳ ತತಿ ಸೇನಾ ಸಮುದ್ರದಲಿ ॥ ೧೪

ಉದಯವಾಗದ ಮುನ್ನ ಕಳನೊಳು
ಹೊದಱುಗಟ್ಟಿದರೀ ತ್ರಿಗರ್ತರು
ಕದನಕೆಮ್ಮೊಳಗಳವಿಗೊಡುವುದು ಬೇಗ ಬಹುದೆಂದು ।
ಮದವದರಿ ಭಟ ಭೈರವಂಗ
ಟ್ಟಿದರು ಭಟ್ಟರನವರು ಬಂದೊದ
ಱಿದರು ಪಾರ್ಥನ ಮುಂದೆ ಸಮಸಪ್ತಕರ ಬಿರುದುಗಳ ॥ ೧೫

ಏಳು ಫಲುಗುಣ ಕೃಷ್ಣನೇ ಗೋ
ಪಾಲನೇಸಟಿ ಮಾನಿಸನು ಬರ
ಹೇಳಲಾಪರೆ ಕರೆ ಸಹಾಯಕೆ ಫಾಳಲೋಚನನ ।
ಏಳು ಜಂಜಡ[1]ವೇನು ಜೊತ್ತಿನ
ಕಾಳೆಗಕೆ[1] ಕಲಿಯಾಗು ನಡೆಯೆನೆ
ಕೇಳುತರ್ಜುನನಿತ್ತನವರಿಗೆ ನಗುತ ವೀಳೆಯವ ॥ ೧೬

---

* (ಗ.ಟ.) ಪ್ರತಿಗಳಲ್ಲಿ ಮೇಲಿನ ಹದಿಮೂರನೆಯ ಪದ್ಯವಾದ ಮೇಲೆ ಈ ಕೆಳಗಿನ ಪದ್ಯವಿದೆ:—

ಇರುಳು ಸವೆದುದು ಚಕ್ರವಾಕದ
ವಿರಹ ಹಿಂಗಿತು ತುಂಬಿಗಳು ತಾ
ವರೆಯೊಳಗೆ ತಕ್ಕೈಸಿದವು ಕೇಸರವ ಮೊಗೆಮೊಗೆದು ।
ಹರಿಯ ಹೆಂಡಿರು ಭಾವನಿಧಿ ರವಿ
ಕರವ ಮುಗಿದರು ಚಂದ್ರಕಾಂತದ
ಹರಿವು ಬಲಿದುದು ಮೂಡಿದನು ರವಿ ಪೂರ್ವಶೈಲದಲಿ ॥

[1] ಕ್ಷತ್ರಜಾತಿಗೆ ಕಾಳಗವೆ (ಟ).

ನಡೆಯಿ ನೀವಾಹವಕೆ ಮೆಚ್ಚಿಸಿ
ಕೊಡುವೆನೀ ಬಹೆನೆಂದು ಮುರಹರ
ನೊಡನೆ ಮುದದಲಿ ರಥಕೆ ಬಂದನು ಬಿಲ್ಲನೊದಱಿಸುತ ।
ನುಡಿದನಂತಕ ಸೂನು ಕಳಶಜ
ಹಿಡಿಯಲೆಂದೇಱಿಸಿದ ನುಡಿ ತ
ನ್ನೊಡನೆ ನಿಂದಾವವನು ಕಾದುವ ಪಾರ್ಥ ಹೇಳೆಂದ ॥ ೧೭

ಕರಸಿದರೆ ಕಾಳೆಗದೊಳೆನಗೆಡೆ
ಮುರಿಯಬಾರದು ನಿಮ್ಮ ಕಾಹಿಂ
ಗಿರಲಿ [1]ನೀಲನು ಸತ್ಯಜಿತು ಕೌಶಲ ಶತಾನೀಕ[1] ।
ವರ ಘಟೋತ್ಕಚ ದ್ರುಪದ ಕೈಕೆಯ
ರಿರಲಿ ಪವನಜ ನಕುಲ ಸಹದೇ
ವರಿಗೆ ದ್ರೋಣನ ಬವರವಾಗಲಿ ಎಂದನಾ ಪಾರ್ಥ ॥ ೧೮

ಎಂದು ಸಮುಸಪ್ತಕರ ಮೋಹರ
ಕಂದು ತಿರುಗಿದ ಪಾರ್ಥನಿತ್ತಲು
ಸಂದಣಿಸಿತರಿ ರಾಯ ದಳ ಜಲ ರಾಸಿ ಜರಿವಂತೆ ।
ಮುಂದೆ ತವಕಿಗ ಭಟರ ತೆರಳಿಕೆ
ಯಿಂದ ಮೊರೆವ ಗಭೀರ ಭೇರಿಯ
ಮಂದರದ ಮುರಿಗಡಲ ಗಜಱಿನೊಲೊದಱಿತರಿ ಸೇನೆ ॥ ೧೯

ಬಳಿಯ ಸುಮಹಾರಥರ ರಾಜಾ
ವಳಿಯ ಚಮರ ಛತ್ರ [2]ಪಾಳಿಯ[2]
ಸೆಳೆದಡಾಯುಧ ಹಗಲ ತೆಕ್ಕೆಯ ರಾಯ ರಾವುತರ ।
ಹೊಳೆವ ಹೇಮದ ರಥಕೆ ಹೂಡಿದ
ತಿಲಕ ಗುದುರೆಯ ನೆಗಹಿ ನಿಗುರುವ
ಕಳಶ ಸಿಂಧದ ದ್ರೋಣ ಹೊಕ್ಕನು ಕಾಳೆಗದ ಕಳನ ॥ ೨೦

ಗರುಡನಾಕಾರದಲಿ ಬಲವನು
ಸರಿಸ ಮಿಗೆ ಮೋಹಿದನು ವಿಹಗನ
ಶಿರಕೆ ಕೃಪ [3]ಕುರುರಾಯ[3] ದುಶ್ಶಾಸನನ ನಿಲಿಸಿದನು ।

---

[1] ಸಾತ್ಯಕಿ ಮತ್ಸ್ಯ ಕೈಕೆಯ ವರ ಶತಾನೀಕ (ಗ.ಚ.ನ.ಪ).
[2] ಪಂಕ್ತಿಯ (ಗ.ದ.ಬ). [3] ಗುರುಜಾದಿ (ಕ), ಕೃತವರ್ಮ (ಗ).

ಕರೆದು ಭೂರಿಶ್ರವನ ಮಾದ್ರೇ
ಶ್ವರನ ಭಗದತ್ತನ ಸುಬಾಹುವ
ನಿರಿಸಿದನು ಬಲದೆಡಕೆಯೊಳಗಕ್ಷೋಹಿಣೀ ಬಲವ ॥ ೨೧

ವಿಂದ್ಯನಶ್ವತ್ಥಾಮ ಕರ್ಣನ
ನಂದನರು ಕಾಂಭೋಜ ಕೌಶಲ
ಸಿಂಧುನೃಪರಕ್ಷೋಹಿಣಿಯು ತಂದೆಡದ ಪಕ್ಕದಲಿ ।
ನಿಂದುದಾ ಮೋಹರದ ಜೋಕೆಯ
ಹಿಂದೆ ಲಕ್ಷ ಕಳಿಂಗ ಘಟೆಗಳು
ಸಂದಣಿಸಿದವು [1]ದ್ರೋಣ[1] ನಿಂದನು ಬಲದ ಕಾಹಿನಲಿ ॥ * ೨೨

ಅರಿ ಬೊಬ್ಬಿಱಿದಖಿಳ ಸೇನೆಯ
ಭೂರಿ ಭಟ[2]ರಗ್ರದಲಿ[2] ಕಟಕಾ
ಚಾರಿಯನು ಕೈವೀಸಿದನು ಬರಹೇಳು ಪವನಜನ ।
ವೀರನಾದಡೆ ದೊರೆಯ ಹೊಗಹೇ
ಳಾರು ತಡೆದರೆ ತಡೆಯಿ ಹಿಡಿವೆನು
[3]ಧೀರ ಕೌರವನಾಣೆನುತ ಬೊಬ್ಬಿಱಿದನಾ[3] ದ್ರೋಣ ॥ ೨೩

ಕರಸಿ ಧೃಷ್ಟದ್ಯುಮ್ನ ನಿಜ ಮೋ
ಹರವ ರಚಿಸಿದನರ್ಧ ಚಂದ್ರೋ
ತ್ಕರ ವಿಳಾಸದೊಳಳ್ಳಿಱಿವ ನಿಸ್ಸಾಳ ಕೋಟಿಗಳ ।

---

[1] ಕರ್ಣ (ಗ.ಚ.ಟ.ತ.ಬ).

* (ಗ.ಟ.ದ.ಬ). ಪ್ರತಿಗಳಲ್ಲಿ ಮೇಲಿನ ೨೨ನೆಯ ಪದ್ಯವಾದಮೇಲೆ ಈ ಕೆಳಗಿನ ಪದ್ಯವಿದೆ :—

ಬಳಸಿ ಮೂಱಕ್ಷೋಣಿಯುಲಿ ವೆ
ಗ್ಗಳೆಯ ಕೌರವನೃಪತಿ ಖಳಸೌ
ಬಲ ವಿಕರ್ಣಸುಕೇತು ಲಕ್ಷಣನಾದಿಯಾದವರು ।
ಮಲೆತುದಿತ್ತಲು ತನ್ನ ರಥವನು
ನಿಲಿಸಿ ಗರುಡನ ಮುಖದ ಮುಂಬಿನೊ
ಳುಲಿದು ನಿಂದನು ರಾಯರಿಬ್ಬರ ಗರುಡಿಯಾಚಾರ್ಯ ॥

[2] ರೊಗ್ಗಿನಲಿ (ಗ.ಚ). [3] ಕೌರವನ ಮೇಲಾಣೆಯೆನುತುರುಬಿದನು ಕಲಿ (ಗ.ಪ).

ಧುರಕೆ ನಿಗುರುವ ಭಟರ ತೂಳುವ
ಕರಿ ಘಟೆಯ ಕೆಲಬಲಕೆ ಸೂಸುವ
ತುರಗ ರಾಜಿಯ ತೇರ ಗಮನದ ಗಜಱು ಘಾಡಿಸಿತು ||* ೨೪

ಒದೆದುದಬುಧಿಯನಬುಧಿಯೆನೆ ಹೊ
ಕ್ಕುದು ಚತುರ್ಬಲ ಹೊಯ್ದು ತಲೆಯೊ
ತ್ತಿದುದು ಕೇಶಾಕೇಶಿ ಖಾಡಾಖಾಡಿಯಲಿ ಭಟರು |
ಕೆದಱಿತರಿ ಬಲ ಮತ್ತೆ ಹೊದಱೆ
ದ್ದುದು ವಿಘಾತಿಯಲಳಿದು ಹುರಿಗೊಂ
ಡೊದಗಿ ಹಾಣಾಹಾಣಿಯಲಿ ಹೊಯ್ದಾಡಿತುಭಯ ಬಲ || ೨೫

ಹಳಚುವಸಿಗಳ ಖಣಿಖಟಿಲು ಕಳ
ಕಳಕೆ ಮಿಗೆ ಹೊಯ್ದಾಡಿತುರುಳುವ
ತಲೆಯ ಬೀಳುವ ಹೆಣನ ಧಾರಿಡುವರುಣ ವಾರಿಗಳ |
ತಳಿತ ಖಂಡದ ಹಱಿದ ಕರುಳಿನ
ಕಳಚಿದೆಲುವಿನ ಕುಣಿವ ಮುಂಡದ
ಕೊಳಗುಳದ ಹೆಬ್ಬೆಳಸು ಹೆಚ್ಚಿಸಿತಂತಕನ ಪುರವ || ೨೬

ಉಲಿದು ಸೂಠಿಯೊಳೇಱಿದರು ವೆ
ಗ್ಗಳೆಯ ರಾವುತರು ಗಜ[1][ಱಿ] ಮಸ್ತಕ
ಹಿಳಿಯಲಂಕುಶವಿಕ್ಕಿ ಬಿಟ್ಟರು ಸೊಕ್ಕಿದಾನೆಗಳ |
ತಳಪಟವ ತುಂಬಿದವು ತೇರುಗ
ಳಿಳೆ ಜಡಿಯೆ ಕಾಲಾಳು ಹೊಕ್ಕೊಡೆ
ಗಲಿಸಿ ಹೊಯ್ದರು ಚೂಣಿಯರೆದುದು ಕಳನ ಚೌಕದಲಿ || ೨೭

ಇತ್ತಲರ್ಜುನನಾ ತ್ರಿಗರ್ತರಿ
ಗಿತ್ತನವಸರವನು ಕೃತಾಂತನ
ತೆತ್ತಿಗರಿಗೌತನವ ಹೇಳಿಸಿದನು ಶರೌಘದಲಿ |

---

* ಇಲ್ಲಿಗೆ (ಚ.ದ.ನ.ಪ) ಪ್ರತಿಗಳಲ್ಲಿ ಮೂರನೆಯ ಸಂಧಿ ಮುಗಿದು ಈ ಕೆಳಗಿನ ಸೂಚನೆಯಿದೆ :—

ಉಲಿದು ಸಮಸಪ್ತಕರು ಸೇನಾ
ಜಲಧಿ ವಡಬನ ಕೇಕೆ ಪಾಂಡವ
ಬಲವ ಬೆದರಿಸಿ ರಾಯನನು ಬೆಂಬತ್ತಿದನು ದ್ರೋಣ |

1 ದ (ತ.ಗ.ಟ), ಱ (ಚ.ತ.ನ.ಪ).

ಕುತ್ತಿದವು ಕೂರಂಬು ದೊರೆಗಳ
[1]ಮುತ್ತಿದವು ಕೆದಱಿದವು ನಿಮಿಷಕೆ[1]
ಬತ್ತಿಸಿದನಂದಹಿತ ಸುಭಟರ ವೀರ ಶರನಿಧಿಯ ॥ ೨೮

ಏನ ಹೇಳುವೆನಿತ್ತಲಾದುದು
ದಾನವಾಮರರದುಭುತಾಹವ
ವಾ ನಿರಂತರ ವಿಕ್ರಮೋನ್ನತ ಭಟರ ಬವರದಲಿ ।
ಆನಲಾರಿಗೆ ನೂಕುವುದು ತವ
ಸೂನುವಿನ ಸುಭಟರು ಪರಾಕ್ರಮ
ಹೀನರೇ ಧೃತರಾಷ್ಟ್ರ ಕೇಳ್ ದ್ರೋಣ ಸಂಗರವ ॥ ೨೯

ಬಿಲ್ಲನೊದಱಿಸಿ ಕೆಲ ಬಲದ ಭಟ
ರೆಲ್ಲರಿಗೆ ಕೈವೀಸಿ ಚೌವಟ
ಮಲ್ಲ ನುಡಿದನು ತನ್ನ ಸಾರಥಿಗಿತ್ತು ವೀಳೆಯವ ।
ಖುಲ್ಲ ರಿಪುಗಳ ಬಿಸುಟು ಹೊದಱಿನ
ಹೊಳ್ಳುಗರನೊಡೆಹಾಯ್ಸು ಧರ್ಮಜ
ನೆಲ್ಲಿ ಮೋಹರದೆಗೆವನತ್ತಲೆ ರಥವ ಹರಿಸೆಂದ ॥ ೩೦

ರಥವ ಬಿಟ್ಟನು ಸೂಠಿಯಲಿ ನಿ
ರ್ಮಥಿತ ರಿಪುಗಳನಟ್ಟಿದನು ಭುಜ
ಶಿಥಿಲ ಸಾಹಸರೇನ ನಿಲುವರು ದ್ರೋಣನುರವಣೆಗೆ ।
ಪೃಥಿವಿ ನೆಗ್ಗಿತು ಹೊತ್ತ ಕಮಠನ
ವ್ಯಥೆಯನಾರುಸುರುವರು ಸುಮಹಾ
ರಥರ ಹೊದಱಲಿ ಹೊಕ್ಕನುರಿ ಬಲು ಮೆಳೆಯ ಹೊಕ್ಕಂತೆ॥ * ೩೧

ಆಳ ಹೊಗಿಸೋ ದ್ರೋಣ ರಥ ದು
ವ್ವಾಳಿಯಲಿ ಬರುತದೆ ಕೃತಾಂತನ
ಧಾಳಿಗೆತ್ತಣ [2] ವೀರವೋ [2] ನೆಗ್ಗಿದವು ನೆನಹುಗಳು ।
ಕಾಳುಗೆಡೆದಿರಿ ಕೂಡೆ ಕೈಕೊಳ
ಹೇಳಿ ಕೈ ತಪ್ಪಾಗದಿರದು ನೃ
ಪಾಲಕಂಗೆಂದೊದಱಿದರು ಧರ್ಮಜನ ಮಂತ್ರಿಗಳು ॥ ೩೨

1 ಕೆತ್ತಿದವು ನಿಮಿಷದಲಿ ರಿಪುಗಳ(ಕ), ಮೊತ್ತ ಕೆದಱಿದ ಷೊಂದು ನಿಮಿಷಕೆ (ಗ).
* ಇಲ್ಲಿಂದ ಮುಂದಕ್ಕೆ ೮ ಪದ್ಯಗಳು (ಬ) ಪ್ರತಿಯಲ್ಲಿ ನಷ್ಟವಾಗಿವೆ.
2 ಧೀರತನ (ನ).

ಘಡಘಡಾನಿರುತಿರಲು ರಾಯನ
ಹಿಡಿವವನ ಹೆಸರೇನು ರಿಪು ಭಟ
ನೊಡಲ ಹೊಳ್ಳಿಸಿ ನೆಣನನುಣಲಿಕ್ಕುವೆನು ದೈತ್ಯರಿಗೆ ।
ಬಿಡು ರಥವನಾ ದ್ರೋಣನಿದಿರಲಿ
ತಡೆಯೆನುತ ಸಾರಥಿಗೆ ಸೂಚಿಸಿ
ತುಡುಕಿದನು ಬಲು ಬಿಲ್ಲ ಧೃಷ್ಟದ್ಯುಮ್ನನಿದಿರಾದ ॥ ೩೩

ಬಲ್ಲೆನೀತನ ಬಲುಹ ಸಾಕೀ
ಯೊಳ್ಳೆಗನನೆಡಕಿಕ್ಕಿ ಹಾಯಿಸು
ಕೆಲ್ಲೆಯಲಿ ಮುರಿನೂಕು ನಡೆ ಭೂಪತಿಯ ಸಮ್ಮುಖಕೆ ।
ನಿಲ್ಲದೊಡ್ಡೈಸೆನುತ ಸಾಹಸ
ಮಲ್ಲ ಸಾರಥಿಗಱುಪೆ ಬಲಸ
ಲ್ಲಲ್ಲಿ ಭಯಗೊಳೆ ದ್ರೋಣ ಹೊಕ್ಕನು ರಾಯ ಮೋಹರವ ॥ ೩೪

ಶಿವಶಿವಾ ಸಿಕ್ಕಿದನು ಸಿಕ್ಕಿದ
ನವನಿಪತಿಯೆನಲೌಂಕಿದರು ಗಜ
ನಿವಹವಗಿದಬ್ಬರಿಸೆ ಮುಕ್ಕುಱುಕಿದವು ಕುದುರೆಗಳು ।
ತವಕದಲಿ ಬದ್ದರದ ಬಂಡಿಗ
ಳವುಚಿದವು ತಲೆವರಿಗೆಗಳಲಾ
ಹವವ ಹೊಕ್ಕುದು ಪಾಯ ದಳವಾಚಾರ್ಯನಿದಿರಿನಲಿ ॥ ೩೫

ಪಟುಗಳೋ ಮಝು ಪೂತು ಪಾಂಡವ
ಭಟರು ಖರೆಯವಲಾ ಯುಧಿಷ್ಠಿರ
ನಟಮುಟಿಸಿ ತಾ ಚುಕ್ಕಿಗಿಕ್ಕುವ ಲೆಕ್ಕ ಲೇಸಾಯ್ತು ।
ಕುಟಿಲತನದಲಿ ಗೆಲುವೆನೇ ಹುಲು
ಕುಟಿಗರಿವದಿರ ಹೊಯ್ದು ತನ್ನನು
ನಿಟಿಲಲೋಚನನಡ್ಡಹಾಯ್ದರೆ ಹಿಡಿವೆನೆನುತೆಚ್ಚ ॥ ೩೬

ನೂಕಿ ಹರಿತಹ ತೇಜಿಗಳ ಖುರ
ನಾಕ ಖಂಡಿಸಿ ಕವಿವ ನಾಗಾ
ನೀಕವನು ನೆಱೆ ಕೆಡಹಿ ತೇರಿನ ಹೊದಱ ಹರೆಗಡಿದು ।
ಔಕಿ ತಲೆವರಿಗೆಯಲಿ ತೆರಳಿದ
ನೇಕ ಸುಭಟರ ಸೀಳಿ ಜಯ ರ
ತ್ನಾಕರನು ಕಲಕಿದನು ಪಾಂಡವ ಸೈನ್ಯ ಸಾಗರವ ॥ ೩೭

ಬಲವ ಬಱಿಕೈದೆವು ಯುಧಿಷ್ಠಿರ
ಬಿಲು ದುಡುಕು ಸಾಕೋಡಿ ಬದುಕುವ
ಹುಲು ಪಱೆಯತನ ಹೆಮ್ಮೆಯೇ ಕ್ಷತ್ರಿಯರ ಮಕ್ಕಳಿಗೆ ।
ಅಳಿದರಮರರಿಗೊಡೆಯನಹೆ ಮೇ
ಲುಳಿದಡವನೀಪಾಲನಹೆ ಯೀ
ಕಲಹವಿಹಪರಕೊಳ್ಳಿತೆಂದುರವಣಿಸಿದನು ದ್ರೋಣ ॥ ೩೮

ಘಡಘಡುರವಣೆ ಬೇಡ ತೆಗೆ ಬಾ
ಯ್ಬಡಿಕತನವಿದು ಗರುವರಂಗವೆ
ಕಡುಹ ನಾಲಗೆಯುೞುಹಲೇತಕೆ ಕೈಯ ಧನುವಿರಲು ।
ಒಡನೆ ತಾನಿರುತಿರಲು ರಾಯನ
ಹಿಡಿವ [1]ಭಟನೇ ನೀನೆನುತ[1] ಬಿಲು
ದುಡುಕಿ ಮುಂದೆ ಶಿಖಂಡಿ ದ್ರೋಣನ ರಥಕೆ ಮಾಱಾಂತ ॥ ೩೯

ಅಕಟ ಸಿಂಹಕೆ ಮಲೆತುದೋ ಜಂ
ಬುಕನು ನೋಡೈ ಸೂತ ಭೀಷ್ಮನ
ಶಕುತಿಗಂದಿದಿರಾದ ಮದದಲಿ ಮುಂದುಗಾಣನಿವ ।
ಚಕಿತ ಚಾಪ ಶಿಖಂಡಿ ನಿಲು ಸಾ
ಯಕದ ಮೊನೆಯಲಿ ಮಾತನಾಡುವು
ದುಕುತಿ ಚಾಪಳವೇಕೆನುತ ಕಣೆಗೆದಱಿದನು ದ್ರೋಣ ॥ ೪೦

ಗುರುವಿನಂಬಿನ ಬಂಬಲನು ಕ
ತ್ತರಿಸಿ ಕೈದೋಱಿದನು ದಿಗುತಟ
ಬಿರಿ[2]ಯೆ ದಿಙ್ಮಯವಾದವಂಬುಗಳೇನ[2]ನುಸುರುವೆನು ।
ಅರಿಶಿಖಂಡಿಯ ಕೈಚಳಕ ಕಾ
ಹುರವಲೇ ಲೇಸಾಯ್ತು ಬಿಲ್ಲಿನ
ಭರವಸಿಕೆಯಹುದೆನುತ ಕೈಕೊಂಡೆಚ್ಚನಾ ದ್ರೋಣ ॥ ೪೧

ಸಾಕು ಷಂಡನ ಕೂಡೆ ಕಾದುವು
ದೇಕೆ ತಿದ್ದುವೆನೆನುತ ರಥವನು
ನಾಕು ಶರದಲಿ ಮುಱಿದು ಸೂತನ ತಲೆಯನೆರಡಱಲಿ ।

---

[1] ವನ ಹೆಸರೇನೆನುತ (ಗ ಚ.ಪ.ಬ). [2] ಯಲದ್ಭುತವಾದವಂಬುಗಳೇನ (ಗ.ದ), ಯೆ ಶರಮಯವಾದುದಂಬರವೇನ (ಬ).

ನೂಕಿ ಧನುವನು ಮೂಱು ಬಾಣದ
ಲೌಕಿ ಖಂಡಿಸಿ ಹೋಗು ಹೋಗಿ
ನ್ನಾಕೆವಾಳರನಱಿಸಿ ತಾ ಎನುತೈದಿದನು ದ್ರೋಣ ॥ ೪೨

ಎಲೆ ಯುಧಿಷ್ಠಿರ ಬಿಲ್ಲ ಹಿಡಿ ನರ
ಹುಳುಗಳಿವದಿರ ಕವಿಸಿ ಕಾಲವ
ಕೊಲುವುದೇ ಸಾಕಿನ್ನು ಕೈವಶವಾದೆ ನಿಲ್ಲೆನುತ ।
ಅಳವಿಗಿಟ್ಟಣಿಸಲು ಶರಾಳಿಯು
ತುಳುಕಿ ಹೊಕ್ಕನು ಸತ್ಯಜಿತು ದಳ
ವುಳಿಸಿದರು ಚಿತ್ರಕ ಶತಾನೀಕಾದಿ ನಾಯಕರು ॥ ೪೩

ಬಱಿಯ ಕಾರ್ಪಣ್ಯದಲಿ ಮೇಘದ
ಮಱೆಯ ಹೊಕ್ಕರೆ ರಾಹು ಬಿಡುವನೆ
ಉಱುವ ರವಿಮಂಡಲವನೆಲೆ ಕೊಂತೀಕುಮಾರಕನೆ ।
ಇಱಿದು ಮೆಱೆವುದು ಮಹಿಮೆಯನು ಕೈ
ಮಱೆಯದಿರು ಮೈಮಾಱಿಗಳ ಮು
ಕ್ಕಱುಕಿದಿವದಿರ ತಿದ್ದಿ ಬಹೆನಿದೆಯೆನುತ ತೆಗೆದೆಚ್ಚ ॥ ೪೪

ಏನು ತರಹರಿಸುವುದು ತಿಮಿರವು
ಭಾನು ರಶ್ಮಿಯ ಮುಂದೆ ದ್ರೋಣನ
ನೂನ ಶರ ವರ್ಷದಲಿ ನಾದವು ಸುಭಟರೊಡಲುಗಳು ।
ಆ ನಿರಂತರ ನಿಶಿತ ಶರ ಸಂ
ಧಾನಕಿವದಿರು ಲಕ್ಷ್ಯವೇ ನಿ
ನ್ನಾನೆಗಳಿಗಿದಿರಾವನೈ ಧೃತರಾಷ್ಟ್ರ ಕೇಳೆಂದ ॥ ೪೫

ಕೋಲಿಗೊಬ್ಬರ ಕೆಡಹಿದನು ಪಾಂ
ಚಾಲ ಬಲದಲಿ ಸತ್ಯಜಿತುವನು
ಮೇಲಣಾಹವದೊಳು ಶತಾನೀಕ ಕ್ಷಿತೀಶ್ವರನ ।
ಸೀಳಿದನು ಮಿಡುಕುವ ಮಹಾರಥ
ರೇಳು ನೂಱನು ತುರಗ ಗಜ ಕಾ
ಲಾಳನಳಿದುದನಾವನೆಣಿಸುವನಹಿತ ಸೇನೆಯಲಿ ॥ ೪೬

[1]ಹೊಳ್ಳು[1]ಗಳ ತೂಱಿದೆವು ಹಿಡಿ ಹಿಡಿ
ಬಿಲ್ಲ ಸುರಿ ಸುರಿ ಶರವನಕಟ
ನ್ನೆಲ್ಲಿ ಹೊಗುವೈ ಕಂದ ಕುಂತಿಯ ಜಠರವಲ್ಲವಲೆ ।
ನಿಲ್ಲು ನಿಲ್ಲೆನುತೈದಿ ಬರಲ
ಲ್ಲಲ್ಲಿ ಮಱುಗಿತು ಸೇನೆ ಸಾಹಸ
ಮಲ್ಲನಡಹಾಯಿದನು ದ್ರುಪದನು ಧನುವನೊದಱಿಸುತ ॥ ೪೭

ರಾಯನಾಪತ್ತಿಂದ ಮುನ್ನವೆ
ಸಾಯಬೇಹುದು ತನಗೆನುತಲಡ
ಹಾಯಿದನು ಕಲಿ ಮತ್ಸ್ಯನೃಪ ನಿಜ ಬಂಧುಗಳ ಸಹಿತ ।
ನೋಯಬೇಹುದು ಮುನ್ನ ತಾವೆನು
ತಾಯತಿಕೆಯಲಿ ಪಂಚ ಕೈಕೆಯ
ರಾಯುಧದ ಬೆಳಗಳ್ಳಿಱಿಯೆ ನೂಕಿದರು ತೇರುಗಳ ॥ ೪೮

ತಲೆಗೆ ಕೊಂಡೆವು ಹಣವನಿನ್ನಿದ
ನುಳುಹಿಕೊಂಡಿರಲಾಗದೆಂದಿ
ಟ್ಟಳಿಸಿ ಹೊಕ್ಕುದು ಯವನ [2]ಸಂವೀರರು ಸುಷೇಣಕರು[2] ।
ಅಳಪಿಗಳುಕುವುದಾಳುತನದ
ಗ್ಗಳಿಕೆಯೇ ಸುಡಲೆನುತ ಮನ ಮುಂ
ಕೊಳಿಸಿ ಕೊಂತೀಭೋಜ ಹೊಕ್ಕನು ಸಕಲ ದಳ ಸಹಿತ ॥ ೪೯

ಹರೆದ ಬಲವೊಗ್ಗಾಯ್ತು ರಾಯನ
ನುರವಣಿಸಲೀಯದೆ ನೃಪಾಲಕ
ರುಱುಬಿದರು ತಱುಬಿದರು ಪರ ಬಲ ಕಾಲ ಭೈರವನ ।
ಹೊರಳಿಯೊಡೆಯದೆ ಧಾರಣಿಯಲೊ
ತ್ತರಿಸಿ ಕಲ್ಪದ ಕಡೆಯ ಕಡಲಿನ
ಗರುವಿಕೆಯ ಗಾಢದಲಿ ನಡೆದರು ತಡೆದರರಿ ಭಟರ ॥ ೫೦

ತೊಲಗು ವಿಪ್ರಾಧಮ ಸುಯೋಧನ
ಬಲದೊಳಗೆ ಬಹು ಭಾಷೆತನದಲಿ
ಗಳಹಿ ಬಂದರೆ ಹಿಡಿಯ ಬಲ್ಲೈ ಧರ್ಮನಂದನನ ।

---

1 ಜಳ್ಳು (ಗ), 2 ಸಂವೀರರುಗಳೊಂದಾಗಿ (ಗ.ಚ.ದ.ಪ).

ಗಳದ ಸತ್ತ್ವವನಱಿಯದದ್ರಿಗೆ
ತಲೆಯನೊಡ್ಡುವರೇ ವೃಥಾ ಕಳ
ಕಳಿಸಿ ನುಡಿವರೆ ಮಾನ್ಯರೆನುತಿದಿರಾದನಾ ದ್ರುಪದ ॥ ೫೧

ದಿಟ್ಟನಹೆಯೋ ದ್ರುಪದ ಹಾ ಜಗ
ಜಟ್ಟಿಗಳಿಗುಪಹಾಸ್ಯವೇ ಗಱಿ
ಗಟ್ಟಿದಿರಿ ನೀವ್ ಹಿಡಿಯಲೀವಿರೆ ಧರ್ಮನಂದನನ ।
ತೊಟ್ಟ ಜೋಹಕೆ ತಕ್ಕ ನುಡಿಗಳ
[1]ಬಿಟ್ಟೆವ[1]ಲ್ಲದೆ ನಿಮ್ಮರಾಯನ
ಕಟ್ಟಲಾಪೆವೆ ಎನುತ ಕಱೆದನು ಸರಳ ಸರಿವಳೆಯ ॥ ೫೨

ದರ್ಪದಾಭರಣಕ್ಕೆ [2]ಸೂಸಿದ
ವೊ[2]ಪ್ಪಸಲಿಗೆಗಳೆನಲು ಗಱಿಗಳು
ಚಪ್ಪರಿಸಿ ತುಱುಗಿದವು ರಿಪು ಸೇನಾ ಸಮುದ್ರದಲಿ ।
ಹಿಪ್ಪೆಗರ ಹರೆಗಡಿದು ಹೊಗರಲ
ಗೊಪ್ಪಿದವು ಕರುಳುಗಳ ನಿಮಿಷದೊ
ಳೊಪ್ಪಗೆಡಿಸಿದವರಿ ಕದಂಬವನೀತನಂಬುಗಳು ॥ ೫೩

ಮರುಳೆ ಮಂಜಿನ ಮಳೆಗೆ ಕುಲಗಿರಿ
ಕರಗುವುದೆ ನೀನೆಚ್ಚ ಶರ ಪಂ
ಜರಕೆ ಸಿಲುಕುವ ವೀರರೇ ಪಾಂಡವ ಮಹಾರಥರು ।
ಕೊರಳ ರಕ್ಷಿಸಿಕೊಳ್ಳೆನುತ ಚ
ಪ್ಪರಿಸಿ ದ್ರುಪದ ವಿರಾಟರೆಚ್ಚರು
ಸರಳ ರಶ್ಮಿಯ ಮಾಲೆ ಮುಕ್ಕುಱುಕಿದವು ದಿಗುತಟವ ॥ ೫೪

ಗಿರಿಯ ಮಕ್ಕಳು ನೆರೆದು ವಜ್ರವ
ಸರಸವಾಡುವ ಕಾಲವಾಯಿತೆ
ಹರಹರತಿ ವಿಸ್ಮಯವೆನುತ ಹೊಗರೇಱಿ ಖತಿ ಮಸಗಿ ।
ತಿರುವ ಕಾಱಿಸಿದನು ಕಠೋರದ
ಮೊರಹುಗಳ ಬಾಯ್ಧಾರೆಗಳ ಕಿಡಿ
ಹೊರಳಿಗಳ ಹೊಗರಂಬು ಹೊಕ್ಕವು ಪಾಂಡುಸೈನ್ಯದಲಿ ॥ ೫೫

1 ಕೊಟ್ಟರ (ತ.ನ). 2 ಸೂಚಿಸಿದೊ (ದ).

ನರರ ಕಡಿಯಾನೆಗಳ ಕಡಿಯಲಿ
ಬೆರಸಿದವು ತೇಜಿಗಳ ಕರುಳಲಿ
ಕರಿ ಘಟೆಯ ಕರುಳುಗಳು ತೊಡಕಿದವುಡಿದ ತೇರುಗಳು ।
ಜರಿದ ಜೋಡಿನೊಳೊಂದಿದವು ಕ
ತ್ತರಿಸಿದಾಯುಧ ಕಡಿದ ಸಿಂಧದ
ಹೊರಳಿಯಲಿ ಹೂಳಿದವು ನಿಮಿಷಕೆ ಪಾಂಡು ಸೇನೆಯಲಿ ॥ ೫೬

ನೊರೆ ರಕುತ ಸುಳಿ ಮಸಗಿ ಮಿದುಳಿನ
ಹೊರಳಿಗಳೆದುಬ್ಬಣದ ನೆಣ ವಸೆ
ದೊರಳೆಗಳ ಮೆದಕುಗಳ ಮೂಳೆಯ ಬಸಿವ ಬಲು ಜಿಗಿಯ ।
ಕರುಳ ಬಂಬಲು ಖಂಡದಿಂಡೆಯ
ತುಱುಗಿದೆಲುವಿನ ತಳಿತ ಚರ್ಮದ
ಶಿರದ ತಡಿಗಳಲಡಸಿ ಹರಿದುದು ವೈರಿ ಸೇನೆಯಲಿ ॥ ೫೭

ಕೂಡೆ ತಳಪಟವಾಯ್ತು ಸುಭಟರ
ಜೋಡಿ ಜರಿದುದು ಕೌರವೇಂದ್ರಗೆ
ಖೋಡಿಯುಂಟೇ ದ್ರೋಣ ಕೇಣವ ಬಿಟ್ಟು ಕಾದುವರೆ ।
ಖೇಡತನ ಬಿಗುಹಾಯ್ತು ಮೆಯ್ಯಲಿ
[1]ಮೂ[1]ಡಿದವು ಹೊಗರಂಬುಗಳು ತೆಗೆ
ದೋಡಿದವು ತೆಕ್ಕೆಯಲಿ ಪಾಂಡವ ನೃಪ ಮಹಾರಥರು ॥ ೫೮

ಘಾಯವಡೆದನು ದ್ರುಪದ ಮತ್ಸ್ಯನ
ಬಾಯೊಳೊಕ್ಕುದು ರಕುತ ಕೈಕೆಯ
ರಾಯುಧಂಗಳನೊಪ್ಪಿಸಿದರಿಳಿದೋಡಿದರು ರಥವ ।
ಸಾಯಲಾದನು ಧೃಷ್ಟಕೇತು ವಿ
ಡಾಯಿಗೆಟ್ಟನು ಭೋಜನಿತ್ತಲು
ರಾಯನಲ್ಲಿಗೆ ರಥವ ದುವ್ವಾಳಿಸಿದನಾ ದ್ರೋಣ ॥ ೫೯

ತೀರಿತಿನ್ನೇನರಿ ನೃಪನ ಸಂ
ಸಾರವಿನ್ನರೆ ಘಳಿಗೆಯಲಿ ಗಾಂ
ಧಾರಿ ನೆಱೆ ನೋಂಪಿಯಲಿ ಪಡೆದಳು ಕೌರವೇಶ್ವರನ ।

[1] ಹೂ (ಕ)

ಸಾರ ಹೇಳೋ ಸಾಹಸಿಕರೆಂ
ದಾರುತಿರೆ ಬಲವಿತ್ತಲಾಹವ
ಧೀರ ಸಾತ್ಯಕಿ ಭೀಮ ಪಾರ್ಥ ಕುಮಾರರನುವಾಯ್ತು ॥ ೬೦

ಗೆಲಿದನೈ ಮಝು ಪೂತು ದ್ರೋಣನ
ಬಲುಹು ಭರ್ಗನ ಸರಿ ಯುಧಿಷ್ಠಿರ
ಸಿಲುಕಿದನಲಾ ಶಿವ ಶಿವಾ ಕಲಿ ಕರ್ಣ ನೋಡೆನುತ ।
ಉಲಿವ ದುರಿಯೋಧನನನೀಕ್ಷಿಸು
ತಲಘು ಭುಜಬಲ ಭಾನು ನಂದನ
ನಳುಕದೀ ಮಾತುಗಳನೆಂದನು ನೀತಿ ಸಮ್ಮತವ ॥ ೬೧

ಗೆಲವು ನಮಗೆಲ್ಲಿಯದು ಧರ್ಮಜ
ಸಿಲುಕುವುದು ತಾನಿಲ್ಲ ಕೃಷ್ಣನ
[1]ನೆಳಲು[1] ದಿಟವುಂಟಾದೊಡೊಳಗಾಗರು ವಿರೋಧಿಗಳು ।
ನೆಲನ ತಿಣ್ಣವ ತಿದ್ದಲೋಸುಗ
ಸುಳಿದನಱಿಯಾ ಕೃಷ್ಣನೀತನ
ಬಲದವರಿಗೆಂತಹುದು ಬಾಧೆಗಳೆಂದನಾ ಕರ್ಣ ॥ ೬೨

ಗಿರಿಯ ಕೊರಳಿಗೆ ವಜ್ರ ಮಣಿಯಾ
ಭರಣವೇ ದಳ್ಳುರಿಯ ಜೋಡುಗ
ಳರಗಿನೋಲೆಯಕಾಱರಿಗೆ ಸುಯಿಧಾನವೇ ನೃಪತಿ ।
ವರ ತಿಮಿರ ರಾಜಂಗೆ ಮಂಗಳ
ಕರವೆ ಆ ರವಿ ಕೃಷ್ಣಭಕ್ತರ
ಪರಿಭವವು ಜೀವರಿಗೆ ಪಥ್ಯವೆ ಎಂದನಾ ಕರ್ಣ ॥ ೬೩

ಇರಲಿ ಮೇಣ್ ದೂರದಲಿ ಹತ್ತಿರೆ
ಯಿರಲಿ ತನ್ನವರೆಂದರತ್ತಲೆ
ಹರಿವ ಕೊಂಬನು ಕೃಷ್ಣನದು ತನಗೇಱಿಸಿದ ಬಿರುದು ।
ಹರಿ ಸಮೀಪದೊಳಿಲ್ಲ ದ್ರೋಣಂ
ಗರಸ ಸಿಲುಕಿದನೆಂದು ಬಗೆದೈ
ಮರುಳೆ ಮುರ ವೈರಿಯ ಕಟಾಕ್ಷದ ಕಾಹು [2]ಘನವೆಂ[2]ದ ॥ ೬೪

[1] ಒಲುಮೆ (ಚ), ಬಲುಹು (ಬ). [2] ಬಲುಹೆಂ (ಚ ತ.ನ.ಪ.ಬ).

ಆ ಹದನದಂತಿರಲಿ ನಮ್ಮಾ
ಯಾಹವಕೆ ಕಲಿ ಭೀಮ ಸಾತ್ಯಕಿ
ರೂಹುದೋಱಿದರವೆ ಘಟೋತ್ಕಚ ಪಾರ್ಥಸುತರೊಡನೆ ।
ಸಾಹಸಿಕರೊಗ್ಗಾಯ್ತು ದ್ರೋಣಂ
ಗೀ ಹದನು ಭಾರಾಂಕವೀಗಳೆ
ಬೇಹ ಸುಭಟರ ಕಳುಹು ಕಾಳೆಗಕೆಂದನಾ ಕರ್ಣ ॥ ೬೫

ಎನಲು ನೂಕಿದನರಸ ದುಶ್ಶಾ
ಸನ ಜಯದ್ರಥನಿನತನುಜ ಗುರು
ತನುಜ ಕೃಪ ಮಾದ್ರೇಶ ಭಗದತ್ತಾದಿಗಳು ಸಹಿತ ।
ತನತನಗೆ ನಾಯಕರು ದ್ರೋಣನ
ಮೊನೆಯ ಬಲಿದರು ಹಿಡಿ ಯುಧಿಷ್ಠಿರ
ಜನಪತಿಯನೆನುತುಱುಬಿದರು ತಱುಬಿದರು ಪರ ಬಲವ ॥ ೬೬

ಘಡಘಡಾರೋ ಧರ್ಮಪುತ್ರನ
ಹಿಡಿವವರು ಬಾಯ್ಬಡಿಕರ್ಕೈ ಕಾ
ಳ್ಗೆಡೆದಡೇನಹುದೆನುತ ಹೊಕ್ಕನು ಭೀಮನುರವಣಿಸಿ ।
ಕಡಲ [1]ಕಡುಹಿನ[1] ಬಹಳ ಲಹರಿಯ
ನೊಡೆ ಮುರಿವ ಮಂದರದಪೋಲವ
ಗಡಿಸಿ ಹೊಕ್ಕನು ಗದೆಯ ಘಾಡದ ಹೊದಱ ಹೊಯ್ಲಿನಲಿ ॥ ೬೭

ಗದೆಯ ಘಾತಾಘಾತಿಕಾಱನ
ನಿದಿರುಗೊಂಡುದು ದೆಸೆ ದೆಸೆಗೆ ಹ
ಬ್ಬಿದುದು ಬಲನೆಡ ಜೋಡು ಬಲು ಭಾರಣೆಯ ಪಟು ಭಟರು ।
ಮದ ಗಜದ ನಿಡುವರಿಯ ತೇರಿನ
ಕುದುರೆಕಾಱರ ಕಾಹಿನಲಿ ಕೊ
ಬ್ಬಿದುದು ನಿಬ್ಬರವಾಗಿ ಬಹು ವಿಧ ವಾದ್ಯ [2]ನಿರ್ಘೋಷ[2] ॥ ೬೮

ತೆತ್ತಿಗರ ಬರಹೇಳು ಭೀಮಂ
ಗೆತ್ತಣದು ಜಯವೆನುತ ಸುಭಟರು
ಮುತ್ತಿಕೊಂಡರು ಮುಸುಕಿದರು ಮೆತ್ತಿದರು ಸರಳುಗಳ ।

---

[1] ಮೊರಹಿನ (ಚ.ಪ.ಬ). [2] ರಥಸದಲಿ (ತ.ದ.ನ).

ಕತ್ತಲೆಯು ಹೇರಾಸಿ ಸೂರ್ಯನ
ನೊತ್ತಿ ತಹ ದಿನವಾಯ್ತಲಾ ಎನು
ತ್ತತ್ತಲಿತ್ತಲು ಮುಱಿದು ತಳಪಟ ಮಾಡಿದನು ಭೀಮ ॥ ೧೯

ಒಂದು ಕಡೆಯಲಿ ಭೀಮ ಸವಱಿದ
ನೊಂದು ದೆಸೆಯಲಿ ಸಾತ್ಯಕಿಯ ಶರ
ವೊಂದು ಕಡೆಯಲಿ ಪಾರ್ಥನಂದನ ಭೀಮ ನಂದನರು ।
ಒಂದು ಕಡೆಯಲಿ ನಕುಲ ಪಾಂಡವ
ನಂದನರು ಮತ್ತೊಂದು ದೆಸೆಯಲಿ
ಮುಂದುವರಿದರು ಮುಱಿದರರಿಗಳ ಹೊದಱ ಹೊಸ ಮೆಳೆಯ ॥ ೨೦

ಥಟ್ಟು ನುಗ್ಗಾಯಿತು ವಿರೋಧಿಗ
ಳಿಟ್ಟಣಿಸುತಿದೆ ದ್ರೋಣನೊಬ್ಬನ
ಬಿಟ್ಟು ನೋಡುವುದುಚಿತವಲ್ಲೆನುತೆಡಬಲನ ನೋಡಿ ।
ಬಿಟ್ಟನಾಹವಕಹಿತ ಬಲ ಜಗ
ಜಟ್ಟಿ ಕೌರವ ನೃಪತಿ ರಥವನು
ಹೊಟ್ಟುಗರ ತೆಗೆ ಹೋಗ ಹೇಳೆಂದೆಚ್ಚನತಿರಥರ ॥ ೨೧

ಮಗನ ತೆಗೆಯೋ ಸಾತ್ಯಕಿಯು ಹೆಱ
ತೆಗೆಯ ಹೇಳೋ ಬೇಡ ನಕುಲಾ
ದಿಗಳ ನೂಕಭಿಮನ್ಯುವನು ಹಿಮ್ಮೆಟ್ಟ ಹೇಳೆನುತ ।
ಮೊಗದ ಹೊಗರಿನ ಕೆಂಪನುಗುಳ್ವಾ
ಲಿಗಳ ದಂತದಲೌಕಿದಧರದ
ಬಿಗಿದ ಹುಬ್ಬಿನ ಭೀಮ ಹೊಕ್ಕನು ಗದೆಯ ತಿರುಗಿಸುತ ॥ ೨೨

ಸಿಲುಕಿದನು ಶಿವಿ ಸ್ವಾಮಿ ದ್ರೋಹನ
ಗಳದ ರಕುತಕೆ ಬಾಯನೊಡ್ಡೆನು
ತಳವಿಯಲಿ ಹೊಕ್ಕೊಕ್ಕಲಿಕ್ಕಿದನಾನೆ ಕುದುರೆಗಳ ।
ಎಲೆ ದುರಾತ್ಮ ದ್ಯೂತ ಕೇಳೀ
ಕಲಹ ಲಂಪಟ ನಿಲ್ಲು ನಿಲ್ಲೆನು
ತೊಳಗ್ಗವರಿದಪ್ಪಳಿಸಿದನು ದುರ್ಯೋಧನನ ರಥವ ॥ ೨೩

ತೋಳನಳವಿಗೆ ಸಿಕ್ಕಿತೋ ಮೃಗ
ಜಾಲ ಶಿವಶಿವ ದಿವಿಜ ವಧುಗಳ
ತೋಳ ತೆಕ್ಕೆಗೆ ಒಡಲನಿತ್ತನು ರಾಯನಕಟೆನುತ ।

ಆಳು ಮಿಗೆ ಕಳವಳಿಸೆ ಕುರುಭೂ
ಪಾಲಕನ ಹಿಂದಿಕ್ಕಿ ಕಿವಿಗಡಿ
ಗೋಲ ತೆಗಹಿನೊಳೊದಗಿದರು ದುಶ್ಶಾಸನಾದಿಗಳು ॥ ೭೪

ವರ ವಿಕರ್ಣ ಸುಲೋಚನನು ದು
ರ್ಮರುಷಣನು ದುಶ್ಶಾಸನನು ಸಂ
ಗರವ ಕೆಣಕಿದರನಿಲ ಸುತನೊಳು ನೃಪನ ಹರಿಬದಲಿ ।
ನೆರೆದ ನುಸಿಗಳು ಗಿರಿಯ ಕಾಡುವ
ಪರಿಯ ನೋಡೈ ಪೂತುರೆನುತು
ಬ್ಬರಿಸಿ ಕೈದೋರಿದನು ಕಲಿ ಪವಮಾನ ಸುತ ನಗುತ ॥ ೭೫

ಎಚ್ಚ ಶರವನು ಗದೆಯಲಣೆದಿಡು
[1]ಗಿಚ್ಚು ಹೊಕ್ಕಂದದಲಿ ರಥವನು
ಬಿಚ್ಚಿ[1] ಬಿಸುಟನು ಸಾರಥಿಯ[2]ನಾ[2] ಹಯವನಾ ಧನುವ ।
ಕೊಚ್ಚಿದನು ಕೊಲೆಗಡಿಗನಿದಿರಲಿ
ಕೆಚ್ಚುಮನದವರಾರು ಸೋಲವಿ
ದೊಚ್ಚತವಲೇ ನಿಮ್ಮ ಸೇನೆಗೆ ಭೂಪ ಕೇಳೆಂದ ॥ ೭೬

ಸರಿದರೀ ನಾಲುವರು ರಾಯನ
ಮರಳಲೀಯದೆ ಮತ್ತೆ ಮಾರುತಿ
ಹರಿಸಿದನು ನಿಜರಥವನತಿರಥರೊಡ್ಡು ಲಟಕಟಿಸೆ ।
ದೊರೆಯ ತೆಗೆಯೋ ನೂಕು ನೂಕಲಿ
ಕರಿ ಘಟೆಯನೆನೆ ಮುಗಿಲ ಮೋಹರ
[3]ಧರೆಗೆ ತಿರುಗಿದವೆನಲು ಜೋಡಿಸಿದರು ಗಜವ್ರಜವ[3] ॥* ೭೭

---

[1] ಗಿಚ್ಚು ಹಾಯ್ದುದು ಕೋಪದಿಂದಲೆ ಕೊಚ್ಚಿ (ಟ), ಗಿಚ್ಚು ಹೊಕ್ಕನು ಹೊಯ್ದು ರಥವನು ಬಿಚ್ಚಿ (ಪ). [2] ರಥ (ಕ). [3] ಧರೆಗಿಳಿದವೆಂಬಂತೆ ಜೋಡಿಸಿದರು ಗಜವ್ರಜವ (ಗ), ಧರೆಗೆ ತಿರುಗಿದವೆನಲು ಜೋಡಿಸಿದರು ಗಜವ್ರಜವ (ಚ.ದ.ಪ), ಹರದೆಗೆಯೆ ಜೋಡಿಸಿದರಂದುಬ್ಬರದ ಮದಗಜವ (ಟ).

* ಇಲ್ಲಿಗೆ (ಚ.ದ.ನ.ಪ.ಬ) ಪ್ರತಿಗಳಲ್ಲಿ ನಾಲ್ಕನೆಯ ಸಂಧಿಯೂ (ತ) ಪ್ರತಿಯಲ್ಲಿ ಎರಡನೆಯ ಸಂಧಿಯೂ ಮುಗಿದು ಇಲ್ಲಿರುವ ಮುಂದಿನ ಸಂಧಿಯ ಸೂಚನೆಯೇ ಅವುಗಳಲ್ಲಿಯೂ ಸೂಚನೆಯಾಗಿದೆ.

ವಂಗನಂಬಟ್ಟನು ವರಾಳ ಕ
ಳಿಂಗ ಬರ್ಬರರಾನೆಗಳ ಥ
ಟ್ಟಿಂಗೆ ಕೈವೀಸಿದರು ಕೊಂಡರು ನಾಳಿವಿಲ್ಲುಗಳ |
ವಂಗಡದಲೆಂಬತ್ತು ಸಾವಿರ
ತುಂಗ ಗಜ ಘಟೆ ಕವಿದವಿದಕಿ
ನ್ನಂಗವಿಸುವವರಾರೆನುತ ಗಜಬಜಿಸಿತರಿ ಸೇನೆ || ೭೮

ಆಳ ಹೆದರಿಸಿ ನುಡಿವ ನಾಯ್ಗಳ
ಬೀಳ ಬಡಿ ಬಡಬಾಗ್ನಿ [1]ನೊರಜನ[1]
ಧಾಳಿಗಳುಕುವುದುಂಟೆ ಫಡ ಫಡಯೆನುತ ಬೊಬ್ಬಿಱಿದ |
ಕಾಲ ದಂಡವ ತಿರುಹಿ ಭುವನದ
ಲೂಳಿಗವ ಮಾಡುವ ಕೃತಾಂತನ
ಹೋಲುವೆಯ ಹೊಸಬಿಗನು ಹೊಕ್ಕನು ಭೀಮನುರವಣಿಸಿ || ೭೯

ಗದೆಯಲಪ್ಪಳಿಸಿದನು ಕೋದಂ
ಡದಲಿ ಕಾದಿದ ಮುದ್ಗರದಲೊರ
ಸಿದನು ಲೌಡಿಯಲರೆದನುಱು ತಱಿದನು ಕೃಪಾಣದಲಿ |
ಒದೆದು ಕೆಲವನು ಮುಷ್ಟಿಯಲಿ ಮೋ
ದಿದನು ಕೆಲವನು ನಿಖಿಳ ಶಸ್ತ್ರಾ
ಸ್ತ್ರದಲಿ ಕಾದಿದನನಿಲಸುತ[2]ನಿಭಬಲವ ಬಱಿಕೈದು[2] || ೮೦

ಗಿಳಿಯ ಹಿಂಡುಗಳೆತ್ತ ಗಿ[3]ಡಿ[3]ಗನ
ದಳದುಳವು ತಾನೆತ್ತ ಭೀಮನ
ಸುಳಿವು ಗಡ ಕಾಲೂಱುವವೆ ಕರಿ ಘಟೆಗಳೊಗ್ಗಿನಲಿ |
ಕಳಿತ ಹೂವಿನ ತೊಡಬೆಗಳೊ ರಿಪು
ಬಲವೊ ಬಿಱುಗಾಳಿಯೊ ವೃಕೋದರ
ನಳವ ಬಲ್ಲವನಾವನೈ ಧೃತರಾಷ್ಟ್ರ ಕೇಳೆಂದ || ೮೧

[1] ಮಂಜಿನ (ದ.ನ). [2] ಗಜಬಲವ ಬೇಸರದೆ (ಚ.ಪ).
[3] ಡು (ಗ.ಟ.ದ).

ಹೋಯಿತಾ ಮಾತೇಕೆ ಗಜ ದಳ
ಮಾಯವಾದುದು ವಂಗ ಭೂಪನ
ಬಾಯೊಳಗೆ ಬೆಟ್ಟಿದನು ಗದೆಯನು ಮಿಕ್ಕ [1]ನಾಲ್ವ[1]ರನು ।
ಸಾಯ ಬಡಿದನು ಮುಂದೆ ಕೌರವ
ರಾಯನನು ತಾಗಿದನು ಭೀಮನ
ದಾಯ ಬಂದುದು ಸಕಲ ಕುರು ತಳತಂತ್ರ ತಲ್ಲಣಿಸೆ ॥ * ೮೨

ಎರಡನೆಯ ಸಂಧಿ ಮುಗಿದುದು.

[1] ಮೂವ (ಕ.ಗ.ದ.ಬ)

* (ಕ.ಗ ತ.ಟ.) ಪ್ರತಿಗಳಲ್ಲಿ ಮೇಲಿನ ೮೨ನೆಯ ಪದ್ಯವಾದಮೇಲೆ ಕೆಳಗಿನ ಪದ್ಯವು ಅಧಿಕವಾಗಿದೆ :—

ರಾಯನನು ಹಿಡಿಯೆಂಬ ಕೌರವ
ರಾಯ ಭಂಗಿತನಾಗಿ ಮರಳಿದು
ಕಾಯ ನಡುಗಿತು ಭೀಮಸೇನನ ವೀರ ವಿತರಣಕೆ ।
ಕಾಯಬೇಕೆನುತಿತ್ತ ಕೃಷ್ಣನು
ರಾಯಪಾಂಡವರವರ ಕರುಣಾ
ಮಾಯೆ ಕಿರಿದಾದಂದು ಕಾಯ್ದನು ವೀರನಾರಯಣ ॥

ಮೂರನೆಯ ಸಂಧಿ

ಸೂಚನೆ ॥ ಹನುಮನನುಜನ ಬಾಹುಬಲ ರಿಪು
ವನಧಿಯನು ತುಳುಕಿದನು ಭಗದ
ತ್ತನನು ಮರ್ದಿಸಿ ಮುಱಿದನರ್ಜುನ ಸುಪ್ರತೀಕವನು ॥

ಗುರುಗಳಾಡಿದ ಭಾಷೆ ಪರಬಲ
ದರಸ ಕಟ್ಟುವದದು ನಿಲಲಿ ನ
ಮ್ಮರಸ ಸಿಲುಕಿದ ಭೀಮ ಗಜ ಕಟ್ಟಿದುದು ಬೀದಿಗಳ ।
ತಿರುಗಲಾಪರೆ ಸಮಯವಿದು ಸಂ
ಗರ ಸಮರ್ಥರು ಬರಲಿಯೆಂಬ
ಬ್ಬರದೊಳಗೆ ಭಗದತ್ತ ಮೇಳೈಸಿದನು ನಿಜ ಗಜವ ॥ ೧

ಬಲವೊರಜೆ ಎಡವೊರಜೆ ಬೆನ್ನಿನ
ಮಿಳಿಯ ಜಾಳಿಗೆವೊರಜೆ ತಳಸಂ
ಕಲೆಯ ತೊಡರಂಕಣಿಯ ಕೊಂಡೆಯ ಪಕ್ಕಗಂಟೆಗಳ ।
ತುಳುಕಿನುಗ್ಗಡಣಿಗಳ ಹಿಣಿಲಿನ
ಬಲುವೊರಜೆಗಳ ಬಾರ ಸಂಕಲೆ
ಗಳನು ಬಿಗಿದರು ಜೋಡಿಸಿದರುಬ್ಬರದ ಮದಗಜವ ॥ ೨

ಬಿಗಿದು ಗಳವತ್ತಿಗೆಯನೆದೆವ
ತ್ತಿಗೆಯ ಘನಮುಂಡಿಗೆಯ ಲಾಡಿಯ
ಬಿಗಿದು ಗುಳ ಜುಂಚೆಗಳ ಭಾರಿಯ ಕೈಯ ಪಟ್ಟೆಯ[1]ವ[1] ।
ಅಗಿವ ಬಡಿಗೆಯನಂಕುಶದ ಕ
ಟ್ಟಿಗೆಯ ಧಾರೆಯ ಕಮಳದಳ ಕೊಡ
ತಿಗಳ ಕೈಹಾರೆಗಳನಳವಡಿಸಿದರು ಪಹಿಲದಲಿ ॥ ೩

ಮುಗಿಲ ಹೊದಱಿನೊಳೆಳೆಯ ರವಿ ರ
ಶ್ಮಿಗಳು ಪಸರಿಸುವಂತೆ ಸುತ್ತಲು
ಬಿಗಿದ ಗುಳದಲಿ ಹೊಳೆ[2]ಯೆ[2] ಹೊಂಗೆಲಸದ ಸುರೇಖೆಗ[3]ಳು[3] ।

[1] ದ (ಸ). [2] ವ (ಸ). [3] ಳ (ಸ).

ಗಗನ ಗಂಗಾನದಿಯ ಕಾಲುವೆ
ತೆಗೆದರೆನೆ ಠೆಕ್ಕೆಯದ ಪಲ್ಲವ
ವಗಿಯೆ ಮೆಱೆದುದು ಬಿಗಿದ ಮೊಗರಂಬದ ವಿಳಾಸದಲಿ ॥ ೪

ಗಗನ ತಳವನು [1]ಬಿಗಿದ[1] ಬಲುಱಂ
ಚೆಗಳ ತುಂಬಿದ ಹೊದೆಯ ಕಣೆಗಳ
ಬಿಗಿದ ನಾಳಿಯ ಬಿಲ್ಲುಗಳ ತೆತ್ತಿಸಿದ ಸೂನಿಗೆಯ ।
ಉಗಿವ ಸರಿನೇಣುಗಳ ಕೈ ಗುಂ
ಡುಗಳ ಕವಣೆಯ ಲೌಡಿ ಕರವಾ
ಳುಗಳ [2]ಜೋಡಿಸಿ ಜೋದರರಡರಿದರಂದು ಬೊಬ್ಬಿಱಿದು[2] ॥ ೫

ಸುತ್ತ ಮೆಱೆದವು ಮೇಲೆ ಪಲ್ಲವ
ಸತ್ತಿಗೆಯ ಸಾಲುಗಳು ಬಿರುದಿನ
ಕತ್ತರಿಯ ಹೀಲಿಗಳ ಝಲ್ಲರಿ ಮುಸುಕಿದವು ಗಜವ ।
ಒತ್ತಿ ಕಿವಿಗಳನೊದೆದು ಶಿರದಲಿ
ತೆತ್ತಿಸಿದರಂಕುಶವನಾ ಭಗ
ದತ್ತ ದಂತಿಯನೇಱಿದನು ಜಯ ರವದ ರಭಸದಲಿ ॥ ೬

ಕಾಲುಗಾಹಿನ ಕುದುರೆಗಳ ಕಾ
ಲಾಳ ಕೈವಾರಿಗಳ ಸಬಳದ
ಸೂಲಿಗೆಯ ತೇರುಗಳ ಹರಹಿನ ಹೊಂತಕಾರಿಗಳ ।
ಆಳ ಬಲು ಬೊಬ್ಬೆಯಲಿ ಘನ ನಿ
ಸ್ಸಾಳ ತತಿ ಮೊಳಗಿದವು ಡೌಡೆಯ
ತೂಳುವಱೆಗಳು ಗಜಱಿದವು ತಂಬಟದ ಲಗ್ಗೆಯಲಿ ॥ ೭

[3]ಸುರಪ ಕಡಿಯಲು[3] ಕೆರಳಿ ಕುಲ ಗಿರಿ
ಯುರಿಯನುಗುಳುವುದೆನಲು ದಾಡೆಗ
ಳರುಣ ಮಯ ರಶ್ಮಿಗಳ ಪಸರದಲೆಸೆದುದಿಭ ಪತಿಯ ।
ಧರಣಿಯಳತೆಯ ಹರಿಯ ನೆಗಹಿನ
ಚರಣದಗ್ರದೊಳಿಳಿವ ಘನ ನಿ
ರ್ಝರದವೊಲು ಮದ ಧಾರೆ ಮೆಱೆದುದು ಕರಿ ಕಪೋಲದಲಿ ॥ ೮

---

[1] ಬಗಿವ (ಸ). [2] ಕಲಿಜೋದರರಂದಡರಿದರು ಬೊಬ್ಬಿಡುತ (ಟ), ಜೋಡಿಸಿ ಜೋದರರಡರಿದರುಬ್ಬರದ ಮದಗಜವ (ಬ), ಮೋಹಿಸಿ ಜೋದರಡರಿದರಂದು ಬೊಬ್ಬಿಱಿದು. [3] ಸುರಪತಿಯೊಳು (ಕ).

ಜಗದ ನಿಡು ನಿದ್ರೆಯಲಿ ಮೋಹರ
ದೆಗೆದ ಮುಗಿಲೋ ಮೇಣಖಿಳ ಕುಲ
ದಿಗಿಭವೆಂಟೊಂದಾ[1]ಯ್ತೊ[1] ಕೈ ಕಾಲ್ ಮೂಡಿತೋ ನಭಕೆ |
ಅಗಿದು ಮೆಟ್ಟಿದಡವನಿ ಪಡುವಲು
ನೆಗೆದುದಡರಿದು ಮುಂದೆ ಮೆಟ್ಟಲು
ಚಿಗಿದುದಿಳೆ ಮೂಡಲು ಮಹಾಗಜವೈದಿತಾಹವವ || ೯

ಪವನ[2]ಬಲ ಪರಿದಳಿತ[2] ಕದಳೀ
ನಿವಹದಲಿ ನಭ ಧಾತುಗೆಟ್ಟುದು
ರವಿಗೆ ಕಾಪಥವಾಯ್ತು ಹೊಗಳುವೆನೇನನದುಭುತವ |
ಭುವನ ಕೋಶದೊಳಾದ ವಿಪಿನೋ
ದ್ಭವವೊ ಭಾರಿಯ ದಂತಿ ಮಹದಾ
ಹವದೊಳಿಳಿದುದು ಕೃಷ್ಣನೊಲಿದರಿಗಾವುದರಿದೆಂದ || ೧೦

ಪಿಡಿವ ಬಿಡುವೊಬ್ಬುಳಿಗೆ ತಹ ಬಲ
ನೆಡಕೆ ಹಾಯ್ಕುವ ಸುತ್ತಲೊತ್ತುವ
ತಡೆವ ನಡಸುವ ಸೆಳೆವ ತಿರುಹುವ ಹದಿರ ಜೋಕೆಯಲಿ |
ಗಡಣಿಸಿದನವನಿಭಪತಿಯುನವ
ಗಡಿಸಿ ನೂಕಿದೊಡಮಮ ದಿಕ್ಕರಿ
ನಡುಗೆ ಚೌಕದ ಕಳನ [3]ತುಳಿದುದು[3] ಸುಪ್ರತೀಕ ಗಜ || ೧೧

ಇದು ಗಜಾಸುರನೋ ಮಹಾದೇ
ವಿದುವೆ ಮಹಿಷಾಸುರನೊ ಮಾಯಾ
ರದನಿಯೋ ದಿಟವಿದನು ಗೆಲುವರೆ ಭೀಮ ಫಲುಗುಣರು |
ತ್ರಿದಶ ರಿಪುಗಳ ಗಂಡನಿದು ಕಾ
ದಿದೆವು ನಾವಿಂದೆನುತ ಸುಭಟರು
ಕದಡಿ ಸರಿದುದು ಸೂಱುಗೊಂಡುದು ಬಲ ಪಲಾಯನವ || ೧೨

ಮೊಗದ ಜವನಿಕೆದೆಗೆದು ನೆತ್ತಿಯ
ಬಗಿದು ಕೂರಂಕುಶದಲಾನೆಯ
ಬೆಗಡುಗೊಳಿಸಲು ಬೀದಿವರಿದುದು ಸುಭಟರದೆಯೊಡೆಯೆ |

[1] ಗಿ (ಪ). [2] ದಳಪರಿದಳಿತ (ಗ.ದ), ಜನಪಡಿತಳದ (ಕ), ಬಲಪರಿಲುಳಿತ (ಚ.ಪ), ಬಲಪರಿಚಲಿತ (ತ), ಬಲಪರಿತರಲು (ನ) [3] ಗೆಲಿದುದು (ಗ.ಚ.ತ.ದ.ಪ).

ಹಗೆಯ ಬಲದಲಿ ಹರಿದು ಸುಭಟರ
ಚಿಗುಳಿದುಳಿದುದು ತಲೆಗಳನು ಮುಗಿ
ಲಗಲದಲಿ ಹರಹಿದುದು ದಿಕ್ಕರಿ ಹೊಕ್ಕು ಮೋಹರವ ॥ ೧೩

ನೆಳಲು ಸುಳಿಯಲು ದಂತಿಯೆಂದ
ಪ್ಪಳಿಸೆ ವಾಸುಕಿ ನೊಂದನಂಬುಧಿ
ತುಳುಕಿದವು ಸತ್ವಾತಿಶಯವೆಂತುಟು ಮಹಾದೇವ ।
ತುಳಿದುದರಿ ಸುಭಟರನು ಸಾವಿರ
ತಲೆಯ ಸೆಳೆದುದು ಸೊಂಡಿಲಲಿ ವೆ
ಗ್ಗಳೆಯ ಮದ ಕರಿ ಕೇಣಿಗೊಂಡುದು ವೈರಿ ಮೋಹರವ ॥ ೧೪

ಸೀಳಿ ಹರಹಿತು ಕರಿಗಳನು ನೇ
ಪಾಳಗುದುರೆಯ ಥಟ್ಟುಗಳ ಹಿಂ
ಗಾಲಲಣೆದುದು ರಥವನೈದಾಱೇಳನೊಂದಾಗಿ ।
[1]ತೋಳೊಳಗೆ ನೆಗ್ಗೊತ್ತಿ[1] ಮಿಗೆ ಕಾ
ಲಾಳ ತೊತ್ತಳದುಳಿದು ಕಾಲನ
[2]ಗೂಳೆಯ[2]ಕ್ಕುಪಕಾರಿಯಾದುದು ಸುಪ್ರತೀಕ ಗಜ ॥ ೧೫

ದ್ವಿಗುಣ ತ್ರಿಗುಣದಲಣೆದು ಜೋಡಿಸಿ
ಚಿಗಿದು ಹಾಯ್ಕುವ ಮೆಟ್ಟಿ ಸೀಳುವ
ತೆಗೆದು ಕಟ್ಟುವ ತಿರುಹಿ ನೂಕುವ ಹೆಡತಲೆಯೊಳಡಸಿ ।
ಉಗುರೊಳೌಕುವ ನಿ[3][ಗ್ಗವ][3]ದೊಳಿ
ಬ್ಬಗಿಯ ಮಾಡುವ ಕಾಲುಗೊಲೆಯಲಿ
ವಿಗಡ ಕರಿ ತುಳಿದಾಡಿತಿದಿರಿದಿರಾದ ಪಟುಭಟರ ॥ ೧೬

ಅರೆದುದೋ ಪರ ಬಲವ ಕಾಲನ
ಹೊರೆದುದೋ ಮಾರಣದ ಮಂತ್ರವ
ಬರೆದುದೋ ಬವರಕ್ಕೆ ಬಲುಗೈಗಳನು ಕೈ ನೆಗಹಿ ।
ಕರೆದುದೋ ಬಲವೆಲ್ಲ ನೀರಲಿ
ನೆರೆದುದೋ ಮಾರ್ಬಲದ ವೀರರು
ಹರೆದುದೋ ಹವಣಿಲ್ಲ ದಂತಿಯ ಸಮರ ಸಾಂರಂಭ ॥ ೧೭

[1] ಕಾಲೊಳಗೆ ನುಗ್ಗೊತ್ತಿ (ಗ). [2] ಪಾಳಯ (ಗ.ನ.ಬ). [3] ಗರ್ವ.

ಮುರಿದು ಮಂದರ ಗಿರಿ ಪಯೋಧಿಯ
ತೆರೆಗಳನು ತುಳಿವಂತೆ ರಿಪು ಮೋ
ಹರವನರೆದುದು ನುಗ್ಗುನುಸಿಯಾಯ್ತಖಿಳ ತಳತಂತ್ರ ।
ತೆರಳಿದರು ರಾವುತರು ರಥಿಕರು
ಹೊರಳಿಯೊಡೆದುದು ಗಜದ ಗಾವಳಿ
ಜರಿದುದಳಿದುದನಾರು ಬಲ್ಲರು ಭೂಪ ಕೇಳೆಂದ ॥ ೧೮

ಮುಱಿದು ಕೊಟ್ಟುದು ದಂತಿ ಗುರುವಿ
ನ್ನುಱುಬಿ ರಾಯನ ಹಿಡಿಯದಿರನಿದ
ತಱುಬಲಾಪರೆ ಬರಲಿ ಸಾತ್ಯಕಿ ನಕುಲ ಪವನಜರು ।
ಇಱಿತಕಿವರಂಜಿದರೆ ಪಾರ್ಥಂ
ಗಱುಹಿ ಬೇಗದೊಳೆನುತ [1]ನಾಯಕ
ರೊಱಲು[1] ತಿರಲನುವಾದುದುದಿತ್ತಲು ದೊರೆಗಳೊಗ್ಗಿನಲಿ ॥ ೧೯

ಅಳ್ಳಿದೆಯ ಮನ್ನೆಯರನೊಗ್ಗಿನ
ಡೊಳ್ಳುಗರ ಕಟವಾಯ ಕೊಯ್ ತಲೆ
ಗಳ್ಳರಿವದಿರು ತಱಿಚುಗೆಡೆವರ ಹೋಗ ಹೇಳೆನುತ ।
ಬಿಲ್ಲ ಗೊಲೆಗೇಱಿಸುತ ಚೌಪಟ
ಮಲ್ಲ ಹೊಕ್ಕನು ಭೀಮ ಭಟರ
ಲ್ಲಲ್ಲಿ ಕವಿದುದು ದ್ರುಪದ ನಕುಲ ಯುಧಿಷ್ಠಿರಾದಿಗಳು ॥ ೨೦

ಕರಿ ಬಲುಹು ಕಲಿ ಭೀಮಸೇನನು
ದುರುಳನಿನ್ನೇನಹನೆನುತ ಮೋ
ಹರಿಸಿ ಕವಿದುದು ಮತ್ಸ್ಯ ಸೃಂಜಯ ಪಂಚ ಕೈಕೆಯರು ।
ತಿರುವಿಗಂಬನು [2]ತೊಡಚಿ[2] ಸಾತ್ಯಕಿ
ನರನ ಮಗ ಹೈಡಿಂಬ ಯವನೇ
ಶ್ವರರು ಧೃಷ್ಟದ್ಯುಮ್ನ ಮೊದಲಾಗೈದಿದರು ಗಜವ ॥ ೨೧

ಗಿರಿಯ ತಱಿವರೆ ಶಕ್ರನಲ್ಲದೆ
ನೆರೆದ ದಿವಿಜ ಸಮೂಹ ಮಾಡುವ
ಭರವಸಿಕೆ ತಾನೇನು [3]ಹೊದ್ದಿ[3]ದರಿವರು ದಿಗ್ಗಜವ ।
ಸರಳ ಬಲುವಳೆಗಾಲವಹಿತ
ದ್ವಿರದ ಗಿರಿಯಲಿ ಕಾಣಲಾದುದು
ಕೆರಳಿ ಕರಿ ಕೈಕೊಂಡುದಱೆಯಟ್ಟಿತು ಮಹಾರಥರ ॥ ೨೨

---

[1] ಬಲಬೊಬ್ಬಿಱಿಯ (ಗ). [2] ಹೂಡಿ (ಗ.ಬ). [3] ಮುತ್ತಿ (ಕ.ಟ.ತ.ನ.ಬ).

ಚೆಲ್ಲಿತಿದು ದೆಸೆ ದೆಸೆಗೆ ಚೌಪಟ
ಮಲ್ಲಗಿಲ್ಲರ ಪಾಡೆ ನಮ್ಮದು
ಬಲ್ಲಿತಹುದುಸುರಿಲ್ಲದೊಡಲಿನ ಚೆಲುವು ಫಲವೇನು ।
ಅಲ್ಲಿ ದೈವದ ನೆನಹು ಘನ [1]ಜಯ[1]
ವೆಲ್ಲಿಯದು ನಮಗಿನ್ನು ಸಾಕಿ
ನ್ನೆಲ್ಲವೇತಕೆ ಚಿತ್ತವಿಸು ಚೌದಂತನಾಹವವ ॥ ೨೩

ಸೆಳೆವಿಡಿದು ತುಱುಗಾಹಿ ಪಶು ಸಂ
ಕುಲವ [2]ತೆವಱು[2]ವ ವೋಲು ವಾಯಸ
ಕುಲವನೊಂದೇ ಗೂಗೆ ಹೊಯ್ದಱೆಯುಟ್ಟುವಂದದಲಿ ।
ಬಲು ಕಣಿಗಳಿವದಿರನು ಕರಿ ಮುಂ
ಕೊಳಿಸಿ [3]ಕೆಡಹಿತು[3] ಯವನ ಕೌಸಲ
ಬಲವ ಕೈಕೆಯ ಮಗಧ ಭೂಪರ ಕೊಡಹಿ ಹಾಯಿಕಿತು ॥ ೨೪

ಹಿಡಿ ಹಿಡಿಯಲೋಡಿದನು ದ್ರುಪದನು
ಸಿಡಿದು ಕೆಲ ಸಾರಿದನು ಪವನಜ
ನೊಡಲುಸುರ ಸಂಬಂಧವಳಿದುದು ಸಿಲುಕಿದನಿಬರಿಗೆ ।
ಒಡೆಮುರಿದು ಸಾತ್ಯಕಿಯ ರಥವನು
ತುಡುಕಿ ಹಾಯ್ಕಿತು ಭೀಮ ತನಯನ
ಕೊಡಹಿ ಬಿಸುಟುದು ಕೊಂದುದಗಣಿತ ಕರಿ ತುರಂಗಮವ ॥ ೨೫

ಮರಳಿ ಮತ್ತೆ ಮಹಾರಥರು ಸಂ
ವರಿಸಿಕೊಂಡುದು ಸರಳ ಮಳೆಗಳ
ಸುರಿದರಾನೆಯ ಮೇಲೆ ಜೋದರ ಕೋಲ ಮನ್ನಿಸದೆ ।
ಗಿರಿಯ ಮುತ್ತಿದ ಮಿಂಚುಬುಳುವಿನ
ಹೊರಳಿಯಂತಿರೆ ಹೊನ್ನ [4]ಬರಹದ[4]
ಸರಳು ಮುಱಿದವು ಕಱಿದರದುಭುತ ಕಣೆಯ ಸರಿವಳೆಯ ॥ ೨೬

ಬಾಲರೆಸುಗೆಯ [5]ಮಿಟ್ಟೆ[5]ಯಂಬಿಗೆ
ಸೋಲುವುದೆ ಗಿರಿ ವೈರಿ ಸುಭಟರ
ಕೋಲ ಕೊಂಬುದೆ ವೀರ ಕುಂಜರ ಮತ್ತೆ ಮೊಗನೆಗಹಿ ।

[1] ಪ್ರಳ (ಟ). [2] ಕೆದಱು (ಪ). [3] ಕೆದಱಿತು (ಜ.ಟ.ನ.ಪ),
[4] ಬಣ್ಣದ (ಬ). [5] ಮಿಂಟೆ (ಕ.ಚ.ತ.ನ.ಪ).

ಆಳೊಳಗೆ ಬೆರಸಿತು ಮಹಾರಥ
ರೋಳಿ ಮುಱಿದುದು ಕುಱಿಯ ಹಿಂಡಿನ
ತೋಳನೈ ನಿನ್ನಾನೆ ಸವಱಿತು ಮತ್ತೆ ಮಾರ್ಬಲವ ॥ ೨೭

ಹಡಗು ಜಲಧಿಯೊಳೋಡಿ ಗಿರಿಗಳ
ನೆಡಹಿ ನುಗ್ಗಾದಂತೆ ಸುಭಟರ
ಗಡಣ ಗಜವನು ತಾಗಿ ತಾಗಿ ವಿಘಾತಿಯಲಿ ನೊಂದು ।
ಒಡಲ ಮೇಲೆಲ್ಲನಿತು ಮೋಹವ
ಹಿಡಿಯದಿವರೌಕಿದರು ಹಾವಿನ
ಕೊಡನು ದೋಷಿಗೆ ಸುಲಭವೇ ಧೃತರಾಷ್ಟ್ರ ಕೇಳೆಂದ ॥ ೨೮

ಮುರಿದು ಮೋದಿತು ಸಮ್ಮುಖದೊಳಿ
ಟ್ಟೊರಸಿತೆಡದಲಿ ಹೊಯ್ದು ಸೀಳಿತು
ಹರಹಿತಪಸವ್ಯದಲಿ ಮೆದೆಗೆಡಹಿತು ಮಹಾರಥರ ।
ಹೊರೆದ ರಕುತದ ಧಾರೆಗಳ ತುದಿ
ಕರದೊಳೆಳಲುವ [1]ತಲೆಗಳಂ[1] ಘ್ರಿಯೊ
ಳೊರೆದ ನೆಣನಡಗಿನ ಮಹಾಗಜ ಮೊಗೆದುದರಿಬಲವ ॥ ೨೯

ಹಿಂದೆ [2]ಹಿಡಿವರು ಮುರಿದ[2]ರೆಡದಲಿ
ಸಂದಣಿಸುವರು ತಿರುಗಿದರೆ ಬಲ
ದಿಂದ ಕೈ ಮಾಡುವರು ಕವಿದರೆ ಸಿಡಿವರೆಡಬಲಕೆ ।
ಮುಂದೆ ಕಟ್ಟುವರಟ್ಟಿದರೆ ಮುರಿ
ವಿಂದ ಜಾಱುವರಾ ಮಹಾರಥ
ವೃಂದ ಕಾದಿತು ಮದಕರಿಯ ಬೇಸಱದೆ ಬಳಿಸಲಿಸಿ ॥ ೩೦

ಕರಿಯ ಕೋಲಾಹಲವನಾ ಜೋ
ದರ ಶರೌಘವ ಸೈರಿಸುತ ಮು
ಕ್ಕುಱುಕಿ ಧರ್ಮಜ ನಕುಲ ಸಾತ್ಯಕಿ [3]ಭೀಮ ನಂದನರು[3] ।
ಸರಳ ಸಾರವ ಕಟ್ಟಿದರು ಮಿಗೆ
ಕೆರಳಿದನು ಭಗದತ್ತನನಿಬರ
ಹರೆಗಡಿದು ಹೊಗರಂಬ ಸುರಿದನು ಸರಿದರತಿರಥರು ॥ ೩೧

---

[1] ಕರುಳಲಂ (ಗ). [2] ಸೆಳೆದರೆ ಮುರಿವ (ಕ.ಗ.ಟ.ತ.ನ). [3] ಪಂಚ ಕೈಕೆಯರು (ಟ).

ಹತ್ತು ಶರದಲಿ ಧರ್ಮಜನನಿ
ಪ್ಪತ್ತಱಿಂದಭಿಮನ್ಯುವನು ತೊಂ
ಬತ್ತು ಶರದಲಿ ನಕುಲ ಸಾತ್ಯಕಿ ದ್ರುಪದ ಕೈಕೆಯರ ।
ಕೆತ್ತಿದನು ಹದಿನೆಂಟು ಬಾಣದ
ಲಿತ್ತ ಭೀ[1]ಮನ ನಂದನನನೈ[1]
ವತ್ತು ಶರದಲಿ ಸಕಲ ರಥಿಕರನೆಚ್ಚು ಬೊಬ್ಬಿಱಿದ ॥ ೩೨

ಬಿನುಗುಗಳ ತೆಗೆ ಭೀಮಸೇನನ
ಮೊನೆಗೆ ಬಿಡು ಬಿಡು ಗಜವನೆಂದು
ಬ್ಬಿನಲಿ ತಿರುಹಿದನಾನೆಯನು ಪವನಜನ ಸಮ್ಮುಖಕೆ ।
ಧನುವ ಬಿಸುಟನು ಗದೆಯ ತುಡುಕಿದ
ನನುವರದೊಳಡ್ಡೈಸಿ ದಂತಿಯು
ಕನಲಿಸಿದನೊಳಹೊಕ್ಕು ಹೊಯ್ದನು ಸಿಂಹನಾದದಲಿ ॥ ೩೩

ಭುಜದ ಸಾಹಸ ಹತ್ತು ಸಾವಿರ
ಗಜದ ಘಾಡಿಕೆ ಸಿಂಹನಾದದ
ವಿಜಯ ವಿಗ್ರಹ ವೀರ ಹಳಚಿದನಮಮ ಮದಕರಿಯ ।
ತ್ರಿಜಗ ತಲೆಕೆಳಗಾಗೆ ದಿವಿಜ
ವ್ರಜ ಭಯಂಗೊಳೆ [2]ಮಿಕ್ಕು[2]ಸುರಪನ
ಗಜದ ಹೊಯ್[1]ಕೈಯ್ಯಾನೆ ಹೆಣಗಿತು ಭೀಮಸೇನನಲಿ ॥ ೩೪

ಚಿಗಿದು ಹರಿಸುತ ಹಳಚಿದರೆ ಕುಲ
ದಿಗಿಭವೆದೆಯೊಡೆದವು ನಗಂಗಳ
ಬಿಗುಹು ಸಡಿಲಿತು ಧರಣಿ ನೆಗ್ಗಿತು ಚರಣ ಹತಿಗಳಲಿ ।
[3]ಜಿಗಿವ[3] ರಕುತದ ಗದೆಯ ಬಿಱುವೊ
ಯ್ಲುಗಳೊಳಗೆ ಕಿಡಿ ಮಸಗಿ ಕಬ್ಬೊಗೆ
ನೆಗೆಯೆ ಹೊಯ್ದನು ಭೀಮ ಲಂಘಿಸಿ ಗಜದ ಮಸ್ತಕವ ॥ ೩೫

ಹೊಯ್ದು ಹಿಂಗದ ಮುನ್ನ ಭೀಮನ
ಕೈದುಡುಕಿದರೆ ಮುರಿದು ಹಿಂದಕೆ
ಹಾಯ್ದಡೊಡೆಮುರಿಯಿತ್ತು ಕುಸಿದರೆ ಕಾಲೊಳೊಡೆಯುವುಚಿ ।

[1] ಮಾತ್ಮಜನ ನೂಱೈ (ಚ.ಟ.ತ.ನ.ಪ). [2] ಹೊಕ್ಕು (ದ). [3] ಯ(ನ), [3] ಒಗುವ (ಚ.ದ.ಪ).

ಮ್ಮೈದೆಗೆದರಿಟ್ಟಣಿಸಿ ಪೂತ್ಕೃತಿ
ಗೈದು ಸುಭಟನ ಸಿಂಹನಾದಕೆ
[1]ಮುಯ್ದೆ[1]ಗೆದು ಕರಿ ಕಾದುತಿರ್ದುದು ಭೀಮಸೇನನಲಿ ॥ ೩೬

ನೆಳಲುಗಂಡವ್ವಳಿಸುವುದು ಸುಂ
ಡಿಲನು ತೂಗಾಡುವುದು ಹೋರಿದು
ಬಳಲುವುದು ಮೊಗನೆಗಹಿ ಭೀಮನ ದನಿಯನಾಲಿಪುದು ।
ಅಳಿಯ ಮುತ್ತಿಗೆಗಳನು ಬೀಸದೆ
ನೆಲಕೆ ಕಿವಿಯನು ಜೋಲು ಬಿಡುವುದು
ಬಲು ಕಣಿಯ ಹಿಡಿಹಿಂಗೆ ಲಾಗಿಸುತಿರ್ದುದಾ ದಂತಿ ॥ ೩೭

ಭೀಮನಿನ್ನರೆಘಳಿಗೆಯಲಿ ನಿ
ರ್ನಾಮನೋ ತಡವಿಲ್ಲ ದಂತಿಯು
ತಾಮಸಿಕೆ ಘನ [2]ತೆಗೆಯಿ[2] ತಮ್ಮನನೆನುತ ಕಳವಳಿಸೆ ।
ಭೂಮಿಪತಿ ಕೈಕೊಂಡನೊಡನೆ ಸ
ನಾಮರೈದಿತು ನಕುಲ ಸಾತ್ಯಕಿ
ಭೀಮಸುತನಭಿಮನ್ಯು ದ್ರುಪದ ಶಿಖಂಡಿ [3]ಕೈಕೆಯರು[3] ॥ ೩೮

ಮತ್ತೆ ರಥವಱುವತ್ತು ಸಾವಿರ
ಮುತ್ತಿಕೊಂಡುದು ಗಜವನಾ ಭಗ
ದತ್ತ ಬಳಲಿದನವಧಿಯಿಲ್ಲದೆ ಶರವ ನೆಱೆ ತುಳುಕಿ ।
ಮೆತ್ತಿದವು ಶರವಿಭದ ಮೆಯ್ಯಲಿ
ಬೆತ್ತ ಬೆಳೆದದ್ರಿಯವೊಲಿದ್ದುದು
ಮತ್ತಗಜ [4]ನೊಂದ[4]ಱಿಯದನಿಬರ ಬಾಣಹತಿಗಳಲಿ ॥ ೩೯

ಕರಿ ವಿನೋದದಿ ಕುಡಿದ ಜಲವನು
ಕರಣಿಯಲಿ [5]ತೆಗೆತೆಗೆದು[5] ರಿಪು ಮೋ
ಹರಕೆ ಚೆಲ್ಲಿತು ಕಲ್ಪಮೇಘದ ಬಸುಱ ಬಗಿದಂತೆ ।
ಕರತುಷಾರದಲಿವರು ಮೋಱೆಯ
ತಿರುಹೆ ನನೆದವು ಬಾಹುರಕೆ ಹ
ಕ್ಕರಿಕೆ ಹಲ್ಲಣ ಜೋಡು ಸೀಸಕ ಛತ್ರ ಚಮರಿಗಳು ॥ ೪೦

[1] ಕೈದೆ (ಸ.ಟ). [2] ತೆಗೆಸು (ಟ). [3] ಸೃಂಜಯರು (ಗ.ಟ.ದ), ಕೈಕೇಯ (ಕ.ತ.ನ). [4] ನೋವ (ಟ.ಪ). [5] ಮೊಗೆಮೊಗೆದು (ಗ).

ಸಾಕು ಬಳಲಿದಿರಕಟಕಟ ನಿಮ
ಗೇಕೆ ಸಂಗರವಾನೆಯೊಡನೆ ಪಿ
ನಾಕಿ [1]ಸಮರದೊಳಳುಕುವನು ಕರಿ[1] ನಿಮ್ಮ [2]ಪಾಡೇನು[2] ।
ಆ ಕಿರೀಟಿಯ ಕರಸಿಕೊಳ್ಳಿ ವಿ
ವೇಕವುಳ್ಳರೆ ತೊಲಗಿಯೆನುತವೆ
ನೂಕಿದನು ಭಗದತ್ತನನಿಬರ ಮೇಲೆ ದಿಗ್ಗಜವ ॥ ೪೧

ಮಿಗೆ ತಿಮಿಂಗಿಲನೊಡನೆ ಹುಲು ಮೀ
ನುಗಳು ಮಾಡುವುದೇನು ಹೊಱಕಾ
ಲುಗಳ ಹೋರಟೆ ಕಾಣಲಾದುದು ಪರರ ಥಟ್ಟಿನಲಿ ।
ತೆಗೆಯೆ ರಿಪುಬಲ ಕೊಲುತ ಬಂದುದು
ದಿಗಿಭವಿದರೊಡನೈದಿ ದ್ರೋಣಾ
ದಿಗಳು ಹೊಕ್ಕುದು ಧರ್ಮಪುತ್ರನ ಹಿಡಿವ ತವಕದಲಿ ॥ ೪೨

ತಿದ್ದಿತೋ ಕಲಿ ಪಾರ್ಥನಿದ್ದರೆ
ಹೊದ್ದಹೇಳೋ ರಾಯ ದಳವಡಿ
ಗದ್ದುದೋ ಬಿದ್ದುದು ಭಯಾಂಬುಧಿಯೊಳಗೆ ಭಟನಿಕರ ।
ಹದ್ದು ಕಾಗೆಯು ಮನೆಗೆ ಬಾಣಸ
ವಿದ್ದುದೋ ಗಜವೆನುತ ಬೊಬ್ಬಿಡು
ತಿದ್ದುದರಿಬಲವಿತ್ತ ಹರಿ ಕೇಳಿದನು ಕಳಕಳವ ॥ ೪೩

ಮರುಳು ಫಲುಗುಣ ಸುಪ್ರತೀಕದ
ಖುರಪುಟವ ನೋಡಿತ್ತಲಗ್ಗದ
ಪರಶುರಾಮನ ಖಾತಿಗಂಬುಧಿ ನೆಲನ ಬಿಡುವಂತೆ ।
ತೆರಳುತಿದೆ ನಮ್ಮವರು ದಿಕ್ಕರಿ
ಹರಹಿ ಕೊಲುತಿದೆ ಮಾತಿಗಿಲ್ಲವ
ಸರವೆನುತ ಕರಿಯತ್ತ ತಿರುಹಿದನಸುರರಿಪು ರಥವ ॥ ೪೪

ಹೆದಱದಿರು ನರ ಹೋಗದಿರು ಹೋ
ಗದಿರು ಕೊಡು ಕೊಡು ಕಾಳೆಗವನೆಂ
ದದಟರಟ್ಟಿತು ವೀರ ಸಮಸಪ್ತಕರು ಸೂಠಿಯಲಿ ।

[1] ಕರಿಗಳುಕುವನು ರಣದಲಿ (ಗ). [2] ಪಾಡಿನದೆ (ಪ.ಬ).

ಇದಿರಲಿನಸುತ ಶಲ್ಯರಡಗ
ಟ್ಟಿದರು ಖತಿಯಲಿ ಪಾರ್ಥನನಿಬರ
ಸದೆದು ವಹಿಲದಲೈದಿದನು ದಿಕ್ಕರಿಯ ಸಮ್ಮುಖಕೆ ॥ ೪೫

ಬಲು ಬಿಸಿಲೊಳುಱೆ ನೊಂದ ನೈದಿಲೆ
ಗಳಿಗೆ ಚಂದ್ರಿಕೆ ದೈತ್ಯರುಱುಬೆಗೆ
ಸಿಲುಕಿದಮರರಿಗಸುರಹರನ ಕಟಾಕ್ಷ ವಿಕ್ಷೇಪ ।
ಬಲಿದ ತಾಪತ್ರಯ[1]ದ ಭವಗೋ[1]
ಟಲೆಯ ಜೀವಿಗೆ ಸುಪ್ರಬೋಧದ
ಸುಳಿವಿನಂತಿರೆ ಪಾರ್ಥ ಮೈದೋಱಿದನು ನಿಜ ಬಲಕೆ ॥ ೪೬

ಕೆದಱಿತೀ ಬಲ ಬೆರಳ ತುಟಿಗಳೊ
ಳೊದಱಿತಾ ಬಲ ತಾಪ ಶಿಖಿಯಲಿ
ಕುದಿದುದೀ ಬಲ ಭೀತಿ ಕಂಚುಕ ಕಳೆದುದಾ ಬಲಕೆ ।
ಕದಡಿತೀ ಬಲ ರೋಮ ಪುಳಕವ [illegible]
ಹೊದೆದುದಾ ಬಲ ಹಿಂಡೊಡೆದು ನೆಱೆ
ಕದುಬಿತೀ ಬಲ ನೆರೆದುದಾ ಬಲ ನರನ ರಥ ಸುಳಿಯೆ ॥ ೪೭

ಗಿರಿಯ ವಿಸಟಂಬರಿಯನಮರೇ
ಶ್ವರನು ತಡೆವವೊಲಳ್ಳಿಱಿವ ದಿ
ಕ್ಕರಿಯನಡಗಟ್ಟಿದನು ಕಾಯದೊಳೊಟ್ಟಿದನು ಶರವ ।
ಕೆರಳಿದನು ಭಗದತ್ತನಿವನೇ
ನರನು ಫಡ ಫಡ ನಿಲ್ಲು ನಿಲ್ಲೆನು
ತುರು ಶರೌಘವ ಕಱೆದು ಮುಸುಕಿದನರ್ಜುನನ ರಥವ ॥ ೪೮

ಪೂತುರೇ ಭಗದತ್ತ ಬಿಲು ವಿ
ದ್ಯಾತಿಶಯ ಕಱಿದುಂಟಲಾ ಶರ
ಪಾತವಿನಿತಿಲ್ಲದಡೆ ಹೊಳ್ಳಿಸಬಹುದೆ ನೃಪ ಧನವ ।
ನೂತನ ದ್ವಿಪದಿಂದ ವೈರಿ
ವ್ರಾತವನು ಸೋಲಿಸಿದ ಗರ್ವದ
ರೀತಿಗಿದು ಠಾವಲ್ಲೆನುತ ತೆಗೆದೆಚ್ಚನಾ ಪಾರ್ಥ ॥ ೪೯

---

[1] ದೊಲೊಡಗೋ (ಕ.ನ.ಬ), ದೊಳೊಳಗೋ (ಗ.ತ), ದಲಿಳಿಗೋ (ಚ.ಪ).

ನರನ ಶರ ಜಾಲವನು ಖಂಡಿಸಿ
ಸುರಿದನಂಬನು ಕೃಷ್ಣರಾಯನ
ಸಿರಿಯೊಡಲ ಸೋಂಕಿದವು ನೂಕಿದವಂಬು ಗಱಿಸಹಿತ ।
ನರನ ಕುದುರೆಯ ಮೇಲೆ ಸಿಂಧದ
ಹರಿಯ ತನುವಿನ ಮೇಲೆ ತಳಿತವು
ಶರನಿಕರ ಬಿಡದೆಚ್ಚನಾ ಭಗದತ್ತನರ್ಜುನನ ॥ ೫೦

ಸೆಳೆದು ಬಾಣ ತ್ರಯದಲೆಚ್ಚನು
ಫಲುಗುಣನ ಮಕುಟವನು ಮುರಿದುದು
ಕೆಲಕೆ ಸಡಿಲುವ ಮಣಿಗಳಲಿ ವರ ಮೌಳಿಯೋಸರಿಸೆ ।
ಬಲಿದು ಸಸಿನವ ಮಾಡಿ ಖಾತಿಯ
ತಳೆದು [1]ಕೂರಂ[1]ಬಿನಲಿ ಹೂಳಿದ
ನಳವಿಯಲಿ ರಿಪು ಗಜವನಾ ಭಗದತ್ತನವಯವವ ॥ ೫೧

ಇಳುಹಿದನು ಬಲುಗುಳವ ಖಂಡಿಸಿ
ಕಳಚಿದನು ಮೊಗರಂಬವನು ಹೊ
ಮ್ಮಳಿಯ ಕುಣಿಕೆಯ ಮುಱಿದು ತಱಿದನು ಸುತ್ತುಱಿಂಚೆಗಳ ।
ಹಳವಿಗೆಯನಾ ಛತ್ರ ಚಮರಾ
ವಳಿಯ ಸೀಳಿದು ಬಿಸುಟನಾ ಗಜ
ತಿಲಕ ಮುಂಡಾಸನದಲಿರ್ದುದು ಭೂಪ ಕೇಳೆಂದ ॥ ೫೨

ಮತ್ತೆ ಖಾತಿಯೊಳಂಕುಶದಿನೊಡೆ
ಯೊತ್ತಿಬಿಟ್ಟನು ಗಜವನರ್ಜುನ
ನತ್ತಲಿಭ ತೂಳಿದಡೆ ತಿರುಹಿದನಸುರ ರಿಪು ರಥವ ।
ಇತ್ತ ಬಲದಲಿ ಬಲಕೆ ಮೊಗವಿಡ
ಲತ್ತಲೆಡದಲಿ ಮರಳಲಲ್ಲಿಂ
ದತ್ತ ತಿರುಗಿಸಿ ಬಳಲಿಸಿದನಸುರಾರಿ [2]ದಿಗ್ಗಜವ[2] ॥ ೫೩

ಸಾರಥಿಯ ಕೊಂದಲ್ಲದರ್ಜುನ
ತೀರುವವನಲ್ಲೆನುತ ದಳ್ಳುರಿ
ಧಾರೆಯುಂಬ್ಬೈದಱಲಿ ದೇವನನೆಸಲು ಮಧ್ಯದಲಿ ।

---

[1] ನೂಱಂ (ಗ), ತೂಱಂ (ಚ.ಟ.ತ.ದ.ನ), ಮೂಱಂ (ಪ.ಬ). [2] ಮದ ಗಜವ (ಚ.ತ.ದ.ಪ.ಬ).

ಹಾರಿಸಿದನಾ ಪಾರ್ಥನಿವನೆಡೆ
ಗೋರಿದನಲಾ[1]ಯೆನುತ ಕೆಡೆಯೆನು[1]
ತಾರಿ ಸುರಿದನು ನೂಱು ಬಾಣವನರ್ಜುನನ ಮೇಲೆ ॥ ೫೪

ಅನಿತು ಶರವನು ಕಡಿದು ಭಗದ
ತ್ತನ ಧನುವನಿಕ್ಕಡಿಗಡಿಯೆ ಕಂ
ಗನೆ ಕನಲಿ ಗವಸಣಿಗೆಯಿಂದುಗಿದನು ನಿಜಾಯುಧವ ।
ದಿನಪ ಕೋಟಿಯ ರಶ್ಮಿಯನು ತುದಿ
ಮೊನೆಯೊಳುಗುಳುವ ಬಾಯಿಧಾರೆಯ
ತನಿಯುರಿಯ ತೆಕ್ಕೆಯಲಿ ಥಳಥಳಿಸುವ ಮಹಾಂಕುಶವ ॥ ೫೫

ತೈಲ ಲೇಪದ [2]ನಯದ[2] ಹೊಗರಿನ
ಜಾಳಿಗೆಯ ಗಹಗಹಿಕೆಗಳ ಹೂ
ಮಾಲೆಗಳ ಸಿಂಪಿಸಿದ ಗಂಧದ [3]ಬಂಧದ[3]ಕ್ಷತೆಯ ।
ಕೀಲಣೆಯ ಮಣಿವೆಳಗುಗಳ ಹರಿ
ಥಾಳಿಯಲಿ ಕಾಳೋರಗನ ಕುಡಿ
ನಾಲಗೆಯವೊಲೆಸೆದುದಂಕುಶ ಭಟನ ಮುಷ್ಟಿಯಲಿ ॥ ೫೬

ಕುಡಿ ಕಿರೀಟಿಯ ರಕುತವನು ಹಗೆ
ಕೆಡಲಿ ಕೌರವರಾಯನಾಳಲಿ
ಪೊಡವಿಯನು ಪರಿತೋಷವಾಗಲಿ ನೃಪನ ಮಿತ್ರರಿಗೆ ।
ತಡೆದು ಹಲಕಾಲದಲುಪಾಸಂ
ಬಡಿಸಿದೆನ್ನದು ದೋಷ ಖಾತಿಯ
ಹಿಡಿಯದಿರು ನೀನೆನುತ ತಿರುಹಿಟ್ಟನು ಮಹಾಂಕುಶವ ॥ ೫೭

ತೀರಿತಿನ್ನೇನಕಟ ಪಾಂಡವ
ವೀರರುಬ್ಬಟೆ ಹಾಱಿತೇ ತ್ರಿಪು
ರಾರಿಯುರಿಗಣ್ಣಿಂಗೆ ಸೋಲದ ಕೈದುಗೊಂಡನಲ ।
ಧಾರುಣಿಯನಿನ್ನುಣಲಿ ಧರ್ಮಕು
ಮಾರನಕಟಿನ್ನಾರು ಕಾವವ
ರಾರೆನುತ ತಲ್ಲಣಿಸುತಿರ್ದುದು ಪಾಂಡುಸುತ ಸೇನೆ ॥ ೫೮

---

[1] ಕೆಡಹಿವನನೆನು (ಗ.ಚ.ಬ). [2] ಪಿಗಿಯ (ಚ). [3] ಕಂಪಿನ (ಟ.ದ).

ಹಾ ಯುಧಿಷ್ಠಿರ ರಾಯ ಶಿವ ಶಿವ
ವಾಯುಸುತ ಹಾ ಪಾರ್ಥ ಹಾ ಮಾ
ದ್ರೇಯರಿರ ಹಾಯೆನುತ ಹರೆದುದು ಸೇನೆ ದೆಸೆ ದೆಸೆಗೆ ।
ಬಾಯ ಬಿಟ್ಟುದು ದಿವಿಜ ಬಲ ನಿ
ರ್ದಾಯದಲಿ [1]ನೆಲನಾಯಿತಲ ಕುರು[1]
ರಾಯಗೆನುತಿರ್ದುದು ಜಗತ್ರಯವೊಂದು ನಿಮಿಷದಲಿ ॥ ೫೯

ಇದಱ ಪಾಡೇನೇಸಪಾಯವ
ನೊದೆದು ಕಳೆಯರು ಕೃಷ್ಣಭಕ್ತರು
ಸದರವೇ ಉರಿಗೆಂಡವೊಱಲೆಯ ಬಾಯ್ಗೆ [2]ಭಾವಿಸಲು[2] ।
ಹೊದಱುಗಿಡಿಗಳ ಹೊಗೆಯ ಹೇರಾ
ಳದಲಿ ಬಹ ದಿವ್ಯಾಯುಧಕೆ ಚಾ
ಚಿದನು ವಕ್ಷಸ್ಥಳವನಸುರಾರಾತಿಯಡಹಾಯ್ದು ॥ ೬೦

ಮೆಱೆದುದುರದಲಿ ಕೌಸ್ತುಭದ ಮಣಿ
ಮಱಿಯ[3]ನಿಳುಹಿದ ಷೋ(ಲು[3] ಬೆಳಗಿನ
ತುಱುಗಲಲಿ ತೂಗಾಡುತಿದ್ದುದು ಕೈದು ತೊಡವಾಗಿ ।
ಮುಱಿದುದಗ್ಗದ ಭೀತಿ ಹರುಷದ
ಸೆಱೆಗೆ ಬಿಡುಗಡೆಯಾಯ್ತು ಬಲು ಬೊ
ಬ್ಬಿಱಿವುತಿರ್ದುದು ವೈರಿ ಕಟಕದೊಳರಸ ಕೇಳೆಂದ ॥ ೬೧

ಕೌತುಕವನಿದ ಕಂಡು ಫಲುಗುಣ
ಕಾತರಿಸಿ ನುಡಿದನು ಮುರಾಂತಕ
ಸೂತತನಕಲಸಿದನೆ ಕಾದಲಿ ಕೌರವನ ಕೂಡೆ ।
ಸೂತತನವೇ ಸಾಕು ತನಗೆನು
ತಾ ತತುಕ್ಷಣ ಧನುವ ಬಿಸುಟು ವಿ
ಧೂತ ರಿಪು ಬಲ ಪಾರ್ಥನಿದ್ದನು ಹೊತ್ತುದುಗುಡದಲಿ ॥ ೬೨

ತಿರುಗಿ ಕಂಡನು ಕೃಷ್ಣನೀತನ
ಪರಿಯನಱಿದನು ಮನದಲಿವನು
ತ್ತರವ ಕೇಳುವೆವೆಂದು ಪಾರ್ಥನ ನುಡಿಸಿದನು ನಗುತ ।

[1] ಗೆಲವಾಯ್ತು ಕೌರವ(ಬ). [2] ಬಾಣಸವೆ (ಟ). [3] ನೀದಂದದಲಿ(ಗ.ಚ).

ಉರವಣಿಸುತಿದೆ ಮತ್ತೆ ಕರಿ ನಿಜ
ಕರದೊಳಾಯುಧವಿಲ್ಲ ಘನ ಸಂ
ಗರಕೆ ಬೇಸಱು ತೋಱಿತೇ ತನ್ನಾಣೆ ಹೇಳೆಂದ ॥ ೬೩

ಕಾದುವಾತನು ನೀನು ವೈರಿಯು
ಕೈದುವನು ನೀ ಗೆಲಿದೆಯಿನ್ನುಱೆ
ಕಾದುವವರಾವಲ್ಲ ಸಾರಥಿತನವೆ ಸಾಕೆಮಗೆ ।
ಕೈದುವಿದೆಕೋ ಕೃಷ್ಣ ನೀನೇ
ಕಾದು ವಾಘೆಯ ತಾಯೆನಲು ಮರು
ಳಾದನೈ ನರನೆನುತ ನಗುತ ಮುರಾರಿಯಿಂತೆಂದ ॥ ೬೪

ಆಡಬಾರದು ತೋಱು ನುಡಿದರೆ
ಖೋಡಿ ನಿನಗಹುದೆಲೆ ಮರುಳೆ ನೀ
ನೋಡಲೆವೆ ಸೀವವು ಕಣಾ ನಿನ್ನಳವಿನಾಯುಧವೆ ।
ಹೂಡಲಾಪುದು ಜಗವನಂತಕ
ಗೂಡಲಾಪುದು ಮುನಿದರಿದ ಕೈ
[1]ಮಾ[1]ಡುವರೆ ನಿಲಬಾರದಜರುದ್ರಾಮರೇಂದ್ರರಿಗೆ ॥ ೬೫

ವಿಲಸ[2]ದುಪನಿಷದುರು[2]ರಹಸ್ಯವ
ತಿಳುಹಿದೆನು ನಿನಗೊಮ್ಮೆ ಮತ್ತೆಯು
ತಿಳಿದುದಿಲ್ಲಾ ಕ್ಷತ್ರ ತಾಮಸ ಬಿಡದು ಬುದ್ಧಿಯಲಿ ।
ಸುಲಭವಂತರ್ನಿಷ್ಠರಿಗೆ ನಿ
ಷ್ಕಳ ನಿರೂಪನನಂತ ನಿಜ ನಿ
ರ್ಮಳವೆನಿಪ ಪರಮಾತ್ಮ ಚಿನುಮಯ ರೂಪ ತಾನೆಂದ ॥ ೬೬

ಸಂಗಿಯಲ್ಲದ ವಿಮಳ ಪರಮಾ
ತ್ಮಂಗೆ ಲೀಲೆಯೊಳಾಯ್ತು ಮಾಯಾ
ಸಂಗವದಱಿಂದಾಯ್ತು ನಾಲುಕು ಮೂರ್ತಿಗಳು ತನಗೆ । |
ಅಂಗಿಯಂಗ ವಿಭಾಗವಿಲ್ಲದ
ಭಂಗಸನ್ಮಾತ್ರಂಗೆ ಭಾವಿಸ
ಲಂಗ ಕಲ್ಪನೆ ಮಿಥ್ಯವಲ್ಲಾ ಪಾರ್ಥ ಹೇಳೆಂದ ॥ ೬೭

---

[1] ಗೂ (ಕ). [2] ದುಪನಿಷವರ (ಚ.ಟ.ತ.ದ.ನ.ಪ).

ಇಂದು ಕಮಳಭವ ಪ್ರಜೇಶ್ವರ
ರೊಂದು ಮೂರುತಿ ವಿಷ್ಣು [1]ಮನು[1]ಗಳು
ಸಂದ ಪಾರ್ಥಿವ ಲೋಕಪಾಲಕರೊಂದು ಮೂರ್ತಿಯದು ।
ಇಂದುಶೇಖರನಗ್ನಿ ಯಮನರ
ವಿಂದ ಸಖ ಕಾಲಾಗ್ನಿ ಮೂರ್ತಿಯ
ರೊಂದು ಮೂರುತಿ ವಿಶ್ವದೊ[2]ಳು ನಿಸ್ಯೂತಚೈತನ್ಯ[2] ॥ ೬೮

ಇದುವೆ ಮತ ಕೆಲಬರಿಗೆ ಕೆಲಬರಿ
ಗಿದು ಮತವು ವಿವಿಧಾವತಾರದ
ಲುದಿಸುತೊಂದಿಹುದೊಂದು [3]ಮೂರ್ತಿ ತಪೋ[3] ವಿನೋದದಲಿ ।
ಉದಧಿಯೊಳು ವರ ಯೋಗ ನಿದ್ರಾ
ಸ್ಪದದಲೊಂದಿಹುದೊಂದಖಿಳ ವಿ
ಶ್ವದ ಸುಕೃತ ದುಷ್ಕೃತವನೀಕ್ಷಿಸುತಿಹುದು ಕೇಳೆಂದ ॥ ೬೯

ಕೆಲರು ಧರ್ಮಾರ್ಥಾದಿ ನಾಲುಕು
ಲಲಿತ ಮೂರ್ತಿಗಳೆಂಬರಿದಱೊಳು
ಕೆಲರು ಜಾಗರಣಾದ್ಯವಸ್ಥೆಗಳೆಂಬ ಮೂರ್ತಿಗಳು ।
ತಿಳಿಯಲೋತ ಪ್ರೋತದಲಿ ನಿ
ಷ್ಕಳವೆ ಸಕಳವೆಯಾಗಿ ವಿಶ್ವದೊ
ಳೊಳಗು ಹೊಱಗಾನಲ್ಲದಿಲ್ಲೆಲೆ ಪಾರ್ಥ ಕೇಳೆಂದ ॥ * ೭೦

ಉದಧಿ ಶಯನನ ಮೂರ್ತಿ ಕಲ್ಪಾಂ
ತದಲಿ ಕರಗಿದ ಧರೆಯನುದ್ಧರಿ
ಸಿದೆನು ಯಜ್ಞವರಾಹ ರೂಪಿನಲಂದು ಕರುಣದಲಿ ।
ಪದವ ಭಜಿಸಿಯೆ ಭೂಮಿ ತಾ ಬೇ
ಡಿದಳು ಪುತ್ರನನಾಕೆಯಲಿ ಜನಿ
ಸಿದನು ನರಕಾಸುರನವಧ್ಯನು ಸಕಲ [4]ದಿವಿಜರಿಗೆ[4] ॥ ೭೧

ಇದು ವರಾಹನ ದಾಡೆಯಿದನಾ
ತ್ರಿದಶ ವೈರಿಗೆ ಕೊಟ್ಟೆನವನಿಂ
ದಿದುವೆ ಭಗದತ್ತಂಗೆ ಬಂದುದು ವೈಷ್ಣವಾಸ್ತ್ರವಿದು ।

---

[1] ಮುನಿ (ಕ.ಟ.ಪ). [2] ಳನುಸ್ಯೂತಚೈತನ್ಯ (ಪ). [3] ಮೂರುತಿವರ (ಟ.ಚ.ಪ). * ಈ ಪದ್ಯವು (ನ) ಪ್ರತಿಯಲ್ಲಿಲ್ಲ. [4] ಜೀವರಿಗೆ (ಚ.ಪ).

ಇದು ಹರ ಬ್ರಹ್ಮಾದಿಗಳ ಗೆಲು
ವುದು ಕಣಾ ನಿಮಿಷದಲಿ ತನಗ
ಲ್ಲದೆ ಮಹಾಂಕುಶವುಳಿದ ಭಟರಿಗೆ ಮಣಿವುದಲ್ಲೆಂದ ॥ ೭೨

ತೀರಿತಾತನ ಶಕ್ತಿ ಚಾಪದ
ನಾರಿ ಬೆಸಲಾಗಲಿ ಮಹಾಸ್ತ್ರವ
ನಾರುಭಟೆಯಲಿ ಗಜವ ಮುಱಿ ಕೆಡೆಯೆಸು ಮಹೀಸುತನ ।
ಹೋರದಿರು ಹೊಗು ಬವರಕೆನಲಸು
ರಾರಿಯಂಘ್ರಿಯೊಳೆಱಗಿ ಕರುಣಾ
ವಾರಿಧಿಯೊಳಭಯವನು ಪಡೆದನು ತುಡುಕಿದನು ಧನುವ ॥ ೭೩

ಎಲವೆಲವೊ ಭಗದತ್ತ ಕಲಿತನ
ದಳವ ತೋಱಿನ್ನೆನಗೆನುತ ಹೊಳೆ
ಹೊಳೆವ ಕೂರಂಬಿನಲಿ ಕೋದನು ಗಜದ ಮಸ್ತಕವ ।
ನಿಲುಕಿ ನೆತ್ತಿಯನೊಡೆದು ನಿಡು ಪ
ಚ್ಚಳಕೆ ಹಾಯ್ದವು ಬಾಣ ದಿಕ್ಕರಿ
ನೆಲಕೆ ದಾಡೆಯನೂಱಿ ಕೆಡೆದುದು ಸುಪ್ರತೀಕ ಗಜ ॥ ೭೪

ಸುತ್ತಿದುರಗನ ಮಂದರಾಚಲ
ಕಿತ್ತು ಬೀಳ್ವಂದದಲಿ ಬರಿಕೈ
ಸುತ್ತಿ ಮಗ್ಗುಲನೂಱಿ ಕೆಡೆದುದು ಸುಪ್ರತೀಕ ಗಜ ।
ಇತ್ತಲರ್ಜುನ[1]ದೇವನುಗಿದನು[1]
ಬತ್ತಳಿಕೆಯಲಿ ದಿವ್ಯ ಶರವನು
ತೆತ್ತಿಸಿದನವನುರವನಿಬ್ಬಗಿಯಾದುದರಿ ದೇಹ ॥ ೭೫

ಗಿರಿಯ ಶಿರದಲಿ ಹೂತ ಕಕ್ಕೆಯು
ಮರ ಮುಱಿದು ಬೀಳ್ವಂತೆ ವಿಮಳಾ
ಭರಣ ಕಾಂತಿಯು ಕಡಲ ಕೋಮಲ ಕಾಯ ಭಗದತ್ತ ।
ಉರುಳಿದನು ಗಜದಿಂದ ಕುರು ಬಲ
ಸರಿಯೆ ಸುರ ಕುಲ ಕುಸುಮ ವೃಷ್ಟಿಯು
ಸುರಿಯೆ ರಿಪು ಸೇನೆಯಲಿ ಹರುಷದ ಹೊನಲು ಬಿಱುವರಿಯೆ ॥ ೭೬

[1] ಅಯ್ದು ಹೂಡಿದ (ಕ.ಟ.ತ).

ಹಱಿದುದಗ್ಗದ ಸುಪ್ರತೀಕ
ದ್ವಿರದ ಭಗದತ್ತಾಂಕನವನಿಯೊ
ಳುರುಳಿದನು ದಳ ಮುಱಿದುದಿನ್ನೇನೆನುತ ಬಲ ಬೆದಱೆ ।
ನರನ ತಡೆದರು ಸುಬಲ ಸುತರಿ
ಬ್ಬರು ನೃಪಾಲ ಕುಮಾರರೈನೂ
ಱುಱುಬಿದರು ಗಾಂಧಾರ ರಾಜರು ಶಕುನಿಯೊಡಗೂಡಿ ॥ ೭೭

ಕೊಂದನಿಬ್ಬರ ಸೌಬಲರ ನೃಪ
ನಂದನರ ಗಾಂಧಾರರೊಂದೆರ
ಡೆಂದು ಸಲುಗೆಗೆ ಸಲಿಸಿ ಬಂದೈನೂಱು ಬಱಿಕೈದು ।
ಬಂದ ದ್ರೋಣನ ಹಳಚು ಭಂಗಕೆ
ತಂದನಹಿತ ವ್ರಜವನಿತ್ತಲು
ಸಂದಣಿಸಿದರು ಕೌರವರು ಪವಮಾನ ಸುತನೊಡನೆ ॥ ೭೮

ಗುರು ತನುಜ ರವಿ ಸೂನು ಮಾದ್ರೇ
ಶ್ವರ ಜಯದ್ರಥ ಕೌರವಾದಿಗ
ಳರಿ ಗದಾಘಾತದಲಿ ಕೈ ಮೈದಣಿದು ಮನದಣಿದು ।
ತೆರಳಿದರು ಬಳಿಕಪರ ಜಲಧಿಯೊ
ಳುರಿವ [1]ವಡಬನ ದೀಪ್ತ[1] ಶಿಖರದೊ
ಳೆಱಗುವಂತೆ ಪತಂಗ ಮಂಡಲವಿಳಿದುದಂಬರವ ॥ ೭೯

ತಿರುಗಿವರು ಕೌರವರು ದ್ರೋಣನ
ಬೆರಳ ಸನ್ನೆಗೆ ಸನ್ನೆಗಾಳೆಗ
ಳುರವಣಿಸಿತೆನೆ ತಂಬಟದ ನಿಸ್ಸಾಳ ರಭಸದಲಿ ।
ಮುರಿದರಿವರಳ್ಳಿಱಿವ ಬೊಬ್ಬೆಯ
ಧರಧುರದ ಕಹಳೆಗಳ ಭೇರಿಯ
ಭರಿತ ರವದಲಿ ವೀರ ನಾರಾಯಣನ ಕರುಣದಲಿ ॥ ೮೦

ಮೂಱನೆಯ ಸಂಧಿ ಮುಗಿದುದು.

---

[1] ವಡಬಾನಳನ (ಸ).

ನಾಲ್ಕನೆಯ ಸಂಧಿ

ಸೂಚನೆ ॥ ರಾಯ ಕಟಕಾಚಾರ್ಯನಾ ಚಾ
ಪಾಯುಧಾಗ್ರಣಿ ಪೋಹಿದನು ಪ
ದ್ಮಾಯತ ವ್ಯೂಹವನು ಸೈನ್ಯದ ಬಾಣನಾ ದ್ರೋಣ ॥

ನೀನು ನೆರಹಿದ ಸುಕೃತ ಫಲವದ
ನೇನ ಹೇಳುವೆನಿತ್ತಲುಗ್ಗಡ
ದಾನೆ ಬಿದ್ದುದು ಕಾದಿ ನಸು ಸೊಪ್ಪಾದುದರಿ ಸೇನೆ ।
ಧ್ಯಾನವಿತ್ತಲು ರಾಗವತ್ತಲು
ಮೋನವಿತ್ತಲು ರಭಸವತ್ತಲು
ಹಾನಿಯಿತ್ತಲು ವೃದ್ಧಿಯತ್ತಲು ಭೂಪ ಕೇಳೆಂದ ॥ ೧

ಎತ್ತಲೊಲೆವುದು ಧರ್ಮ ಬಲ ತಾ
ನತ್ತಲೊಲೆವುದು ದೈವ ದೈವವ
ದೆತ್ತಲೊಲೆದಿಹುದತ್ತ ವಿಜಯ ಶ್ರೀಯ ಕುಟಿನೋಟ ।
ಹೆತ್ತ ನಿನ್ನೊಡಲಿಂಗೆ ತಂಪಿನ
ತೆತ್ತಿಗನೊ ಮೇಣ್ ಬಹಳ ತಾಪದ
ಮುತ್ತಯನೊ ಕುರು ರಾಯನೆಲೆ ಧೃತರಾಷ್ಟ್ರ ಕೇಳೆಂದ॥ ೨

ಸಾಕು ಸಂಜಯ ನುಡಿಯ ಖಡ್ಗದ
ಲೇಕೆ ಗಂಟಲ ಕೊಯ್ವು ತಾನವಿ
ವೇಕದಲುಪಾರ್ಜಿಸಿದ ದುಷ್ಕೃತ ಫಲವೆ ತನಗಾಯ್ತು ।
ಸಾಕದಂತಿರಲಿನ್ನದೇ ಹ[ರಿ][1]
ಶೋಕಿಸುವೆನಿಲ್ಲಿಂದ ಮೇಲು
ದ್ರೇಕಿ ಕೌರವನೇನ ನೆಗಳಿದ ಹದನ ಹೇಳೆಂದ ॥ ೩

ಚಿತ್ತವಿಸು ಧೃತರಾಷ್ಟ್ರ ಕೌರವ
ನಿತ್ತನಿರುಳೋಲಗವ ಮಂಜಿನ
ಮುತ್ತಿಗೆಯ ನಭದಂತೆ ಹೊಗೆದುದು ರಾಯನಾಸ್ಥಾನ ।

[1] ಱಿ (ಕ.ಗ.ಚ.ತ.ದ.ನ.) ವಿ (ಪ.ಬ.)

ನೆತ್ತಿ ಮುಸುಕಿನ ಕೈಯು ಗಲ್ಲದ
ಕುತ್ತದಲೆ ನೆಟ್ಟಾಲಿಗಳ ಚಲ
ಚಿತ್ತರಿದ್ದುದು ಸಕಲ ನಾಯಕವಾಡಿ ದುಗುಡದಲಿ ॥ ೪

ದುಗುಡವೇಕೈ ನಿಮಗೆ ಕರ್ಣಾ
ದಿಗಳು ನೀವ[1]ಕ್ಕ[1]ಡರೆ ಬಲುಗಾ
ಳೆಗದೊಳಗೆ ಕೈಮಾಡಿ ನೊಂದಿರಿ ಕೊಂದಿರರಿ ಭಟರ ।
ಹಗೆಯ ಕಟ್ಟಲು ಕೊಟ್ಟ ಭಾಷೆಯ
ಬಿಗುಹು ಬೀತುದು ಗುರುಗಳಲಿ ನಂ
ಬುಗೆ ನಿರರ್ಥಕವಾಯ್ತೆನುತ ಕುರುರಾಯ ಬಿಸುಸುಯ್ದ ॥ ೫

ದ್ರೋಣ ಮನಗೊಂಡಿಱಿವಡಂಬುಜ
ಪಾಣಿಯಿದಿರೇ ನಮ್ಮ ಭಾಗ್ಯದ
ಬಾಣಸಿಗ ವಿಧಿ ವಿಷವ ಬೆರಸಿದಡಾರು ಕಾವವರು ।
ಹೂಣಿ ಹೊಕ್ಕನು ಹಿಡಿದು ವೈರಿ
ಕ್ಷೋಣಿಪನ ತಱುಬಿದನು ನಾವ
ಕ್ಷೀಣ ದುರಿತರು ಹಲುಬಿ ಮಾಡುವುದಾವುದುಂಟೆಂದ ॥ ೬

ಬಲದೊಳಗೆ ಹೆಸರುಳ್ಳವರು [2]ಮು
ಮ್ಮ[2]ಳಿತವಾಯಿತ್ತಾನೆ ಕುದುರೆಗ
ಳಳಿದುದಕೆ ಕಡೆಯಿಲ್ಲ ಪವನಜ ಪಾರ್ಥರುಬ್ಬಟೆಯು ।
ನಿಲಿಸುವಾಪತ್ತಿಗರು ನಮಗಿ
ಲ್ಲಳಲಿ ಮಾಡುವುದೇನೆನುತ ನೃಪ
ತಿಲಕ ಬೇಸಱ ನುಡಿಯೆ ಬಳಿಕಿಂತೆಂದನಾ ದ್ರೋಣ ॥ ೭

ಪರಮ ಗರುಡೋದ್ಗಾರ ಮಣಿಯನು
ಗರಳ ಸುಡುವುದೆ ಕೃಷ್ಣರಾಯನ
ಕರುಣ ಕವಚವನೊಡೆಯಲಾಪವೆ ಎಮ್ಮ ಕೈದುಗಳು ।
ಅರಸ ಮರುಳೈ ಧರ್ಮಪುತ್ರನ
ಬೆರಸಿ ತುಡುಕಲು ತಡೆದನಱಿಯಾ
ಮುರಹರನ ಮೈದುನನು ಬಳಿಕೆಮ್ಮಳವೆ ಹೇಳೆಂದ ॥ ೮

---

[1] ಖ್ಖ (ಗ.ಟ.ತ.ದ.ನ.ಬ.) [2] ಮುಮ್ಮ (ದ.)

ನಾಳೆ ಫಲುಗುಣ ತಪ್ಪಿದರೆ ಭೂ
ಪಾಲಕನ ಕಟ್ಟುವೆನು ರಣದಲಿ
ಶೂಲಿಯಡ್ಡೈಸಿದರೆ ಹಿಡಿವೆನು ಚಿಂತೆ ಬೇಡಿದಕೆ ।
ಕೇಳು ಪದ್ಮವ್ಯೂಹದಲಿ ಹೊ
ಕ್ಕಾಳು ಮರಳಿದಡಸ್ತ್ರವಿದ್ಯಾ
ಭಾಳಲೋಚನನೆಂಬ ಬಿರುದನು ಬಿಟ್ಟೆ ನಾನೆಂದ ॥ ೯

ಒಳ್ಳಿತಿದು ಕಡು ಭಾಷೆ ನಾಳಿನ
ಗೆಲ್ಲವೇ ಗೆಲವರ್ಜುನನು ಹೊ
ಕ್ಕಲ್ಲಿ ಹೊಗುವೆವು ತಱುಬಿ ಕಾದುವೆವೆಮ್ಮ ಕಳನೊಳಗೆ ।
ಅಲ್ಲಿ ನೀನೊಲಿದಂತೆ ಮಾಡಿ
ನ್ನೆಲ್ಲವೇತಕೆ ಯೆನುತ ಸಾಹಸ
ಮಲ್ಲರೆದ್ದರು ವೀರ ಸಮಸಪ್ತಕರು ಗರ್ಜಿಸುತ ॥ ೧೦

ಪೂತು ಪಾಯಿಕು ತತ್ತ ಹೊತ್ತಿನೊ
ಳಾತುಕೊಂಬವರಾರು ಪಾರ್ಥಿವ
ಜಾತಿಯಲಿ ರಣದಿಟ್ಟರುಂಟೇ ನಿಮ್ಮ ಹೋಲಿಸಲು ।
ಸೋತುದರಿಬಲ ಹೋಗೆನುತ ಮು
ಯ್ಯಾಂತು ಮನ್ನಿಸಿ ಹೊನ್ನ ಬಟ್ಟಲೊ
ಳಾತಗಳಿಗೊಲಿದಿತ್ತನೈ ಕರ್ಪುರದ ವೀಳೆಯವ ॥ ೧೧

ಹರೆದುದೋಲಗವಿತ್ತ ಭುವನದೊ
ಳಿರುಳಡವಿಗಡಿತಕ್ಕೆ ಹರಿದವು
ಕಿರಣ ತೆತ್ತಿದವಭ್ರದಲಿ ತಾರಕೆಯ ತೇರುಗಳು ।
ಹರಿವ ಮಂಜಿನ ನದಿಯ ಹೂಳ್ದವು
ಸರಸವಾಯಿತು ಗಗನ ತಳ ತಾ
ವರೆಯ ಸಖ ನಿಜ ರಥವ ನೂಕಿದನುದಯ ಪರ್ವತಕೆ ॥ ೧೨ *

* (ಗ.ಟ.ನ.) ಪ್ರತಿಗಳಲ್ಲಿ ೧೨ನೆಯ ಪದ್ಯವಾದ ಮೇಲೆ ಈ ಕೆಳಗಿನ ಎರಡು ಪದ್ಯಗಳು ಹೆಚ್ಚಾಗಿವೆ :—

ಗರುಡಿಯೊಡೆಯನ ವೀರ ಪಟ್ಟವೊ
ಳೆರಡು ದಿನ ಸಲೆ ಸಂದುದಗ್ಗದ
ಕರಿಯು ಕಲಿ ಭಗದತ್ತ ಕಡಿವಡೆದನು ಮಹಾಜಿಯಲಿ ।
ತರಣಿ ವಂಠಣಿಸಿದನು ಮೂಡಣ
ಗಿರಿಯ ತುದಿಯಲಿ ಮೂಱನೆಯ ದಿನ
ಕಿರದೆ ನಿಜಮೋಹರವ ನೆರಹಿದನಂದು ಕಲಿ ದ್ರೋಣ ॥ ೧॥

ಕೆದಱಿದವು ನಿಸ್ಸಾಳ ಬಱಿಸಿಡಿ
ಲದುಭುತ ಧ್ವನಿಯಲಿ ನಿರಂತರ
ವೊದಱಿ ಬಯ್ದವು ಕಹಳೆ ಬಿರುದಾವಳಿಯುಲತಿರಥರ ।
ಕದುಬಿದವು ತಂಬಟದ ದನಿ ದಿಗು
ಸದನವನು ಬಲು ಬೊಬ್ಬೆಯಲಿ ನೆಲ
ನದಿರೆ ನಡೆದುದು ಸೇನೆ ಕಲಶೋದ್ಭವನ ನೇಮದಲಿ ॥ ೧೩

ಉಲಿದು ಸಮಸಪ್ತಕರು ತಮ್ಮಯ
ಕಳನ ಗೆಲಿದರು ಚಾತುರಂಗದ
ದಳದ ತೆರಳಿಕೆ ತೆಕ್ಕೆ ಮಿಗೆ [1]ಕುರು ಸೇನೆ ನಡೆತಂದು[1] ।
ಕಳನ ವೆಂಠಣಿಸಿದವು ರಾಯನ
ಕೆಲ ಬಲದ ಸುಯಿಧಾನದಲಿ ರಿಪು
ವಳಯ ಧೂಳೀಪಟನು ಹೊಕ್ಕನು ರಣವನಾ ದ್ರೋಣ ॥ ೧೪

ನೆರೆದ ನಿಜ ಸೇನಾಧಿಪರ ಸಂ
ವರಣೆಗಳ ನೋಡಿದನು ನೀಡಿದ
ನರಿ ಬಿರುದ ಮಂಡಳಿಕರಿಗೆ ಕಾಳೆಗದ ವೀಳೆಯವ ।
ಹರಿಗೆ ಹಲಗೆ ಕೃಪಾಣ ತೋಮರ
ಪರಶು ಕಕ್ಕಡೆ ಕೊಂತ ಮುದ್ಗರ
ಸುರಗಿಯತಿಬಳ [2]ಪಾಯ್ದಳವ[2] ನಿರಿಸಿದನು ವಳಯದಲಿ ॥ ೧೫

ಎಸಳೆಸಳು ಮಿಗೆ ಸರಿಸದಲಿ ಜೋ
ಡಿಸಿದನವನೀಪಾಲರನು ತ
ದ್ವಿಸಜ ಕರ್ಣಿಕೆಯೊಡ್ಡಿನಲಿ ಬಲಿದನು ಸುಯೋಧನನ ।
ಪಸರಿಸಿತು ಕೌರವ ಕುಮಾರ
ಪ್ರಸರ ಕೇಸರವಾಯ್ತು ಮೃತ್ಯುವಿ
ನೊಸಗೆಗೆತ್ತಿದ ಗುಡಿಗಳೆನೆ ತಳಿತವು ಪತಾಕೆಗಳು ॥ ೧೬ *

ಇಂದಿನಾಹವದೊಳಗೆ ಮೇಣ್ ಯಮ
ನಂದನನ ಬಂಧಿಸುವೆನಹಿತರ
ಮಂದಿಯನು ಜವಗುಣಬಡಿಸುವೆನೆನುತ್ತ ನಾಯಕರು ।
ಮುಂದೆ ಮೇಳೈಸಿದನು ಪಾರ್ಥನ
ಹಿಂದೆ ಹತ್ತಲು ಕಲಿ ಸುಶರ್ಮಕ
ವೃಂದ ಸಮಸಪ್ತಕರ ಚೂಣಿಯ ನೆರಹಿ ಕಳುಹಿದನು ॥ ೨॥

[1] ಕುರುಭೂಮಿಗೈತಂದು (ಟ.ತ.ದ.ನ.) [2] ರಾವುತರ (ತ.ಟ.ಪ.)

* ಇಲ್ಲಿಂದ ಮುಂದಿರುವ ಪದ್ಯಗಳ ಕ್ರಮವು ಒಂದೊಂದು ಪ್ರತಿಯಲ್ಲಿ ಒಂದೊಂದು ತೆರನಾಗಿದೆ.

ನಿಲಿಸಿದನು ರಾವುತರನಾ ಹೊಱ
ವಳಯದಲಿ ರಾವುತರು ಮುಱಿದರೆ
ನಿಲುವುದೊಗ್ಗಿನ ದಂತಿ ಘಟೆ ಗಜಸೇನೆಗಡಹಾಗಿ ।
ತೊಳಗಿದವು ತೇರುಗಳು ತೇರಿನ
ದಳಕೆ ತಾನೊತ್ತಾಗಿ ರಣದ
ಗ್ಗಳೆಯರಿದ್ದುದು ರಾಯನೊಡಹುಟ್ಟಿದರು ಸಂದಣಿಸಿ ॥ ೧೭

ಅರನೆಲೆಯ ಸುಯಿಧಾನ ಬಾಹ್ಲಿಕ
ತರಣಿ ಸುತ ಗುರು ಸೂನು ಕೃತವ
ರ್ಮರಿಗೆ ಕೃಪ ದುಶ್ಶಾಸನಾದ್ಯರಿಗಿದಿರಿನಾರೈಕೆ ।
ಎರಡು ಕೆಲದಲಿ ಶಲ್ಯ ಶಕುನಿಗ
ಳಿರವು ಸೇನೆಯ ಸುತ್ತು ವಳಯದ
ಭರವ ಕೈಕೊಂಡೊಡ್ಡ ಮೆಱೆದನು ಗರುಡಿಯಾಚಾರ್ಯ ॥ ೧೮*

ಹಿಳುಕ ತಿರುಹುತ ಸಮ್ಮುಖದ ಬಲ
ದಳವಿಯಲಿ ಗಿರಿಯಂತೆ ಸೈಂಧವ
ಬಿಲುದುಡುಕೆ ಮೋಹರಿಸಿದರು ಭೂರಿಶ್ರವಾದಿಗಳು ।
ದಳದ ಕೆಲ ಬಲದೊಳಗೆ ನೃಪ ಸಂ
ಕುಲವ ನಿಲಿಸಿದನಮಮ ಕಾಲನ
ಬಳಗಕೌತಣವೆನಲು [1]ಪದ್ಮ[1]ವ್ಯೂಹ ರಂಜಿಸಿತು ॥ ೧೯

ಏನ ಹೇಳುವೆನದನು ನೃಪ ತವ
ಸೂನುವಿನ ಮೋಹರದೊಳಲ್ಲಿಱ
ವಾನೆಗಳನುಪ್ಪರಿಸಿ ಗಗನವ ಮೊಗೆವ ಕುದುರೆಗಳ ।

* ೧೮ನೆಯ ಪದ್ಯವಾದ ಮೇಲೆ (ಗ) ಪ್ರತಿಯಲ್ಲಿ ಮುಂದಿನ ಪದ್ಯವು ಹೆಚ್ಚಾಗಿದೆ:

ಬಾಳರಚನೆಯ ಸುತ್ತ ಹೊದಿಸಿದ
ಸೂಲಗಿಯ ಕಡಿತಲೆಯನವನೀ
ಪಾಲಸುತರಗ್ರದಲಿ ನಿಲಿಸಿದನೂರ್ವರು ಕುಮಾರಕರ ।
ಮೇಳವಿಸಿ ನಿಲಿಸಿದನು ಮುಟ್ಟದಿ
ಯೇಳುಕೋಟಿ ಗಜಂಗಳನು ಭೂ
ಪಾಲ ಕೌರವನೃಪನ ನಿಲಿಸಿದನೆಸಳ ವೊದಲಿನಲ ॥

[1] ಚಕ್ರ (ಕ.ಗ.ಟ.ದ.ಪ).

ಆ ನೃಪರ ರಥವಾಜಿಗಳ ಗಿರಿ
ಸಾನು ಸಡಿಲಲು ಜಡಿವ ಭೇರಿ
ಧ್ವಾನವನು ಪಯದಳದ ಸುಭಟರ ಸಿಂಹಗರ್ಜನೆಯು ॥ ೨೦

ಮೇಳವ[1]ದಲೆ[1]ನ್ನಾನೆಗಳ ಬರ
ಹೇಳು ಸುಭಟರೊಳಗ್ಗಳರ ಬರ
ಹೇಳು ಬಿಂಕಕೆ ಮೆಱೆವ ಭೀಮಾರ್ಜುನರ ಬರಹೇಳು ।
ಲೋಲುಪ[2]|ತೆ|[2]ಯವನಿಯಲಿಹರೆ ಬರ
ಹೇಳು ಯಮನಂದನನನಿಂದಿನ
ಕಾಳೆಗಕ್ಕೆಂದಿತ್ತು ಭಟ್ಟರನಟ್ಟಿದನು ದ್ರೋಣ ॥ ೨೧

ತುರಗ ಹಲ್ಲಣಿಸಿದವು ಸಮರ
ದ್ವಿರದ ಸಜ್ಜಂಬಡೆದವೊಗ್ಗಿನ
ತುರಗದಲಿ ಹೂಡಿದವು ರಥ ಕಾಲಾಳು ಮುಂಕೊಳಿಸಿ ।
ಅರಸನನುಜರು ಸಹಿತ ಕೃಷ್ಣನ
ಬೆರಳ ಸನ್ನೆಯೊಳ್ಳೈದೆ ಬಿಡೆ ಮೋ
ಹರಿಸಿ ನಿಂದುದು ಮುರಿದ ಮಕರವ್ಯೂಹ ರಚನೆಯಲಿ ॥ ೨೨

ಬಂದು ಸಮಸಪ್ತಕರ ದೂತರು
ನಿಂದರರ್ಜುನನಿದಿರಲೇಳ್ಕೈ
ನಂದಗೋಪನ ಮಗನ ಬಿಡು ನೆರವಿಂಗೆ ಕರೆ ಹರನ ।
ಇಂದು ರಣದಲಿ ಬದುಕಿದರೆ ನೀ
ನೆಂದಿಗೆಯು ಬದುಕಿದನೆ ನಿಂದಿರು
ನಿಂದಿರೆಂದವಗಡಿಸಿ ಹಿಡಿದರು ಫಲುಗುಣನ ಸೆಱಗ ॥ ೨೩

ಖರೆಯುರಹಿರುಂಟುಂಟು ನೆರವನೆ
ಕರಸಿಕೊಂಡೇ ಬಹೆನೆನುತ ರಿಪು
ಚರರ ಕಳುಹಲು ದ್ರೋಣನಟ್ಟಿದ ದೂತರೈತಂದು ।
ಕರೆದರರ್ಜುನನನು ವೃಕೋದರ
ಧರಣಿಪತಿ ಮಾದ್ರೇಯ ಹೈಡಿಂ
ಬರಿಗೆ ನೂಕದು ಪಾರ್ಥ ಪದ್ಮವ್ಯೂಹವಿಂದಿನಲಿ ॥ ೨೪

[1] ಲ್ಲೆ (ಸ.ಗ.)   [2] ತಿ (ಸಿ)

ಶಿವನ ಬೇಡಿದ ಶರವ ತೆಗೆ ಗಾಂ
ಡಿವವ ಬಿಗಿ ನಿನ್ನಿಷ್ಟ ದೈವವ
ತವಕದಲಿ ನೀ ಬೇಡಿಕೊಂಬುದು ಪರಮ ಸದ್ಗತಿಯ ।
ಅವರಿವರ ಹವಣಲ್ಲ ಗುರು ಮುನಿ
ದವಗಡಿಸಿದರೆ ನಿಲುವನಾವನು
ಬವರಕೇಳೇಳೆಂದು ಜಱದರು ದೂತರರ್ಜುನನ ॥ ೨೫

ಚರರ ಕಳುಹಿದನಸುರ ವೈರಿಗೆ
ಕರವ ಮುಗಿದನು ಪಾರ್ಥನೀ ಸಂ
ಗರದೊಳಗೆ ನಿಮ್ಮಡಿಯ ಚಿತ್ತದೊಳಾವ ಥಟ್ಟಿನಲಿ ।
ಬೆರಸುವೆವು ನಾವಿಂದಿನೀ ಮೋ
ಹರದ ಮುರಿವಸದಳ ನಿಧಾನಿಸ
ಲರಿದೆನಲು ಮನದೊಳಗೆ ನಿಶ್ಚೈಸಿದನು ಮುರ ವೈರಿ ॥ ೨೬

ಅಳಿಯನೀ ಮೋಹರದೊಳಲ್ಲದೆ
ಫಲುಗುಣನ ಮಗನಿವನು ಬಲುಗೈ
ಯುಳುಹ ಬಾರದು ಕಾಯಿದರೆ ಕಲಿ ಯುಗಕೆ ಗತಿಯಿಲ್ಲ ।
ಫಲುಗುಣನ ನಾವಿತ್ತಲೊಯ್ದರೆ
ಬಳಿಕ ನಿರ್ಣಯವೆಂದು ಮನದಲಿ
ತಿಳಿದು ಪಾರ್ಥಂಗೆಂದನಸುರಾರಾತಿ ನಸು ನಗುತ ॥ ೨೭

ಗುಣಕೆ ಹುರುಡೇ ನಿನ್ನ ಮಗನೀ
ರಣವ ಬಗೆವನೆ ಸೂರ್ಯನಾರೋ
ಗಣೆಗೆ ಸೊಡರೇ ಸಾಕಿದೇತಕೆ ಬಯಲ ಭಂಡತನ ।
ಕೆಣಕು ನಡೆ ಸಮಸಪ್ತಕರನೀ
ಬಣಗುಗಳ ಕೊಂಬನೆ ಕುಮಾರಕ
ನಣಕವಲ್ಲೆಂದಸುರ ರಿಪು ತಿರುಹಿದನು ನಿಜ ರಥವ ॥ ೨೮*

* ೨೮ನೆಯ ಪದ್ಯವಾದಮೇಲೆ (ಗ.ಬ.) ಪ್ರತಿಯಲ್ಲಿ ಮುಂದಿನ ಪದ್ಯವು ಹೆಚ್ಚಾಗಿದೆ:

ಕಳುಹಿದರು ಸಮಸಪ್ತಕರು ಮುಂ
ದಲಿಸಿ ದೂತಾಳಿಗಳ ನಿತ್ತಲು
ಮಲೆತು ನಿಂದನು ದ್ರೋಣ ಯಮಜನ ಹಿಡಿವ ತವಕದಲಿ ।
ಬಲದೊಳಮ್ಮುವರಿಲ್ಲ ಭೂಪನ
ಕಳುಹದಿರು ಕಾಳೆಗಕೆ ನೀನೆಂ
ದಳವಿಯಲಿ ಕಾದೆಂದು ಭೀಮಂಗರುಹಿ ನಡೆತಂದ ॥

ಹರಿ ಸಹಿತ ಕಲಿ ಪಾರ್ಥನತ್ತಲು
ತಿರುಗಿದನು ಬಳಿಕಿತ್ತಲೀ ಮೋ
ಹರ ಮಹಾಂಭೋನಿಧಿಗೆ ಮೊಗಸಿತು ಸರ್ವತೋಮುಖರು ।
ಮೊರೆವ ಪಟಹ ಮೃದಂಗ ಘನ ಜ
ರ್ಜರಿತವಹ ನಿಸ್ಸಾಳ ಚಯದ
ಬ್ಬರಣೆ ಗಬ್ಬರಿಸಿದುದು ಕಮಲಭವಾಂಡ ಖರ್ಪರವ ॥ ೨೯

ಉರವಣಿಸಿದರು ನಕುಲ ಸಾತ್ಯಕಿ
ವರ ವಿರಾಟ ದ್ರುಪದ ಕೈಕೆಯ
ಬಿರುದ ಧೃಷ್ಟದ್ಯುಮ್ನ ಕುಂತೀಭೋಜ ಮೊದಲಾಗಿ ।
ಧರಣಿಪರು ಥಟ್ಟೈಸಿ ರಿಪು ಮೋ
ಹರಕೆ ಕವಿದುದು ಕಾದಿ ದುರ್ಗವ
ಮುಱಿಯಲಱಿಯದೆ ಮುರಿವುತಿದ್ದುದು ಬಸಿವ ರಕ್ತದಲಿ ॥ ೩೦

ಸುಳಿದು ಹರಿ ಮೇಖಲೆಯ ಮೋಹರ
ದೊಳಗೆ ಮುಗ್ಗಿದಿರೈ ಮಹಾಮಂ
ಡಳಿಕರಿರ ಫಡ ಹೋಗಿರೈ ನೀವೆನುತ ಖಾತಿಯಲಿ ।
ಬಿಲುದುಡುಕಿ ಪವಮಾನ ನಂದನ
ನಳವಿಗೊಟ್ಟನು ಹೂಣೆ ಹೊಕ್ಕರಿ
ಬಲವನಿಱಿದನು ಘಾಯವಡೆದನು ಘೋರ ಸಮರದಲಿ ॥ ೩೧

ಕಾದಲೆನ್ನಳವಲ್ಲ ಬಲ ದು
ರ್ಭೇದವಿದು ಶಿವಶಿವ ಯೆನುತ್ತ ವೃ
ಕೋದರನು ಮರಳಿದನು ದುಗುಡಕೆ ತೆತ್ತು ನಿಜ ಮುಖವ ।
ಕೈದೆಗೆಯೆ ರಿಪು ಬಲದ ಸುಭಟರು
ಕಾದಿದನು ಕಲಿ ಭೀಮ ಗೆಲಿದನು
ಪೋದನೆಂದರು ಕೂಡೆ ಕೈಗಳ ಹೊಯ್ದು ತಮತಮಗೆ ॥ ೩೨

ಆ ಮಹಾಮೋಹರ[1]ವನೊಡೆಯಲು[1]
ಸೋಮ ಕುಲಜರು ಭೀತರಾದರು
ಹಾ ಮಹಾದೇವೆನುತ ಧರ್ಮಜ ನೋಡಿ ತಲೆದೂಗಿ ।
ರಾಮನಱಿವನು ಕೃಷ್ಣನಱಿವನು
ಸೀಮೆಯಲಿ ಕಲಿ ಪಾರ್ಥನಱಿವನು
ಭೂಮಿಪತಿಗಳೊಳುಳಿದ ಸುಭಟರಿಗಱಿವುದಿಲ್ಲೆಂದ ॥ ೩೩

---

[1] ಕೆಮಸಗಲು (ಗ) ವನೊಡ್ಡಲು (ಚ.ಪ.ಬ.)

ಹೊಗಲು ಬಲ್ಲನು ಹೊಕ್ಕವೊಲು ಹೆಱ
ದೆಗೆಯಲಱಿಯನು ವೀರ ಪಾರ್ಥನ
ಮಗನು ಮತ್ತಯ್ದನೆಯ ಸುಭಟರ ಕಾಣೆ ನಾನೆನುತ ।
ಅಗಿವ ಚಿಂತೆಯೊಳರಸ ಕದನದ
ದುಗುಡ ಭಾರದಲಿರಲು ಮುಂಗೈ
ನಿಗಳವನು ತಿರುಹುತ್ತ ನಸು ನಗುತೆದ್ದನಭಿಮನ್ಯು ॥ ೨೪

ಜನಪನಂಘ್ರಿಗೆ ಮಣಿದು ಕೈಮುಗಿ
ದೆನಗೆ ಬೆಸಸ್ಸೈ ಬೊಪ್ಪ ತಾ ಬ
ಲ್ಲೆನು ಮಹಾಹವದೊಳಗೆ ಪದ್ಮವ್ಯೂಹ ಭೇದನವ ।
ಅನುವರವ ಗೆಲುವೆನು ಕೃತಾಂತನ
ಮನೆಗೆ ಕಳುಹುವೆನಹಿತರನು ನೀ
ನಿನಿತು ಚಿಂತಿಸಲೇಕೆ ಕಾಳೆಗಕೆನ್ನ ಕಳುಹೆಂದ ॥ ೨೫

ಹಸುಳೆಯದಟಿನ ನುಡಿಯ ಕೇಳಿದು
ನಸು ನಗುತ ಧರ್ಮಜನು ಘನ ಪೌ
ರುಷವು ನಿನಗುಂಟೆಂದು ಕಂದನ ತೆಗೆದು ಬಿಗಿಯಪ್ಪಿ ।
ಶಿಶುವು ನೀ[1]ನೆಲೆ ಮಗನೆ ಕಾದುವ
ರಸವ ಬಲರು ಕಣಾ[1] ಮಹಾರಥ
ರೆಸುಗೆಯನು ನೀನೆಂತು ಸೈರಿಸಲಾಪೆ ಹೇಳೆಂದ ॥ ೨೬

ಸುಳಿಯಬಹುದಂಬುಧಿಯ ನಡುವಣ
ಸುಳಿಯೊಳಗೆ ಸಂವರ್ತಕನ ಕೊರ
ಳೊಳಗೆ ಕುಣಿಯಲುಬಹುದು ಮೃತ್ಯುವಿನನಲ ಹೊಳಲೊಳಗೆ ।
ಹೊಳಕಬಹುದಹಿಪನ ಫಣಾ ಮಂ
ಡಳದೊಳಾಡಲುಬಹುದು ಕಾಣೆನು
ಗೆಲುವ ಹದನನು ಮಗನೆ ಪದ್ಮವ್ಯೂಹದೊಡ್ಡಣೆಯ ॥ ೨೭

ಬಿಡು ಮರೀಚಿಯ ತೊಱೆಗೆ ಹಱಗೋ
ಲಿಡುವ[2]ರುಂಟೇ ಲೆಪ್ಪ[2]ದುರಗನ
ಹಿಡಿವಡೇತಕೆ ಗರುಡ ಮಂತ್ರವು ಚಪಲನೆನ್ನದಿರು ।

---

[1] ನಭಿಮನ್ಯು ಕಾಳೆಗವಸಡುಪುದೇ ಕಂದ (ಕ), ನೆರೆ ಮಗನೆ ಕಾಳೆಗವಸದಳವು ಕಣಾ (ಚ.ತ.ನ.ಪ.ಬ). [2] ದೇತಕೆ ಚಿತ್ರ (ಗ.ಬ).

ಕೊಡನ ಮಗನ ಕುಮಂತ್ರದೊಡ್ಡಿನ
ಕಡಿತಕಾನಂಜುವೆನೆ ವೆಗ್ಗಳ
ನುಡಿಯಲಮ್ಮೆನು ತನ್ನನೀಗಳೆ ಬಿಟ್ಟು ನೋಡೆಂದ ॥ ೩೮

ಅವರೊಳಗಲಕೆ ನಿಂದ ರಿಪುಗಳ
ಜವನ ಬೋನವ ಮಾಡದಿದ್ದರೆ
ಅವನಿಯನು ಗೆಲದೇ ಮಹಾರಥರೆನಿಪ ನಾಯಕರ ।
ಅವನಿಯೊಳಗೊಱಗಿಸದೆ ಮಾಱಾಂ
ತವರ ನುಂಗದೆ ಮಾಣ್ದೆನಾದರೆ
ದಿವಿಜ ಪತಿ ತನಯಂಗೆ ತಾ ಜನಿಸಿದವನಲ್ಲೆಂದ ॥ ೩೯

ಕಂದ ವೈರಿ ವ್ಯೂಹವಸದಳ
ವೆಂದೆನಿಪುದದಱೊಳಗೆ ಕೃಪ ಗುರು
ನಂದನರು ರಾಧೇಯ ಭೂರಿಶ್ರವ ಜಯದ್ರಥರು ।
ಇಂದು ಧರನಡಹಾಯ್ದರೊಮ್ಮಿಗೆ
ಹಿಂದು ಮುಂದೆನಿಸುವರು ನೀ ಗೆಲು
ವಂದವೆಂತೈ ಸಮರವಿದು ಸಾಮಾನ್ಯವಲ್ಲೆಂದ ॥ ೪೦

ಗಾಳಿ ಬೆಮರುವುದುಂಟೆ ವಹ್ನಿ
ಜ್ವಾಲೆ ಹಿಮಕಂಜುವುದೆ ಮಂಜಿನ
ಮೇಲುಗಾಳೆಗವುಂಟೆ ಬಲು ಬೇಸಗೆಯ ಬಿಸಿಲೊಳಗೆ ।
ಬಾಲನಿವ[1]ನೆನ್ನದಿರು ದಾಗುಡವ[1]
ತಾಳಲಾಗದು ಬೊಪ್ಪ ನಿಮ್ಮಡಿ
ಯಾಲಿಗಳಿಗೌತಣವನಿಕ್ಕುವೆನೊರಸಿ ರಿಪು ಬಲವ ॥ ೪೧

ಅಹುದು ಮಗನೆ ಸಮಗ್ರ ಬಲ ನೀ
ನಹೆ ನಿಧಾನಿಸಲಿಂದು ಪವನಜ
ನಹವ ಮುಱಿದರು ಕಾಯ್ದು ಬಿಟ್ಟರು ನಕುಲ ಸಾತ್ಯಕಿಯು ।
ಸಹಸ ದ್ರುಪದ ವಿರಾಟರುಗಳು
ಮ್ಮಹವ ಸೆಳೆದರು ವಿಜಯ ಗರ್ವದ
ಲಿಹ ಬಲವ ನೀನೊಬ್ಬನೇ ಸಾಧಿಸುವುದರಿದೆಂದ ॥ ೪೨

[1] ನೇನೆಂದವಜ್ಞೆಯ (ಗ).

ಧರಣಿಪತಿ ಕೇಳುಳಿದ ಪುಷ್ಪದ
ಪರಿಮಳವು ಪಥಿಸಿದರೆ ಸಂಪಗೆ
ಯರಳ ಪರಿಮಳ ಪಥ್ಯವೇ ತುಂಬಿಗಳ ತಿಂತಿಣಿಗೆ ।
ಅರಿ ಭಟರು ಭೀಮಾದಿಗಳ ಗೆಲಿ
ದಿರಲಿ ಹೊಲ್ಲಹವೇನು ಘನ ಸಂ
ಗರದೊಳಗೆ ನನ್ನೊಡನೆ ತುಡುಕಿದಡಱಿಯಬಹುದೆಂದ ॥ ೪೩

ಕೈದುಕಾಱರ ಬಿಗುಹು ಘನ ನೀ
ಹೊಯ್ದು ಮೊದಲಲಿ ಬಿಡಿಸು ಬಳಿಕಾ
ವೈದಿ ನಿನ್ನನು ಕೂಡಿಕೊಂಬೆವು ಹೊಕ್ಕು ಬಳಿಸಲಿಸಿ ।
ಎಯ್ದೆ ಹಗೆಯಲಿ ಹೂಣಿ ಹೊಗದಿರು
ಮೈದೆಗೆದು ಕಾದುವುದು ಜಯ ಸಿರಿ
ಯೈದೆತನ ನಿನ್ನಿಂದ ಮೆಱೆವುದು ಕಂದ ಕೇಳೆಂದ ॥ ೪೪

ಕೆತ್ತುಕೊಂಡಿರೆ ಬಿಡಿಸುವೆನು ರಥ
ವೆತ್ತಲುಱುಬಿದರತ್ತ ಕಣನೊಳು
ಮತ್ತ ಗಜ ಮುರಿದಂತೆ ಕದಡುವೆನಹಿತ ಮೋಹರವ ।
ಹೊತ್ತಿ ಹೊಗೆವ ಪರಾಕ್ರಮಾಗ್ನಿಯ
ತುತ್ತು ಪದ್ಮವ್ಯೂಹ ದೇವರು
ಚಿತ್ತಯಿಸುವುದು ಹೊತ್ತುಗಳೆಯದೆ ಎನ್ನ ಕಳುಹೆಂದ ॥ ೪೫

ಶರ ನಿಧಿಯ ವಡಬಾನಳನ ದ
ಳ್ಳುರಿಯ ವರ್ಮವ ತಿವಿವ ತುಂಬಿಗೆ
ಮರಳುದಲೆಯುಂಟಾದಡದು ಭವಭವದ ಪುಣ್ಯ ಫಲ ।
ಅರಿ ಬಲವ ನೀ ಖಂಡಿಗಳೆ ಮೋ
ಹರ ಸಹಿತ ನಾ ಬಹೆನು ನಡೆಯೆಂ
ದರಸನಭಿಮನ್ಯುವಿಗೆ ನೇಮವ ಕೊಟ್ಟನಾಹವಕೆ ॥ ೪೬

ಶಿವ ಶಿವಾ ಶಿಶುವಿವನು ರಿಪುಗಳು
ಜವನ ಜೂ[1]ಜೆನಿಸುವ ಮಹಾರಥ
ನಿವಹಕೊಬ್ಬನೆ ಗಡ ಸಮಾಹಿತವಲ್ಲ ಸಮರಂಗ[1] ।

---

[1] ಜು ಮಹಾಹವಕೆ ತಾನಿವನದೊಬ್ಬನೆ ನಿಲುವುದರಿದು ಸಮಗ್ರ ಸಂಗ್ರಾಮ (ಟ.ತ.ದ.ನ), ಜು ಮಹಾರಥರುಗ್ಗಡದ ನಿವಹಕಿವನೊಬ್ಬನೇ ಸಮಾಹಿತವಲ್ಲ ಸಂಗ್ರಾಮ (ಬ).

ಅವನಿಪತಿ ನಿರ್ದಯನಲಾ ಕಂ
ಡೆವು ಕುಮಾರನನಿಕ್ಕಿ ಬಹ ರಾ
ಜ್ಯವನು ಸುಡು ಸುಡಲೇತಕೆಂದುದು ನಿಖಿಳ ಪರಿವಾರ ॥ ೪೭

ಲಲಿತ ಚಂದ್ರಿಕೆಗೇಕೆ ದಾವಾ
ನಳನ ಖಾಡಾ ಖಾಡಿ ಸುರಲತೆ
ಯೆಳೆಯ ಕುಡಿ ಮುಱಿದೊತ್ತಲಾಪುದೆ ವಜ್ರಧಾರೆಗಳ ।
ನಳಿನ ನಾಳವು ಗಜದ ಕೈಯೊಡ
ನಳವಿಗೊಡಲಂತರವೆ ಪಾಪಿಗ
ಳೆ[1]ಳ[1] ಮಗನ ನೂಕಿದರು ಕಾಳೆಗಕೆಂದುದಮರಗಣ ॥ ೪೮

ಬಿಗಿದ ಗಂಡುಡಿಗೆಯಲಿ ಹೊನ್ನಾ
ಯುಗದ ಹೊಳೆವ ಕರಾರಿಯನು ಮೊನೆ
ಮಗುಚಿ ಸಾಧು ಜವಾಜಿ ಕತ್ತುರಿ ಗಂಧ ಲೇಪದಲಿ ।
ಮಗಮಗಿಪ ಹೊಂದೊಡರ ಹಾರಾ
ದಿಗಳಲೊಪ್ಪಂಬಡೆದು ನಸು ನಗೆ
ಮೊಗದ ಸೊಂಪಿನಲಾಹವಕ್ಕನುವಾದನಭಿಮನ್ಯು ॥ ೪೯

ಉಲಿವ ಘಂಟೆಯ ಕುಣಿವ ತುರಗಾ
ವಳಿಯ ಗಗನದೊಳಗಿವ ಬಿರುದಿನ
ಪಳಹರದ ತೆತ್ತಿಸಿದ [2]ಕನಕದ[2] ಚೌಕ ಸತ್ತಿಗೆಯ ।
ಘುಳುಘುಳಿಪ ಚೀತ್ಕಾರ ಕೋಳಾ
ಹಳದ ಸೂತನ ರೇಖೆಯಲಿ ಭಟ
ಕುಲ ಲಲಾಮನ ತೇರು ಬಂದುದು ತೀವಿದಸ್ತ್ರದಲಿ ॥ ೫೦

ತುರಗ ತತಿಗಭಿನಮಿಸಿ ರಥವನು
ತಿರುಗಿ ಬಲವಂದೆಱಗಿ ಚಾಪಕೆ
ಕರವ ನೊಸಲಲಿ ಚಾಚಿ ಭಾರಿಯ ಭುಜವನೊದಱಿಸುತ ।
ಅರಸಗಭಿವಂದಿಸುತ ಭೀಮನ
ಹರಕೆಗಳ ಕೈಕೊಳುತ ನಕುಳಾ
ದ್ಯರಿಗೆ ಪೊಡವಟ್ಟಡರಿದನು ನವ ರತುನಮಯ ರಥವ ॥ ೫೧

---

[1] ಮುತ್ತಿನ (ಟ.ತ.ನ.ಬ). [2] ಳೆ (ಪ).

ಸೂಳವಿಸಿದವು ಲಗ್ಗೆಯಲಿ ನಿ
ಸ್ಸಾಳ ತತಿ ಸಿಡಿಲೆಱಗಿತೆನಲು
ಬ್ಬಾಳು ಮಿಗೆ ಕೈನೆಗಹಿ ಕೈವಾರಿಸುವ ಗಮಕಿಗಳು ।
ಸಾಲ ಹೆಗ್ಗಹಳೆಗಳು ರಿಪು ಭೂ
ಪಾಲಕರ ಬೈಬೈದು ಗಜಱಿದ
ವಾಳುತನದಾಳಾಪ ಬೀಱಿತು ಬೆಱಗನಹಿತರಿಗೆ ॥ ೫೨ *

ಒಡನೆ ಕಳುಹುತ ಬಂದನಾ ನೆಲ
ದೊಡೆಯನನುಜರು ಸಹಿತ ನಯನದಿ
ಬಿಡುವನಿಯ ಸಾಲಿನಲಿ ನನೆದರು ಬಂದು ಕಿಱಿದೆಡೆಯ ।
ನಡೆ ವಿಜಯನಾಗೆಂದು ತನುವನು
ತಡವಿದರು ಕಡು ಮೋಹವೆಡೆಯಲಿ
ಘುಡುಘುಡಿಸೆ ಶಿಶು ಬೀಳುಕೊಂಡನು ಪಿತೃ ಚತುಷ್ಟಯವ ॥ ೫೩

ಎಲೆ ಕುಮಾರಕ ಹರ ಕುಮಾರಂ
ಗಳವಿಯಲಿ ನಿಲಲರಿದು ಕೊರಳಿನ
ಬಲುಹನಱಿಯದೆ ಗಿರಿಯ ಹೊಱಲಂಘೈಸುವರೆ ಭಟರು ।
ಬಲುಗಡಿಯನೀ ಕರ್ಣನೀ ಕೃಪ
ನಲಘು ಭುಜ ಬಲ ದ್ರೋಣನೀ ವೆ
ಗ್ಗಳೆಯ ಜಯದ್ರಥನೆಂದು ಸಾರಥಿ ತೂಗಿದನು ಶಿರವ ॥ ೫೪

ಮರುಳು ಸಾರಥಿ ನಮ್ಮ ನಾವ್ ಪತಿ
ಕರಿಸಿಕೊಳಲಾಗದು ಕಣಾ ನೀ
ನಱಿಯೆ ನಮ್ಮಂತರವ ನಾವಿನ್ನಾಡಿ ಫಲವೇನು ।
ಗುರು ತನುಜನೇ ಕೃಪನೆ ದ್ರೋಣನೆ
ತರಣಿ ತನಯನೆ ಸೈಂಧವನೆ ಹುಲು
ನರರು ಗಣ್ಯವೆ ಕೇಳು ಭಾಷೆಯನೆಂದನಭಿಮನ್ಯು ॥ ೫೫

* ಈ ಪದ್ಯವಾದಮೇಲೆ (ಟ.ತ.ದ) ಪ್ರತಿಗಳಲ್ಲಿ ವಿನಾ ಉಳಿದ ಪ್ರತಿಗಳಲ್ಲಿ ಮುಂದಿನ ಪದ್ಯವು ಹೆಚ್ಚಾಗಿದೆ :—

ರಾಯ ಕುವರ ವಿಭಾಡ ಬಂದನು
ರಾಯ ಕಟಕಾಚಾರ್ಯ ಬಂದನು
ರಾಯ ಸೇನಾಂಬುಧಿಯ ವಡಬಾನಳನು ಬಂದ ।
ರಾಯನಣುಗರ ತುಳಿವ ಕೌರವ
ರಾಯ ಜೀವಪುರಟ್ಟ ಬಂದನು
ಸಾಯದಿರಿ ಹೆಱಸಾರಿಯೆಂದವು ಗೌಱು ಗಹಳೆಗಳು ॥

ಬವರವಾದರೆ ಹರನ ವದನಕೆ
ಬೆವರ ತಹೆನವಗಡಿಸಿದರೆ ವಾ
ಸವನ ಸದೆವೆನು ಹೊಕ್ಕಡಹುದೆನಿಸುವೆನು ಭಾರ್ಗವನ ।
ಜವನ ಜವಗೆಡಿಸುವೆನು ಸಾಕಿ
ನ್ನಿವರವರಲೇನರ್ಜುನನು ಮಾ
ಧವನು [1]ಮುನಿದಡೆ[1] ಗೆಲುವೆನಂಜದೆ ರಥವ ಹರಿಸೆಂದ ॥ ೫೬

ಬಾಲನೆನ್ನದಿರೆನುತ ರಿಪು ಭಟ
ಭಾಳಲೋಚನನೆನಿಸುವರ್ಜುನ
ಬಾಳುಗೆನುತುದ್ದಂಡ ಕೋದಂಡವನು ಜೇವೊಡೆಯೆ ।
ಮೇಲು ಜಗವಲ್ಲಾಡಿದವು ಕೊರ
ಳೋಳಿ ಕೆದಱಿತು ಕುಸಿದನಹಿ ಪಾ
ತಾಳಗೊಳೆಯು ತೆಗೆಯಲಳ್ಳಿಱಿಯಿತ್ತು ಬಿಲು ರಭಸ ॥ ೫೭ *

ಸುರ ನದಿಗೆ ಶಿವನಾಯ್ತು ಮಕರಾ
ಕರಕೆ ಕಳಶಜನಾಯ್ತು ತರಣಿಗೆ
ಅರಿ ವಿಧುಂತುದನಾಯ್ತು ರಥಪದ ತಳಿತ ಧೂಳಿಯಲಿ ।
ಅರರೆ ಸತ್ವ ರಜಸ್ತಮಂಗಳೊ
ಳೆರಡು ಗುಣವಡಗಿತು ರಜೋಗುಣ
ದುರುಳಿಯಾದುದು ಲೋಕವೆನೆ ಘಾಡಿಸಿತು ಪದ ಧೂಳಿ ॥ ೫೮

---

[1] ಮಲೆತರೆ (ಗ.ಟ.ತ.ನ).

* ಈ ಪದ್ಯವಾದಮೇಲೆ (ಟ.ತ.ದ.ಬ) ಪ್ರತಿಗಳಲ್ಲಿ ಮುಂದಿನ ಎರಡು ಪದ್ಯಗಳು ಹೆಚ್ಚಾಗಿವೆ:--

ಬಿರಿದುದರಿ ಬಲ ಸುಭಟರೆದೆ ಜ
ರ್ಝರಿತವಾದವು ಮದಕರಿಗಳುರೆ
ತುರಗ ನಿಕರವರೂಥ ಕೆದಱಿತು ಬೆದಱಿ ಬಿಲುದನಿಗೆ
ಬಿರಿದುದಬುಜವ್ಯೂಹ ಕಾಲಾ
ಳಿರದೆ ತೆರಳಿತು ರಾಯ ಮೋಹರ
ಹೊರಳಿಯೊಡೆದುದು ಸಿಡಿಲು ಹೊಡೆದಂತಾಗ ನಡುನಡುಗಿ ॥

ಅರರೆ ಮಝುಭಾಪೆನುತ ಸಾರಥಿ
ತುರಗ ನಿಕರವ ಚಪ್ಪರಿಸಿ ಕುಡಿ
ವರಿವ ಚಮ್ಮಟಿಗೆಯಲಿ ಬೆದರಿಸಿ ರಿಪು ಬಲವ ತೋಱೆ ।
ವರರಥದ ಪದಧೂಳಿ ರಿಪು ಮೋ
ಹರಕೆ ಕವಿದುದು ಕಲ್ಪ ಮೇಘದ
ಹೊರಳಿಯಂತಿರೆ ತುಡುಕಿತಾಬ್ರಹ್ಮಾಂಡಮಂಡಲವ ॥

ಆರ ರಥವಿದು ಸೈನ್ಯ ಪಾರಾ
ವಾರಕಿದನಂಘೈಸುವನು ತ್ರಿಪು
ರಾರಿಯೋ ಮೇಣಾ ತ್ರಿವಿಕ್ರಮನೋ ಸುರೇಶ್ವರನೊ ।
ವೀರನಹನೋ ಪೂತು ರಣದ ತೊ
ರಾರನಿವನಾರೆನುತ [1] ತಱುಬಿಯೆ [1]
ತೋರಹತ್ತರು ತಾಗಿದರು ಸೌಬಲ ಜಯದ್ರಥರು ॥ ೫೯

ಘಡ ಜಯದ್ರಥ ಹೋಗು ಹೋಗಳ
ವಡಿಕೆಯಲ್ಲಿದು ಸಾರು ಸೌಬಲ
ಮಿಡುಕಿದಡೆ ಮರುಳಹಿರಿ ಲೇಸಲ್ಲೆಮ್ಮೊಳತಿ ಮಥನ ।
ತುಡುಕಿದರೆ ಕೈ ಬೇವುದೀ ಬಲು
ಗಡಿಯತನ ಬಯಲಹುದೆನುತ ತಡೆ
ಗಡಿದು ಬಿಸುಟನು ಭಟರ ಹಯ ರಥ ಧನುವ ಸಾರಥಿಯ ॥ ೬೦

ರಥ ಮುಱಿದು ಮನನೊಂದು ಸುಮಹಾ
ರಥರು ಹಿಮ್ಮೆಟ್ಟಿದರು ಬಳಿಕತಿ
ರಥ ಭಯಂಕರನೊಡೆದು ಹೊಕ್ಕನು ವೈರಿ ಮೋಹರವ ।
ಮಥನದಲಿ ಮುಱಿಯೊಡೆದ ಶೈಲ
ವ್ಯಥಿತ ಸಾಗರದಂತೆ ಬಿರಿದವು
ರಥ ನಿಕರ [2]ಕಾಲಾಳು ಕುದುರೆಗಳೊಂದು[2] ನಿಮಿಷದಲಿ ॥ ೬೧

ನಾಲ್ಕನೆಯ ಸಂಧಿ ಮುಗಿದುದು.

---

[1] ತುಱುಗಿದ (ಗ.ಚ.ನ.ಪ.ಬ). [2] ಕರಿ ತುರಗಪಾಯ್ದಳವೊಂದು (ಟ).

ಐದನೆಯ ಸಂಧಿ

ಸೂಚನೆ ॥ ವೀರ ರಿಪು ಕದಳೀವನಕೆ ಮದ
ವಾರಣನು ಫಲುಗುಣನ ತನಯನು
ದಾರ ಪದ್ಮ ವ್ಯೂಹದಲಿ ಗೆಲಿದನು ಕುಮಾರಕರ ॥

ಅವಧರಿಸು ಧೃತರಾಷ್ಟ್ರ ನೃಪ ಸೈಂ
ಧವನ ಗೆಲಿದಾ ವ್ಯೂಹಭೇದಾ
ಹವ ವಿಜಯ ವಿಜಯಾತ್ಮಕನ ಕೌತುಕ ರಣೋದಯವ ।
ತಿವಿದನುಱುಬುವ ರಥ ಪದಾತಿಯ
ಕವಿವ ಗರುವ ತುರಂಗಗಳ ಬಲು
ಜವದ ರಥ ಕೋಟ್ಯಾನುಕೋಟಿಯ ಹೊದಱ ಹೊಸ ಮಳೆಯ ॥ ೧

ಹರಿಯ ಚಕ್ರ ವರೂಥ ಚಕ್ರದೊ
ಳುರವಣಿಪ ತೇಜಿಗಳ ಕಡುಹಿನ
ಖುರದ ಹೊಯ್ಲಲಿ ವಿಲಯ ಪವನನ ಗಱಿಯ ಗಾಳಿಯಲಿ ।
ಹರನ ನಯನ ಜ್ವಾಲೆ ಪಾರ್ಥಿಯ
ಸರಳ ಕಿಡಿಯಲಿ ಪಲ್ಲಟಿಸೆ ಸಂ
ಗರದೊಳಗೆ ಸೈವರಿದು ಸವೆದನು ಸಕಲ ಸೈನಿಕರ ॥ ೨

ಮಿಕ್ಕು ನೂಕುವ ಕುದುರೆ ಕಾಱರು
ತೆಕ್ಕೆಗೆಡೆದರು ಸಂದಣಿಸಿ ಕೈ
ಯಿಕ್ಕಿದಾನೆಯನೇನನೆಂಬೆನು ಕಾಣೆನಳವಿಯಲಿ ।
ಹೊಕ್ಕು ಹರಿಸುವ ರಥ ಪದಾತಿಯ
ನೊಕ್ಕಲಿಕ್ಕಿದನಮಮ ಮಗುವಿನ
ಮಕ್ಕಳಾಟಿಕೆ ಮಾರಿಯಾಯಿತು ವೈರಿ ರಾಯರಿಗೆ ॥ ೩

ಕದಳಿಯೊಳು ಮದದಾನೆ ಹೊಕ್ಕಂ
ದದಲಿ ಹೆಚ್ಚಿದ ಚಾತುರಂಗದ
ಮೆದೆಯನೊಟ್ಟಿದು ಹೂಣೆ ಹೊಕ್ಕನು ಘಟ್ಟನೊಡೆತುಳಿದು ।
ಇದಿರೊಳೆಚ್ಚನು ಕೆಲ ಬಲದೊಳಿಹ
ಕದನಗಲಿಗಳ ಸೀಳಿದನು ಕಾ
ದಿದನು ಕಾಲನ ಲೀಲೆಯಾದುದು ವಿಷಮ ಸಮರಂಗ ॥ ೪

ಜೋಡೊಡೆದು ಘಟ್ಟುಗಿದು ಬೆನ್ನಲಿ
ಮೂಡಲದಟರ ಸೀಳಿದನು ಖುರ
ಜೋಡು ಹುಡಿ ಹುಡಿಯಾಗೆ ತೇಜಿಯ ಘಟ್ಟ ಖಂಡಿಸಿದ।
ನೋಡಲಮ್ಮುವರಿಲ್ಲ ಮಿಗೆ ಕೈ
ಮಾಡಲಮ್ಮುವರಿಲ್ಲ ಬಲವ
ಲ್ಲಾಡಿತೊಬ್ಬನೆ ಹಸುಳೆ ಹೊಕ್ಕನು ವೈರಿ ಮೋಹರವ ॥ ೫

ಆವ ವಹಿಲದೊಳಂಬ ತೊಡಚುವ
ನಾವ ವೇಗದೊಳಿದಿರಲೆಸುವನ
ದಾವ ನಿರುತದಲೊಡ್ಡುವನು ಕೊರಳಿಂಗೆ ಕೋಲುಗಳ ।
ಆವ ಧೃಡತೆಯೊ [1]ದೃಷ್ಟಿ[1]ವಾಳಿವಿ
ದಾವ ಗರುಡಿ ಶ್ರಮವೆನುತ ದಿವಿ
ಜಾವಳಿಗಳುಲಿಯಲು ವಿಭಾಡಿಸಿದನು ರಿಪು ಪ್ರಜವ ॥ ೬

ಎಡದಲೌಕುವ ರಾವುತರ ವಂ
ಗಡವನೆಚ್ಚನು ಸಮ್ಮುಖದೊಳವ
ಗಡಿಸುವಿಭ ಕೋಟಿಗಳ ಕೊಂದನು ಸರಳ ಸಾರದಲಿ।
ಕಡುಗಿ ಬಲದಲಿ ಕವಿವ ರಥಿಕರ
ಕೆಡಹಿದನು ಕಾಲಾಳು [2]ತೇರಿನ
ಗಡಣ ಹೊಡಿ ಹುಡಿಯಾಯ್ತೆನಲು ಸವಱಿದನು ಪರ ಬಲವ[2] ॥ ೭

ಉರವಣಿಸಿದರು ಮತ್ತೆ ಭಟರ
ಬ್ಬರವ ಖತಿಯಲಿ ನಿಖಿಳ ಮನ್ನಂ
ತರದ ಕಹೆಯಲಿ ನೆಲನನದ್ದುವ ಕಡಲ ಕಡುಹಿನಲಿ ।
ಸರಳು ಕಡಿದವು ಸಕುತಿ ಸೆಲ್ಲಹ
ಪರಶು ಕವಿದವು ಖಡ್ಗ ತೋಮರ
ಸುರಗಿ ಹೊಳೆದವು ಕೈದು ಹೇಱಿದವಖಿಳ ದೆಸೆಗಳಲಿ ॥ ೮

ತೊಲಗಿರೈ ಕಾಲಾಳು ಮೇಲಾ
ಳಳವಿಗೊಡಲಿ ಮಹಾರಥರು ಮುಂ
ಕೊಳಲಿ ಜೋದರು ದಿಟ್ಟರಾದರೆ ಕವಿಸಿ ಕರಿ ಘಟೆಯ ।

[1] ಮುಷ್ಟಿ (ತ.ದ.ಬ). [2] ಕುದುರೆಯ ಅಡಗ ಸೂಱೆಯ ಬಿಟ್ಟನಂತಕ ಕಾಕ ಸಂತತಿಯ (ಕ), ತೇರಿನ ಗಡಣ ಹುಡಿಹುಡಿಯೆನಲು ಸವರಿದನಹಿತ ಮೋಹರವ (ಚ.ಪ).

ಕೆಲದ ದೊರೆಗಳು ಬರಲಿ ಮಾಱಿದ
ತಲೆಯ ಭಂಡವ ಹೊತ್ತಿ[1]ರದೆ[1] ಕೈ
ಕೊಳಲಿ ಕರ್ಣಾದಿಗಳೆನುತ ಹೊಕ್ಕೆಚ್ಚನಭಿಮನ್ಯು ॥ ೯

ಕಾಱಿಗಲಿಸಿದನಮಮ ರಾಜ ಕು
ಮಾರ ಕಂಠೀರವನು ರಿಪು ಪರಿ
ವಾರವನು ನಡೆಗೊಳಿಸಿದನು ಯಮರಾಜನಾಲಯಕೆ ।
ಮಾರಿ ಮೊಗವಡದೆಱೆದಳೋ ಕೈ
ವಾರವೋ ತರುವಲಿಗಿದೆತ್ತಣ
ವೀರವೋ ಶಿವ ಎನುತ ಬೆಱಗಾಯಿತ್ತು ಸುರ ಕಟಕ ॥ ೧೦

ಕೊಡೆನೆಗೆದವಟ್ಟೆಗಳು ರಕುತದ
ಕಡಲೊಳರೆ ಜೀವದ ಭಟರು ಬಾ
ಯ್ವಿಡುತ ತೇಕಾಡಿದರು ಮುಂಡದ ಹಿಂಡು ಮುಳುಗಾಡೆ ।
ಅಡಸಿ ನೆಗೆವಾನೆಗಳ ತಲೆಗಳ
ಗಡಣ ಮೆಱೆದವು ಮಿಕ್ಕ ತೇಜಿಯ
ಕಡಿಕುಗಳು ಕುಣಿದಾಡಿದವು ಕಿಗ್ಗಡಲ ರಕುತದಲಿ ॥ ೧೧

ಕರಿ ಘಟೆಯ ಕಲಕಿದನು ಹಯ ಮೋ
ಹರವ ಜರುಹಿದನೌಕಿ ಹರಿತಹ
ವರ ರಥವ ಹುಡಿ ಮಾಡಿದನು ಕೆಡಹಿದನು ಕಾಲಾಳ ।
ಹುರಿಯೊಡೆದು ಮೈದೆಗೆದು ಸಲೆ ಕೈ
ಮುಱಿದು ಕೈದುವ ಹಾಯ್ಕಿ ಪಡೆ ಮೊಗ
ದಿರುಹಲೆಚ್ಚನು ಕೊಚ್ಚಿದನು ಕೌರವ ಚತುರ್ಬಲವ ॥ ೧೨

ತಳಿತ ಹೊಗರಿನ ಬಾಯ ಧಾರೆಯ
ಹೊಳಹುಗಳ ಹೊಸ ಮಸೆಯ ತಳಿಪದ
ಬೆಳಗುಗಳ ಬಲಿದಿಂಗಲೀಕ ಸುವರ್ಣ ರೇಖೆಗಳ ।
ಉಳಿಯ ಹಂಗನ ಗಱಿಯ ಬಿಗುಹಿನ
ಹಿಳುಕುಗಳ ಹೊಗರಂಬು ಕವಿದವು
ತುಳುಕಿದವು ತೂಱಿದವು ಕೆದಱಿದವಹಿತ ಬಲದಸುವ ॥ ೧೩

[1] ಹರೆ (ಚ.ಪ).

ಅಳವಿಗೆಡೆ ಧುಮ್ಮಿಕ್ಕಿ ರಥದವ
ರಿಳಿಯ ಬಿದ್ದರು ಭಯದಿ ತೇಜಿಯ
ನಿಳಿದು ರಾವ್ತರು ಕರವ ಮುಗಿದರು ಕೊರಳ ಸಲಹೆನುತ ।
ಗುಳವ ಸಡಿಲಿಸಿ ಹಾಯ್ಕಿ ಜೋಧಾ
ವಳಿಗಳಿಳಿದುದು ಕೈಯ ಕೈದುವ
ನಿಳುಹಿ ಬಾಯಲಿ ಬೆರಳನಿಟ್ಟುದು ವೈರಿ ಪಾಯ ದಳ ॥ ೧೪

ಎಸಳ ಮೊನೆ ಮೋಹರದ ಸಂದಣಿ
ಯುಸಿರನುಳಿದುದು ಕೇಸರಾಕೃತಿ
ಯಸಮ ವೀರರು ಪಥಿಕರಾದರು ಗಗನ ಮಾರ್ಗದಲಿ ।
ನುಸುಳಿದರು ಕರ್ಣಿಕೆಯ ಕಾಹಿನ
ವಸುಮತೀಶರು ರಾಯನರನೆಲೆ
ದೆಸೆಗೆಡಲು ವೊಳಗಿದನು ಪಾರ್ಥಕುಮಾರನಳವಿಯಲಿ ॥ ೧೫

ಜರಿದುದಬ್ಜ ವ್ಯೂಹ ನೂಕಿದ
ಕರಿ ತುರಗ ಕಾಲಾಳು ತೇರಿನ
ಮರಳುದಲೆ ತಾನಿಲ್ಲ ನೆಱೆ ನುಗ್ಗಾಯ್ತು ಕುರು ಸೇನೆ ।
ದೊರೆಗಳಹ ದ್ರೋಣಾದಿಗಳು ಕೈ
ಮಱೆದು ಕಳೆದರು ಪಾರ್ಥ ತನಯನ
ಸರಿಯೊರೆಗೆ ಭಟನಾವನೆಂದನು ಕೌರವರ ರಾಯ ॥ ೧೬

ತಂದೆ ಹಡೆಯನೆ ಮಗನನಹುದೋ
ಕಂದ ಕಲ್ಪ ಸಹಸ್ರ ನೋಂತಳೊ
ಇಂದುಧರನನು ನಿನ್ನ ತಾಯಿ ಸುಭದ್ರೆಯಲ್ಲದಡೆ ।
ಇಂದಿನೀ ಬಲವೀ ಸಮರ ಜಯ
ದಂದವೀ ಸೌರಂಭವೀ ಸರ
ಳಂದವೀ ತೆರಳಿಕೆಯದಾವಂಗೆಂದನವನೀಶ ॥ ೧೭

ಹುರುಡ ಮಱೆದೆನು ಮಗನೆ ಸಾಲದೆ
ಭರತ ಕುಲದಲಿ ನಿನ್ನ ಬೆಳವಿಗೆ
ಯೆರಡು ಕವಲನ್ವಯಕೆ ಕೊಡದೇ ಸುಗತಿ ಸಂಪದವ ।
ಕರುಳು ಬೀಳವೆ ತನ್ನ ಬಸುಱಿಂ
ದುರುಳಿದವದಿರಲೇನು ಫಲ ಮು
ತ್ಸರವೆ ಪಾರ್ಥ ಕೃತಾರ್ಥನೆಂದನು ಕೌರವರ ರಾಯ ॥ ೧೮

ಎನುತ ಬಿಲುದುಡುಕಿದನು ಸೇನಾ
ವನಧಿಗಭಯವನಿತ್ತು ಮರಳುವ
ಜನಪರನು ಜಱೆದೆಡೆ ಬಲದ ಮನ್ನೆಯರ ಮೂದಲಿಸಿ ।
ಮೊನೆಗಣೆಯ ತೂಗುತ್ತ ನರನಂ
ದನನ ರಥವನು ತಱುಬಿ ನಿನ್ನಯ
ತನಯನಡ್ಡೈಸಿದನು ಕೌರವರಾಯ ಖಾತಿಯಲಿ ॥ ೧೯

ಮಗುವು ನೀ ಕೆಡಬೇಡ ಹೋಗೆನು
ತಗಣಿತಾಸ್ತ್ರವ ಸುರಿವುತೈತರೆ
ನಗುತ ನಿಂದಭಿಮನ್ಯು ನುಡಿದನು ಕೌರವೇಶ್ವರನ ।
ಮಗುವು ತಾನಹೆ ತನ್ನ ಬಾಣಕೆ
ಮಗುವುತನ ಬೇಱಿಲ್ಲ [1]ನೋಡೆಂ
ದಗಲದಲಿ ಕೂರಂಬ ಸುರಿದನು ಪಾರ್ಥನಂದನನು[1] ॥ ೨೦

ಎಸಲು ಕಣೆ ಮುಕ್ಕುಱುಕಿದವು ಹೊಸ
ಮಸೆಯ ಧಾರೆಯ ತೋರ ಕಿಡಿಯಲಿ
ಮುಸುಕಿತರಸನ ತೇರು ತಳಿತವು ಮೆಯ್ಯೊಳಂಬುಗಳು ।
ಬಸಿವ ರಕುತದ ಜರಿವ ಜೋಡಿನ
ನಸಿದ ಗರ್ವದ ನೆಗ್ಗಿದಾಳ್ತನ
ದೆಸಕದೊಣಗಿಲ ಬಾಯ ಭೂಪನ ಕಂಡನಾ ದ್ರೋಣ ॥ ೨೧

ರಾಯ ಸಿಲುಕಿದನಕಟಕಟ ರಾ
ಧೇಯ ನಡೆ ಕೃಪ ಹೋಗು ಮಗನೆ ನಿ
ಜಾಯುಧವ ಹಿಡಿ ಶಲ್ಯ ತಡೆಯದಿರೇಳು ಕೃತವರ್ಮ ।
ರಾಯನನುಜರು ಕೈದುಗೊಳಿ ರಣ
ದಾಯ ತಪ್ಪಿತು ನೃಪತಿ ಮಾರಿಯ
ಬಾಯ ತುತ್ತಾದನು ಶಿವಾ ಎಂದೊಱಲಿದನು ದ್ರೋಣ ॥ ೨೨

ಮಾತು ಹಿಂಚಿತು ಮುಂಚಿ ಸುಭಟ
ವ್ರಾತ ಹೊಕ್ಕುದು ಸಿಕ್ಕಿದರಸನ
ಭೀತಿಯನು ಬಿಡಿಸಿದರು ಬೀಱಿದರಂಬುಗಳ ಮಳೆಯ ।

---

[1] ಘಾಯದ ಸೊಗಸುಗಳ ನೀ ನೋಡಬೇಕೆನುತೆಚ್ಚನಭಿಮನ್ಯು (ಗ). ವರ ಹರಹುಗಳ ನಿಮಿಷವು ನಿಂದು ನೀ ನೋಡೆನುತ ತೆಗೆದೆಚ್ಚ (ಚ.ಪ.ಬ), ವರ ಹರಹುಗಳು ನಿಮಿಷವು ನಿಂದು ನೋಡೆನುತೆಚ್ಚನಭಿಮನ್ಯು (ತ.ದ.ನ).

ಸೋತೆವಾವ್ ನೀ ಗೆಲಿದೆ ಕರೆ ನಿ
ಮ್ಮಾತಗಳನೀ ಭ್ರೂಣಹತ್ಯಾ
ಪಾತಕಕ್ಕಂಜುವೆನೆನುತ ಕೈಕೊಂಡನಾ ದ್ರೋಣ ‖ ೨೩

ರಾಯನನು ತೊಲಗಿಸಿದರಾಕ
ರ್ಣಾಯತಾಸ್ತ್ರರು ರಾಹುವಿನ ಕಟ
ವಾಯ ಚಂದ್ರನ ಸೆಳೆವ ಪೋಲರಿದಾಯ್ತು ಸುಭಟರಿಗೆ ।
ಸಾಯಕವ ಸರಿ[1]ಗೊಳಿಸಿದರು[1] ವ
ಜ್ರಾಯುಧನ ಮೊಮ್ಮನ ರಥವ ನಿ
ರ್ದಾಯದಲಿ ಮುತ್ತಿದರು ಕುರು ಸೇನಾ ಮಹಾರಥರು ‖ ೨೪

ಹಸುಳೆತನದಲಿ ಹರನ ಮಗನಾ
ವಿಷಮ ದೈತ್ಯನ ಸೀಳಿ ಬಿಸುಡನೆ
ಶಿಶುವಲಾ ಪ್ರದ್ಯುಮ್ನ ಮುಱಿಯನೆ ಶಂಬರಾಸುರನ ।
ಶಿಶುವೆ ನೋಡಭಿಮನ್ಯು ಸುಭಟ
ಪ್ರಸರದಿನಿಬರನೊಂದು ಘಾಯದೊ
ಳುಸಿರ ತೆಗೆಬಗೆ ಮಾಡಿದನು ಧೃತರಾಷ್ಟ್ರ ಕೇಳೆಂದ ‖ ೨೫

ಗುರು ಸುತನನೊಟ್ಟೈಸಿ ಶಲ್ಯನ
ಭರವಸವ ನಿಲಿಸಿದನು ಕೃಪನು
ಬ್ಬರದ ಗರ್ವವ ಮುಱಿದು ಕೃತವರ್ಮಕನ [2]ನೋಯಿಸಿದ[2] ।
ಅರಸನನುಜರ ಸದೆದು ಬಾಹ್ಲಿಕ
ದುರುಳ ಸೌಬಲ ಸೋಮದತ್ತರ
ಹುರುಳುಗೆಡಿಸಿದನೊಬ್ಬ ಶಿಶು ಗೆಲಿದನು ಮಹಾರಥರ ‖ ೨೬

ಮುಳುಗಿದಂಬಿನ ಮಱ ಮೊನೆಯ ಮೈ
ಗಳ ಮಹಾರಥ ರಾಜಿ ಕದನದ
ನೆಲನ ಬಿಡೆ ಖತಿಗೊಂಡು ಮುಱಿದೋಡುವರ ಮೊದಲಿಸಿ ।
ಬಿಲುದುಡುಕಿ ಸಾರಥಿಗೆ ಸೂಚಿಸಿ
ಮಲೆತ ನೋಡ್ಕೈ ಮಗುವು ಫಡ ಫಡ
ತೊಲಗು ತೊಲಗೆಂದೆನುತ ರಿಪುವನು ತಱಬಿದನು ಕರ್ಣ ‖ ೨೭

[1] ವಳೆಗಱಿದು (ತ.ದ.ನ). [2] ಕೆಡೆಯೆಚ್ಚು (ಕ).

ಗಾಱುಗೆಡೆದರೆ ಮೆಱೆಯದೋಲೆಯ
ಕಾಱತನವೆಮ್ಮೊಡನೆ ನೀ ಮೈ
ದೋಱು ಮಡಮುಱಿವಿಲ್ಲದೆಚ್ಚಾಡಿದರೆ [1]ಸಫಲವಿದು[1] |
ತೋಱುವೆನು ಕೈಗುಣವನೆನುತೈ
ದಾಱು ಶರದಲಿ ಕರ್ಣನೆದೆಯನು
ಡೋಱುಗಳೆಯಲು ಬಳಲಿದನು ಪೂರಾಯ ಘಾಯದಲಿ || ೨೮

ಬೆದಱಿ ಭೂಕಂಪದಲಿ ಕುಲ ಗಿರಿ
ಯದಿರುವಂತಿರೆ ಚರಿಸಿ ಕಾಯುವ
ಬಿದಿರಿ ಮರಳುವ ಕಂಗಳಲಿ ಕಲಿ ಕರ್ಣ ಮೈ ಮಱೆಯೆ |
ಕೆದಱಿತೀ ಬಲವಕಟ ಕರ್ಣನ
ಸದೆದನೋ ಸಾಹಸಿಕ ಶಿಶು ಕಾ
ದಿದೆವು ನಾವಿನ್ನೆನುತಲಿರೆ ಕಲಿ ಶಲ್ಯನಿದಿರಾದ || ೨೯

ಬಾಲಕನೆ ಹಿಮ್ಮೆಟ್ಟು ಹಿಮ್ಮೆ
ಟ್ಟಾಳುತನವೆಮ್ಮೊಡನೆಯೇ ಮರು
ಳೇಳಿಗೆಯಲುಬ್ಬೆದ್ದು ಕರ್ಣನ ಸದೆದ ಗರ್ವದಲಿ |
ಮೇಲನಱಿಯಲ ಶಲ್ಯನೊಡನೆಯು
ಕಾಳೆಗವೆ ನಿಮ್ಮಯ್ಯನಿಂದಿನ
ಲೂಳಿಗವ ತಹುದೆನುತ ಸುರಿದನು ಸರಳ ಸರಿವಳೆಯು || ೩೦

ಬಾಲತನವೇನೂಣಯವೆ ಕ
ಟ್ಟಾಳುತನವಾಭರಣವವನೀ
ಪಾಲ ಸುತರಿಗೆ ವಿದ್ಯವೇ ವಿಪ್ರರಿಗಲಂಕಾರ |
ಆಳಿನಂಗವನೆತ್ತ ಬಲ್ಲೆ ಶ
ರಾಳಿಯಲಿ ನಿನ್ನಂಘವಣೆಯ ಥ
ಡಾಳತನವನು ಮುದ್ರಿಸುವೆನೆನುತೆಚ್ಚನಭಿಮನ್ಯು || ೩೧ *

ಸರಳ ಸರಳಲಿ ಕಡಿದು ಸವೆಯದೆ
ಸರಿ ಮಿಗಿಲ ಕಾದಿದರೆ ಶಲ್ಯನ
ಧರಧುರದ ದೆಖ್ಖಾಳತನವನು ಕಂಡು ಖಾತಿಯಲಿ |

[1] ಸಫಲವನು (ಕ). * ಈ ಪದ್ಯವು (ಕ.ಟ) ಪ್ರತಿಗಳಲ್ಲಿಲ್ಲ.

ಸರಳು ಹದಿನೈದಱಲಿ ಶಲ್ಯನ
ಬರಿಯ ಕೆತ್ತಿದನೈದು ಬಾಣದೊ
ಳುರವ ತೋಡಿದನೊಂದು ನಿಮಿಷಕೆ ಶಲ್ಯ ಸೈಗೆಡೆದ ॥ ೩೨

ತಲೆ ತಿರುಗಿ ತುಟಿಯೊಣಗಿ ಕಂಗಳ
ಬಳೆ ಮರಳಿ ಬಸವಳಿಯೆ ಸಾರಥಿ
ತೊಲಗಿಸಿದನಾ ರಥವನೊಡಹುಟ್ಟಿದನ ವೇದನೆಯ ।
ನಿಲುಕಿ ಕಂಡನು ಶಲ್ಯನನುಜನು
ಹಿಳುಕು ಹಿಳುಕಿನ ಮೇಲೆ ಸಂಧಿಸಿ
ಮುಳಿದೆಸುತ ತಾಗಿದನು ಖತಿಯಲಿ ಪಾರ್ಥ ನಂದನ[1][ನ][1] ॥ ೩೩

ಪೂತು ಶಲ್ಯನ ತಮ್ಮನೇ ಮಾ
ಱಾಂತನಣ್ಣನ ಹರಿಬವನು ದಿಟ
ಸೂತ ನೋಡೈ ಸಾಹಸಿಕನೈ ಲೇಸು ಲೇಸೆನುತ ।
ಆತನಂಬೈದಾಟಿ ಮನ್ನಿಸಿ
ಸೋತವೊಲು ಮನಗೆಲವ ಮಾಡಿ ನಿ
ಶಾತ ಶರದಿಂದಿಳುಹಿದನು ಶಲ್ಯಾನುಜನ ಶಿರವ ॥ ೩೪

ದೊರೆ ಮಡಿಯೆ ಮಾದ್ರಾ[2][ನುಜನ][2] ಬಲ
ತಿರುಗಿತಭಿಮನ್ಯುವಿನ ಹೊಯ್ಲಲಿ
ಹುರುಳುಗೆಟ್ಟುದು ಹೆಸರ ನಾಯಕವಾಡಿ ದುಗುಡದಲಿ ।
ತರಹರವ ನಾ ಕಾಣೆನೀ ಮೋ
ಹರಕೆ ಗತಿಯೇನೆನುತ ಭ[3]ರ[3]ದಲಿ
ಕರೆದು ತೋಱಿದನಾ ಕೃಪಾಚಾರ್ಯಂಗೆ ಕಲಿ ದ್ರೋಣ ॥ ೩೫

ಮಗುವೆ ನೋಡಭಿಮನ್ಯು ನಮಗಿದು
ಹೊಗುವಡಳವೇ ಕಾಲ ರುದ್ರನ
ತಗಹು ಬಿಟ್ಟಂತಿದೆ ಕುಮಾರನ ಕೋಪದಾಟೋಪ ।
ಮೊಗಸಲರಿದು ಭುಜ ಪ್ರತಾಪದ
ಹೊಗರು ಹೊಸ ಪರಿಯೆನುತ ರಿಪುಗಳ
ಹೊಗಳುತಿರೆ ಕೇಳಿದನು ಕೌರವ ರಾಯನೀ ನುಡಿಯ ॥ ೩೬

[1] ನು (ಸ). [2] ಧಿಪನ (ಸ). [3] ಯ (ಟ.ಚ.ತ.ದ.ನ.ಬ).

ಕೇಳುತಿರ್ದೈ ಕರ್ಣ ಸಲೆ ನ
ಮ್ಮಾಳ ಬೆದಱಿಸಿ ನುಡಿದು ರಿಪುಭಟ
ನಾಳನೇಱಿಸಿ ನುಡಿವ ಬಾಹಿರರೇನು ಹೇಳುವೆನು ।
ಖೂಳರೆಂಬೆವೆ ಗುರುಗಳಿಂದು ವಿ
ಶಾಲ ಮತಿಗಳು ತಮ್ಮ ಭಾಗ್ಯದ
ಮೇಲೆ ದೈವವನೆಂದು ಫಲವೇನೆನುತ ಬಿಸುಸುಯ್ದ ॥ ೩೭

ವೀರರಂಗವನೆತ್ತ ಬಲ್ಲರು
ಹಾರುವರು ಬೆಳದಿಂಗಳಿನ ಬಿಱು
ಸಾರ ಸುಡುವುದು ಕೈದು ಹಿಡಿದಿರೆ ಕಲಿಗಳೇ ದ್ವಿಜರು ।
ವೈರಿ ಭಟನಿವ ಮಗುವಲಾ ಮನ
ವಾರೆ ಕಾದಲು ಲಕ್ಷ್ಯವಿಲ್ಲೀ
ಯೂರುಗರ ಬೈದೇನು ಫಲವೆಂದರಸ ಹೊಱವಂಟ ॥ ೩೮

ಎನಲು ದುಶ್ಶಾಸನನು ರಾಯನ
ಕನಲಿದನು ಖತಿಯೇಕೆ ಜೀಯಿಂ
ದೆನಗೆ ಬೆಸಸಾ ಸಾಕು ಭಂಡರ ಬೈದು ಫಲವೇನು ।
ದಿನಪ ದೀವಿಗೆಯಾಗಲುಳಿದೀ
ಬಿನುಗು ಬೆಳಗಿನ ಹಂಗು ಬೇಹುದೆ
ದನುಜ ದಿವಿಜರ ದಳಕೆ ತನ್ನನು ಬಿಟ್ಟು ನೋಡೆಂದ ॥ ೩೯ *

ತಳಿತುದೆಡ ಬಲ ವಂಕದಲಿ ಹೆ
ಬ್ಬಲ ಧಡಾಳಿಸಿ ಮೊರೆವ ಭೇರಿಯ
ಘುಳುಘುಳುಧ್ವನಿ ಕೂಡೆ ಜಡಿದುದು ಕಮಲಜಾಂಡ ಘಟ ।
ಹಳವಿಗೆಯ ಸೀಗುರಿಯ ಚಮರಾ
ವಳಿಯ ವಿಮಳ ಚ್ಛತ್ರ ಪಙ್ಕ್ತಿಯ
ವಳಯದಲಿ ನಭ ಮುಳುಗೆ ಮುತ್ತಿತು ಸೇನೆ ರಿಪು ಭಟನ ॥ ೪೦

ತಿರುಹು ತೇಜಿಯನಿತ್ತಲಿವದಿರ
ನೊರಸಿ ದುಶ್ಶಾಸನನ ಬೆನ್ನಲಿ
ಕರುಳು ತೆಗೆವೆನು ನೋಡು ಸಾರಥಿ ಬೆಚ್ಚ ಬೇಡೆನುತ ।

* ಈ ಪದ್ಯವು (ಕ) ಪ್ರತಿಯಲ್ಲಿ ಮಾತ್ರ ಇಲ್ಲ.

ಅರಗಿನರಸನ ಬಾಗಿಲಲಿ ದ
ಳ್ಪುರಿಗೆ [1]ತಡವೇ ಹೊಕ್ಕು[1] ನಿಮಿಷದೊ
ಳೊರಸಿದನು ಚತುರಂಗ ಬಲವನು ಕೌರವಾನುಜನ ॥ ೪೧

ಎಲವೊ ಕೌರವ ಕೊಬ್ಬಿ ನರಿ ಹೆ
ಬ್ಬುಲಿಯ ಕೂಸನು ಬೇಡುವಂದದಿ
ಅಳವನಱಿಯದೆ ಅಧಮ ರಥಿಕರ ಕೂಡೆ ತೊಡಕುವರೆ ।
ಮಲೆತು ನೀನೆನ್ನೊಡನೆ ರಣದಲಿ
ಹಳಚಿ ನೀ ತಲೆವೆರಸಿ ಮರಳಿದ
ಡಿಳುಹುವೆನು ಕೈದುವನು ಶರ ಸನ್ಯಾಸ ನನಗೆಂದ ॥ ೪೨

ಸಾಕು ತರುವಲಿತನದ ಮಾತುಗ
ಳೇಕೆ ಗರುವರ ಮುಂದೆ ವೀರೋ
ದ್ರೇಕದಲಿ ಮೈಮುಱಿದು ರಣದಲಿ ಹೊಯ್ದು ಹೊಟ್ಟುಗರ ।
ಆ ಕಿರೀಟಿ ವೃಕೋದರರು ಮೈ
ಸೋಕಿದರೆ [2]ಸಂತೋಷ[2] ನೀನವಿ
ವೇಕಿ ಬಾಲಕನೇನ ಮಾಡುವೆನೆಂದನವ ನಗುತ ॥ ೪೩

ಕೊಳಚೆ ನೀರೊಳಗಾಳುತೇಳುತ
ಜಲಧಿ ಕಾಲ್ವೊಳೆಯೆಂಬ ಭಂಡರ
ಮುಳಿದು ಮಾಡುವುದೇನು ಮೊದಲಲಿ ನಮ್ಮ ನೀ ಗೆಲಿದು ।
ಬಳಿಕ ಭೀಮಾರ್ಜುನರ ಬಯಸುವು
ದಲೆ ಮರುಳೆ ನಿನ್ನೊಡಲ ಸೀಳಿಯು
ತ್ತಿಳಿ ರಕುತದಲಿ ತಾಯ ತುಱುಬನು ನಾದಿಸುವೆನೆಂದ ॥ ೪೪

ಕಾತರಿಸದಿರು ಬಾಲ ಭಾಷೆಗ
ಳೇತಕಿವು ನೀ ಕಲಿತ ಬಿಲು ವಿ
ದ್ಯಾತಿಶಯವುಂಟಾದಡೆಮ್ಮೊಳು ತೋಱು ಕೈಗುಣವ ।
ಭೀತ ಭಟರನು ಹೊಳ್ಳುಗಳೆದ ಮ
ದಾತಿರೇಕದ ಠಾವಿದಲ್ಲೆಂ
ದೀತನೆಚ್ಚನು ನೂಱು ಬಾಣದಲಿಂದ್ರ ಸುತ ಸುತನ ॥ ೪೫

[1] ಸ್ಮರಣೆಯುಂಟೆ (ಕ.ಟ.ತ.ದ). [2] ಗೆಲಪಿಲ್ಲ (ಕ).

ಬಿಲ್ಲ ಹಿಡಿಯಲು ಕೌರವಾನುಜ
ಬಲ್ಲ ನೋಡೈ ಸೂತ ಮಿಗೆ ತ
ಪ್ಪಲ್ಲ ತಪ್ಪಲ್ಲಂಬು ಬಿದ್ದವು ಗುಱಿಯ ಸರಿಸದಲಿ ।
ನಿಲ್ಲು ನಿಲ್ಲಾದರೆಯೆನುತ ಬಲು
ಬಿಲ್ಲನುಗುಳಿಸಿದನು ಶರೌಘವ
ನೆಲ್ಲಿ [1]ನಭ ದೆಸೆಯೆತ್ತಲೆನೆ[1] ಘಾಡಿಸಿದವಂಬುಗಳು ॥ ೪೬

ಅವನ ನೂಱಂಬುಗಳ ಕಡಿದವ
ನವಯುವವ ಕೀಲಿಸಿದಡಾಕ್ಷಣ
ವವನಿಯಲಿ ಬಲುಗರುಳು ಬಿದ್ದವು ಭಟನ ಕಿಬ್ಬರಿಯ ।
ಅವಗಡಿಸಿ ಖಾತಿಯಲಿ ಖಳ ಶರ
ನಿವಹವನು ತುಡುಕಿದನು ಕೊಡಹಿದ
ವವ[ನು]ನಿಮಿಷದೊಳರ್ಜುನಾತ್ಮಕನಗಣಿತಾಸ್ತ್ರಗಳು ॥ ೪೭

ತಾಯ ತುಱುಬಿಗೆ [2][ಹಾ][2]ಯ್ದ ಪಾತಕಿ
ನಾಯ ಕೊಂಡಾಡುವರೆ ಕೊಬ್ಬಿದ
ಕಾಯವನು ಕದುಕಿಱಿದು ನೆತ್ತರ ನೊರೆಯ ಬಾಸಣಿಸಿ ।
ತಾಯ ಕರಸುವೆನೆನುತ ಕಮಳದ
ಳಾಯತಾಂಬಕನಳಿಯನನುಪಮ
ಸಾಯಕವ ಹೂಡಿದನು ನೋಡಿದನೊಂದು ಚಿತ್ತದಲಿ ॥ ೪೮

ಇವನ ಕೊಂದರೆ ತಂದೆ ಮಿಗೆ ಮೆ
ಚ್ಚುವನೊ ಮುನಿವನೊ ತನ್ನ ನುಡಿ ಸಂ
ಭವಿಸದೆಂಬನೊ ಭೀಮಸೇನನ ಭಾಷೆಗಂಜುವೆನು ।
ಇವನ ತಾನೇ ಕೊಲಲಿ ನಮಗಿ
ನ್ನಿವನ ತೊಡಕೇ ಬೇಡ ಕದನದೊ
ಳಿವನ ಭಂಗಿಸಿ ಬಿಡುವೆನೆಂದನು ತನ್ನ ಮಾನದೊಳಗೆ ॥ ೪೯

ಕಾಯ್ದುಕೊಳ್ಳೈ ಕೌರವಾನುಜ
ಹೊಯ್ದು ಹೋಗಲು ಬಹುದೆ ಹರನಡ
ಹಾಯ್ದಡೆಯು ಗೆಲುವೆನು ಕಣಾ ನಿಲ್ಲೆನುತ ತೆಗೆದೆಸಲು ।

[1] ನಭ ನೆಲವಾವುದೆನೆ (ಗ.ಚ.ಟ.ಪ), ದೆಸೆ ನಭವಾವುದೆನೆ (ನ). [2] ಹೊ (ಸ).

ಬಾಯ್ದಗೆದು ಕೇಸುರಿಯ ಕಾಱುತ
ಕೈದುವೆದೆಯಲಿ ಕೊಂಡು ಬೆನ್ನಲಿ
ಹಾಯ್ದಡವನೋಗುರ್ಡಿಸಿದನು ಕುರು ಸೇನೆ ಕಳವಳಿಸೆ ॥ ೫೦

ಅಹಹ ಕೈತಪ್ಪಾಯ್ತು ರಾಯನ
ಸಹಭವನು ನೊಂದನು ಶಿವಾ ಎನು
ತಹಿತ ಸುಭಟರು ಸರಿಯೆ ಸಾರಥಿ ತಿರುಹಿದನು ರಥವ ।
ಬಹಳ ಬಲ ನುಗ್ಗಾಯ್ತು ಶಿಶುವಿನ
ಸಹಸ ಕುಂದದೆನುತ್ತ ಖತಿಯಲಿ
ಮಿಹಿರ ಸುತನಡಹಾಯ್ದು ತಡೆದನು ಮತ್ತೆ ಬಾಲಕನ ॥ ೫೧

ಸಾರು ಸಾರಭಿಮನ್ಯು ಫಡ ಇ
ನ್ನಾರ ಬಸುಱನು ಹೊಗುವೆ ನಿನ್ನವ
ರಾರ ಸಂತತಿ ಮಾಡಿಕೊಳಲಿ ಭವ[1]ತ್ ಪರೋಕ್ಷದಲಿ[1] ।
ಭೂರಿ ಬಲವನು ಸದೆವ ಗರ್ವವಿ
ದಾರ ಕೂಡೆ ಧನುರ್ಧರಾಗ್ರಣಿ
ವೀರ ಕರ್ಣ ಕಣಾ ಎನುತ ತೆಗೆದೆಚ್ಚನತಿರಥನ ॥ ೫೨

ಬಲ್ಲೆನುಂಟುಂಟಖಿಳ ವೀರರೊ
ಳಿಲ್ಲ ಸರಿ ದೊರೆ ನಿನಗೆ ಬಾಯಲಿ
ಬಲ್ಲಿದನು ನೀನಹೆ ಭಟಾಂಗದ ಮಾತದಂತಿರಲಿ ।
ಒಳ್ಳೆ ಗಡ ಪಾವುಡವ ವಾಸುಗಿ
ಯಲ್ಲಿಗಟ್ಟಿತು ಗಡ ಮಹಾಹವ
ಮಲ್ಲ ಮಡಮುಱಿಯದಿರೆನುತ ಹೊಕ್ಕೆಚ್ಚನಭಿಮನ್ಯು ॥ ೫೩

ಇರುಳು ರಾಯನ ಮನೆಗೆ ಕಪ್ಪವ
ತೆಱುವುದೋ ಹಗಲೆಲವೊ ಕೆಲಬರ
ನಿಱಿದ ದರ್ಪವದಾರೊಡನೆ [2]ಫಡ ಮರಳು ಮರಳೆನುತ[2] ।
ಕಿಱುವೊನೆಯ ಮುಗುಳಂಬುಗಳ ಸೈ
ಗಱೆದನಭಿಮನ್ಯುವಿನ ಮೆಯ್ಯಲಿ
ತುಱುಗಿದವು ಮಱಿ ದುಂಬಿ ಕೆಂದಾವರೆಗೆ ಕವಿವಂತೆ ॥ ೫೪

1 ದ್ವಿಯೋಗದಲಿ (ಚ.ಪ). 2 ಮೈದೋಱು ಕೈದೋಱು (ಕ).

ಸುರಪನಂಕುಶ[1]ವೌಕಿ[1]ದರೆ ಮೆ
ಯ್ಯುಱಿಯದೈರಾವತಕೆ ಕಬ್ಬಿನ
ಲಿಱಿದರಂಜಿಕೆಯುಂಟೆ ನಿನ್ನಯ ಕಣೆಗಳೌಕಿದರೆ ।
ತೆರಳುವನೆ ಅಭಿಮನ್ಯುವೆನುತ
ಬ್ಬರಿಸಿ ಕರ್ಣನ ಕಾಯವನು ಹುಗಿ
ಲಿಱಿದನೆಂಟಂಬಿನಲಿ ತೋಡುದು ತೇರು ರಕ್ತದಲಿ ॥ ೫೫

ಮಳೆಗೆ ಮೊಗದಿರುಹುವುದೆ ಬಡಬಾ
ನಳನೆಲವೊ ನಿನ್ನಂಬು ತಾಕಿದ
ರಳುಕುವೆನೆ ತಾನೆನುತ ರವಿ ಸುತನೆಚ್ಚನತಿರಥನ ।
ಹಿಳುಕು ಕವಿದವು ಭಟನ ಕೈ ಮೈ
ಗಳಲಿ [2][ಮಿನುಗಿದ][2]ವಿರುಳು ಮರನಲಿ
ಹೊಳೆದು ಮುತ್ತಿದ ಮಿಂಚುಬುಳುವಿನ [3]ಮಿನುಗಿನಂದದಲಿ[3] ॥ ೫೬

ಹೂಣಿಗರು ಕೆಲರಿವರು ಇವದಿರ
ಗೋಣನರಿವರೆ ಇವರ ಜೀವದ
ಕೇಣಿಕಾಱರು ಖಾತಿಗೊಂಬರು ಭೀಮ ಫಲುಗುಣರು ।
ಮಾಣದಿವದಿರು ಮತ್ತೆ ರಣದಲಿ
ಕಾಣೆನಿದಕಿನ್ನನುವನೆನುತ
ಕ್ಷೀಣ ಭುಜಬಲನೆಚ್ಚು ಕಡಿದನು ಸೂತಜನ ಧನುವ ॥ ೫೭

ಕೈದು ಮುಱಿಯಲು ಮುಂದೆ ನೂಕದೆ
ಹಾಯ್ದನಾ ರವಿ ಸೂನು ಬಳಿಕಡ
ಹಾಯ್ದು ತಡೆದನು ಬವರವನು ಕರ್ಣಾತ್ಮಜನು ಕಡುಗಿ ।
ಐದು ಬಾಣದಲವನ ಕೊರಳನು
ಕೊಯ್ದನರ್ಜುನ ಸೂನುವಾತನ
ನೊಯ್ದರಂತಕ ದೂತರದ್ಭುತವಾಯ್ತು ಸಂಗ್ರಾಮ ॥ ೫೮

ಘಾಯವಡೆದನು ಶಲ್ಯ ರವಿ ಸುತ
ನಾಯುಧವ ಬಿಟ್ಟೋಡಿದನು ಕುರು
ರಾಯನನುಜನು ಬದುಕುವರೆ ಮೆಯ್ಯೆಲ್ಲ [4]ಬಾದಣವು[4] ।

---

[1] ವಿಕ್ಕಿ (ಚ.ಪ). [2] ಮುತ್ತಿದವಿ (ಕ), ಮುಳುಗಿದ (ಚ.ಟ.ತ.ದ.ನ).
[3] ಬಳಗದಂದದಲಿ (ತ). [4] ಬಾಣಮಯ (ಕ), ಬಾರಣವು (ಗ.ತ).

ಸಾಯದುಳಿದವರಿಲ್ಲ ಮಿಕ್ಕಿನ
ನಾಯಕರೊಳಕಟೆನಲು ಕುರು ಬಲ
ಬಾಯ ಬಿಡೆ ಶಲ್ಯನ ಕುಮಾರಕ ಹೊಕ್ಕನಾಹವವ ॥ ೫೯

ಆ ಕುಮಾರನ ಸೇನೆ ಗಡಣಿಸಿ
ನೂಕಿತುರವಣಿಸಿದುದು ತುರಗಾ
ನೀಕವಿಭತತಿ ತೂಳಿದವು ತುಡುಕಿದವು ರಥ ನಿಕರ ।
ತೋಕಿದವು ಕೈದುಗಳ ಮಳೆ ರಣ
ದಾಕೆವಾಳರ ಸನ್ನೆಯಲಿ ಸವ
ರಾಕುಳರು ಕೆಣಕಿದರು ರಿಪು ಕಲ್ಪಾಂತ ಭೈರವನ ॥ ೬೦

ಭಟ ಛಡಾಳಿಸಿದನು ಘೃತಾಹುತಿ
ಘಟಿಸಿದಗ್ನಿಯ ವೋಲು ರಣ ಚೌ
ಪಟ ಚತುರ್ಬಲದೊಳಗೆ ಹೊಕ್ಕನು ಸಿಂಹ ನಾದದಲಿ ।
ನಿಟಿಲ ನೇತ್ರನ ಕೋಪ ಶಿಖಿ ಲಟ
ಕಟಿಸುವಂತಿರೆ ಹೆಚ್ಚಿದತಿಬಲ
ದಟವಿಯನು ಸವಱಿ[1]ದುದು ಪಾರ್ಥ ಕುಮಾರ ಶರಜಾಲ[1] ॥ ೬೧

ಧರೆ ಬಿರಿಯೆ ಬೊಬ್ಬೆಯಲಿ ಬಲದ
ಬ್ಬರಣೆ ದೆಖ್ಖಾದೆಖ್ಖೆಯಾಗಲು
ಧರಣಿಪತಿ ಮಱುಗಿದನು ಮಗನೇನಾದನೋ ಎನುತ ।
ಕರೆದು ಭೀಮನ ನಕುಳನನು ಸಂ
ಗರಕೆ ಧೃಷ್ಟದ್ಯುಮ್ನ ದ್ರುಪದರ
ಪರುಠವಿಸಿ ಕಳುಹಿದನು ಸೌಭದ್ರಂಗೆ ಪಟುಬಲವ ॥ ೬೨

ಗದೆಯ ತಿರುಹುತ ಸಿಂಹ ನಾದದ
ಲೊದಱಿ ಮಗನಾವೆಡೆಯೆನುತ ನೂ
ಕಿದನು ರಥವನು ತನ್ನ ಸೇನೆಗೆ ಸೀಗುರಿಯ [2]ಬೀಸಿ[2] ।
ಅದಟನೈತರೆ ಹೋಗಲೀಯದೆ
ಮೊದಲ ಬಾಗಿಲ ಕಟ್ಟಿಕೊಂಡ
ಗ್ಗದ ಜಯದ್ರಥ ಭೀಮನೊಳು ಬಲು ಗಾಳಿಗವ ಹಿಡಿದ ॥ ೬೩

---

[1] ದನು ಸುಱಿದವು ಸರಳು ಶೋಣಿತವ (ಕ.ಗ.ಟ.ತ.ದ). [2] ನಲುಗಿ (ಗ.ಚ.ಪ.ಬ).

ತೆಱಹುಗೊಡು ಘಡ ಘಡ ಜಯದ್ರಥ
ಹೆಱತೆಗೆದು ಸಾರೆನುತ ಹೂಣಿಗ
ನುಱುಬಿದರೆ ಮಾಱಾಂತು ಭೀಮನ ಕಡುಹ ನಿಲಿಸಿದನು ।
ಮಱೆದು ಕಳೆಯಭಿಮನ್ಯುವನು ಮೈ
ಮಱೆಯದೆನ್ನಲಿ ಕಾದು ಮಾತಿನ
ಬಿಱುಬಿನಲಿ ಫಲವಿಲ್ಲೆನುತ ಕೆಂಗೋಲ [1]ತೊಡಚಿದನು[1] ॥ ೬೪

ಬವರದಲಿ ಕಲಿ ಪಾರ್ಥನಲ್ಲದೆ
ಪವನ ತನಯಾದಿಗಳ ಗೆಲುವರೆ
ಶಿವನ ಕೃಪೆಯೆನಗುಂಟು ಮುನ್ನೆನುತಾ ಜಯದ್ರಥನು ।
ಕವಲುಗೋಲಲಿ ಭೀಮನನು ಪರಿ
ಭವಿಸಿದನು ಸಹದೇವ ನಕುಳರ
ತಿವಿದು ಧೃಷ್ಟದ್ಯುಮ್ನ ಮೊದಲಾದಗಣಿತರ ಗೆಲಿದ ॥ ೬೫ *

ಪಡಿಬಲವ ಬರಲೀಯದನಿಲಜ
ನೊಡನೆ ಸೈಂಧವ ಕಾದುತಿರಲಿ
ಮ್ಮಡಿಸಿತಾಹವವಿತ್ತ ಮೋಹರ ಮಧ್ಯ ರಂಗದಲಿ ।
ಕಡುಗಿ ನೂಕುವ ಕದನ ರಾಗಿಗ
ಳೊಡನೆ ಕಾದುವ ಪಾರ್ಥ ತನಯನ
ಬಿಡಿ ಸರಳು ಬೀಱಿದವು ರಮಣರನಮರ ವಧುಗಳಿಗೆ ॥ ೬೬

---

[1] ತೆಗೆದೆಚ್ಚ (ಬ).

* ಈ ಪದ್ಯವಾದ ಮೇಲೆ (ಕ.ಗ.ಟ.ದ) ಪ್ರತಿಗಳಲ್ಲಿ ಮುಂದಿನ ಎರಡು ಪದ್ಯಗಳು ಹೆಚ್ಚಾಗಿವೆ:--

ಮರಳು ಮರಳೋ ಭೀಮ ಮುನಿದರೆ
ಕೊರಳ ಕೊಯ್ವೆನು ನಿನ್ನ ಹವಣೇ
ಹರನ ಕಾರುಣ್ಯಾವಲೋಕನವೆನಗೆ ಹಿರಿದೆನುತ ।
ಸರಳ ಮಳೆಯನು ಕಱೆದು ಭೀಮನ
ತುರಗವನು ಸೀಳಿದನು ರಣದಲಿ
ವಿರಥರನು ಮಾಡಿದನು ಫಲುಗುಣನುಳಿಯ ಪಾಂಡವರ ॥

ಹೂಗುವ ಧೃಷ್ಟದ್ಯುಮ್ನನನು ಹೆಱ
ದೆಗೆಯಲೆಚ್ಚನು ದ್ರುಪದ ಮೊದಲಾ
ದಗಣಿತರನೋಡಿಸಿದ ಕೊಂದನು ಚಾತುರಂಗವನು ।
ಹೊಗುವ ಭಟರಲಿ ಮತ್ತೆ ಬಿಲ್ಲನು
ತೆಗೆದು ಮುಷ್ಟಾಮುಷ್ಟಿಯಲಿ ಕೋ
ಲುಗಳ ಕವಿಸಿಯೆ ಭೀಮನೊಡನವಗಡಿಸಿ ಕಾದಿದನು ॥

ತಱಿದನಾನೆಯ ಘಟ್ಟುಗಳ ಮು
ಕ್ಕುಱುಕಿದನು ಕಾಂಭೋಜ ತೇಜಿಯ
ನುಱುಬಿ ಹೊಯ್ದನು ಸೂನಿಗೆಯ ತೇರುಗಳ ತಿಂತಿಣಿಯ ।
ಮುಱಿದನೊಗ್ಗಿನ ಪಾಯ್ದಳವನ
ಳ್ಳಿಱಿವ ಹೆಣ ಕುಣಿದಾಡೆ ಭಟ ಬೇ
ಸಱದೆ ಕೊಂದನು ವೈರಿಸೇನೆಯನರಸ ಕೇಳೆಂದ ॥ ೬೭

ಒರಸಿದನು ಹದಿನೆಂಟು ಸಾವಿರ
ಕರಿ ಘಟೆಯನೈವತ್ತು ಸಾವಿರ
ತುರಗವನು ಮೂವತ್ತು ಸಾವಿರ ವರ ಮಹಾರಥರ ।
ಧುರದಿ ಲಕ್ಷ ಪದಾತಿಯನು ಸಂ
ಹರಿಸಿ ಶಲ್ಯ ಕುಮಾರಕನ ಕ
ತ್ತರಿಸಿದನು ಗೋನಾಳಿಯನು ದಿವ್ಯಾಸ್ತ್ರ ಧಾರೆಯಲಿ ॥ ೬೮

ಮಡಿದನಕಟಾ ತಮ್ಮ ಸಖನೆಂ
ದಡಸಿದಳಲಿನೊಳೆದ್ದ ಕೋಪದ
ಕಡು ಝಳದ ಕಾಲಾಗ್ನಿ ರುದ್ರನ ಕಣ್ಣ ಹೋಲುವೆಯ ।
ಸಿಡಿದ ಮೀಸೆಯ ಬಿಗಿದ ಹುಬ್ಬಿನ
ಜಡಿವ ರೋಮಾಂಚನದ ಖಾತಿಯ
ಕಡುಹುಕಾಱರು ಮಸಗಿದರು ದುರ್ಯೋಧನಾತ್ಮಕರು ॥ ೬೯

ಚಂಡ ಭುಜ ಬಲನೊಡನೆ ಮಕ್ಕಳ
ತಂಡವೆದ್ದುದು ಬಿಗಿದ ಬಿಲ್ಲಿನ
ದಂಡವಲಗೆಯ ಮುಸುಡಿ ಮುದ್ಗ ಕಠಾರಿಯುಬ್ಬಣದ ।
ಗಂಡುಗಲಿಗಳು ಕವಿದರದಿರುವ
ಖಂಡಯುದ ಮುಡುಹುಗಳ ಗಂಧದ
ಮಂಡನದ ಮೈ ಸಿರಿಯ ಪರಿಮಳ ಪೂರರೊಗ್ಗಿನಲಿ ॥ ೭೦

ತಳಿತ ಸತ್ತಿಗೆಗಳ ವಿಡಾಯಿಯ
ಲೊಲೆವ ಚಮರಿಯ ವಜ್ರ ಮಕುಟದ
ಹೊಳಹುಗಳ ಹೊಗೆ ಮೀಸೆ[1]ಗೆದಱಿನ[1] ಬಿರುದಿನುಬ್ಬಟೆಯ ।

[1] ಗೌರಿನ (ಪ-ಕ).

ಕೆಲ ಬಲದ ವೇಲಾಯತರ ವೆ
ಗ್ಗಳದ ರಾವ್ತರ ಗಡಣ ಸಾಲಗೆ
ದಳೆದುದೆನೆ ಹೊಳೆಹೊಳೆವಡಾಯುಧ ಭಟರು ನೂಕಿದರು ॥ ೭೧

ಭಾಪುರೇ ಕೌರವನ ಸುತರಾ
ಟೋಪವೊಳ್ಳಿತು ಬಂದ ಬರವಿನ
ಚಾಪಳದಲೊದಗಿದರೆ ಲೇಸಲ್ಲಿದರ ಫಲವೇನು ।
ಕಾಪುರುಷರೇ ಕಾಣಬಹುದೆಂ
ದಾ ಪುರಂದರ ಸುತನ ಸುತ ನಿಜ
ಚಾಪವನು ನೇವರಿಸುತಿದ್ದನು ಬಗೆಯದರಿ ಬಲವ ॥ ೭೨

ಮಗುಳದಿರು ಶಲ್ಯಾತ್ಮಕನನುಗು
ಳಗಲು ನಿನ್ನಯ ಬಸಿಱ ಸೀಳಿಯೆ
ತೆಗೆವೆವೆಮ್ಮಯ ಸಖನನೆನುತಾ ಲಕ್ಷಣಾದಿಗಳು ।
ತೆಗೆದೆಸುತ ಮೇಲಿಕ್ಕಿದರು ತಾ
ರೆಗಳು ನೆಣಗೊಬ್ಬಿನಲಿ ರಾಹುವ
ತೆಗೆದು ಬದುಕಲು ಬಲ್ಲವೇ ಧೃತರಾಷ್ಟ್ರ ಕೇಳೆಂದ ॥ ೭೩

ದಿಟ್ಟರೋ ಲಕ್ಷಣನವರು ಜಗ
ಜಟ್ಟಿಗಳಲಾ ರಾಜ ಕುಲದಲಿ
ಹುಟ್ಟಿದರೆ ಕೆಲರೀಸು ಚಪಳತೆಯಾರಿಗುಂಟೆನುತ ।
ಕಟ್ಟಿದನು ಕಣೆಗಳಲಿ ಸುತ್ತಲು
ತಟ್ಟಿವಲೆಗಳ ಸೋಹಿನಲಿ ಬೆ
ನ್ನಟ್ಟಿ ಪಾರ್ಥ ಕುಮಾರ ಸದೆದನು ವೈರಿ ಮೃಗ ಕುಲವ ॥ ೭೪

ಆ ಸುಯೋಧನ ಸುತರ ಸರಳ ವಿ
ಳಾಸವನು ಖಂಡಿಸಿದನವದಿರ
ಬೀಸರಕೆ ಬಂದಡ್ಡಬೀಳುವ ಭಟರ ಕೆಡೆಯೆಚ್ಚ ।
ರೋಷ ವಹ್ನಿಯ ಕೆದಱೆ ಕವಿವ ಮ
ಹೀಶರನು ಮಾಣಿಸಿದನವನೀ
ವಾಸವನು ವಾಸವನ ಮೊಮ್ಮನುದಾರ ಸಮರದಲಿ ॥ ೭೫

ಘಡ ಕುಮಾರಕ ದೊದ್ದೆಗರ ಸವೆ
ಬಡಿದ ಗರ್ವಿತತನವಕಟ ನ
ಮ್ಮೊಡನೆಯೇ ನೋಡಿಲ್ಲಿ ಮೇಳವೆ ಸಾರು ಸಾರೆನುತ ।
ಒಡನೊಡನೆ ನಾರಾಚ ನಿಚಯುವ
ಗಡಣಿಸಿದರೇನೆಂಬೆನವರು
ಗ್ಗಡದ ಬಿಲು ವಿದ್ಯಾತಿಶಯುವನು ಸಮರ ಭೂಮಿಯಲಿ ॥ ೭೬

ಸರಳ ಮೊನೆಯಲಿ ವೈರಿ ಸುಭಟರ
ಕರುಳ ತೆಗೆದನು ರಣದೊಳಾಡುವ
ಮರುಳ ಬಳಗವ ತಣಿಸಿದನು ಕಡಲಾದುದರುಣಜಲ ।
ತರಳನಱೆಯಟ್ಟಿದನು ಧುರದಲಿ
ದುರುಳ ದುರಿಯೋಧನನ ಮಕ್ಕಳ
ಮರಳಲೀಯದೆ ಭಟರ ಕೇಣಿಯ ಕೊಂಡನಭಿಮನ್ಯು ॥ ೭೭

ಉರಗನಿಕ್ಕಡಿಗಾಱ ಹುಲ್ಲಿನ
ಸರವಿಗಂಜುವುದುಂಟೆ ಕರ್ಣಾ
ದ್ಯರನು ಕಡ್ಡಿಗೆ ಬಗೆಯನೀ ಹೂಹೆಗಳ ಗಣಿಸುವನೆ ।
ಎರಡು ಶರದಲಿ ಲಕ್ಷಣನ ಸಂ
ಹರಿಸಿದನು ಹದಿನೈದು ಬಾಣದ
ಲರಿದನುಳಿದ ಕುಮಾರಕರನಭಿಮನ್ಯು ನಿಮಿಷದಲಿ ॥ ೭೮

ತಳಿತ ಚೂತದ ಸಸಿಗಳವನಿಗೆ
ಮಲಗುವಂತಿರೆ ರಾಜ ಪುತ್ರರು
ಹೊಳೆವ ಪದಕದ ಕೊರಳ ತಲೆಗಿಂಬಾದ ತೋಳುಗಳ ।
ಬಳಿ ರಕುತದಲಿ ನನೆದ ಸೀರೆಯ
ತಳಿತ ಖಂಡದ ಬಿಗಿದ ಘುಬ್ಬಿನ
ದಳಿತ ದಂಷ್ಟ್ರಾನನದಲೆಸೆದರು ಸಾಲ ಶಯನದಲಿ ॥ ೭೯

ಇಕ್ಕಿದಿರಲಾ ರಾಜ ಪುತ್ರರ
ನಕ್ಕಟಕಟಾ ಸ್ವಾಮಿ ದ್ರೋಹರು
ಹೊಕ್ಕ ಮನೆ ಹಾಳಹುದಲಾ ದ್ರೋಣಾದಿನಾಯಕರು ।

ಹಕ್ಕಲಾದುದು ನಮ್ಮ ಬಲ ಶಿಶು
ಸಿಕ್ಕನಿನ್ನೂ ಪಾಂಡವರ ಪು
ಣ್ಯಕ್ಕೆ ಸರಿಯಿಲ್ಲೆನುತ ಕೌರವ ರಾಯ [1]ಗರ್ಜಿಸಿದ[1] ‖ ೮೦ *

ಕುಲವ ನೋಡಿದಡಿಲ್ಲ ತನ್ನಯ
ಬಲುಹ ನೋಡಿದಡಿಲ್ಲ ಕದನದೊ
ಳುಳಿವ ನೋಡಿದರಿಲ್ಲಲಾ ಪತಿಯೆಂಬ ಪಾತಕಿಯ ।
ಇಳೆಯೊಳೋಲೆಯ ಕಾಱರೆಂಬರ
ತಲೆಗೆ ತಂದನು ತೃಣವನೆಂದ
ಗ್ಗಳೆಯರನು ಮೂದಲಿಸಿ ಬಯ್ದನು ಸುಯ್ದು ಕುರು ರಾಯ ‖ ೮೧

ಕೇಳುತಿದ್ದರು ಪತಿಯ ಮೂದಲೆ
ಗಾಳಿಯಲಿ ಧಳ್ಳಿಸುವ ಶೌರ್ಯ
ಜ್ವಾಲೆ ಜಡಿದುದು ಖಾತಿಯಲಿ ಹೊಗರೇಱದಾನನದ ।
ಆಳುತನವುಬ್ಬೆದ್ದು ಕಡು ಹೀ
ಹಾಳಿಕಾಱರು ಕೈದು ಕೊಂಡರು
ಬಾಲಕನ ತಱುಬಿದರು ದೊರೆಗಳು ಕೇಳು ಧೃತರಾಷ್ಟ್ರ ‖ ೮೨

ಐದನೆಯ ಸಂಧಿ ಮುಗಿದುದು.

---

[1] ಖತಿಗೊಂಡ (ಸ-ಕ).

* ಈ ಪದ್ಯವಾದ ಮೇಲೆ (ಚ.ಟ.ದ.ಬ) ಪ್ರತಿಗಳಲ್ಲಿ ಮುಂದಿನ ಪದ್ಯವು ಹೆಚ್ಚಾಗಿದೆ :—

ಕೊಯ್ಗೂರಳ ಕೋಳಾಹಳದ ಮುಂ
ಗೈಗಳೇಱಿನ ಬಾದಣಂಗಳ
ಮೆಯ್ಗಳಱೆ ಮರಳಾಲಿಗಳ ಬಿಡುಮಿದುಳ ಮೋರೆಗಳ ।
ಸುಯ್ಗಳಲಿ ಜೀವವ ಬಿಡುವ ಬಲು
ಗೈಗಳಾಹವ ಜವನ ಬೆಳಸಿನ
ಕೆಯ್ಗಳುಱೆ ಹುಲಿಸಾಯ್ತೆನಲು ರಂಜಿಸಿತು ರಣಭೂಮಿ ‖

ಆರನೆಯ ಸಂಧಿ

ಸೂಚನೆ ॥ ರಿಪು ಕುಮಾರ ಕುಠಾರ ಧೀರನು
ಚಪಳ ನೃಪ ಸಂಹಾರ ಕಾಲನು
ವಿಪುಳ ಸಂಗ್ರಾಮದಲಿ ಮಡಿದನು ಫಲುಗುಣನ ತನಯ ॥ *

ಮೇರೆದಪ್ಪಿತು ಕೌರವನ ಪರಿ
ವಾರದಲಿ ಬೇಹವರು ಮಕುಟದ
ಭಾರಿಯಾಳುಗಳಾಂತುಕೊಂಡರು ಪಾರ್ಥ ನಂದನನ ।
ಸೂರಿಯನ ಸುತ ಶಲ್ಯ ಗೌತಮ
ಕೌರವಾನುಜನುಭಯಕಟಕಾ
ಚಾರ್ಯನಶ್ವತ್ಥಾಮನಿವರೊಗ್ಗಾಯ್ತು ಷಡುರಥರು ॥ ೧

ಹೊಳೆವ ಸಿಂಧದ ಜಡಿವ ಕಹಳಾ
ವಳಿಯ ಲಗ್ಗೆಯ ವಿವಿಧ ವಾದ್ಯದ
ಕಳಕಳದ ಕಾಲಾಳ ಬೊಬ್ಬೆಯ ಬಹಳ ರಭಸದಲಿ ।
ಕಲಶ ಪಲ್ಲವ ಚೌಕದಲಿ ಮಂ
ಡಳಿಸಿದವು ಸತ್ತಿಗೆಗಳೊದಱುವ
ಕೆಲಬಲದ |ಶಂ|ಖಾಳಿಯಲಿ ಸಂದಣಿಸಿತತಿರಥರು ॥ ೨ †

---

* ಸೂಚನೆಯಾದಮೇಲೆ (ತ) ಪ್ರತಿಯಲ್ಲಿ ವಿನಾ ಉಳಿದುವುಗಳಲ್ಲಿ ಮುಂದಿನ ಪದ್ಯವು ಹೆಚ್ಚಾಗಿದೆ :—

ಬಾಲಬಾಲರ ಕೊಂದ ದೊರೆಗಳ
ಮೇಲೆ ಬಿದ್ದುದು ಬವರ ಕೌರವ
ಗೋಳಿಡುತ ಸುಕುಮಾರಕರ ಸಾವಿಂಗೆ ಹಂಬಲಿಸೆ ।
ಆಳಿದನು ದುರ್ಮಾಸವನು ಕ
ಟ್ಟಾಳುಗಳ ಕಂಡುದು ಮಹಾರಥ
ರೋಳಿಯಲಿ ನೂಕಿದರು ಸರಿಸದ ರಥದ ಗರ್ಜಣದಲಿ ॥

† ಎರಡನೆಯ ಪದ್ಯವಾದಮೇಲೆ (ತ.ನ) ಪ್ರತಿಗಳಲ್ಲಿ ವಿನಾ ಉಳಿದುವು ಗಳಲ್ಲಿ ಮುಂದಿನ ಪದ್ಯವು ಹೆಚ್ಚಾಗಿದೆ :—

ಧೃತಿಗೆ ಚಿತ್ತವ ತೆತ್ತರೆನಲಾ
ದತಿಶಯದಿ ಮುಱು ಭಾಪೆನುತ ಭಟ
ತತಿ ಪರಾಕ್ರಮವನು ಪಯೋಧಿಯ ಕಡೆಗೆ ಕಾಲಿಡುತ ।
ನುತ ಗಜಾರೋಹಕ ತುರಗ ಸಂ
ತತಿಗಳಲಿ ಪ್ರೌಢವರೂಥ ಪ್ರ
ತತಿ ಪರಿಣತವಳವಿಗೊಟ್ಟುದು ಮತ್ತೆ ಬಾಲಕನ ॥

ಅಳವಿಗೊಟ್ಟುದು ಮತ್ತೆ ಕೌರವ
ಬಲ ಪಯೋನಿಧಿ ವೈರಿ ಬಡಬನ
ಬಿಲು ಸರಳು ಬಿಱುಗಿಡಿಯಲೌಕಿತು ಚಾತುರಂಗದಲಿ ।
ಎಲೆಲೆ ಬೆಂಗಾಹಿನಲಿ ನೂಕುವ
ಬಲ ಸಮರ್ಥರ ಜೋಕೆಯಲಿ ಕುರು
ಬಲಕೆ ಕದನಾಳಾಪವಾಯ್ತೆನುತೆಚ್ಚನಭಿಮನ್ಯು ॥ ೩

ಎಸಲು ತಲೆವರಿಗೆಯಲಿ ಕವಿದುದು
ದೆಸೆಯ ಹಳುವಿಂಗೌಕುವತಿರಥ
ರುಸುರುಮಾಱುಗಳೇಱಿ ಹೊಯ್ದರು ರಾಯ ರಾವುತರು ।
ನುಸು[1]ಳಿದರು[1] ನಾಚಿಕೆಯಲಾತನ
ವಿಶಿಖ ಜಲದಲಿ ತೊಳೆದರತಿರಥ
ರಸವು ಸಂಗರವಾಯ್ತು ಮತ್ತಭಿಮನ್ಯುವಿದಿರಿನಲಿ ॥ ೪

ಹಳಚಿ ಮುಱಿದುದು ವೀರ ಕರ್ಣನ
ಬಲ ಕೃಪಾಚಾರಿಯರ ಸೇನೆಗೆ
ತಲೆಯ ಋಣ ಸಂಬಂಧ ಸವೆದುದು ಕಾತರಿಸಿ ಕವಿವ ।
ಬಲದ ಬಿರುದರಿಗಮರ ನಾರಿಯ
ರೊಳಗೆ ಸೇರುವೆಯಾಯ್ತು ಶಲ್ಯನ
ಬಲದಡಗು ಸವಿಯಾಯ್ತು ಜಂಬುಕ ಕಾಕ ಸಂತತಿಗೆ ॥ ೫

ಕೆಡೆದ ರಥ ಸಲೆ ಕಾಂಚನಾದ್ರಿಯ
ನಡಸಿದವು ನಾಚಿಕೆಯನಭ್ರದೊ
ಳಡಿಯೆ ತಲೆ ಬೀಱಿದವು ಭಂಗವನನುಪಮಾಂಬರಕೆ ।
ಕಡಲ ವರಿವರುಣಾಂಬು ಜಲಧಿಗೆ
ಬಿಡಿಸಿದವು ಬಿಂಕವನು ಶಿವ ಶಿವ
ನುಡಿವ ಕವಿಯಾರಿನ್ನು ಪಾರ್ಥ ಕುಮಾರನಾಹವವ ॥ ೬

ಪಡೆಯ ತೆಗೆ ತರುವಲಿಯ ಕೊಲ್ಲದೆ
ಹಿಡಿಯೆನುತ ಬಿಱು ಸರಳ [2]ತಿರುವಿನ
ಲಡಸಿ[2] ಸೂತರಿಗಱುಹಿ ಕೆಲ ಬಲದವರ ಕೈವೀಸಿ ।

---

[1] ಳುಗಳು (ಚ.ತ.ದ.ನ.ಪ.ಬ). [2] ಕೆನ್ನಗೆ ತೊಡಚಿ (ಕ).

ಕಡು ಮನದ ಕೈ ಚಳಕಿಗರು ಮುಂ
ಗುಡಿಯಲೈತರೆ ರವಿ ಸುತಾದಿಗ
ಳೊಡನೊಡನೆ ಕೈಕೊಂಡರಿಂದ್ರ ಕುಮಾರ ನಂದನನ ॥ ೭

ಶಿಶುತನದ ಸಾಮರ್ಥ್ಯ ಸಾಕಿ
ನ್ನೆಸದಿರೆಲಷ್ಟೋ ಮರಳು ಮರಳೆಂ
ದೆಸಮ ಬಲರೈದಿದರು ಷಡುರಥರೊಂದು ಮುಖವಾಗಿ ।
ಎಸುಗೆ ನಿಮಗೆಂದಾಯ್ತು ನಿದ್ರೆಯ
ಮುಸುಕಿನಲಿ ಗೋಗ್ರಹಣದಲಿ ಜೀ
ವಿಸಿದ ಜಾಣರು ನೀವೆನುತ್ತಿದಿರಾದನಭಿಮನ್ಯು ॥ ೮

ತರಳತನದಲಿ ನುಡಿಯದಿರು ಸಂ
ಗರಕೆ ಕರೆ ನಿಮ್ಮಯ್ಯನನು ಹೊಸ
ಸರಳು ನಾಚುವವಲ್ಲ ಶಿಶುವಧೆಯೆಂಬುದಪ'ವಾದ'[1] ।
ಮರಳುವುದು ಲೇಸೆನುತ ಷಡುರಥ
ರುರವಣಿಸಿದರು ಬಿಗಿದ ಬಿಲ್ಲಿನ
ಗರುಡಿಕಾಱನ ಕೂಡೆ ನೂಕಿತು 'ರವಿಸುತಾದಿಗಳ'[2] ॥ ೯

ಪಾರ್ಥ ಪರಿಯಂತೇಕೆ ಸಮರ
ವ್ಯರ್ಥಜೀವರು ನೀವು ಕೌರವ
ನರ್ಥವನು ಸಲೆ ತಿಂಬುದಲ್ಲದೆ ಸಮರ ನಿಮಗೇಕೆ ।
ಸ್ವಾರ್ಥ ಲೋಲುಪ್ತಿಯಲಿ ನಿಲುವ ಸ
ಮರ್ಥರಾದರೆ ಬಾಣ ಧಾರಾ
ತೀರ್ಥದೊಳಗೋಲಾಡಿಸುವೆನೆಂದೆಚ್ಚನಭಿಮನ್ಯು ॥ ೧೦

ಮನದ ಕೆಚ್ಚುಳ್ಳದಟನಹೆ ಮಾ
ತಿನ ಸಘಾಡಿಕೆ ಲೇಸು ಪಾರ್ಥನ
ತನಯನಲ್ಲಾ ಪೂತು ಪಾಯಿಕು ಎನುತ ಷಡುರಥರು ।
ತನತನಗೆ ಕೆಂಗೋಲಿನಲಿ ಮು
ಮ್ಮೊನೆಯ ಜೋಳೆಯ ಸರಳಿನಲಿ ಸಾ
ಧನ ಸಮಗ್ರರು ಶಿಶುವನೆಚ್ಚರು ದೆಸೆ ದೆಸೆಗೆ ಕವಿದು ॥ ೧೧

---

[1] ಘಾತ (ಕ), ರಾಧ (ಚ.ದ.ಬ).　ನಿನ್ನವಂದಿಗರು (ಕ), ಮಕುಟವರ್ಧನರು (ಗ.ದ.ಬ).

ಮಸಗಿ ಮದದಾನೆಗಳು ಸಿಂಹದ
ಶಿಶುವ ಮುತ್ತುವವೊಲು ಕವಿ ಕವಿ
ದೆಸುತ ಬಂದರು ಮಕುಟವರ್ಧನರಸಮ ಬಾಲಕನ |
ನುಸುಳದವರವರಸ್ತ್ರವನು ಖಂ
ಡಿಸುತ ಸನ್ನಾಹದಲಿ ಘನ ಪೌ
ರುಷದಲೆಚ್ಚಾಡಿದನು ಹಲಬರ ಕೂಡೆ ಸುಕುಮಾರ ‖ ೧೨

ಕೋಡಿದನೆ ಕೊಂಕಿದನೆ ನಾಯಕ
ವಾಡಿಗಳು ಹಲರೆಂದು ಬೆಂಗೊ
ಟ್ಟೋಡಿದನೆ ಕೈಗಾಯದೆಚ್ಚನು ನಚ್ಚಿದಂಬಿನಲಿ |
[1]ತೋಡು ಬೀಡಿನ ಹವಣನಾತನ
ಮಾಡಿದಾತನೆ ಬಲ್ಲನೆನೆ[1] ಕೈ
ಮಾಡಿ ಸುರಿದನು ಸರಳ ಮಳೆಯ ಮಹಾರಥರ ಮೇಲೆ ‖ ೧೩*

ಪೂತು ಮಝು ಬಿಲ್ಲಾಳುತನವಿದು
ಭೂತನಾಥಂಗಿಲ್ಲ ಸುಭಟ
ವ್ರಾತವೀಕ್ಷಿಸಲರಿದೆನುತ ಕಣೆಗೆದಱಿದನು ದ್ರೋಣ |
ಏತಕಿದು ಹಿಮ್ಮೆಟ್ಟು ದಿಟ ನೀ
ಸೋತಡೆಯು ಜಯವಿಲ್ಲೆಮಗೆ ಮೃಗ
ಪೋತನನು ಹರಿ ಹೊಯ್ವುದುಚಿತವೆ ಮಗನೆ ಕೇಳೆಂದ ‖ ೧೪

ವಿನಯವೇಕಿದು ನಿಮ್ಮ ಭುಜ ಬಲ
ದನುವ ಬಲ್ಲೆನು ನಿಮ್ಮ [2]ಕೈ ಮ್ಮೆ[2]
ತನದ ಹವಣನು ಕಾ[3][ಬೆ][3]ನೆನ್ನೊಳು [4]ಸೆಣಸಿ[4] ಜಯಿಸಿದರೆ |
ಧನುವ ಹಿಡಿಯೆನು ಸಾಕು ಡೊಂಬನ
ಬಿನುಗು ನುಡಿಯಂತಿರಲಿ ಬಲ್ಲಡೆ
ಮೊನೆಗಣೆಯಲೇ ಮಾತನಾಡೆಂದೆಚ್ಚನಭಿಮನ್ಯು ‖ ೧೫

---

[1] ತೋಡಿತಹಿತನ ಗೋಣನಸುಗಳ ಹೂಡಿ ಕಳುಹಿತು ಯಮಪುರಕೆ (ಟ.ದ).
[2] ಮ್ಮೆಲಿಗ (ಕ), ಮ್ಮೆಲಘು (ಡ.ಪ). [3] ವೆ (ಗ). [4] ತುಡುಕಿ (ಕ.ಚ.
ಟ.ದ.ನ).

* ಈ ಪದ್ಯವು (ಗ.ಚ.ಟ.ದ) ಪ್ರತಿಗಳಲ್ಲಿ ಮಾತ್ರ ಇದೆ.

ಎಡದೊಳೌಕುವ ಕೃಪನನೆಚ್ಚನು
ತಡೆಯಲಶ್ವತ್ಥಾಮನನು ರಥ
ಕೆಡೆಯಲೆಚ್ಚನು ತೊಡಚಿ ಕೈಯಲಿ ಕೌರವಾನುಜನ ।
ಮಿಡುಕಲೆಚ್ಚನು ಹಿಂದು ಮುಂದವ
ಗಡಿಸಿದಾ ಮಾದ್ರೇಯ ರವಿ ಸುತ
ರೊಡಲೊಳಂಬನು ಹೂಳಿದನು ಸೀಳಿದನು ಸಮರಥರ ॥ ೧೬

ಅಡಸಿ ಹೊಕ್ಕರೆ ಕೃಪನ ರಥವನು
ಕಡಿದು ಬಿಸುಟನು ಗುರು ಸುತನನಡಿ
ಮಿಡುಕಲೀಯದೆ ಬಿಗಿದು ಕರ್ಣನ ಧನುವ ಖಂಡಿಸಿದ ।
ಕೊಡಹಿದನು ಕೌರವನ ರಥವನು
ತುಡುಕಲೀಯದೆ ದ್ರೋಣನನು ಜವ
ಗೆಡಿಸಿದನು ಜೋಡಿಸಿದ ಷಡುರಥರೊಗ್ಗನೊಡೆ ಹೊಯ್ದು ॥ ೧೭

ಮುರಿ ಮುರಿದು ಹಿಯ್ಯಾಳಿಯಲಿ ಮ
ತ್ಸರವಣಿಸಿ ಗಜಿಗಟ್ಟಿ [1]ರಥಿಕರು[1]
ಹುರಿ ಬಿಡದೆ ಬಿಗುಹಿನಲಿ ಭಾಷೆಯ ಮಾಡಿ ತಮ್ಮೊಳಗೆ ।
ಸರಳ ಸೂಸಿದರೆಡ ಬಲದಲ
ಬ್ಬರವ ಮಾಡಿದರೋಡಿದರು ಹಗೆ
ಯರುಣ ಜಲದಲಿ ನಾದಿದರು ನಿಶಿತಾಸ್ತ್ರ ಸಂತತಿಯ ॥ ೧೮

ವಡಬಗೌತಣವಿಕ್ಕುವರೆ ಕಡ
ಲೊಡೆಯಗಹುದು ಸಮರ್ಥನಲ್ಲಾ
ಬಿಡುಗಣೆಯ ಬೀಱುವರೆ ಕಟಕಾಚಾರ್ಯನೆಂದೆನುತ ।
ಕಡುಮೊನೆಯ ಕೂರಂಬುಗಳ ಮಿಗೆ
ಗಡಣಿಸಿದನೊಗ್ಗೊಡೆದ ಷಡುರಥ
ರೊಡಲೊಳಂಬನು ಹೂಳಿದನು ಕಾಱಿದರು ಶೋಣಿತವ ॥ ೧೯

ಹೂಸಕದ ಶೌರಿಯದ ಬಾಳಿಕೆ
ಯೇಸು ದಿನವೈ ಕರ್ಣ ಕೃಪ ದು
ಶ್ಶಾಸನರ ಕೊಂಬನೆ ಕುಮಾರಕ ಸುರರಿ[2]ಗಲಗ[2]ಣಸು ।

[1] ಕವಿದುದು (ಗ.ಚ.ಟ.ತ.ನ). [2] ಗೆದೆಗೆ (ಕ.ಬ).

ಘಾಸಿಯಾದರು ಘಾಯವಡೆದು ವಿ
ಳಾಸವಳಿದುದು ರಿಪು ಭಟನ ಗೆಲು
ವಾಸೆ ಬೀತುದು ಧಾತುಗೆಟ್ಟುದು ಸರಳ ಸಾರದಲಿ ॥ ೨೧

ವಿರಥನಾದನು ಕರ್ಣನಂಬಿಗೆ
ತಿರುಹಿ ಬಿಲ್ಲನು ತೊಟ್ಟನಾ ಗುರು
ಗುರು ತನೂಜನು ತನ್ನ ಸೂತನ ಶಿರವ ಹಱಿಯೆಚ್ಚ ।
ಸುರಗಿಯನು ಬಿಸುಟೋಱೆಯ ತಿರುಹಿದ
ನರಸನನುಜನು ಕೃಪನು ಶಲ್ಯನು
ಕೊರಳಲಸುಗಳ ಹಿಡಿದು ಹಂಗಿಗರಾದರೊಡೆಯಂಗೆ ॥ ೨೧

ಗನ್ನದಲಿ ಗುರು ಜಾಱಿದನು ಕೃಪ
ಮುನ್ನವೇ ಹಿಂಗಿದನು ಕರ್ಣನ
ನಿನ್ನು ಕಂಡವರಾರು ಮೂರ್ಛೆಗೆ ಮೂಱು ಬಾರಿಯದು ।
ಬೆನ್ನ ತೆತ್ತರು ಬಿರುದರಾತಗೆ
ಕೆನ್ನೆ[1]ಯೆಡೆಗುಗಿ[1]ದಂಬು ಸಹಿತವೆ
ನಿನ್ನ ಮಗನರನೆಲೆಗೆ ಸರಿದನು ಭೂಪ ಕೇಳೆಂದ ॥ ೨೨

ಕೊಂಡು ಬರುತಿದೆ ಭಟರು ಮನ್ನೆಯ
ಗಂಡನಾಗ್ಯೆ ಜೀಯ ಎನೆ ಖತಿ
ಗೊಂಡು ಕುರುಪತಿ ನೋಡಿದನು ಮೂಗಿನಲಿ ಬೆರಳಿಟ್ಟು ।
ಭಂಡರೆಂಬೆವೆ ಜಗದ ಗುರುಗಳು
ಗಂಡುಗಲಿಗಳು ವೈರಿ ಭಟರಿಗೆ
ಹೆಂಡಿರಾಗಲು ಹೋಗಿರ್ರೈ ದಿಟ ಹೋಗಿ ನೀವೆಂದ ॥ ೨೩

ಕಾಲ ವಹಿಲವ [2]ಕಲಿಸ[2]ಲೋಸುಗ
ಕೋಲ ಗುರು ಜಾಱಿದನು ಶಲ್ಯನ
ಮೇಲು ಮುಸುಕನುವಾಯ್ತು ಬಿರುದೇನಾಯ್ತು ಗುರುಸುತನ ।
ಆಳುವಾಸಿಯು ಕಡುಹು ಕರ್ಣನ
ಬೀಳುಕೊಂಡುದು ಪೂತು ಮಝುರೇ
ಬಾಲ ಎಂದವನೀಶ ಮೂದಲಿಸಿದನು ತನ್ನವರ ॥ ೨೪

---

[1] ಗಡಿಗುಡಿ (ನ.ಬ). [2] ತೋಱ (ಕ.ಚ.ಟ.ದ).

ಇದಿರೊಳೀಶನ ಭಾಳ ನಯನದ
ಕದಹು ತೆ[1]ಗೆ[1]ದಿದೆ ಹಿಂದೆ ಮರಳುವ
ಡಿದೆ ಕೃತಾಂತನ ಕೊಂತವರಸನ ಮೂದಲೆಯ ವಚನ ।
ಅದಟು ಕೊಳ್ಳದು ರಾಜ ಸೇವೆಯ
ಪದವಿ ಪಾತಕ ಫಲವೆನುತ ನೂ
ಕಿದರು ರಥವನು ಹಳಿವು ದರ್ಪದ ಹೇವ ವಾರಿಗಳು ॥ ೨೫

ರಸದ ಬಂಧದ ಬಿಗುಹು ವಹ್ನಿಯ
ಮುಸುಕನುಗಿದುಳಿವುದೆ ಕುಮಾರನ
ಮುಸುಡ ಮುಂದಕೆ ಬಿದ್ದು ಬದುಕುವರೇ ಮಹಾದೇವ ।
ಎನುತ ಹೊಗುವರು ಭಟನ ಘಾಯಕೆ
ಮುಸುಡ ತಿರುಹುವರಡಿಗಡಿಗೆ ಸಾ
ಹಸದ ಸುಂಕಿಗನೊಡನೆ ತಲೆಯೊತ್ತಿದರು ಷಡುರಥರು ॥ ೨೬

ಹಱಿದು ಬಿದ್ದವು ಜೋಡು ಮೆಯ್ಯಲಿ
ಮುಱಿದವಗಣಿತ ಬಾಣದೇಱಿನೊ
ಳೊಱೆದ ರಕುತದ ಧಾರೆ ನಾದಿತು ರಥದ ಹಲಗೆಗಳ ।
ಅಱಿವು ಮಱೆದಪಕೀರ್ತಿ ನಾರಿಯ
ಸೆಱಗ ಹಿಡಿದರು ಹೇಳಲೇನದ
ನಱಿಯೆನೇಕಾಂತದಲಿ ಕರ್ಣನ ಕರೆದನಾ ದ್ರೋಣ ॥ ೨೭

ಇದಿರೊಳಾನುವುದರಿದು ಹಸುಳೆಯ
ಕದನ ಹಂಗಿಗರಾದೆವಾಳ್ದನ
ವದನ ಕಮಲಕೆ ನಮ್ಮ ಪೌರುಷವಿಂದು ಹಿಮವಾಯ್ತು ।
ಇದಿರೊಳಾನಿಹೆ ಶಲ್ಯನೆಡ ವಂ
ಕದಲಿ ಬಲದಲಿ ಕೃಪನಪರ ಭಾ
ಗದೆ ನೀ ಬಂದೆಸು ಕುಮಾರನ ಕರದ ಕಾರ್ಮುಕವ ॥ ೨೮

ಚಾಪವೀತನ ಕೈಯಲಿರಲಿ
ನ್ನಾ ಪಿನಾಕಿಗೆ ಗೆಲವು ಘಟಿಸದು
ವೈಪರೀತ್ಯಕೆ ಬೆದಱಲಾಗದು ಸ್ವಾಮಿ ಕಾರ್ಯವಿದು ।

[1] ರೆ (ಗ).

ರೂಪುದೋಱದೆ ಬಂದು ಸುಭಟನ
ಚಾಪವನು ಖಂಡಿಸುವುದಿದು ಕುರು
ಭೂಪನುಳಿವೆಂದಿನಸುತನನೊಡಬಡಿಸಿದನು ದ್ರೋಣ ॥ ೨೯

ಹಿಂದಣಿಗೆ ತಿರುಗಿದನು ಭಾಸ್ಕರ
ನಂದನನು ಬಲ ವಂಕದಲಿ ಗುರು
ನಂದನನು ಕೃಪ ಶಲ್ಯ ವಾಮದೊಳಿದಿರಲಾ ದ್ರೋಣ ।
ನಿಂದು ಕದನವ ಕೆಣಕಿದರು ರಿಪು
ಬಂದಿಕಾಱನೊಳೇಱ ಸೂಱೆಗೆ
ಬಂದು ಬಸಿವುತ ಹೋದರನಿಬರು ಬೈದು ರವಿಸುತನ ॥ ೩೦ *

ದಳವು ದಳವುಳವಾಯ್ತು ಕೇಸರ
ದೊಳಗೆ ವಿಸಟಂಬರಿದು ಕರ್ಣಿಕೆ
ಯೊಳಗೆ ಱಂಗಣಗುಣಿದು ಸಂಗರ ಜಯದ ಮಡುವಿನಲಿ ।
ಸಲೆ ಸೊಗಸಿ ತನಿ ಸೊಕ್ಕಿ ದೆಸೆ ಪಟ
ದುಳಿದು ಸೌಭ[1]ದ್ರೇಯ ಭೃಂಗನ[1]
ಬಿಲು ದನಿಯ [2]ಭರವಂಜಿಸಿತು[2] ಜಯಯುವತಿ ವಿರಹಿಗಳ ॥ ೩೧ †

* ಈ ಪದ್ಯವಾದಮೇಲೆ (ಗ.ಚ.ಬ) ಪ್ರತಿಗಳಲ್ಲಿ ಈ ಕೆಳಗಿನ ಪದ್ಯವು ಹೆಚ್ಚಾಗಿದೆ :—

ಮಗನೆ ಕೊಲಬಾರದು ಸುಯೋಧನ
ನಗಡು ರಾಜನು ಮೇಣು ರಣದಲಿ
ಮಗನೆನಲು ಹಱದೆಗೆಯಲಾಗದು ಸ್ವಾಮಿಕಾರ್ಯವಿದು ।
ಬಗೆಯನೀಜನದೊಳಗೆ ನಾಲ್ಕಡಿ
ಮಿಗುವರೀಯವಸರದೊಳೋಡುವ
ಸೊಗಣನಿಂದವೆ ಕಷ್ಟವೆಂದನು ಕರ್ಣ ಮನದೊಳಗೆ ॥

[1] ದ್ವಿದ್ವಿರೇಫದ (ಚ.ಪ), ದ್ರೇಯ ಮಧುಪನ (ಗ). [2] ಸಿಡಿಲಂತೆ ರಂಜಿಸಿತು (ಚ.ಪ.ಟ.ತ.ದ).

† ಈ ಪದ್ಯವಾದ ಮೇಲೆ (ಕ.ಗ) ಪ್ರತಿಗಳಲ್ಲಿ ಮುಂದಿನ ಎರಡು ಪದ್ಯಗಳು ಹೆಚ್ಚಾಗಿವೆ :—

ಬವರ ವೆಗ್ಗಳವಾಯಿತೆನೆ ಕೌ
ರವನು ಕರ್ಣನ ಮುಖವ ನೋಡಿದ
ಡವನ ಪೌರುಷಪುಳಿಯಲೀಯದು ಮರಳಲಿಲ್ಲೆನುತ ।
ಅವನಿಪತಿ ಸನ್ನೆಯನು ಮಾಡಲು
ಕವಿವ ನಯನಾಂಬುಗಳನೊರಸುತ
ರವಿ ಸುತನು ಬಲು ಬಿಲ್ಲ ಸೆಳೆದನು ತಿರುವನೇಱಸಿದ ॥

ಆರಯಿದು ಮಗನೆನಿಸುವೀ ಮಮ
ಕಾರವೆಮ್ಮೊಳು ಮೊಳೆತಡಾ ದಾ
ತಾರನುಳಿವೆನ್ನಿಂದ ತಪ್ಪುವುದೆನುತ ಮನದೊಳಗೆ ।
ಕೂರಲಗನಾ ಕರ್ಣ ಬರೆ ಸೆಳೆ
ದಾರಿ ಹಿಂದಣಿನೆಚ್ಚು ಪಾರ್ಥ ಕು
ಮಾರಕನ ಚಾಪವನು ಮುಕ್ಕಡಿಯಾಗಿ ಖಂಡಿಸಿದ ॥ ೩೨ *

ಉಱುವ ಜಯವಧುವೊಕ್ಕತನದಲಿ
ಮುಱಿದ ಕಡ್ಡಿಯಿದೆನಲು ಕರದಿಂ
ಮುಱಿದು ಬಿದ್ದುದು ಚಾಪವಿಂದ್ರ ಕುಮಾರ ನಂದನನ ।
ಬೆಱಗಡರಿ ಮುಖದಿರುಹಿ ಹಿಂದಣಿ
ನಿಱಿದ ಕರ್ಣನ ನೋಡಿ ಮುಖದಲಿ
ಕಿಱುನಗೆಯ ಕೇವಣಿಸಿ ನುಡಿದನು ಬೆರಳನೊಲೆದೊಲೆದು ॥ ೩೩

ಆವ ಶರ ಸಂಧಾನ ಲಾಘವ
ದಾವ ಪರಿ ಮಝು ಪೂತು ಪಾಯಿಕು
ದೇವ ಬಿಲ್ಲಾಳೆಂತು ಕಡಿದ್ಯೆ ಕರ್ಣ ನೀ ಧನುವ ।
ಈ ವಿವೇಕವಿದಾರ ಸೇರುವೆ
ಯಾವಗಹುದಿದು ಹಿಂದೆ ಬಂದೆಸು
ವೀ ವಿಗಡತನ ನಿನಗೆ ಮೆಱೆವುದು ಕರ್ಣ ಕೇಳೆಂದ ॥ ೩೪

ಎನಲು ಲಜ್ಜಿತನಾಗಿ ತಿರುಗಿದ
ನನುವರದಲೀ ಕರ್ಣನಾತನ
ಧನು ಮುಱಿಯೆ ಕೈಕೊಂಡರೀ ದ್ರೋಣಾದಿ ನಾಯಕರು ।
ಕನಕ ರಥವನು ದ್ರೋಣನಾ ಗುರು
ತನುಜ ಸಾರಥಿಯನು ಕೃಪಾಚಾ
ರ್ಯನು ತುರಗವನು ಶಲ್ಯ ಕಡಿದನು ಭಟನ ಠೆಕ್ಕೆಯವ ॥ ೩೫

ಮನದೊಳಗೆ ಕಡುನೊಂದು ಕರ್ಣನು
ಅನುವರದೊಳೀಹದನ ಬೆಸಸಿದ
ನೆನುತ ದುಮ್ಮಾನದಲಿ ದುಗುಡದ ನಯನವಾರಿಯಲಿ ।
ತನುವಿದೇಕೀ ಜಾತ್ಯ ಭೂಪರ
ಮನೆಯೊಳಿಹ ಬಡತನವ ಸುಡಲಿ
ನ್ನೆನುತಕಟ ಮನಗುಂದಿ ಬೈದನು ವಿಧಿಯ ರಾಧೇಯ ॥

* ಈ ಪದ್ಯವು (ಗ) ಪ್ರತಿಯಲ್ಲಿ ಮಾತ್ರ ಇದೆ.

ತುಡುಕುವರೆ ಧನುವಿಲ್ಲ ಮುಂದಡಿ
ಯಿಡಲು ಸಾರಥಿಯಿಲ್ಲ ರಥ ಕಡಿ
ವಡೆದುದಿನ್ನೆಂತೊದಗುವನೊ ಸುಕುಮಾರ ತಾನೆನುತ ।
ಪಡೆ ಬಿಡದೆ ಬೊಬ್ಬಿಱಿಯೆ ಬೆದಱದೆ
ಕಡುಗಿ ಖಡ್ಗವ ಕೊಂಡು ರಿಪುಗಳ
ಕಡಿದು ಹರಹುತ ಬೀದಿವರಿದನು ಕಣನ ಮಧ್ಯದಲಿ ॥ ೩೬

ಈತನಿರೆ ಕಲ್ಪಾಂತ ರುದ್ರನ
ಮಾತು ಜಗಕೇಕೆನಲು ವೈರಿ
ವ್ರಾತವನು ಮುಂಕೊಂಡು ಹೊಯ್ದನು ಹೊಳೆವ ಖಡುಗದಲಿ ।
ಸೋತನೇ ಶಿಶು ಷಡುರಥರ ಕರೆ
ಈತನಾರ್ಕೈ ಹೇಳಿ ಭಯವಿ
ನ್ನೇತಕೆಂದವನೀಶ ಮೂದಲಿಸಿದನು ತನ್ನವರ ॥ ೩೭

ಗೆಲಿದರಭಿಮನ್ಯುವನು ತನ್ನವ
ರೆಲವೊ ತಾ ವೀಳೆಯವನೆನುತವೆ
ಮೆಲು ನಗೆಯಲತಿರಥರ ಜಱೆದನು ಕೌರವರ ರಾಯ ।
ಬಳಿಕ ಎಡ ಬಲ ವಂಕದಲಿ ಮಂ
ಡಳಿಸಿ ಮೋಹರಿಸಿತ್ತು ರಿಪು ಬಲ
ಜಲಧಿ ವಡಬನೊಳಾಂತು ತಾಗಿದರಂದು ಷಡುರಥರು ॥ ೩೮ *

ತುಡುಕಿದವು ತೇಜಿಗಳು ವಾಘೆಯ
ಗಡಣದಲಿ ತೂಳಿದವು ದಂತಿಗ
ಳೆಡ ಬಲದ ಬವರಿಯಲಿ ಮುತ್ತಿತು ಮತ್ತೆ ರಿಪು ನಿಕರ ।
ಕಡುಮನದ ಕಾಲಾಳು ಕಱೆದುದು
ಖಡುಗ ಧಾರೆಯನೀತನಳವಿಯ
ಕೆಡಿಸಿ ಮೇಲಿಕ್ಕಿದರು ಭೂಪನ ಮೊನೆಯ ನಾಯಕರು ॥ ೩೯

ವಿಷದ ಹುಟ್ಟಿಯೊಳೆಱಗಿ ನೊಣ ಜೀ
ವಿಸುವುದೇ ಶಿವ ಶಿವ ಕುಮಾರನ
ಮುಸುಡ ಮುಂದಕೆ ಬಿದ್ದು ಬದುಕುವುದುಂಟೆ ಭಟ ನಿಕರ ।

* ಈ ಪದ್ಯವು (ತ) ಪ್ರತಿಯಲ್ಲಿಲ್ಲ.

ಕುಸುರಿದಱಿದನು ಕರಿ ಘಟೆಯನಿ
ಪ್ಪಸರದಲಿ ಕಾಲಾಳು ಕುದುರೆಗ
ಳಸುವ ಸೂಱೆಯ ಬಿಟ್ಟನಂತಕ ದೂತ ಸಂತತಿಗೆ ॥ ೪೦

ಅರಿ ಭಟನ ಬೊಬ್ಬೆಗಳ ಮೊಳಗಿನೊ
ಳರುಣ ಜಲ ವರುಷದಲಿ ರಿಪುಗಳ
ಕೊರಳ ಬನದಲಿ ಕುಣಿದುವೀತನ [1]ಖಡ್ಗವನಕೇಕಿ[1] ।
ಸುರಿವ ಖಂಡದ ರಕುತ ಧಾರೆಗೆ
ತರ ತರದಿ ಬಾ[2]ಯ್ದೆಗೆದು[2] ಶಾಕಿನಿ
ಯರ ಸಮೂಹವು ಬಳಿಯಲೈದಿತು ಪಾರ್ಥ ನಂದನನ ॥ ೪೧

ಕರುಳ ಹೂ ಗೊಂಚಲಿನ ಮೂಳೆಯ
ಬಿರಿ ಮುಗುಳ ನವ ಖಂಡದಿಂಡೆಯ
ಕರತಳದ ತಳಿರೆಲೆಯ ಕಡಿದೋಳುಗಳ ಕೊಂಬುಗಳ ।
ಬೆರಳ ಕಳಿಕೆಯ ತಲೆಯ ಫಲ ಬಂ
ಧುರದ ಘೂಕ ಧ್ವಾಂಕ್ಷ ನವ ಮಧು
ಕರದ ರಣವನವೆಸೆದುದೀತನ ಖಡ್ಗ ಚೈತ್ರದಲಿ ॥ ೪೨

ವೈರಿ ವೀರ ಪ್ರತತಿಗಮರೀ
ನಾರಿಯರಿಗೆ ವಿವಾಹವನು ವಿ
ಸ್ತಾರಿಸುವ ಸಮಯದೊಳಗಾಂತ ಸಿತಾಕ್ಷತಾವಳಿಯ ।
[3]ತಾರಕಿಗಳೆಸೆದಭ್ರವೆನೆ[3] ರಿಪು
ವಾರಣದ ಮಸ್ತಕದ ಮುತ್ತುಗ
ಳೋರಣಿಸಲೊಪ್ಪಿದುದು ಖಡ್ಗ ಸುರೇಂದ್ರ ಸುತ ಸುತನ ॥ ೪೩

ಶಾಕಿನಿಯರೋಕುಳಿಯ ಧಾರೆಯ
ಚೀಕೊಳುವೆಯೋ ಜವನ ಜಳ ಜಂ
ತ್ರಾಕರುಷಣವೊ [4]ರಕುತ ಲತೆಗಳ[4] ಕುಡಿಯ [5]ಕೊನರು[5]ಗಳೊ ।
ನೂಕಿ ಕೊಯ್ದೊರಳುಗಳ ಮುಂಡದ
ಮೂಕಿನಲಿ ನೆಗೆದೊಗುವ ನೆತ್ತರು
ನಾಕವನು ನಾದಿದುದೆನಲು ಸವಱಿದನು ಪರ ಬಲವ ॥ ೪೪

---

[1] ಖಡ್ಗಕೇಣಿಯಲಿ (ಕ), ಖಡ್ಗದಾವಾಗ್ನಿ (ಗ), ವೀರಖಡ್ಗ ಶಿಖಿ (ದ). [2] ಯೊಡ್ಡಿ (ಬ). [3] ಧಾರುಣಿಯೊಳುದುರಿದವೆನಲು (ಕ), ತಾರಕಿತವಾದಭ್ರವೆನೆ (ಟ.ತ.ದ.ನ). [4] ಹೂತಲತೆಯೋ (ತ). [5] ಕೊಂಬು (ಕ.ತ.ದ.ನ), ಕೊಂಕು (ಚ.ಪ.ಬ).

ಅಟ್ಟಿ ಹೊಯ್ದನು ದಂತಿಗಳ ಹುಡಿ
ಗುಟ್ಟಿದನು ವಾಜಿಗಳ ತೇರಿನ
ಥಟ್ಟುಗಳ ಸೀಳಿದನು ಮಿಗೆ ಕಾಲಾಳನಸಿಯುಱೆದ ।
ಕೆಟ್ಟು ಬಿಟ್ಟೋಡಿದುದು ಭಟನಱೆ
ಯಟ್ಟಿದನು ರಣದೊಳಗೆ [1]ರಾಯ[1] ಘ
ರಟ್ಟ ಪಾರ್ಥನ ತನಯ ಕೊಂದನು ಖಡ್ಗ [[2]ಮನ[2]]ದಣಿಯೆ ॥ ೪೫

ಸೀಳಿದನು ಸೌಬಲನೊಳಿಪ್ಪ
ತ್ತೇಳನಾ [3]ಮಾದ್ರೇಶ[3]ರೊಳು ಹದಿ
ನೇಳನಗ್ಗದ ರವಿ ಸುತನ ಮಂತ್ರಿಗಳೊಳೈವರನು ।
ಮೇಲೆ [4]ಕೇರಳರೊಳಗೆ[4] ಹತ್ತು ನೃ
ಪಾಲರನು ಕೌಸಲ ಯವನ ನೇ
ಪಾಳ ಬರ್ಬರರೊಳಗೆ ಕೊಂದನು ಹತ್ತು ಸಾವಿರವ ॥ ೪೬

ಹಸುಳೆಯೆನ ಬಹುದೇ ಮಹಾದೇ
ವಸಮ ಬಲ ಬಾಲಕನೆನುತ ಚಾ
ಳಿಸಿತು ಪಡೆಯಲ್ಲಲ್ಲಿ ತಲ್ಲಣಿಸಿದರು ನಾಯಕರು ।
ಮುಸುಡ ತಿರುಹುತ ಮಕುಟ ವರ್ಧನ
ರುಸುರಲಮ್ಮದೆ ಸಿಕ್ಕಿ ಭೂಪನ
ನುಸುಳುಗಂಡಿಯ ನೋಡುತಿರ್ದರು ಕೂಡೆ ತಮತಮಗೆ ॥ ೪೭

ತುಡುಕಲಮ್ಮುವರಿಲ್ಲ ಬಲದಲಿ
ಮಿಡುಕಲಮ್ಮುವರಿಲ್ಲ ರಕುತದ
ಕಡಲೊಳಗೆ ಬೆಂಡೆದ್ದು ನೆಗೆದುದು ಕೋಟಿ ಪಾಯ ದಳ ।
ಸಿಡಿಲು ಜಂಗಮವಾಯ್ತೊ ಪ್ರಳಯದ
ಮೃಡನು ಬಾಲಕನಾದನೋ ಕೊಲೆ
ಗಡಿಕನಹುದೋ ಕಂದ ಎಂದನು ಕೌರವರ ರಾಯ ॥ ೪೮

ಧನು ಮುಱಿದ ಬಳಿಕಿಮ್ಮಡಿಸಿತೀ
ತನ ಪರಾಕ್ರಮವೆನುತ ಸೇನಾ
ವನಧಿ ಜಱೆದುದು ಭಟರು ಹರಿದರು ಬಿಟ್ಟ ಮಂಡೆಯಲಿ ।

---

[1] ವೈರಿ (ಚ.ನ.ಪ). [2] ಸಂ (ಕ), ಹಸಿ (ಗ.ತ.ಟ.ನ.ಬ), ಮಸೆ (ಚ.ಪ). [3] ಕೈಕೆಯ (ಗ.ಚ.ಪ). [4] ಮಾದ್ರೇಯರಲಿ (ಗ.ಚ.ಪ).

ಜನಪತಿಯು ಕಟ್ಟಳವಿಯಲಿ ರವಿ
ತನುಜನಡ್ಡೈಸಿದನು ಫಡ ಹೋ
ಗೆನುತ ನಾರಾಚದಲಿ ಮುಸುಕಿದನರ್ಜುನಾತ್ಮಜನ ॥ ೪೯

ಎಳೆಯ ರವಿ ರಶ್ಮಿಗಳು ರಕ್ತೋ
ತ್ಪಲದೊಳಗೆ [1]ಹೊಳೆವಂತೆ[1] ಹೊನ್ನರೆ
ಬಳಿದ ಪಿಳುಕನೆ ಕಾಣಲಾದುದು ಭಟನ ಕಾಯದಲಿ ।
ಒಲೆದು ಕೇಸರಿ ಹೊಯ್ವವೋಲ
ವ್ವಳಿಸಿ ಕರ್ಣನ ಹಯ ರಥವನ
ಪ್ಪಳಿಸಿ ಮುರಳುವ ಲಾಗಿನಲಿ ಖಂಡೆಯವ ಖಂಡಿಸಿದ ॥ ೫೦

ಕರದ ಕರವಾಳುಡಿಯು ಬಿಡೆ ಹ
ಲ್ಮೊರೆದು ಭರದಲಿ ಗದೆಯ ಕೊಂಡ
ಬ್ಬರಿಸಿ ಕೋಪದಲಗಿದು ಹರಿಗೆಯ ಹಿಡಿದು ಮುಂದಣಿಗೆ ।
ಅರರೆ ಸಮ್ಮುಖವಾಗೆನುತ ಸಂ
ಗರದೊಳುರವಣಿಸಿದನು ಕರ್ಣನ
ತೆರಳಿಚಿದನೈನೂಱು ಹಜ್ಜೆಯಲಿಂದ್ರ ಸುತ ಸೂನು ॥ ೫೧

ಗದೆಯ ಹೊಯ್ಲಲಿ ನೊಂದು ಕೋಪದೊ
ಳದಿರೆನುತ ಸೈಗೆಡೆದ ರೋಮದ
ಹೊದಱುಗಳ ಬಿಡುಗಣ್ಣ ಕೆಂಪಿನ ಕುಣಿವ ಮೀಸೆಗಳ ।
ಕುದಿದ ಹೃದಯದ ಕಾದ ದೇಹದ
ಕದನಗಲಿ ರವಿ ಸೂನು ಮೇಲಿ
ಕ್ಕಿದನು ಫಡ ಹೋಗದಿರು ಹೋಗದಿರೆನುತ ತೆಗೆದೆಚ್ಚ ॥ ೫೨

ಶರಮಯವು ಸರ್ವಾಂಗವಿನ್ನೀ
ಸರಳು ನೆಡಲಿಂಬಿಲ್ಲ ಮೈಗಳೊ
ಳಱಿಯನದನಭಿಮನ್ಯು ಕರ್ಣನ ಮೇಲುವಾಯಿದನು ।
ತರಹರಿಸಿ ಕೆಲ ಸಿಡಿದು ರಿಪು ಭಟ
ನುರವನುದರವನೆಡ ಬಲನ ಕಿ
ಬ್ಬರಿಯನೆಚ್ಚನು ಕರ್ಣ [2]ನೂಱೈವತ್ತು[2] ಬಾಣದಲಿ ॥ ೫೩

---

[1] ಕವಿವಂತೆ (ಕ.ಗ.ಚ.ಪ).　[2] ನಱುವತ್ತೈದು (ಚ.ದ.ನ) ನಱುವತ್ತೊಂದು (ಟ.ತ).

ಸರಳು ನೆಡಲುಬ್ಬೆದ್ದು ಬೊಬ್ಬಿಱಿ
ದುರವಣಿಸಿ ಬರೆ ದಿವ್ಯ ಶರದಲಿ
ಕರವೆರಡ ಹರಿಯೆಚ್ಚಡಾಗಳೆ ಕೆಡೆದವವನಿಯಲಿ ।
ಇರವೆ ಗಹಗಹಿಸಿದನು ಕೇಳಲೆ
ಮರುಳೆ ಸೂತಜ ಕೈಮುಱಿಯೆ ಸಂ
ಗರದ ಸಿರಿ ಹಿಂಗುವಳೆ ತನ್ನನೆನುತ್ತ ಗರ್ಜಿಸಿದ ॥ ೫೪

ಸುರಿವ ರಕುತದ ಸರಿಯ ಸೆಱಗಿನೊ
ಳೊರಸಿ ರಥದಚ್ಚುಗಳನೊದೆದನು
ತಿರುಹಿ ಗಾಲಿಯ ತೆಗೆದು ಮುಂಗೈಗೊಂಡು ನಡೆ ನಡೆದು ।
ಅರಿ ಬಲವನಿಡೆ ಮುಗ್ಗಿ ಕೆಡೆದುದು
ತುರಗವಜಿಗಿಜಿಯಾದುದಿಭ ತತಿ
ಯುರುಳಿದವು ಹೊರಳಿದವು ಹೂಣಿಗರಟ್ಟೆ ಸಮರದಲಿ ॥ ೫೫

ಹರಿಯ ಚಕ್ರದ ಸತ್ವವೀತನ
ಧುರದೊಳಾಯ್ತೆನೆ ರಥದ ಚಕ್ರದೊ
ಳರಿ ಬಲವನಿಡೆ ಮುಗ್ಗಿ ಕೆಡೆದುದು ಬಹಳ ತಳತಂತ್ರ ।
ಬಿರುದರಾನುವರಿಲ್ಲ ಷಡುರಥ
ರುರುವಣಿಯು ಹಿಂದಾಯ್ತು ರಾಯರ
ಗುರುವ ಕಂಡವರಿಲ್ಲೆನುತ ಕುರುರಾಯ ಚಿಂತಿಸಿದ ॥ ೫೬

ಮನದ ಖತಿ ಹೊಗರೇಱೆ ದುಶ್ಶಾ
ಸನನ ಮಗನಿದಿರಾಗಿ ಖಡುಗದ
ಮೊನೆಯ ಚೂರಿಸಿ ದಂಡವಲಗೆಯ ತೊಡೆಯೊಳೊದಱಿಸುತ ।
ತನಗೆ ಮೃತ್ಯುವ ಕರೆವ ವೋಲ
ರ್ಜುನನ ಕುಮಾರನ ಕರೆದು ಹಳಚಿದ
ನನಿಮಿಷಾವಳಿ ಪೊತು ಪಾಯ್ಕೆನೆ ಹೆಣಗಿದರು ಭಟರು ॥ ೫೭

ಗಾಲಿ ತೀರಿದವೆಂದು ಬಂದನೆ
ಕಾಳೆಗಕೆ ತಪ್ಪೇನೆನುತ ಕರ
ವಾಳಿನಾತನ ಬಗೆಯದೊಳಹೊಕ್ಕೆಱಗಿದನು ಶಿರವ ।
ಮೇಲುವಲಗೆಯಲಣೆದು ಹಾಯ್ದನು
ಬಾಲಕನ ಘಾಯವನು ನಸು ನಗು
ತೇಳಿಸುತ ದಂಡೆಯಲಿ ಕಳೆದನು ಶಿವಿದನವನುರವ ॥ ೫೮

ಕರಹತಿಗೆ ಧಡಧಡಿಸಿ ತಿಱ್ಱನೆ
ತಿರುಗಿ ಬೀಳುತ ಧೈರ್ಯದಲಿ ಹೊಡ
ಕರಿಸಿ ಹೊಱಬಿನೊಳೆದ್ದು ಹೊಯ್ದನು ಪಾರ್ಥನಂದನನ ।
ಅರಿ ಕೃಪಾಣದ ಘಾಯವನು ತರ
ಹರಿಸಲಱಿಯದೆ ಬೀಳುತಹಿತನ
ನೆಱಗಿದನು ಬಳಿಕವನಿಗೊಱಗಿದರಾ ಕುಮಾರಕರು ॥ ೫೯

ಕಾಳುಕಿಚ್ಚೆದ್ದಡವಿಯನು ಕುಡಿ
ನಾಲಗೆಯೊಳಳವಡಿಸಿ ದಳ್ಳುರಿ
ಜ್ವಾಲೆ ತಗ್ಗಿದವ್ಪೋಲು ಗಗನದ ಮುಗಿಲ ಮೋಹರವ ।
ಧಾಳಿಯಲಿಯಱೆಯಟ್ಟಿ ಸುಂಟುರು
ಗಾಳಿಯುರವಣೆ ನಿಂದವ್ಪೋಲು ಸುರ
ಪಾಲ ತನಯನ ತನಯನಸ್ತ್ರಮಿಸಿದನು ರಣದೊಳಗೆ ॥ ೬೦

ತೋಳ ತಲೆಗಿಂಬಿನಲಿ ಕೈದುಗ
ಳೋಳಿಗಳ ಹಾಸಿನಲಿ ತನ್ನಯ
ಕಾಲ ದೆಸೆಯಲಿ ಕೆಡೆದ ಕೌರವ ಸುತರು ನೂರ್ವರಲಿ ।
ಬಾಲಕನು ಬಳಲಿದನು ಸಮರದ
ಲೀಲೆಯಲಿ ಕುಣಿ ಕುಣಿದು ಬಸವಳಿ
ದಾಳುಗಳ ದೇವನು ಮಹಾಹವದೊಳಗೆ ಪವಡಿಸಿದ ॥ ೬೧ *

ಬಿಗಿದ ಹುಬ್ಬಿನ ಬಿಟ್ಟ ಕಂಗಳ
ಹೊಗರು ಮೋರೆಯ ಹಿಣಿಲ ಮಂಡೆಯ
ಜಿಗಿಯ ರಕುತದ ಜೋಱಿನೊಡಲಿನ ತುಱುಗಿದಂಬುಗಳ ।

---

* ಈ ಪದ್ಯವಾದಮೇಲೆ (ತ.ನ) ಪ್ರತಿಗಳಲ್ಲಿ ವಿನಾ ಉಳಿದ ಪ್ರತಿಗಳಲ್ಲಿ ಈ ಕೆಳಗಿನ ಪದ್ಯವು ಹೆಚ್ಚಾಗಿದೆ :—

ಸಸಿಯ ಬಿಂಬವ ಬಗೆಯದದಟನ
ಮುಸುಡು ಕಂದದು ಮೆಯ್ಯ ಧೀಧಿತಿ
ಮಸುಳಿಸದು ಕಣ್ಣಾಲಿ ಕರಗದು ಕಾಯ ಜವಗೆಡದು ।
ಎಸಕ ಮಸುಳದು ಸಮರದಲಿ ಪೌ
ರುಷವು ಮಾಡಿ ವಿರೋಧಿರಾಯರ
ಕುಸುರಿದಱಿದನು ಕೆಡಹಿ ಪಾರ್ಥನ ಸೂನು ರಂಜಿಸಿದ ॥

ಹೆಗಲ ಕೊಯ್ಲಿನ ತಗ್ಗಿನಲಿ ಸೈ
ನೆಗೆದ ರೋಮದ ವಿಕ್ರಮಾಗ್ನಿಯ
ತಗಹು ಬಿಡದಭಿಮನ್ಯು ಮೆಱೆದನು ಶಸ್ತ್ರ ಶಯನದಲಿ ॥ ೬೨ *

ಸಾವ ಹರಯವೆ ಎನುತ ಗಗನದ
ದೇವ ತತಿ ಮಱುಗಿತ್ತು ಶಕ್ರನ
ಸಾವಿರಾಲಿಯೊಳೊಱತೆ ಮಸಗಿತು ಪೌತ್ರ ಶೋಕದಲಿ ।
ತಾವು ಷಡುರಥರೊಬ್ಬ ಹಸುಳೆಯ
ಹೇವವಿಲ್ಲದೆ ಕೊಂದರೋ ಸುಡ
ಲಾವ ವೀರರು ಕೌರವಾದಿಗಳೆಂದುದಮರ ಗಣ ॥ ೬೩

ಮ[1][ಗುವು][1] ವೇಷವ ಧರಿಸಿ ದೂರದ
ಲಗಲಿ ಹೋಗಲು ತನ್ನ ಚಿತ್ತಕೆ
ಧಗೆಯ ಡಾವರವಾಯ್ತು ತನಗೊಳಗಾಯ್ತು ಪರಿತಾಪ ।
ಮಗನ ಮರಣದಲೆಂತು ಜೀವವ
ಬಗೆವಳಕಟ ಸುಭದ್ರೆಯೆನುತವೆ
ದೃಗುಜಲವ ಬೆರಳಿಂದ ಮಿಡಿದರು ಗೌರಿದೇವಿಯರು ॥ ೬೪

ಹಲವು ಗಜಗಳು[2] ಸಿಂಹ ಶಿಶುವನು
ಗೆಲಿದ ಪರಿಯಂತಾಯ್ತು[2] ಹಾವಿನ
ಬಳಗ ಗರುಡನ ಮಱಿಯ ಮುಱಿದವೊಲಾಯಿತಕಟೆನುತ ।
[3]ಅಳಲಿದುದು ಸುರ ಕಟಕವವನಿಯೊ[3]
ಳಿಳಿದರಪ್ಸರ ಗಣಿಕೆಯರು ಕೋ
ಮಳನ ತಂದರು ವಾಸವನ ಸಿಂಹಾಸನದ ಹೊರೆಗೆ ॥ ೬೫

---

* ಈ ಪದ್ಯವಾದ ಮೇಲೆ (ಗ) ಪ್ರತಿಯಲ್ಲಿ ಕೆಳಗಿನ ಪದ್ಯವು ಹೆಚ್ಚಾಗಿದೆ :—

ಆವನಿವನನು ಗೆಲುವ ಮತ್ತಿ
ನ್ನಾವ ವೀರನುಪ್ಪೋಲುವನು ಮ
ತ್ತಾವ ರಥಿಕನು ಸರಿಯಹನು ಫಲುಗುಣನ ನಂದನಗೆ ।
ಭಾವಿಸುತ ತಲೆದೂಗಿ ಮಱುಗುತ್ತ
ಮೂವರಾರಥ ಮುಱಿದರಲ್ಲದೆ
ಆವನೀ ಕ್ಕೈಚಳಕಕೊದಗುವನೆಂದುದಮರಗಣ ॥

[1] ಗನು (ಸ), [2] ಪೊಂದಾಗಿ ಸಿಂಹದ ಮಱಿಯ ಕೊಂದಂತಾಯ್ತು (ಕ), ಪೊಂದಾಗಿ ಸಿಂಹವ ಗೆಲಿದ ಪರಿಯಂತಾಯ್ತು (ಚ.ದ.ನ.ಪ.ಬ), ಪೊಂದಾಗಿ ಸಿಂಹದ ಕಳಭವನು ಗೆಲಿದಂತೆ (ಟ). [3] ಹಲುಬಿದನು ಸುರನಾಥನವನಿಯೊ (ಪ.ಬ.)

ಧುರದ ಪ್ರಳಯ ಕೃತಾಂತನನು ಪರಿ
ಹರಿಸಿದೆವು ಮೃತ್ಯುವಿನ ಪಾಶದ
ಕೊರಳ ಬಳಚಿದೆವೆನುತ ಕೌರವ ಬಲದ ನಾಯಕರು ।
ಶಿರವ ತಡಹುತ ತಮ್ಮ ಶಿಬಿರಕೆ
ತಿರುಗಿದರು ಬಾಲಕನನೀಕ್ಷಿಸ
ಲರಿದು ತನಗೆಂಬಂತೆ ರವಿ ಜಾಱಿದನು ಪಶ್ಚಿಮಕೆ ॥ ೬೬

ಸೋಲವರಿಗಳಿಗೆಂದು ಹರುಷವ
ತಾಳದಿರು ಧೃತರಾಷ್ಟ್ರ ಕೃಷ್ಣನ
ಸೋಲವದು ಪಾಂಡವರು ಸೋತವರಲ್ಲ ನಂಬುವುದು ।
ಸೋಲವಿದು ನಾಳಿನಲಿ ಪ್ರಳಯದ
ಕಾಲ ಕೌರವ ಕುಲಕೆ ದಿಟವಿದು
ಸೋಲವುಂಟೇ ವೀರ ನಾರಾಯಣನ ಭಕ್ತರಿಗೆ ॥ ೬೭

ಆರನೆಯ ಸಂಧಿ ಮುಗಿದುದು.

ಏಳನೆಯ ಸಂಧಿ

ಸೂಚನೆ ॥ ಅರಿ ಮಹೇಶ[1]ನುದಾರ ವೀರನು[1]
ವರ ಕಿರೀಟಿ ಕುಮಾರ ಧೀರನು
ಸುರರ ನಗರಿಗೆ ನಡೆಯೆ ಹಲುಬಿದನಂದು ಯಮ ಸೂನು ॥

ತೆಗೆದುದರಿ ಪರಿವಾರ ಕಹಳಾ
ದಿಗಳ ಸನ್ನೆಯಲುಭಯ ಬಲ ಕಾ
ಳೆಗವನುಳಿದುದು ಬಂದು ಹೊಕ್ಕರು ತಮ್ಮ ಪಾಳಯವ ।
ಮಗನು ರಣದಲಿ ಮಡಿದ ಹದ ಬೀ
ಡುಗಳೊಳಾದುದು ವಾರ್ತೆ ದೂತರು
ದುಗುಡ ಭರದಲಿ ಬಂದು ಹೊಕ್ಕರು ರಾಜ ಮಂದಿರವ ॥ ೧

ಅವನಿಪನ ಖಂಡೆಯವ ನಕುಲನ
ಪವನ ಸುತನ ಕಠಾರಿಯನು ನೃಪ
ನಿವಹದಾಯುಧ ತತಿಯನೊಯ್ಯನೆ ತೆಗೆದು ಬೈಚಿಟ್ಟು ।
ಬವರದಲಿ ಸುತನಳಿದನೋ ಕೌ
ರವರ ಕೈವಶವಾದನೋ ಸಂ
ಭವಿಪ ಹದನೇನೆಂಬ ನೃಪತಿಯ ಕಂಡರೈತಂದು ॥ ೨

ಅವನಿಪಾಲ ಕುಮಾರ ಕಂಠೀ
ರವನು ರಣದಲಿ ಬೀದಿವರಿದು
ತ್ಸವದಲಹಿತರನಿಱಿದು ಕೌರವ [2]ರಾಯ ನಂದನರ[2] ।
ಜವನ ನಗರಿಗೆ ಕಳುಹಿ ತಾ ವಾ
ಸವನ ಸಿಂಹಾಸನವನಡರುವ
ತವಕದಲಿ ಜಾಱಿದನೆನಲು ಶಿವ ಎನುತ ಬಸವಳಿದ ॥ ೩

ಕುಲಿಶ ಹತಿಯಲಿ ಕುಲ ಶಿಲೋಚ್ಚಯ
ವಿಳೆಗೆ ಕೆಡೆವಂದದಲಿ ನಿಜ ಸುತ
ನಳಿದ ವಾರ್ತಾವಚನದುಪಟಳಕವನಿ ಪಾಲಕನು ।

[1] ಕುಠಾರಪೌರುಷ (ಗ), ರುಗಳವಿಭಾಡಿಸಿ (ಬ). [2] ಸುತರ ನೂರ್ವರನು (ಗ.ಚ.ಪ).

ಮಲಗಿದನು ಮೈಮಱೆದು ಮಹಿಮಂ
ಡಳಿಕರೊಳು ಗುಜುಗುಜಿನೊಳಿರೆ ಕಳ
ವಳಿಕೆ ಮೊಳೆತುದು ಕಟಕದಲಿ ದುಮ್ಮಾನಮಯವಾಯ್ತು ‖ ೪

ಅರಮನೆಯ ಗಜಬಜದ ಹದನಱಿ
ದರಸನಪಗತನೆಂದು ಪಾಳಯ
ದಿರುಳು ನಡುಗಿತು ತೊಡಗಿದವು ಕೈಸೂಱೆ ಕೆಲ ಕಡೆಯ ।
ನೆರವಿ ಮಸಗಿತು ಕೆತ್ತವಂಗಡಿ
ದುರುಳರಬ್ಬರಿಸಿದರು ಮುಸುಕಿನ
ಸುರಗಿ ಕೆತ್ತವು ಮಂದಿ ದಳವುಳವಾಯ್ತು ನಿಮಿಷದಲಿ ‖ ೫

ಹೊಳಲು ತಲೆಕೆಳಕಾಯ್ತು ಹುಯ್ಯಲು
ತಳಿತುದೊಳತೋಟಿಯಲಿ ಕೆತ್ತವು
ನಿಳಯ ನಿಳಯ ಕವಾಟವುದ್ರೇಕಿಗಳ ಮಯವಾಯ್ತು ।
ಎಲೆಲೆ ಕೆಟ್ಟುದು ಕಟಕವೆಂದು
ಮ್ಮಳಿಸಿದರು ಸಚಿವರು ಮಹೀಪತಿ
ಯುಳಿವನಱಿಯಲು ನಾಸಿಕದಲಾರೈದರುಸುರುಗಳ ‖ ೬

ಉರಿಯ ಚೂಣಿಯಲುಸುರು ಮೂಗಿನ
ಲುರವಣಿಸುತಿದೆ ಧರಣಿಪತಿ ಸು
ಸ್ಥಿರನು ಹೊಯ್ ಹೊಯ್ ಹೊಳಲ ಬೆದಱಿಸಿ ಸುಲಿವ ಬಣಗುಗಳ ।
ಹರಿಯೆನಲು ಹೊಱವಂಟು ಹೊಯ್ದರು
ತುರಗ ಗಜ ಘಟೆ ಬೀದಿವರಿದವು
ನೆರವಿದೊಳಸಿನ ಮನ್ನೆಯರ ಸೆಣಸಿದರು ಶೂಲದಲಿ ‖ ೭

ಹೊಳಲ ಗಜಬಜವಡಗಿತರಮನೆ
ಯೊಳಗೆ ಪಸರಿಸಿತತುಳ ಶೋಕದ
ಜಲಧಿ ಭೂಪಾಲಕನ ಸ್ಮರಣೆಗಾಯ್ತು ಮಹನವಮಿ ।
ಒಳಗುರಿವ ಹಸಿಮರನ ತುದಿಯಲಿ
ಜಲವೊಗುವವೊಲು ಹೃದಯ ಶಿಖಿಯುಱೆ
ತಳಿತು ಲೋಚನ ವಾರಿ ತುಳುಕಿತು ಪವನಜಾದಿಗಳ ‖ ೮

ಮಱೆವುತೆಚ್ಚಱುತವನಿಪತಿ ಕರೆ
ತರುಣನಾವೆಡೆ ರಾಯ ಗಜ ಕೇ
ಸರಿಯದಾವೆಡೆ ಕಂದ ಬಾಯೆನುತಪ್ಪಿದನು ಬಯಲ ।

ಹೊರಳಿದನು ಹುಡಿಯೊಳಗೆ ಸಲೆ ಕಾ
ತರಿಸಿದನು ಮೋಹಾಂಧಕಾರಕೆ
ಕರಣವನು ಕೈಸೂಱೆಗೊಟ್ಟನು ನಿಜದೊಳೆಚ್ಚಱದೆ ॥ ೯

ಬಂದು ಫಲುಗುಣನೆನ್ನ ಮೋಹದ
ಕಂದನಾವೆಡೆಯೆಂದಡಾನೇ
ನೆಂದು ಮಾಱುತ್ತರವ ಕೊಡುವೆನು ವೈರಿ ನಾಯಕರು ।
ಕೊಂದರೆಂಬೆನೊ ಮೇಣು ನಾನೇ
ಕೊಂದೆನೆಂಬೆನೊ ಶಿವ ಮಹಾದೇ
ವೆಂದು ಪುತ್ರ ಸ್ನೇಹ ಸೌರಂಭದಲಿ ಹಲುಬಿದನು ॥ ೧೦ *

ಅರಮನೆಯ ಗಜಬಜವ ಕೇಳಿದು
ದೊರೆಯೊಳಾವವನಳಿದನಕಟೆಂ
ದರಸಿಯರು ಬೆಸಗೊಳಲ್ ದ್ರೌಪದಿಗಱುಹಿದರು ಹದನ ।
ಉರಿಯ ಡಾವರವೆಳೆಯ ಬಾಳೆಯ
ಬೆರಸುವಂತಿರೆ ರಾಯ ಕುವರನ
ಮರಣ ವಾರ್ತೆಯನಾ ಸುಭದ್ರಾ ದೇವಿ ಕೇಳಿದಳು ॥ ೧೧ †

---

* ಹತ್ತನೆಯ ಪದ್ಯವಾದಮೇಲೆ (ಗ) ಪ್ರತಿಯಲ್ಲಿ ಈ ಕೆಳಗಿನ ಪದ್ಯವು ಹೆಚ್ಚಾಗಿದೆ :—

ಅಗಲಿದನು ಅಭಿಮನ್ಯು ಮೋಹದ
ಮಗನು ಶೋಕೋದ್ರೇಕದಲಿ ಕ
ಣ್ಣೊಗುವ ಜಲಧಾರೆಯಲಿ ಧಾರಾವರುಷವಾಗಿರಲು
ಮೊಗಕೆ ಸೀರೆಯನಿಕ್ಕಿ ಧರ್ಮಜ
ದುಗುಡದಲಿ ಭೀಮಾದಿಗಳು ನೆರೆ
ಬೆಗಡುಗೊಂಡುದು ಶೋಕದಾವಾನಳನಪುರವಣಿಗೆ ॥

† ಹನ್ನೊಂದನೆಯ ಪದ್ಯವಾದಮೇಲೆ (ಗ.ಪ.) ಪ್ರತಿಗಳಲ್ಲಿ ಈ ಕೆಳಗಿನ ಪದ್ಯವು ಹೆಚ್ಚಾಗಿದೆ :—

ಅಳಿದನಿಂದಭಿಮನ್ಯುವೆನೆ ಕೋ
ಮಳಿನಿವಾಯೆಂದೆನುತ ಎದೆ
ಯಲಗು ಕೊಂಡಂತಬಲೆಯುವನಿಯ ಹತ್ತಿ ಬಸವಳಿಯೆ ।
ಅಳಲ ಕಡಲೊಳು ಮೂಡಿ ಮುಳುಗಿದ
ಳುಲುಹಗಡೆ ಕಂಬನಿಯು ಸುರಿಯಲು
ಲಲನೆ ನೆನೆದಳು ಶೋಕ ಮಿಗೆ ಸಂತಾಪ ಸಮನಿಸಲು ॥

ತೆಳುವಸುಱಿ ಬಿಱುವೊಯ್ಲ ಮುರಜದ
ಬಳಲ ಮುಡಿಯುರಳುಗಳ ಮುತ್ತಿಗೆ
ಯಳಿರವದ ಭಾರಣೆಯ ಹಾಹಾರವದ ಕಾಯದಲಿ ।
ಲಲನೆ ಬರೆ ಚೆಲುವಾಯ್ತು ಧರ್ಮಜ
ನಳಲು ಮಿಗೆ ಕೊಂಡಿರಲು ನಾಟ್ಯದ
ಕಳನ [1]ಗೆಲದಿರ[1]ಳೆನಲು ಬಂದಳು ದ್ರೌಪದಾ ದೇವಿ ॥ ೧೨

ಅಳಲ ಶಿಖಿಯಲಿ ಬಾಡಿದಾನನ
ಜಲರುಹದ ಕಡುವೇದನೆಯ ಕಳ
ಕಳದ ಹಾಹಾ ರವದ ರೌದ್ರೆ ಸುಭದ್ರೆ ನಡೆತಂದು ।
ನೆಲಕೆ ಧೊಪ್ಪನೆ ಕೆಡೆದು ಸಭೆಯಲಿ
ಹಲುಬಿದಳು ಕೊಳುಗುಳಕೆ ಕಂದನ
ಕಳುಹಿದವರಿಗೆ ಸಂದುದೇ ಪರಿಣಾಮವೆಂದೆನುತ ॥ ೧೩

ಎಲೆ ಯುಧಿಷ್ಠಿರ ದೇವ ಸಾಲದೆ
ಕೆಲನ ಮೆಚ್ಚಿಸುವಳಲು ಲೋಚನ
ಜಲವ ತೊಡೆಯ್ಯೊ ಭೀಮ ಬಲ್ಲೆನು ನಿಮ್ಮ ನೆನಹುಗಳ ।
ಅಳಲದಿರಿ ಸಹದೇವ ನಕುಳರು
ನಿಲಿಸಿರೈ ನಿಮ್ಮಿಷ್ಟ ಸಿದ್ಧಿಯ
ಬೆಳಸು ಫಲವಾಯ್ತೇಕೆ ನೋವಿನ್ನೆಂದಳೆಂದುಮುಖಿ ॥ ೧೪

ಮಗನು ಪಂಚ ದ್ರೌಪದೇಯರ
ಬಗೆಯನೆನ್ನವನಿರಲು ರಾಜ್ಯವ
ಹೊಗಿಸಲನುವಿಲ್ಲೆಂದು ಕಂದನ ರಣಕೆ ನೂಕಿದಿರಿ ।
ಬಗೆಯೊಲವು ಫಲವಾಯ್ತಲಾ ಕಾ
ಳೆಗವ ಗೆಲಿದ್ಯೆವರು ಕುಮಾರರು
ಹೊಗಿಸಿರೈ ಗಜಪುರವನೆಂದು ಸುಭದ್ರೆ ಹಲುಬಿದಳು ॥ ೧೫

ಅಕಟ ಮಗನೇ ಬಹಳ ಪಾಪಾ
ತ್ಮಕರ ಬಸುಱಲಿ ಬಹುದಱಿಂದೀ
ನಕುಳನುದರದಲಾಗಲೀ ಧರ್ಮಜನ ಜಠರದಲಿ ।

[1] ಹೊಗಳಿದ, ಹೊಗದಿರ (ದ.ನ).

ಸುಕೃತಿ ನೀನುದಯಿಸಲು ಬಹು ಕಂ
ಟಕರು ಬಳಿಕಾರುಂಟು ಕಡು ಪಾ
ತಕಿಯಲಾ ನಿಮ್ಮಯ್ಯನೆಂದಳು ಫಲುಗುಣನ ರಾಣಿ ॥ ೧೬

ಧುರವ ಹೊಗತಕ್ಕವನೆ ಚಿಕ್ಕವ
ನಿಱಿಯಲಾಪನೆ ಬಹನೆ ಮರಳಿದು
ಧರೆಯ ವೈಭವಕಳುಪಿ ಕಳುಹಿದಿರೆನ್ನ [ಕಂ]ದನನು ।
ವರ ಯುಧಿಷ್ಠಿರ ಜನಪ ಲೋಕದ
ಕರುಣಿಯೆಂಬರು ಕುನ್ನಿಗಳು ಮಱೆ
ಗೊರಳುಗೊಯ್ಕನನಱಿಯರೆಂದಳು ಫಲುಗುಣನ ರಾಣಿ ॥ ೧೭

ಶೋಕವಿಮ್ಮಡಿಸಿತ್ತು ಚಿತ್ತ
ವ್ಯಾಕುಳತೆಯಾ ಸತಿಯ ನುಡಿಗಳ
ನೇಕ ಸಾಣೆಯ ಸರಳು ಮುಱಿದವು ನೃಪನ ಹೃದಯದಲಿ ।
ಆ ಕುಮಾರ ವಿಯೋಗ ವಹ್ನಿಗೆ
ಯಾಕೆಯಳಲು ಸಮೀರನಾಯ್ತು ದಿ
ವೌಕಸರ ಸಮ್ಮೇಳವೇ ಪುರುಷಾರ್ಥ ತನಗೆಂದ ॥ ೧೮

ಎಲೆ ವೃಕೋದರ ನಕುಳ ಸಾತ್ಯಕಿ
ನಿಲಿಸಿರೈ ತಂಗಿಯನು ತನ್ನಯ
ಕೊಲೆಗೆ ಮಗನಳಿವೊಂದು ಸಾಲದೆ ತನ್ನ ನುಡಿಯೇಕೆ ।
ನಳಿನ ನಾಭನ ಕರುಣ[1]ದೊಱತೆಯು[1]
ಕಳಿದರಾರೇಗುವರು ಶಿವ ಶಿವ
ನೆಲನೊಳೆನ್ನವೊಲಾರು ಪಾಪಿಗಳೆಂದು ಬಿಸುಸುಯ್ದ ॥ ೧೯

ಧರಣಿಪನ ಶೋಕಾತಿಶಯವನು
ವರ ಸಮಾಧಿಯೊಳಱಿದು ಮುನಿಪತಿ
ಕರುಣದಲಿ ಕಡು ನೊಂದು ಸಕಲ ಜಗಕ್ಕನುಗ್ರಹವ ।
[2]ಕರುಣಿಸುವ ವೋಲು ಕರುಣಿತನವನು
ಮೆಱೆಯಲೋಸುಗವಿರದೆ ಗಗನೇ
ಚರರ ಗತಿಯಲಿ ಬಂದನೈ ದ್ವೈಪಾಯನ ವ್ರತಿಪ[2] ॥ ೨೦

[1] ದೊಣಗಿಲು (ಕ.ಚ.ಟ.ದ).

[2] ಪರರುಗಳ ಸುಖದುಃಖದಲಿ ಘನ
ಹರುಷಭಾವವ ಹಿಡಿವುದೆಂಬುದು
ಹಿರಿಯರಿಗೆ ಗುಣವಲ್ಲವೇ ಧೃತರಾಷ್ಟ್ರಕೇಳೆಂದ ॥ (ಕ.ಟ.ತ.ದ.ನ).

ಬಂದು ವೇದವ್ಯಾಸ ಮುನಿ ನೃಪ
ಮಂದಿರವ ಹೊಗಲೆದ್ದು ಪದದಲಿ
ಸಂದಣಿಸಿ ಚಾಚಿದನು ಮಕುಟವನವನಿಪಾಲಕನು ।
ನೊಂದವರು ಸತ್ಸಂಗತಿಯಲಾ
ನಂದವಡೆವುದೆನುತ್ತ ಮುನಿಪತಿ
ಕಂದು ಮೋಱೆಯ ಮಹಿಪತಿಯ ನೆಗಹಿದನು ಕರುಣದಲಿ ॥ ೨೧

ಎಲೆ ಯುಧಿಷ್ಠಿರ ನೃಪ ಕುಮಾರ
ಪ್ರಳಯದಾಪತ್ತಾಯ್ತು ಭೀಮನ
ನಲವಿಗೂಣೆಯವಾಯ್ತು [1]ದುಸ್ಥಿತಿಯಾಯ್ತು ನಕುಲಂಗೆ[1] ।
ಬಲು ದುಗುಡ ಸಹದೇವನಲಿ ಸಂ
ಗಳಿಸಿತೇ ದ್ರೌಪದಿ ಸುಭದ್ರಾ
ಲಲನೆಯರಿ [2]ಗನುಚಿತವು ಘಟಿಸಿತೆ[2] ಎಂದನಾ ಮುನಿಪ ॥ ೨೨

ಅಡಸಿದಾಪತ್ತಿನಲಿ ಧೈರ್ಯವ
ಹಿಡಿವುದೇ ಸುಪ್ರೌಢಿ ಸಾಕಿ
ನ್ನೊಡಲು ಕರಗಿದೊಡೇಳಲಱಿವನೆ ಹಿಂಗಿದಭಿಮನ್ಯು ।
ಒಡನೆ ಬಂದವು ಬಿಡವು ಭವದಲಿ
ತೊಡಕಿ ಸುಕೃತವು ದುಷ್ಕೃತಂಗಳು
ಕಡೆಗೆ ತಿಳಿವಿನೊಳಲ್ಲದಿಹ ಪರ ಸೌಖ್ಯವಿಲ್ಲೆಂದ ॥ ೨೩

ಎಲ್ಲರೋಪಾದಿಯ ಕುಮಾರಕ
ನಲ್ಲ ಕಾಣಿರೆ ವೀರ ವಿತರಣ
ದಲ್ಲಿ ಛಲದಲಿ ಶೀಲದಲಿ ನಾನಾ ಗುಣಂಗಳಲಿ ।
ಇಲ್ಲ ಸುಕುಮಾರಂಗೆ ಸರಿ ಮಗ
ನಿಲ್ಲದೇಗುವೆನಕಟ ವಚನದ
ಸೆಲ್ಲಹದಲಿಱಿಯದಿರೆನುತ ಹಲುಬಿದನು ಭೂಪಾಲ ॥ ೨೪

ಜನನವೇ ಲಯ ಬೀಜ ಮರಣವೆ
ಜನನ ಬೀಜವು ತೋಱಿ ಕೆಡುವೀ
ತನುವಿನಭಿರಂಜನೆಯ ಸೌಖ್ಯಕೆ ಮಾಱದಿರು ಮನವ ।

[1] ನಕುಲಗೆ ವೈಮನಸ್ಯವಲಾ (ಕ.ಟ.ತ.ದ.ನ). [2] ಗೆಯು ಚಿಂತೆ ಯಾಯಿತೆ (ಕ).

ಘನ ಪರಂಜ್ಯೋತಿ ಸ್ವರೂಪದ
ನೆನಹ ಮಱೆದೀ ಮೋಹ ಮಯ ಬಂ
ಧನದೊಳಗೆ ಮರುಳಹರೆ ಮಗನೇ ನಿನ್ನನಱಿಯೆಂದ ॥ ೨೫

ಹರನೊಡನೆ ಹೊಯ್ದಾಡಿದಗ್ಗದ
ನರನು ತಂದೆ ಸಮಸ್ತ ಭುವನೇ
ಶ್ವರನಲಾ ಮುರ ವೈರಿ ಮಾವನು ನಿನ್ನ ತನಯನಿಗೆ ।
ಧುರದೊಳೀ ಹದನಾಯ್ತು [1]ಮಿಕ್ಕಿನ
ನೊರಜುಗಳ ಪಾಡೇನು[1] ಕಾಲನು
ಹರಿ ಹರ ಬ್ರಹ್ಮಾದಿಗಳ ಕೈಕೊಂಬನಲ್ಲೆಂದ ॥ ೨೬

ದೇಹ ತಾನಭಿಮನ್ಯುವೋ ದಿಟ
ದೇಹಿ ತಾನಭಿಮನ್ಯುವೋ ಜಡ
ದೇಹ ತಾನಭಿಮನ್ಯುವಲ್ಲದು ಕೆಟ್ಟರೇನಾಯ್ತು ।
ದೇಹವೆಂಬುದನಿತ್ಯ ನಿನ್ನವ
ರಾಹವದೊಳಳಿದವರ ಬಿಡು ಸಂ
ದೇಹವ[2]ನಹಮ್ಮಮತೆಗಳ ಬೀಳ್ಕೊಟ್ಟು ನೋಡೆಂದ[2] ॥ ೨೭

ಎನ್ನದಾನೆಂಬೆರಡಱಿಂದವೆ
ಬನ್ನ ಬಡುವನು ಜೀವನಲ್ಲದೆ
ಮುನ್ನವಿನ್ನೆಂದೆಂದಿಗಾತ್ಮಂಗಿಲ್ಲ ಭವ ಬಂಧ ।
ನಿನ್ನ ನೀನಱಿ ಸಾಕು ಮಾಯೆಯ
ಗನ್ನ ಗತಕವ ಗೆಲುವೆ ಕನಸಿನ
ಪೊನ್ನ ಕಾಣದೆ ದುಃಖಪಡುವರೆ ಭೂಪ ಕೇಳೆಂದ ॥ ೨೮

ಉರಗ ನರ ದಿವಿಜಾದಿಗಳಿಗಿದು
ಪರಿಹರಿಸಲಳವಲ್ಲ ದೈವದ
ಪರುಠವಣೆ ಮುನ್ನಾದಿಯಲಿ ನಿರ್ಮಿಸಿ[3][ತು][3] ಮೃತ್ಯುವನು ।
ಅರಸನಾಗಲಿ ಧನಿಕನಾಗಲಿ
ಹಿರಿಯನಾಗಲಿ ಬಡವನಾಗಲಿ
ಮರಣ ಜನಿಸಿದ ಬಳಿಕ ತಪ್ಪದು ಮಗನೆ ಕೇಳೆಂದ ॥ ೨೯

[1] ಕಾಲನನರಸ ಮೀರುವರಾರು (ಕ.ಗ.ಚ.ಪ). [2] ನು ನೆರೆಹಮ್ಮು ಮಮತೆಯ ಬಿಟ್ಟು ನೋಡೆಂದನು, ನೀ ಹಮ್ಮಮತೆಯನು ಬಿಟ್ಟುಕಳೆಯೆಂದ (ಬ).

[3] ದ (ಸ).

ಇರುಳು ಹಗಲಿನ ಬೀಜ ನೆರವಿಯೆ
ಹರೆವುದಕೆ ಮೊದಲುನ್ನತೋನ್ನತ
ಮರುಳೆ ಕೇಡಿನ ಕಾಳಕೂಟವೆ [1]ವೀರ [ನಿರ್ವಹಣ][1] ।
ಸಿರಿ ದರಿದ್ರತೆಗಡಹು ಜನನವೆ
ಮರಣ ಫಲವಿದನಱಿದು ಬುಧರಾ
ಚರಿಸುವುದು ಕೇಳೆಂದು ವೇದವ್ಯಾಸ ಮುನಿ ನುಡಿದ ॥ ೩೦

ತಿಳಿದು ಧರ್ಮಜ ಕೇಳು ಕೃತಯುಗ
ದೊಳಗೆ ಕಂಪನನೆಂಬ ಭೂಪನು
ಕುಲ ತಿಲಕ ಹರಿಯೆಂಬ ಮಗನಾತಂಗೆ ಜನಿಸಿದನು ।
ಬಳಿಕವನು ಯೌವನನಾಗಿ ಪರಮಂ
ಡಲಕೆ ನಡೆದನು ವೈರಿ ರಾಯರ
ವಳಿತವನು ತಾನೊತ್ತಿಕೊಂಡನು ರಿಪು ನೃಪರ ಕೆಡಹಿ ॥ ೩೧

ಮಗನೆ ಕಂಪನನೆಂಬ ಭೂಪನ
ಮಗನು ಮತ್ತೊಮ್ಮೆನಲಿ ಬಲು ಗಾ
ಳೆಗವ ಕಾದಿ ವಿರೋಧಿ ಸೇನೆಯೊಳಾನೆ ವರಿ ವರಿದು ।
ಬಗೆಯೆ ನಿನ್ನಭಿಮನ್ಯುವಿನವ್ವೋ
ಲಗಣಿತರನಸಿಯುರೆದು ಸುರಪನ
ನಗರಿಗೈದಿದನೆಂದು ಕಂಪನು ಕೇಳಿ ಬಸವಳಿದ ॥ ೩೨

ನಿನಗೆ ಬಂದಾಪತ್ತಿನಂತಿರ
ಲನಿತು ಬಂದುದು ಕಂಪನೆಂಬಾ
ತನನು ಸಂತೈಸಲ್ಕೆ ನಾರದನವನಿಗೈತಂದು ।
ಜನಪತಿಯ ಹಿಡಿದೆತ್ತಿದನು ಕಾ
ಲನನು ಮೀಱುವರಾರು ಪೌರಾ
ತನ ಕೃತ ಧ್ರುವ ಮೃತ್ಯುವನು ಗೆಲುವಾತನಿಲ್ಲೆಂದ ॥ ೩೩

ಮೃತ್ಯುವಾರೆಂದವನಿಪತಿ ಮುನಿ
ಪೋತ್ತಮನ ಬೆಸಗೊಳಲು ಬ್ರಹ್ಮನ
ಕಿತ್ತಡದ ಕೋಪದಲಿ ಜನಿಸಿದ ರುದ್ರನಿಂ ಬಳಿಕ ।

[1] ವೀರ ನಿರ್ವಾಣ, ದ ವಿರಹನಿರ್ವಾಪ.

ಮೃತ್ಯುವೆಂದವಳಾದಳಾ ಸತಿ
ಯತ್ತ ಕಂಬನಿ ರುಜೆಗಳಾದವು
ತೆತ್ತಿಗರು ಷಡುವರ್ಗ ಕಾಮ ಕ್ರೋಧ ಮೊದಲಾಗಿ ॥ ೩೪

ಜನದ ಕೊಲೆ ಗೆಲಸದ ನಿರೂಪಕೆ
ಮನವ ತಂದಳು ಮೃತ್ಯು ನಿಜ ಸಾ
ಧನ ಸಹಿತ ಕೈಕೊಂಡ ಕೆಲಸವನಾಗುಮಾಡುವಳು ।
ಜನಪ ದೃ[1]ಷ್ಟ[1]ನ್ನಷ್ಟವೆಂಬುದ
ನನುಕರಿಸಿ ಮೂರ್ತಿತ್ರಯಂಗಳ
[2]ತನಗೆ ನೆಱೆ ವಶಮಾಡಿಕೊಂಡಿಹಳೆಂದು ಮುನಿ ನುಡಿದ[2] ॥ ೩೫

ಆ ಮಹಾಮೃತ್ಯುವನು ಹುಟ್ಟಿಸಿ
ದಾ ಮಹಾದೇವಾದಿ ದೇವರು
ಕಾಮಿನಿಯು ಕಳುಹಲ್ಕೆ ಬಾರದೆನುತ್ತ ಬೋಧಿಸ ಲು ।
ಭೂಮಿಪತಿ ನಿಜ ಸುತನ ಮೃತಿಯು
ದ್ದಾಮ ತಾಪವ ಕಳೆಯ ಬೇಕೆಂ
ದಾ ಮುನೀಶ್ವರ ಸಂತವಿಟ್ಟನು ಕಂಪ ಭೂಪತಿಯ ॥ ೩೬

ಆದರಾ ಮೃತ್ಯುವಿನ ಕೈವಶ
ವಾದವರನೆನಗಱುಹಬೇಹುದು
ಮೇದಿನೀಶರೊಳೆಂದು ಬಿನ್ನಹ ಮಾಡಿದನು ನೃಪತಿ ।
ಆ ದಯಾಳುಗಳರಸನಾ ಶೋ
ಕೋದಧಿಗೆ ವಡಬಾಗ್ನಿ ಸಮನೆನಿ
ಪಾದಿಯಲಿ ಷೋಡಶ ಮಹೀಶರ ಕಥೆಯ ವಿರಚಿಸಿದ ॥ ೩೭

ಭರತ ಪೃಥು ಪೌರವ ಭಗೀರಥ
ವರ ಯಯಾತಿ ಮರುತ್ತ ನಹುಷೇ
ಶ್ವರ ಪುರೂರವ ರಂತಿದೇವ ಗಯಾಂಬರೀಷಕರು ।

---

[1] ಶ್ಯ (ಕ.ಚ.ಟ.ತ.ಪ). [2] ನೆನ್ನವಶಮಾಡಿದಳು ಚಿತ್ತೈಸೆಂದನಾಮುನಿಪ (ಕ.ಗ.ಟ.ತ).

ಪರಶುರಾಮ ದಿಲೀಪ ಮಾಂಧಾ
ತರು ಹರಿಶ್ಚಂದ್ರಾದಿ ಪೃಥ್ವೀ
ಶ್ವರರನಂತರು ಮೃತ್ಯು ವಶವರ್ತಿಗಳು ಕೇಳೆಂದ ॥ ೩೮*

ಎಂದು ಷೋಡಶ ರಾಯರಾ ಕಥೆ
ಯಿಂದ ನೃಪತಿಯ ಸಂತವಿಟ್ಟನು
ಬಂದು ಧರ್ಮಜನೆಱಗಿದನು ಮುನಿರಾಯನಂಘ್ರಿಯಲಿ ।
ಅಂದು ವೇದವ್ಯಾಸ ಪಾಳಯ
ದಿಂದ ಕಳುಹಿಸಿಕೊಂಡನಿತ್ತ ಮು
ಕುಂದನಭಿಮನ್ಯುವಿನ ಮರಣವನಱಿದ ಮನದೊಳಗೆ ॥ ೩೯

ಏಳನೆಯ ಸಂಧಿ ಮುಗಿದುದು.

---

* ಮೂವತ್ತೆಂಟನೆಯ ಪದ್ಯವಾದಮೇಲೆ (ಗ) ಪ್ರತಿಯಲ್ಲಿ ಮುಂದಿನ ಪದ್ಯವು ಹೆಚ್ಚಾಗಿದೆ :—

ಅಂತನಾದಿ ಸುನೀ ಧನಹನೀ
ಭ್ರಾಂತವಲ್ಲದ ಮಾರಬಾರದು
ಚಿಂತೆ ನಿನಗೇಕೆಂದು ನಾರದ ತಿಳಿಹಿದನು ನೃಪನ ।
ಇಂತು ನೀ ಭಾವಿಸಲು ನಿನ್ನ ಮ
ಹಂತರಿಗ ಕಲೆಯುವುದೋ ಶು
ಕ್ರಾಂತನಾಗದಿರೆಂದು ಸಂತೈಸಿದನು ಧರ್ಮಜನ ॥

ಎಂಟನೆಯ ಸಂಧಿ

ಸೂಚನೆ || ಹಾ ಮಗನೆ ರಣರಂಗ ಧೀರನೆ
ಹಾ ಮದೀಯ ಕುಮಾರ ವೀರನೆ
ಬಾ ಮಗನೆ ಪೋಗದೋ ಜೆನುತ ಹಲುಬಿದನು ಕಲಿ ಪಾರ್ಥ ||

ಕೇಳು ಜನಮೇಜಯ ಧರಿತ್ರೀ
ಪಾಲ ಸಮಸಪ್ತಕರ ಬಲ ನಿಜ
ಪಾಳಯಕೆ ತಿರುಗಿದುದು ತೀರಿತು ತರಣಿಯಾಟೋಪ |
ಕಾಳೆಗವ ತೆಗೆಸಿದರು ಕೌರವ
ರೇಳು ಫಲುಗುಣ ಎನುತ ಲಕ್ಷ್ಮೀ
ಲೋಲ ವಾಘೆಯ ಮರಳಿ ಕೊಂಡನು ಹಯವ ಬೋಳೈಸಿ || ೧

ಅಳಿಯನಳಿವನು ಹೇಳಬಾರದು
ತಿಳಿಯಲಿದನಿನ್ನೆನುತ ಚಿಂತಿಸಿ
ನಳಿನ ಲೋಚನ ಬರುತ ಕಂಡನು ವರ ಸರೋವರವ |
ಇಳಿದು ರಥವನು ರಣ ಪರಿಶ್ರಮ
ಗಳೆವೆನೆನುತವೆ ಪಾರ್ಥ ಸಹಿತಾ
ಕೊಳನ ಹೊಕ್ಕನು [1]ಜಗದುದರ ಲೀಲಾವತಾರಕನು[1] || ೨ *

ಧುರದ ಕೋಳಾಹಳದ ಥಗೆ ಡಾ
ವರಿಸಿ ಬಳಲಿ ಧನಂಜಯನು ವರ
ಸರಸಿಯಲಿ ಮುಳುಗಿರಲು ನಸು ನಗುತೊಂದುಪಾಯದಲಿ |
ನರನೊಳಿನ್ನುಸುಹುವೆನು ಘನ ಸಂ
ಗರದೊಳಡಗಿದ ರಾಜ ಕುವರನ
ಮರಣ ವಾರ್ತೆಯನೆಂದು ಮನದಲಿ ನೆನೆದನಸುರಾರಿ || ೩ *

ಎಲೆ ಸುರೇಂದ್ರ ಕುಮಾರ ಕೇಳ್ ನಿ
ನ್ನೊಲುಮೆಯಣುಗನು ರಣದೊಳಗೆ ರಿಪು
ಬಲವ [2]ಕೋಳಾಹಳಿಸಿ[2] ಕೌರವ ಸುತರು ನೂರ್ವರನು |

[1] ಕಾಳೆಗದ ಕೌತುಕವ ವಿವರಿಸುತ (ಟ.ತ).
* ಮೇಲೆ ಈ ಗುರುತಿರುವ ೨ರಿಂದ ೬ನೆಯ ಪದ್ಯದ ವರೆಗಿರುವ ಐದು ಪದ್ಯಗಳು (ಚ.ಪ.ಬ). ಪ್ರತಿಗಳಲ್ಲಿಲ್ಲ. [2] ತೊತ್ತಳದುಳಿದು (ಗ).

ತಲೆಯನರಿದನು ಬಳಿಕ ತಾ ಸುರ
ಲಲನೆಯರ ಚೆಲುವಿಂಗೆ ಸೋತನು
[1]ಕಳಿದನೆನುತವೆ ನುಡಿದು[1] ಹರಿ ಮುಳುಗಿದನು ಜಲದೊಳಗೆ ॥ ೪ *

ಆ ಸುತನ ಶೋಕದ ಮರುಕವಾ
ಕಾಶ ವಚನದೊಳಾಯ್ತು ಶಿವ ಶಿವ
ವಾಸುದೇವ ಎನುತ್ತ ಫಲುಗುಣ ಜಲವ ಬಗಿದೆದ್ದು ।
ಘಾಸಿಯಾದನು ಮಗನಕಟ ಸಂ
ತೋಷವೆಲ್ಲಿಯದೆನುತ ಮಾಯಾ
ವೇಷಿಯನು ಕರೆದನು ವಿಲೋಚನ ವಾರಿ ಪೂರದಲಿ ॥ ೫ *

ಎನಲು ಧಿಮ್ಮನೆ ಕೊಳದೊಳಗೆ ನಿಂ
ದನು ಮುಕುಂದನು ಸುರಪ ಸುತನಾ
ನನವ ನೋಡುತದೇನದೇನೆನೆ ಬಿಕ್ಕಿ ಬಿರಿದಳುತ ।
ತನಯನಳಿಯದೆ ಮಾಣ ಗಗನ
ಧ್ವನಿಯೊಳಾದುದು ಪಾರ್ಥ ಚಿತ್ತಕೆ
ಮೊನೆಯ ಸರಳೆನೆ ಮರುಳೆ ಬಾ ಎಂದೇಱಿದನು ರಥವ ॥ ೬ *

ಹರಿ ಕಿರೀಟಿಗಳಿತ್ತ ಶಿಬಿರಕೆ
ತಿರುಗಿದರು ಸುತ ಶೋಕ ಸೂಚನೆ
ನರನ ಚಿತ್ತದೊಳಾಯ್ತು ವೆಂಠಣಿಸಿತ್ತು ಪರಿತಾಪ ।
ಕೊರಳ ಸೆರೆ ಹಿಗ್ಗಿದವು ಕಂಬನಿ
ದುಱುಗಿದವು ಕಡು ಶೋಕ ಜಠರದ
ಲು[2]ರವಣಿಸಲಾಕಸ್ಮಿಕದ[2] ಭಯವಾಯ್ತು ಪಾರ್ಥಂಗೆ ॥ ೭

ತರಣಿ ತೊಲಗಿದ ಗಗನವೋ ಪಂ
ಕರುಹವಿಲ್ಲದ ಸರಸಿಯೋ ಕೇ
ಸರಿಯ ಲೀಲಾಳಾಪವಿಲ್ಲದ ಬಹಳ ಕಾನನವೊ ।
ಪರಮ ತತ್ತ್ವ ನಿಧಾನವಱಿಯದ
ನರನ ವಿದ್ಯಾರಚನೆಯೋ [3]ನಿ
ರ್ಭರ[3] ಭಯಂಕರವಾಯ್ತು ಪಾಳಯವೆನುತ [4]ಬರುತಿರ್ದ[4] ॥ ೮

[1] ತಳರ್ದನಂಬರಕೆಂದು (ಗ.ಬ). [2] ರಿ ಶಿರವನಾವರಿಸಿ ಕಡು (ಸ).
[3] ದುರ್ಧರ (ಗ.ಚ.ಪ). [4] ನಡೆತಂದ (ಗ.ಚ.ಪ).

ದೆಸೆ ದೆಸೆಯ ನೋಡಿದರೆ ಕತ್ತಲೆ
ಮಸಗುವುದು ಪರಿತಾಪ ತನುವನು
ಮುಸುಕುವುದು ಮನ ಮಱುಗುವುದು ಕಳವಳಿಸುವುದು ಧೈರ್ಯ ।
ಮಸೆದ ಸರಳೊಡಲೊಳಗೆ ಮುಱಿದವೊ
ಉಸುರಿಗುಬ್ಬಸವಾಯ್ತು ಬಲ್ಲಡೆ
ಬೆಸಸು ಮುರಹರ ಹಿರಿದು [1]ಬಳಲಿಸ[1] ಬೇಡ ಹೇಳೆಂದ ॥ ೯

* ತಂದೆ ಧೃತಿಗೆಡಬೇಡ ನಡೆ ನಿಜ
ನಂದನನನಾರೈವೆವೆನುತ್ತೈ
ತಂದು ಕೋಟೆಯ ಕಳೆದು ಬಂದರು ರಾಜ ಬೀದಿಯಲಿ ।
ಕಂದನಿರವನು ಕಾಣಲಾಪೆನೊ
ಕೊಂದರೆಂಬುದ ಕೇಳುವೆನೊ ತನ
ಗಿಂದು ಗತಿಯೇನೆನುತ ಬಂದನು ರಾಜ ಮಂದಿರಕೆ ॥ ೧೦ †

---

[1] ನೋಯಿಸ (ಕ). * ಹತ್ತನೆಯ ಪದ್ಯಕ್ಕೆ ಹಿಂದೆ (ಗ.) ಪ್ರತಿಯಲ್ಲಿ ಈ ಕೆಳಗಿನ ಪದ್ಯವು ಹೆಚ್ಚಾಗಿದೆ :—

ಅಳುವದಲಿ ಕಂಗೆಟ್ಟವೊಲು ಮನ
ನ್ನೊಲವುದಪ್ಪಿತು ರಾಜ ಭವನದ
ಕಳನದಾರದು ಕೌರವನ ಪಾಳಯ ವೆ ಹೇಳೆನುತ ।
ತುಳುಕಿದನು ಕಂಬನಿಗಳನು ಕಳ
ವಳಿಸಿ ಫಲುಗುಣ ಪುತ್ರ ಮೋಹದ
ಬಳಕೆಗಳ ಕಂಡಪದರಿದವು ಕಂಬನಿ ಮುರಾಂತಕನ ॥

† ಹತ್ತನೆಯ ಪದ್ಯವಾದ ಮೇಲೆ ಎಲ್ಲಾ ಪ್ರತಿಗಳಲ್ಲಿಯೂ ಈ ಕೆಳಗಿನ ಎರಡು ಪದ್ಯಗಳಿವೆ :—

ಹಗೆಯ ಪದ್ಮವ್ಯೂಹವೆನ್ನಯ
ಮಗನ [1]ಸುಳಿವಿಗೆ[1] ಬಾಧೆ ಮೋಹಿದ
ದುಗುಡವೇ ಸುತ ಶೋಕ ಸೂಚನೆ ತನ್ನ ಚಿತ್ತದಲಿ ।
ಹೊಗೆಯ ಹೊದಱಿನ ನಿಱಿಗೆಯಿದು ವ
ಹ್ನಿಗೆ ಸುನಿಶ್ಚಯವೆಂಬವೊಲು ಮೋ
ಲಗಿವ ಶೋಕ ಕೃಶಾನು ವಿನ್ನೀಮನದ [2]ಹೊಗೆಯೆಂ[2]ದ ॥

ತಲೆಯ ಮುಸುಕಿನ ವೀರ ಸುಭಟರು
ತೊಲಗಿದರು ಬೆಸಗೊಳಲು ನಂದನ
ನಳಿವು [3]ನಿಶ್ಚಯವೆಂಬವೊಲು ಮೌನದಲಿ ಕೆಲಸರಿಯೆ[3] ।
ಎಲೆ ಮುರಾಂತಕ ಕಾಣಲಾಪೆನೊ
ಹೊಳಲೊಳೆನ್ನಾನೆಯನೆನುತ ದೃಗು
ಜಲಕೆ ಕಾಯುವ ತೆಱುತ ಬಂದನು ರಾಜಮಂದಿರಕೆ ॥

[1] ಕೊರಳಿಗೆ (ಗ), ಹಳುವಿನ (ಜ.ಪ). [2] ಹೊಗರೆಂ (ಕ.ಗ.ಪ). [3] ಹಲಬರ ಮನವ ಮೆಚ್ಚಿತು ಹೆಚ್ಚಿತತಿಮೋಹ (ಕ.ಖ.ತ.ದ.ನ).

ಸುರನಗರಿ ನಡುಗಿತ್ತು ಸುರಪತಿ
ಹರನ ನೆನೆದನು ಯಮನ ಪಟ್ಟಣ
ಸರಕುದೆಗೆಯಿತು ಮೃತ್ಯು ಮಱೆಹೊಕ್ಕಳು ಮಹೇಶ್ವರನ ।
ಬಿರುದರಂಜಿ[1]ತು ದೇಶ ದೇಶದ[1]
ಧರಣಿಪತಿಗಳಪಾಯವಾಯ್ತೆನೆ
ನರನ ಕಡು ದುಮ್ಮಾನ ನೆಱೆ ಹೆದಱಿಸಿತು ಮೂಜಗವ ॥ ೧೧

ವೀರರಿದಿರುಗ್ಗಡಣೆಗಳ ಕೈ
ವಾರಿಗಳ ಮಾಣಿಸುತಲೈತಹ
ನಾರಿಯರ ರತುನಾರತಿಯ ತಳಿಗೆಗಳ ನೂಕಿಸುತ ।
ಸಾರಿ ಕೈಗೊಡುವದಟರನು ಕಂ
ಣ್ಣೋರೆಯಲಿ ಕೋಪಿಸುತ ತನ್ನಯ
ತೇರನಿಳಿದನು ಪಾರ್ಥನಸುರಾರಿಯ ನಿರೂಪದಲಿ ॥ ೧೨ *

ಹರಿ ರಥವನಿಳಿದಂತೆ ಪಾರ್ಥನ
ಭರದ ಕೋಪವ ಕಂಡು ನಿಜಮಂ
ದಿರಕೆ ಮೆಲ್ಲನೆ [2]ಜಾಱಿಗಿ[2]ದನು ಯಾದವರ ಗಡಣದಲಿ ।
ವರ ಧನುವ [3]ಶಸ್ತ್ರಾಸ್ತ್ರ ಕವಚವ
ನಿರಿಸಿ[3] ಕೈಗೊಡುವವರ ಕನಲು
ತ್ತರಮನೆಯ ಹೊಕ್ಕನು ಯುಧಿಷ್ಠಿರರಾಯನೋಲಗವ ॥ ೧೩

ಧರಣಿಪನ ನಿಱಿಗೆಯಲಿ ಕಂದನ
ಮರಣವನು ನಿಶ್ಚಯಿಸಿ ಪ್ರಳಯದ
ಹರನ ಕೋಪವ ಕೇಣಿಗೊಂಡನು ತನ್ನ ಚಿತ್ತದಲಿ ।
ಸುರಿವ [4]ನಯನಾಂಬುಗಳ ಜಲನಿಧಿ
ಗುರವಣಿಸಿದನೊ[4] ವಡಬನೆನೆ ಮುರ
ಹರನ ಮೈದುನನೊಯ್ಯನೈದಿದನವನಿ ಪಾಲಕನ ॥ ೧೪

ಉಕ್ಕಿ ಶೋಕದ ಕಡಲು ಪಾರ್ಥನ
ಮುಕ್ಕುಳಿಸಿತಾ ಶೋಕ ಶರಧಿಯ
ಹೊಕ್ಕು ಬೆಳೆದುದು ಕೋಪ ಶಿಖಿ [5]ವಡಬಾಗ್ನಿ[5]ಯಂದದಲಿ ।

[1] ದರಿತ್ತಸೇನೆಯ (ಕ.ಟ.ತ), ಪರಾಪ್ತ ಸೇನಾ(ಪ). * ಈ ಪದ್ಯವು (ಕ.) ಪ್ರತಿಯಲ್ಲಿಲ್ಲ. [2] ಜಾಱಿ (ಗ.ಚ.ಬ). [3] ಬತ್ತಳಿಕೆಯನು ಕೆಲಕಿರಿಸಿ (ಗ). [4] ನಯನ ಜಲಾಬ್ಧಿಗಾದುದು ವರುಷದುರವಣಿ (ಕ.ಗ.ಟ.ತ.ದ). [5] ಕಾಲಾಗ್ನಿ (ಕ.ಗ.ಚ.ತ), ದಾವಾಗ್ನಿ (ಬ).

ಮಕ್ಕಳೊಳು ನೋಡಿದನು ಕಂದನ
ನಿಕ್ಕಿದಿರಲಾ ಲೇಸು ಮಾಡಿದಿ
ರೆಕ್ಕತುಳದಾಳುಗಳೆನುತ ಭೂಪತಿಗೆ ಪೊಡವಂಟ ॥ ೧೫

ತಲೆಯ ಮುಸುಕಿನ ಕಂಗಳೊಱತೆಯ
ಜಲದ ದುಗುಡದ ಮುಖದ ಜನಪತಿ
ಫಲುಗುಣನನೆತ್ತಿದನು ತಲೆಗುತ್ತಿದನು ಭೀತಿಯಲಿ ।
ಮಲಗಿ[1]ದನು [ವರ][1] ಭೀಮ ಸಭೆ ತ
ಲ್ಲಳಿಸಿತರ್ಜುನ ಬಂದನೆನೆ ಬಸ
ವಳಿದು ಬಂದು ಸುಭದ್ರೆ ಪತಿಯಂಘ್ರಿಯಲಿ ಹೊರಳಿದಳು ॥ ೧೬

ಕಂದನಾವೆಡೆ ತನ್ನ [2]ಮೋಹದ[2]
ಸಿಂಧುವಾವೆಡೆ ತನುಜ ವನ ಮಾ
ಕಂದನಾವೆಡೆ ಹೇಳೆನುತ ಫಲುಗುಣನು ತೊದಳಿಸುತ।
[3]ನೊಂದು ಮನದಲಿ ಪಾರ್ಥನಾ ಸತಿ
ಯಂದವನು ಕಾಣುತ್ತ[3] ಬೆದೆ ಬೆದೆ
ಬೆಂದು ಯಮರಾಜನ ಕುಮಾರನ ಮೊಗವ ನೋಡಿದನ ॥ ೧೭ *

ಪತಿಯುಳಿದ ಸತಿಯಿರವು ನಾಯಕ
ರತುನವಿಲ್ಲದ ಪದಕ ದೈವ
ಸ್ತುತಿಗಳಿಲ್ಲದ ಕಾವ್ಯ ರಚನಾ [4]ಭಾವದಂದದಲಿ[4] ।
ಕೃತಕ[5]ವ[5]ಲ್ಲಭಿಮನ್ಯುವಿಲ್ಲದೆ
ಕ್ಷಿತಿಪ ನಿನ್ನಾಸ್ಥಾನ ಮೆಱೆಯದು
ಸುತನ ಸುದ್ದಿಯ[6]ದೇನು[6] ಮಱುಗಿಸಬೇಡ ಹೇಳೆಂದ ॥ ೧೮

1 ಎದ್ದನು (ಬ). 2 ಬಿರುದಿನ 3 ಕಂದಿದನು ಕಡು ಮೋಹದಲಿ ಮನ ನೊಂದು ಸುತ ಶೋಕದಲಿ (ಕ.ಗ.ಚ). 4 ನೀಕಮಾನದಲಿ (ಕ), ಸೇವ್ಯದಂದ ದಲಿ (ಗ.ಚ.ಪ). 5 ವಿ (ಚ.ತ.ದ.ಪ.ಬ) 6 ದೆಂತು (ಗ.ಟ.ತ.ದ.ನ).

* ಈ ಪದ್ಯವಾದ ಮೇಲೆ (ಬ) ಪ್ರತಿಯಲ್ಲಿ ಕೆಳಗಿನ ಪದ್ಯವು ಹೆಚ್ಚಾಗಿದೆ :—

ತಂದೆ ಧರ್ಮಜ ತನ್ನ ಬಿರುದಿನ
ಸಿಂಧುವೆಲ್ಲಿ ಸೋಮಕುಲ ಪನ್ನೀರ
ಸಿಂಧು ಚಂದಿರನೆಲ್ಲಿ ಹೇಳೆನುತಾಗಲರ್ಜುನನು ।
ಕಂದಿದನು ಕಡುಮೋಹದಲಿ ಮಿಗೆ
ನೊಂದು ಸುತ ಶೋಕದಲಿ ಗಱಗಱ
ಗಂದಿಯಣ್ಣನ ನೋಡುತಳಲುತಪಾರ್ಥನಿಂತೆಂದ ॥

ಬರಲು ಬಹನಿದಿರಾಗಿ ತನ್ನಯ
ವರ ರಥವ ಬಂದೇಱುವನು ನಿಜ
ಕರ ತಳದಿ ಮೈದಡವಿ ಘಾಯವ ನೋಡಿ ಮಱುಗುವನು ।
ತರುಣನಿದಿರೈತರಲು ತನ್ನಯ
ಧುರದ ಬಳಲಿಕೆ [1]ಹಿಂಗು[1]ವುದು ಹೇ
ಳರಸ ಕಂದನ [2]ಸುಳಿವ[2] ಕಾಣೆನು ಕರಸಿ ತೋಱೆಂದ ॥ ೧೯

ಮಗನ ಮಣಿ ರಥವೆಲ್ಲಿ ಹೂಡಿದ
ವಿಗಡ ತೇಜಿಗಳೆಲ್ಲಿ ಮಣಿವೆಳ
ಗುಗಳ ಛತ್ರವದೆಲ್ಲಿ ಚಾಮರವೆಲ್ಲಿ ಧನುವೆಲ್ಲಿ ।
ಹಗೆಯರಲಿ ಹತವಾದನೇ ಹಾ
ಸುಗುಣನಿಲ್ಲಿಗೆ ಬಾರನೇ ತಾ
ಮೊಗವ ಕಾಣದೆ ಹೋದನೇ ಎನಗೇನು ಗತಿಯೆಂದ ॥ ೨೦ *

ಕಂದ ಬಾರೋ ಎನ್ನ ಮನಕಾ
ನಂದ ಬಾರೋ ಬಾಲಕರ ಪೂ
ರ್ಣೇಂದು ಬಾರೋ ರಿಪು ಕುಲಾಂತಕ ನಿಪುಣ ಮುಖದೋಱೋ ।
ತಂದೆ ನಿನಗೆನ್ನಲ್ಲಿ ಋಣ ಸಂ
ಬಂಧ ಸವೆದುದೆ ಶಿವ ಶಿವಾ ತಾ
ಮಂದಭಾಗ್ಯಂಗಣುಗ ದಕ್ಕುವನಲ್ಲ ಎನಗೆಂದ ॥ ೨೧ *

ಅಸಮ ಪದ್ಮವ್ಯೂಹವನು ಭೇ
ದಿಸುವನಾವವನೆನಲು ಕೇಳಿದು
ಶಿಶುತನದಲಾಹವಕೆ ನಡೆದನು ನಾವು ಬೇಡೆನಲು ।
ಹೊಸ ಮದದ ವನ ದಂತಿ ಕದಳಿಯ
ಕುಸುರಿದಱಿದಂದದಲಿ ಘನ ಪೌ
ರುಷವ ಮಾಡಿದನೆಂದನವನೀಪಾಲನನುಜಂಗೆ ॥ ೨೨

ಅರಿ ನೃಪಾಲರ ನೂಱು ಮಕ್ಕಳ
ಶಿರವ[3][ನರಿ][3]ದನು ಷಡುರಥರ ಮಿಗೆ
ಪರಿಭವಿಸಿದನು ರಿಪು ಬಲವನಡಹಾಯ್ದಾನೆ ವರಿ ವರಿದು ।

---

[1] ತೊಲಗು (ಕ), ಯಡಗು (ಗ.ಬ), ಹಿಗ್ಗು (ಟ). [2] ಸುಳುಹ (ಕ.ಗ.ಟ).
* ಈ ಎರಡು ಪದ್ಯಗಳೂ ಮುದ್ರಿತ ಪ್ರತಿಯಲ್ಲಿ ಮಾತ್ರ ಸಿಕ್ಕುತ್ತವೆ. [3] ನೊದೆ (ಸ).

ಧುರಕೆ ಹೆಱತೆಗೆದೆವ್ಮ ನಾಲ್ವರ
ಸರಿದುಹೋದಭಿಮಾನವನು ಕಾ
ಯ್ದುರವಣಿಸಿ ಮಗನೇಱದನು ವಾಸವನ ಗದ್ದುಗೆಯ ॥ ೨೩

ಈ ನಕುಳನೀ ಭೀಮನೀ ಪಾಂ
ಚಾಲನೀ ಸಹದೇವನೀ ಭೂ
ಪಾಲನೀ ಸಾತ್ಯಕಿ ಯುಧಾಮನ್ಯೂತ್ತಮೌಜಸರು ।
ಕಾಳೆಗದೊಳಂಗೈಸಲಮ್ಮದೆ
ಬಾಲಕನ ನೂಕಿದಿರಲಾ ನಿ
ಮ್ಮಾಳುತನವನು ತೋಱದಿರಲಾ ತನ್ನ ಮೇಲೆಂದ ॥ ೨೪

ವೀರರಿನಿಬರು ನೆರೆದು ರಿಪು ಪರಿ
ವಾರವನು ಹೊಗಲಂಜಿ ಹೊಱಗಣ
ಮಾರಿ ಹೊಱಹೊಱಗೆಂಬವೊಲು [1]ನಂದನನ[1] ನೂಕಿದಿರಿ ।
ಆರ ನಂಬಲು ಬಹುದು ನಿಮಿಷವು
ದೂರ ತಾ ತೊಲಗಿದರೆ ತನ್ನ ಕು
ಮಾರನಿದ್ದರೆ ಹಱವ ಕಂಡಿರಿ ಹೊಲ್ಲಹೇನೆಂದ ॥ ೨೫

ಕೆಡೆ ನುಡಿದು ಫಲವೇನು ಸಾಕಿ
ನ್ನೊಡೆಯರಿಲ್ಲದ ವಸ್ತುವಾದೆನು
ಕಡೆಗೆ ಧರ್ಮಜ ಹೇಳು ಕೊಂದವನಾರು ನಂದನನ ।
ಕಡುವಗೆಯದಾರವರ ಬಲದಲಿ
ನುಡಿ ನಿದಾನವನವನ ಜೀವಕೆ
ಹಿಡಿ ಮಹೀಪತಿ ಸಂಚಕಾರವನೆಂದನಾ ಪಾರ್ಥ ॥ ೨೬

ಹೇಳಿ ಫಲವೇನಿನ್ನು ಶೋಕ
ಜ್ವಾಲೆಗಿಂಧನವೆನ್ನ ನುಡಿ ರಿಪು
ಜಾಲವನು ನೀ ಖಂಡಿಗಳೆ ಬಹೆವಾವು ಬಳಿಸಲಿಸಿ ।
ಕಾಳೆಗವ ಜಯಿಸುವೆವು ನಡೆಯೆನೆ
ಬಾಲನುರವಣಿಸಿದನು ಮಸಗಿದ
ಕಾಲ ರುದ್ರನ ರೂಪ ತಾಳ್ದನು ವೈರಿ ಸೇನೆಯಲಿ ॥ ೨೭

---

[1] ತನ್ನವನ (ಕ.ಗ.ಟ.ತ).

ಅರಸು ಮಕ್ಕಳ ಕೊಂದನೈನೂ
ರ್ವರನು ಮೂಱಕ್ಷೋಣಿ ಸೈನ್ಯವ
ನೊರಸಿದನು ಮಸೆಗಾಣಿಸಿದನಗ್ಗದ ಮಹಾರಥರ ।
ಧುರವ ಗೆಲಿದನು ಪಡಿತಳಿಸಿ ನಾ
ವುರವಣಿಸಲಡಹಾಯ್ದು ನಮ್ಮನು
ಹರನ ವರವುಂಟೆಂದು ತಡೆದನು ಸಿಂಧು ಭೂಪಾಲ ॥ ೨೮

ವಿರಥನಾದನು ಭೀಮ ನಕುಳನು
ತಿರುಗಿದನು ಸಹದೇವ ಕೊರಳಿನ
ಹರಣದಲಿ ಹಿಮ್ಮೆಟ್ಟಿದನು ದ್ರುಪದಾದಿ ನಾಯಕರು ।
ಧುರದೊಳೋಸರಿಸಿದರು ಸೈಂಧವ
ಹರನ ವರದಲಿ ನಮ್ಮ ಗೆಲಿದನು
ಮರಣವನು ಕಂದಂಗೆ ತಂದವನವನು ಕೇಳೆಂದ ॥ ೨೯

ಇನ್ನು ಹೇಳುವುದೇನೆನುತ ಕೈ
ಸನ್ನೆಯಲಿ ಮಾತಾಡಿ ಭೂಪತಿ
ಬೆನ್ನ [1]ತೆ[1]ತ್ತನು ಭೀಮಸೇನನ ವಿಪುಲ ವಕ್ಷದಲಿ ।
ತನ್ನ ಮಱೆದನು ನಯನ ಧಾರಾ
ಭಿನ್ನ ಚಾರು ಕಪೋಲನಿರೆ ಸಂ
ಪನ್ನ ಶೋಕಾಗ್ನಿಯಲಿ ಬೆಂದುದು [2]ಸಕಲ ಜನ[2] ಹೃದಯ ॥ ೩೦

ಮುಚ್ಚಿದನು ಕಂಗಳನು ಧೈರ್ಯದ
ಕೆಚ್ಚಿನೆದೆ ಕರಗಿತ್ತು ಶೋಕದ
ಕಿಚ್ಚು ಕೊಂಡುದು ಮನವನಖಿಳೇಂದ್ರಿಯದ ಸುಳಿವಡಗೆ ।
ಎಚ್ಚಱಡಗಿತು ನೆಲಕೆ ಕೈಗಳ
ಬಿಚ್ಚಿ ಬಿದ್ದನು ಪುತ್ರ ವಿರಹದ
ಹೆಚ್ಚಿಗೆಯ ತಾಪವನು ಹೆಸರಿಡಲಱಿಯೆನರ್ಜುನನ ॥ ೩೧

ಘನ ವಿ[3]ಕರ್ಮ[3]ದ ವಿಲಗದಲಿ ನಿಜ
ತನುಜ ಶೋಕದ ತಗ[4]ಹಿನೊಳಗ[4]
ರ್ಜುನನು ಧೈರ್ಯ ದರಿದ್ರನಾದನದೇನ ಹೇಳುವೆನು ।

---

1 ನಿ (ಕ.ಚ.ದ.ನ). 2 ಧರ್ಮಜನ (ಕ), ಫಲುಗುಣನ (ಗ.ಚ.ಪ).
3 ಕಾರ (ಗ). 4 ಹುಬರಲ (ಕ.ಗ).

ಮನ ಬಳಲಿ ಮೈ ಮಱೆದು ತಾಪದಿ
ಕನಸ ಕಂಡನು ಝಡಿಕೆ ಮಿಗೆ ಝೊ
ಮ್ಮನ ಸುಷುಪ್ತಿಯೊಳಿದ್ದು ನಿಮಿಷದೊಳೆದ್ದು ಕಣ್ದೆಱೆದ ॥ ೩೨

ಅಳಲ ಮುಕ್ಕುಳಿಸಿದನು ಮೋಹದ
ಬೆಳವಿಗೆಯ ಗವಸಣಿಸಿದನು ಕಳ
ಕಳಿಕೆ ಹಿಂಗಿದುದಶ್ರುಜಲವನು ಕಂಗಳಲಿ ಕುಡಿದು ।
ಪ್ರಳಯ ರುದ್ರನ ಕೋಪ ಶಿಖಿ ವೆ
ಗ್ಗಳಿಸಿತೆನೆ ಕಂಗಳಲಿ ಕಿಡಿಗಳು
ತುಳುಕಿದವು ರೌದ್ರಾನುಭಾವದ [1]ರಸದ ಭಂಗಿಯಲಿ[1] ॥ ೩೩

ಹೇಳು ಹೇಳಿನ್ನೇನು ಮಾಱಿಯ
ಮೇಳವಾಡಿದನೇ ಜಯದ್ರಥ
ನಾಳುತನವನು ಬವರದಲಿ ತನ್ನೊಡನೆ ತೋಱಿದನೆ ।
ನಾಳೆ ಬೈಗಿಂದೊಳಗೆ ರಿಪುವನು
ಸೀಳುವೆನು [2]ಸೀಳದಿರೆ[2] ಧರ್ಮಜ
ಕೇಳು ಭಾಷೆಯನೆಂದು ಮಿಗೆ ಗರ್ಜಿಸಿದನಾ ಪಾರ್ಥ ॥ ೩೪

ಹರನ ದುರ್ಗದಲಿರಲಿ ಮೇಣಾ
ಹರಿಯ ಕಡಲೊಳಗಿರಲಿ ಬ್ರಹ್ಮನ
ಕರ ಕಮಂಡಲದೊಳಗೆ ಹುದುಗಲಿ ರವಿಯ ಮಱೆಹೊಗಲಿ ।
ಉರಗ ಭುವನದೊಳಿರಲಿ ಮೇಣ್ ಸಾ
ಗರವ ಮುಳುಗಲಿ ನಾಳೆ ಪಡುವಣ
ತರಣಿ ತೊಲಗದ ಮುನ್ನ ಕೊಲುವೆನು ವೈರಿ ಸೈಂಧವನ ॥ ೩೫

ಕುರು ಬಲವ ಬಿಟ್ಟರೆ ಯುಧಿಷ್ಠಿರ
ನರಮನೆಯ ಹೊಕ್ಕರೆ ಮುರಾರಿಯ
ಶರಣುವೊಕ್ಕರೆ ಸರ್ವಥಾ ಕೊಲ್ವೆನು ಜಯದ್ರಥನ ।
ಧುರದೊಳುಳಿದಂತಿಂದ್ರ ಯಮ ಭಾ
ಸ್ಕರ ವಿರಂಚಿಗಳಡ್ಡವಿಸಿದರೆ
ಶಿರವ[3]ನರಿ[3]ವೆನು ನಾಳೆ ಬೈಗಿಂದೊಳಗೆ ಸೈಂಧವನ ॥ ೩೬ *

---

1 ಕೋಪ ಕುಡಿಯಿಡಲು (ಕ.ಟ.ತ). 2 ಬವರದಲಿ. 3 ನೊದೆ (ಕ).
* ಈ ಪದ್ಯವು (ಚ) ಪ್ರತಿಯಲ್ಲಿಲ್ಲ.

ಗುರು ವಿಘಾತಿಯ ವೇದ ನಿಂದಾ
ಪರನ ಪರದಾರಾಭಿಗಾಮಿಯ
ಹರ ಮುರಾರಿಯ ಭೇದವಾದಿಯ ವಿಪ್ರ ನಿಂದಕನ ।
ಪರಗುಣಾಸೂಯಕನ ಹಿಂಸಾ
ಪರನ ಪಿಸುಣನ ಶಠನ ಕೃಪಣನ
ನರಕವಾಗಲಿ ಕೊಲ್ಲದಿದ್ದರೆ ನಾಳೆ ಸೈಂಧವನ ॥ ೩೭

ಖಳನ ಧೂರ್ತನ ನಾಸ್ತಿಕನ ಚಂ
ಚಳನ ಪರ ನಿಕ್ಷೇಪ ಹಾರಿಯ
ದಳಿತ ಮರ್ಯಾದನ ಕೃತಘ್ನನ ಭರ್ತೃ ನಿಂದಕನ ।
ಸ್ಖಲಿತ ವಚನನ ಯೋಗಿ ನಿಂದಾ
ಕುಳನ ವಿಕಳ ವ್ರತನ ಲೋಕಾ
ವಳಿಗಳಾಗಲಿ ಕೊಲ್ಲದಿದ್ದರೆ ನಾಳೆ ಸೈಂಧವನ ॥ ೩೮

ನಾಳೆ ಖಚರೀ ಜನದ ತೊಡವಿನ
ತೋಳನವನಸು ನೆಮ್ಮದಿದ್ದರೆ
ಕಾಳೆಗದೊಳೆನ್ನೊಡಲ ಬಿಸುಡುವೆನಗ್ನಿ ಕುಂಡದಲಿ ।
ಕೇಳು ಧರ್ಮಜ ಎಂಬ ನುಡಿಗಳು
ಕಾಳೆಗದ ಸೊಗಸಾಗೆ ಲಕ್ಷ್ಮೀ
ಲೋಲ ಕೇಳುತ ಬಂದು ಪಾರ್ಥನ ಬಿರುದ ಹೊಗಳಿದನು ॥ ೩೯

ತೀರಿತಿನ್ನೇನರಿ ನೃಪನ ಸಂ
ಸಾರ ನೀನೇಱಿಸಿದ ನುಡಿಗಳ
ನಾರು ಕಳಚಲು ಬಲ್ಲರಗ್ಗದ ದೇವ ದೈತ್ಯರಲಿ ।
ವೀರ ರಾಮನ ನುಡಿಗೆ ರಾಮನು
ದಾರ ಬಾಣಕೆ ನಿನ್ನ ನುಡಿಗಳು
ಕೂರಲಗು ಸಮಜೋಳಿ ಜಗದೊಳಗೆಂದನಸುರಾರಿ ॥ ೪೦

ನಳಿನ ನಾಭನು ಪಾಂಚಜನ್ಯವ
ಮೊಳಗಿದನು ನಿಜ ದೇವದತ್ತವ
ಸೆಳೆದು ಫಲುಗುಣನೂದಿದನು ಗಾಂಡಿವವನೊದಱಿಸುತ ।
ಪ್ರಳಯ ದಿನದಲಿ ತಿವಿವ ಸಿಡಿಲ
ವ್ವಳಿಸುವಂತಿರೆ ರೌದ್ರ ರವ ಘುಳು
ಘುಳಿಸಿ ತಲ್ಲಣಿಸಿತ್ತು ಕೌರವ ರಾಯ ಪರಿವಾರ ॥ ೪೧

ಎನಿದೆತ್ತಣಿ ರಭಸ ತ್ರೈಲೋ
ಕ್ಯಾನುಕಂಪನವಾಯ್ತು ಶಿವ ಎನು
ತಾ ನರೇಂದ್ರ ನಿಕಾಯ ನಡುಗಿತು ಕೌರವೇಶ್ವರನ |
ಸೇನೆ ತಲೆಕೆಳಕಾಯ್ತು ಪಾರ್ಥನ
ಸೂನುವಿನ ಮರಣದಲಿ ಮಂತ್ರ
ಧ್ಯಾನ ನಮಗಾಯ್ತೆಂದು ತಲ್ಲಣಿಸಿತ್ತು ನೃಪ ಕಟಕ ॥ ೪೨

ಎಲೆಲೆ [1]ಕವಿ ಕಳ್ಳೇಱ ಹಾಯ್ದರು[1]
ಕೊಲೆಗಡಿಗರೋ ನೃಪರು ಮಗ ಮಡಿ
ದಳಲು ಮಿಗಲನ್ಯಾಯಕೆಳಸಿದನೇ ಯುಧಿಷ್ಠಿರನು |
ಬಲವ ಕರೆ ಕರೆ ಎನುತ ಕಾಹಿನ
ತೊಳಲಿಕೆಯ ನಾಯಕರು ಗಜಱಲು
ಬೆಳಗಿದವು ಬೊಂಬಾಳ ದೀವಿಗೆ ನೆರೆದುದತಿರಥರು ॥ ೪೩

ಪಾಳಯವು ಗಜಬಜಿಸೆ ತೊಳಲಿಕೆ
ಯಾಳು ನೆರೆದುದು ಕೋರಡಿಯ ಮುಳು
ವೇಲಿಗಾಂತರು ಬೇಹ ಹರಿಸಿದರಖಿಳ ದೆಸೆದೆಸೆಗೆ |
ಮೇಲುಗುದುರೆಗಳೊದಗಿದವು ಭೂ
ಪಾಲಕರು ತಲೆಗೆದಱಿ ಹುಯ್ಯಲ
ನಾಲಿಸುತ ಹೊಱವಂಟು ತಳಕೆಳಕಾಯ್ತು ನೃಪ ಕಟಕ ॥ ೪೪

ಕಡಿಯಣವನಾನೆಗಳ ಮೋಱೆಗೆ
ತೊಡಸಿದರು ದಂತಿಗಳ ಹೆಗಲಲಿ
ನಿಡು ನೊಗನ ಕಟ್ಟಿದರು ಕಿವಿಯಲಿ ಕೀಲುಗಳ ಸರಿಸಿ |
ಜಡಿವ ಗುಳವನು ಹಾಯ್ಕಿ ಬೀಸಿದ
ರೊಡನೊಡನೆ ಹಕ್ಕರಿಕೆ ಜೋಡಿನ
ಲಡಸಿ ಗಾಲಿಯ ಬಿಗಿದು ಗಜಬಜಿಸಿತ್ತು ನೃಪ ಕಟಕ ॥ ೪೫

ಶಿರದೊಳಾಂತರು ಮೊಚ್ಚೆಯವನಾ
ಚರಣದಲಿ ಸೀಸಕವ ತೋಳಲಿ
ಬಿರಿಯ ಕವಚವ ಬೆನ್ನಿನಲಿ ಕಟ್ಟಿದರು ಕೈಹೊಡೆಯ |

[1] ಕವಿ ಕಳರ ಹೊಯ್ದರು (ಗ).

ಸುರಗಿಗಳನೀಡಾಡಿ ತಿರುಹಿದ
ರೊಚಿಗೆಗಳನು ಬತ್ತಳಿಕೆಯನು ಬಿಲು
ದಿರುವಿನಲಿ ಪೋಹಿದರು ತಲ್ಲಣಿಸಿತ್ತು ತಮತಮಗೆ ॥ ೪೬

ಕರಿಗಳನು ರಾವುತರು ಜೋಧರು
ತುರಗವನು ಕಾಲಾಳು ರಥವನು
ವರ ಮಹಾರಥರಿಟ್ಟ ಸಬಳ ಕಠಾರಿಯುಬ್ಬಣವ ।
ಧುರದ ಭರ ಮಿಗೆ ಕೊಂಡು ಬೆದಱಿ
ಳ್ದಿಱಿಯೆ ಬೆಱಗಿನ ಬಳಿಯಲೊದಗಿ
ತ್ತರರೆ ಪಾಂಡವರೆನುತ ಹೊಯ್ದಾಡಿದರು ತಮ್ಮೊಳಗೆ ॥ ೪೭*

ಹರಿದು ಬೇಹಿನ ಚರರು ಪಾಂಡವ
ರರಮನೆಯ ಹೊಕ್ಕಱಿದು ಮರಳಿದು
ಬರುತ ಕಟಕದ ಗಜಬಜವನಲ್ಲಲ್ಲಿ ಮಾಣಿಸುತ ।
ನೆರವಿ ನಗೆಗೆಡೆಯಾಗೆ ಮುಸುಕಿನ
ಮುರುವಿನಲಿ ಪಾಳಯವ ಹೊಕ್ಕರು
ಗರುವ ಮನ್ನೆಯ ಮಂಡಳೀಕರು ಕೇಳ್ದರೀ ಹದನ ॥ ೪೮

ರವಿ ತನುಜ ಗುರು ಸೂನು ಭೂರಿ
ಶ್ರವ ಸುಲೋಚನ ಶಲ್ಯ ಕೃಪ ಸೈಂ
ಧವ ವಿವಿಂಶತಿ ಚಿತ್ರಸೇನರು ಕರ್ಣ ನಂದನರು ।
ತವತವಗೆ ಬೆದಱಿದರು ರಿಪು ಕೌ
ರವನ ಹೊರಗೈತಂಪರಂದಿನ
ರವದ ರೌದ್ರದ ರಾಜ ಕಾರ್ಯವ ತಿಳಿವ ತವಕದಲಿ ॥ ೪೯

* ನಲವತ್ತೇಳನೆಯ ಪದ್ಯವಾದಮೇಲೆ (ಗ. ಚ. ತ. ನ. ಪ). ಪ್ರತಿಗಳಲ್ಲಿ ಮುಂದಿನ ಪದ್ಯವು ಹೆಚ್ಚಾಗಿದೆ :—

ಪವನಸುತನಲ್ಲೀತನೀ ವಾ
ಸವನ ಸುತನೋ ಧರ್ಮಸುತನಂ
ತಿವನು ಸಾತ್ಯಕಿಯೀತ ನಕುಲ ವಿರಾಟನೃಪನೀತ ।
ಇವನು ಸಹದೇವಾಂಕನೀ ತೋ
ರ್ಪವನು ಪಾಂಚಾಲರು ಘಟೋತ್ಕಚ
ನಿವನೆನುತ್ತಱಿಯಟ್ಟಿ ಹೊಯ್ದಾಡಿದರು ತಮ್ಮೊಳಗೆ ॥

ಇರುಳು ಬೇಹಿನ ಚರರು ಪಾರ್ಥನ
ನಿರುಪಮಿತ ಗಾಢ ಪ್ರತಿಜ್ಞಾ
ಚರಿತವನು ಕೌರವನ ಸಭೆಯಲಿ ತಂದು ಹರಹಿದರು ।
ಮರಣ ಸೈಂಧವಗಲ್ಲದಿದ್ದರೆ
ಮರಣ ಪಾರ್ಥಂಗಲ್ಲದೆಡೆಯಲಿ
ಪರಿಹರಿಸುವುದ ಕಾಣೆವೆಂದರು [1]ಚರರು ಭೂಪತಿಗೆ[1] ॥ ೫೦*

ಲೇಸು ಲೇಸಭಿಮನ್ಯುವೀ ದು
ಶ್ಶಾಸನನ ಮಗನಿಂದ ರಣದಲಿ
ಘಾಸಿಯಾದನು ನಾವು ಮಾಡಿದುದೇನು ಪಾರ್ಥಂಗೆ ।
ಈಸನೇಟುಸಿ ನುಡಿದ ಪಾರ್ಥನ
ಭಾಷೆ ಹೊಳ್ಳಾಗದು ಸುಯೋಧನ
ದೇಶವನು ಬೀಳ್ಕೊಂಡೆನೆಂದನು ಸೈಂಧವನು ಸಭೆಗೆ ॥ ೫೧

ಆಳಲಿ ಮನೆಯಲಿ ಕಾಳುಗೆಡೆದಡೆ
ಫಲವಹುದೆ ನಿಜ ಸತಿಯ ಹಿಡಿದಾ
ನೆಳಸುನಂದಿನ ಭೀಮ ಮಾಡಿದ ಭಾಷೆಯೇನಾಯ್ತು ।
ಅಳುಕದಿರು ಪರಿವಾರವಿದೆ ಕೊಳು
ಗುಳಕೆ ವಜ್ರದ ಜೋಡು ದ್ರೋಣನು
ಬಲವಿಹೀನನೆ [2]ತಾನೆನುತ ಕುರು ರಾಯ ಗರ್ಜಿಸಿದ[2] ॥ ೫೨

---

[1] ನಾಳಿನದುಭುತವ (ತ.ದ.ನ). [2] ನಾನಿರಲು ಭಯಬೇಡ ನಿನಗೆಂದ (ಟ.ತ.ದ).

* ೫೦ ಮತ್ತು ೫೧ನೆಯ ಪದ್ಯಗಳಾದಮೇಲೆ (ಗ) ಪ್ರತಿಯಲ್ಲಿ ಕೆಳಗಿನ ಪದ್ಯಗಳು ಕ್ರಮವಾಗಿ ಹೆಚ್ಚಾಗಿವೆ.

ನರನ ಭಾಷೆಯ ಹದನ ಭೂಪನ
ವರ ಸಭೆಯೊಳಾ ಚರರು ಬಂದುರೆ
ವಿರಚಿಸಿವಡಾ ಹದನ ದುಶ್ಶಳೆ ಕೇಳಿ ಕಳವಳಿಸಿ ।
ಇರದೆ ಹರಿತಂದಳು ಜಯದ್ರಥ
ನರಸಿ ನೃಪತಿಯ ಹೊರಗೆ ನೀ ಪರಿ
ಹರಿಸಬೇಹುದು ಪತಿಯನೆಂದೆಱಗಿದಳು ಚರಣದಲಿ ॥

ಮೇಲಣನುವನು ಬಲ್ಲೆ ನೀ ತ
ನ್ನೋಲೆಭಾಗ್ಯವ ಕಾಯಬೇಹುದು
ಭೂಮಿಪತಿಯೆಂದೆನಲು ಬಾಲಕಿ ವೀರ ಭಟರುಗಳ ।
ಬಾಲಕಿಯ ಸಲಹುವುದೆನಲು ಭೂ
ಪಾಲ ನಸುನಗುತಹುದು ನಾವಾ
ಕೋಲ ಗುರುವನು ಕೇಳಬಹುದೆನುತ ನಿಂದಿರ್ದ ॥

ಆವನೋಲೆಯಕಾಱತನ ಗಾಂ
ಡೀವಿಯಿದಿರಲಿ ಫಲಿಸುವುದು ಮೇ
ಣಾವನದ್ಭುತ ಮಂತ್ರಶಕ್ತಿಗೆ ಮಣಿವನಸುರಾರಿ ।
ಕಾವರಿಲ್ಲರ್ಜುನನ ಕೈಯಲಿ
ಸಾವವರು ನಾವಲ್ಲೆನಲು ನರ
ದೇವ ಕುರುಪತಿ ಮತ್ತೆ ನುಡಿದನು ನಗುತ ಸೈಂಧವಗೆ ॥ ೫೩

ಗರುಡನೂರವರೆಱೆವರೇ ನಾ
ಗರಿಗೆ ತನಿಯುನು ನಮ್ಮ ಬಲದಲಿ
ಗುರುವಲಾ ಪಾಲಕನು ಕೈಕೊಂಬನೆ ಧನಂಜಯನ ।
ನರನ ನುಡಿಯುನು ಹೊಳ್ಳುಗಳೆವರೆ
ಚರಣದಲಿ ಬೀಳುವೆವು ನಡೆಯೆಂ
ದಿರುಳು ದ್ರೋಣನ ಮನೆಗೆ ಬಂದನು ಕೌರವರ ರಾಯ ॥ ೫೪

ನೆಗಹಿದವು ಕೈದೀವಿಗೆಯ ಸಾ
ಲುಗಳು ಹೊಂದಂಡಿಗೆಯ ದೂವಾ
ರಿಗಳು ವೆಂತಣಿಸಿದರು ಸೀಗುರಿ ಮೊಗವ ಮೋಹಿದವು ।
ಉಗಿದ ಕಡಿತಲೆ ಮುಸುಕಿದವು ಚೌ
ರಿಗಳ ಡೊಂಕಣಿ ತುಱುಗಿದವು ವೌ
ಳಿಗಳ ಮಸ್ತಕದವರು ನೆಲನುಗ್ಗಡಿಸಲೈತಂದ ॥ ೫೫

ಗರುಡಿಯೊಡೆಯನ ಪಾಳಯಕೆ ಕಡು
ಭರದಲೈತರೆ ಕೌರವೇಂದ್ರನ
ಬರವಿದೇನೆಂದಿದಿರು ಬಂದನು ದ್ರೋಣನಿದಿರಾಗಿ ।
ಧರಣಿಪನ ಸತ್ಕರಿಸಿ ನೆಲೆಯು
ಪ್ಪರಿಗೆಗೊಯ್ದನು ನುಸುಳು ಗಂಡಿಯೊ
ಳುರವಣಿಸಿದರು ಕರ್ಣ ಕೃಪ ಮೊದಲಾದ ಬೇಹವರು ॥ ೫೬

ವೀಳೆಯವ ಕರ್ಪುರವನಿತ್ತು ನೃ
ಪಾಲರನು ಕರ್ಣಾದಿ ಸುಭಟರ
ಸಾಲ ಮನ್ನಿಸಿ ದ್ರೋಣ ಬೆಸಗೊಂಡನು ಸುಯೋಧನನ ।

ಕಾಳಿಕೆಯು ಕೈಕೊಂಡು ಸಿರಿಮೊಗ
ಹೇಳುತಿದೆ ಭೀತಿಯನು ನಿ[1][ನ್ನಿನ][1]
ಕಾಳಗದ ಜಯ ನಮ್ಮದೀ ದುಮ್ಮಾನವೇನೆಂದ ॥ ೫೭

ಏನ ಹೇಳುವೆನರ್ಜುನನು ನಿಜ
ಸೂನು ಮಡಿಯೆ ದುರಾಭಿಮಾನದ
ಲೇನನೆಂದನು ಕೇಳಿರೈ ಕರ್ಣಾದಿ ಮಂತ್ರಿಗಳು ।
ತಾನು ಗಡ ಸೈಂಧವನ ತಲೆಯನು
ಭಾನುವಡಗದ ಮುನ್ನ ಕೊಂಬೆನು
ಹೀನನಾದರೆ ಹೊಗುವೆನೆಂದನು ಹವ್ಯವಾಹನನ ॥ ೫೮

ಕೊಂದವನು ದುಶ್ಶಾಸನನ ಮಗ
ಬಂದುದಪರಾಧವು ಜಯದ್ರಥ
ಗಿಂದಿವನ ಪತಿಕರಿಸಬೇಹುದು ರಣದೊಳರ್ಜುನನ ।
ಮುಂದುಗೆಡಿಸಲೆ ಬೇಕು ಭೀಷ್ಮರು
ಸಂದ ಬಳಿಕೆಮಗಾಪ್ತ ನೀನೇ
ತಂದೆ ನೀನೆಂದರಸನೆಱಗಿದ[2]ನವರ ಚರಣದಲಿ[2] ॥ ೫೯

ಮುಕುಟವನು ನೆಗಹಿದನು ಭೂಪಾ
ಲಕ [3]ನಿದಾನಿಸಿ[3] ಕೇಳು ಶಶಿಕುಲ
ಮುಕುರವಿತ್ತಂಡದಲಿ ನೆನೆಯೆವು ಭೇದ ಬುದ್ಧಿಗಳ ।
ಯುಕುತಿಯಿನ್ನಿದಕಿಲ್ಲ ಪಾರ್ಥನ
ಶಕುತಿ ಘನವೀರಾಜಕಾರ್ಯಕೆ
ಚಕಿತರಾದೆವು ರಾಯ ಚಿತ್ತೈಸೆಂದನಾ ದ್ರೋಣ ॥ ೬೦

ಕಾವಡೆನ್ನಳವಲ್ಲ ಮೇಣ್ ಗಾಂ
ಡಿವಿಯ [4]ಕೊಲ[4]ಲಳವಲ್ಲ ಕೃಷ್ಣನು
ಕಾವರೆಯು ಕೊಲುವರೆ ಸಮರ್ಥನು ವೇದ ಸಿದ್ಧವಿದು ।
ಜೀವಜಾತಕ್ಕೊಡೆಯನಾ ರಾ
ಜೀವನಾಭನು ಬಱಿಯಹಂಕಾ
ರಾವಲಂಬನದಿಂದ ಕೆಡುತಿಹುದಖಿಳ ಜಗವೆಂದ ॥ ೬೧

---

[1] ನ್ನೀ (ಸ). [2] ಗುರುವಿನಂಘ್ರಿಯಲಿ (ಗ). [3] ವಿಚಾರಿಸಿ (ಕ), ಶಿರೋಮಣಿ (ಗ.ಚ.ಪ). [4] ಕೋ (ಸ.ಪ).

ಇದು ಮುರಾರಿಯ ಲೀಲೆಗೋಸುಗ
ಉದಯಿಸಿದ ಜಗವಿದಱೊಳೊಬ್ಬನ
ಸದೆವನೊಬ್ಬನ ಹಿಡಿದು ಸಲಹುವನೊಬ್ಬನೊಬ್ಬನಲಿ ।
ಇದಱೊಳಾತಂಗಿಲ್ಲ ಕರುಣಾ
ಸ್ಪದತೆ ನಿಷ್ಕಾರುಣ್ಯ ಭೂಯಂ
ತ್ರದ ವಿನೋದ ಕ್ರೀಡೆ ಕೃಷ್ಣನದೆಂದನಾ ದ್ರೋಣ ॥ ೬೨

ನರನ ನುಡಿಯೆಂದಿರದಿರವು ಮುರ
ಹರನ ನುಡಿಗಳು ಕೇಳು ಗಿರಿ ಗ
ಹ್ವರದ ನುಡಿಯೋ ಜಂಗಮ ಧ್ವನಿಯೋ ವಿಚಾರಿಸಲು ।
ನರನ ನುಡಿ ಹೊಳ್ಳಾಗದಾ ಮುರ
ಹರನ ಬಲುಹುಳ್ಳನ್ನಬರವೆನ
ಲರಸನಾಲಿಸಿ ಕೇಳುತಿರ್ದನು ಕೈಯ ಗಲ್ಲದಲಿ ॥ ೬೩

ಕೇಳುತಿರ್ದೈ ಕರ್ಣ ಬೊಮ್ಮವ
ಕೇಳ ಬಂದೆವೆ ನಾವು ನಾಳಿನ
ಕಾಳೆಗದ ಜಯಮುಖವ ಬೆಸಗೊಳ ಬಂದೆವಿಂದೀಗ ।
ಹೇಳುತಿದ್ದರಸಂಗತವನಿದು
ಹೋಲುವುದಲೇ ಮುನಿ ಕುಮಾರರು
ಕಾಳೆಗವನೇಗುವರು ಬಳಿಕೇನೆಂದನಾ ಭೂಪ ॥ ೬೪

ಕಟಕಿಯೇಕಿದು ವಿಪ್ರರಹೆವು
ತ್ಕಟದ ಶೌರಿಯವಿಲ್ಲ ನಾವ್ ದಿಟ
ಪುಟವ ನುಡಿದರೆ ಖಾತಿಯಾದುದೆ ನಿಮ್ಮ ಚಿತ್ತದಲಿ ।
ನಿಟಿಲಲೋಚನ ನೋಡುವರೆ ದು
ರ್ಘಟವೆನಿಪ ಮೋಹರದ ಬಲು ಸಂ
ಘಟನೆಯನು ತೋಱುವೆನು ಚಿಂತಿಸಬೇಡ ನೀನೆಂದ ॥ ೬೫

ವ್ಯೂಹವನು ರಚಿಸುವೆನು ನಾಳಿನೊ
ಳಾಹವಕೆ ತಳತಂತ್ರವೊಂದೇ
ಮೋಹರಕೆ ನಡೆತರಲಿ ಷಡುರಥರಾದಿ ಯಾದವರು ।

ಸಾಹಸವನುದಯದಲಿ ತೋಱುವೆ
ಬಾಹು ಬಲವನು ಸೈಂಧವನ ಮೈ
ಗಾಹ ಬಲಿವೆನು [1]ಕಾಂಬೆ ಕೃಷ್ಣನ ನೆನಹ ಬಳಿಕೆಂದ[1] ॥ ೬೬

[2]ಸಾಕು ನೀ ಚಿಂತಿಸಲು ಬೇಡ[2] ಪಿ
ನಾಕಿಧರನಡಹಾಯ್ದಡೆಯು ನಾ
ವಾಕೆವಾಳರು ರಣಕೆ ಕೃಷ್ಣಾರ್ಜುನರ ಪಾಡೇನು ।
ನೂಕಿ ನೋಡಾ ಸೈಂಧವನನೇ
ಕೈಕವೀರರು ಕಾವೆವೆಂದು
ದ್ರೇಕ ಮಿಗೆ ಗರ್ಜಿಸಿತು ಕರ್ಣಾದಿಗಳು ತಮತಮಗೆ ॥ ೬೭

ಬೀಳುಕೊಂಡುದು ರಾಜ ಸಭೆ ತ
ಮ್ಮಾಲಯಕೆ ಸೈಂಧವನು ಚಿಂತಾ
ಲೋಲನಿರ್ದನು ಮರಣ ಜೀವನ ಜಾತ ಸಂಶಯನು ।
ಕೋಲ ಗುರುವಿನ ವಿವಿಧ ರಚನೆಯ
ಕೇಳಿದನು ನಸು ನಗುತ ಪಾರ್ಥಗೆ
ಹೇಳಿದನು ಕರುಣದಲಿ ಗದುಗಿನ ವೀರ ನಾರಯಣ ॥ ೬೮

ಎಂಟನೆಯ ಸಂಧಿ ಮುಗಿದುದು.

---

[1] ಬಳಿಕ ಕೃಷ್ಣನ ನೆನಹು ಘಟಿಸುವದೇ (ಕ). [2] ಸಾಕು ನಿರ್ಬಂಧಿಸಲು ಬೇಡ (ಕ.ದ.ನ).

ಒಂಬತ್ತನೆಯ ಸಂಧಿ

ಸೂಚನೆ॥ ಜಯಸಮರ ಸಾರಂಭನಾಹವ
ಭಯ ಬಹಿರ್ಮುಖನಸ್ತ್ರವಿದ್ಯಾ
ನಿಯತಮತಿ ಮೋಪರಿಸಿ ಸಮರಕೆ ದ್ರೋಣನನುವಾದ ॥

ಕೇಳು ಜನಮೇಜಯ ಧರಿತ್ರೀ
ಪಾಲ ಫಲುಗುಣ ಹೊಕ್ಕನಾಯುಧ
ಶಾಲೆಯನು ತೆಗೆಸಿದನು ಧನು ಮೊದಲಾದ ಕೈದುಗಳ ।
ಸಾಲಚಿದು ನಿಲಿಸಿದನು ನಿಶಿತ ಶ
ರಾಳಿ ಚಾಪ ಕೃಪಾಣ ಪರಶು ತ್ರಿ
ಶೂಲ ಮುದ್ಗರ ಚಕ್ರ ಸೆಲ್ಲಹ [1]ಶಕುತಿ[1] ತೋಮರವ ॥ ೧

ಸವೆಗ ಮೊಚ್ಚೆಯ ಜೋಡು ಸೀಸಕ
ಕವಚ ಬಾ[2]ಹುರಿಕೆಗಳ ನಿಲಿಸಿದ
ನ[2]ವಿರಳಾಕ್ಷತೆ ಗಂಧ ಪುಷ್ಪ ಸುಧೂಪ ದೀಪದಲಿ ।
ವಿವಿಧ ಸತ್ಕಾರದಲಿ ದುಗ್ಗಾ
ಸ್ತವವ ಜಪಿಸಿದ ವರ ಘೃತೋದನ
ನವ ರುಧಿರ ಮಾಂಸೋಪಹಾರಂಗಳಲಿ ಪೂಜಿಸಿದ ॥ ೨

ಒಡನೆ ಗಜಬುವ ವಾದ್ಯದಲಿ ಕೆಂ
ಪಡರಿದೋಗರ ಸಹಿತ ಭೂತಕೆ
ಬಡಿಸಿದರು [3]ಮಾಂತ್ರಿಕರು[3] ಬಲಿಗೆದಬಿದರು ದೆಸೆದೆಸೆಗೆ ।
ತೊಡವು ವಸನಾದಿಗಳಲೊಪ್ಪಂ
ಬಡುವ ಬಲಿಯನು ಪರಿಯೊಳರ್ಪಿಸಿ
ನಡುವಿರುಳು ಕಲಿ ಪಾರ್ಥನರ್ಚಿಸಿದನು ನಿಜಾಯುಧವ ॥ ೩

ಇರುಳಿನದ್ಭುತ ರವವನಾಲಿಸಿ
ಮುರಮಥನನೀ ಫಲುಗುಣನ ಸಂ
ಗರ ಜಯೋದ್ಧತ ಮಂತ್ರವೆಂದನು ದಾರುಕನ ಕರೆದು ।

---

[1] ಪಿಟ್ಟೆ (ಕ). [2] ಹುರರಕ್ಷೆಗಳನಂತ (ಕ.ಪ). [3] ಮಂತ್ರಿಗಳು (ಕ.ಗ.ಚ.ನ).

ಹರ ಮಹಾ[1]ಸೇನಾ[1]ದಿಗಳು ಗೆಲ
ಲರಿದು ನಾಳಿನ ಬವರವಿನ್ನೀ
ನರನ ಜಯವೆಂತೆನುತ ಚಿಂತಿಸುತಲ್ಲಿಗೈತಂದ ॥ ೪

ರಚನೆ ಚೆಲುವಿದು ನಾಳಿನಾಹವ
ಖಚರ ಕಿಂಪುರುಷರಿಗೆ ಅಸದಳ
ವಚಲಬಲ[2]ಗಾಂಡಿವಿಗೆ[2] ಹರಿಯದು ಸುಪ್ತಿಯೊಳಗವನ ।
ಉಚಿತದಲಿ ಕೊಂಡೊಯ್ದು ರುದ್ರನ
ವಚನದನುವನು ತಿಳಿವೆನೆಂದಾ
ಶಚಿಯ ಗಂಡನ ಮಗನನೀಶನ ಪದವ ಕಾಣಿಸಿದ ॥ ೫

ಶಿವನ ಕರುಣಾ ಲಾಭ ಪುಣ್ಯ
ಪ್ರವರ ಪಾರ್ಥನ ಮುನ್ನಿನಂದದ
ಲವನಿಗಿಳುಹಿದ ನಿಖಿಳ ದಿವ್ಯಾಯುಧದ ವೇದಿಕೆಗೆ ।
ಸವೆದುದಿರುಳಿಂದೂಪಲಂಗಳ
ನಿವಹ ಬಲಿದುದು ಚಕ್ರವಾಕದ
ತವಕ ತಗ್ಗಿತು ತರಣಿಯುಡರಿದನುದಯ ಪರ್ವತವ ॥ ೬

ವಿಮಳ ಧರ್ಭಾಂಕುರದ ಶಯನದೊ
ಳಮರಪತಿ ಸುತ ಪವಡಿಸಿದನನು
ಪಮ ವಿಳಾಸನು ಕನಸ ಕಂಡೆನೆನುತ್ತ ಕಂದೆಱೆದ ।
ಸಮರ ವಿಜಯಕೆ ಶಿವನ ಕೃಪೆ ಸಂ
ಕ್ರಮಿಸಿತೆನಗೆನುತಿರಲು ಮುಂದಣ
ಕಮಲನಾಭನ ಕಂಡು ಬಿನ್ನಹ ಮಾಡಿದನು ನಗುತ ॥ ೭

ದೇವ ನಿಮ್ಮಡಿ ಸಹಿತ ಕಂಡೆನು
ದೇವದೇವನ ಚರಣವನು ಸಂ
ಭಾವಿಸಿದ ನಮ್ಮಿಬ್ಬರನು ದಕ್ಷಾಧ್ವರಧ್ವಂಸಿ ।
ನಾವು ಬಂದುದನಱಿದು ವರ ರಾ
ಜೀವ ಸರಸಿಗೆ ಕಳುಹಿದನು ಗಾಂ
ಡೀವ ನಿಜ ಚಾಪವನು ಕಂಡೆನು ಕೊಳನ ಮಧ್ಯದಲಿ ॥ ೮

---

[1] ಬ್ರಹ್ಮಾ (ಗ), ದೇವಾ (ಕ.ದ.ಪ). [2] ಪಾರ್ಥಂಗೆ (ಟ.ತ).

ಬಳಿಕ [1]ತಿರುವಿಟ್ಟಾಗಲ[1]ಸ್ತ್ರವ
ಸೆಳೆದು ಬಿಲುವಿದ್ಯಾ ಚಮತ್ಕೃತಿ
ಯಳವ ತೋಱಿದಡಾಗಳೀಶನ ಹೊರೆಗೆ ನಾಸ್ಯೈದಿ ।
ನಿಲೆ ತದೀಯಾಸ್ತ್ರಪ್ರಯೋಗದ
ಬಲುಹನೀಕ್ಷಿಸೆ ತೆಗೆವ ಬೆಡಗನು
ಕಲಿಸೆ ಪಾಶುಪತಾಸ್ತ್ರವೆನಗಾಯ್ತಲ್ಲಿ ವಶವರ್ತಿ ॥ ೯

ಕನಸನೀ ಹದನಾಗಿ ಕಂಡೆನು
ದನುಜಹರ ಬೆಸಸಿದಱ ಫಲವನು
ನನಗೆನಲು ನಸುನಗುತ ನುಡಿದನು ದಾನವಧ್ವಂಸಿ ।
ನಿನಗೆ ಶೂಲಿಯ ಕರುಣವಾಯ್ತಿಂ
ದಿನಲಿ ಪಾಶುಪತಾಸ್ತ್ರ ನಿನ್ನದು
ದಿನದೊಳರಿ ಸೈಂಧವ ವಧ ವ್ಯಾಪಾರವಹುದೆಂದ ॥ ೧೦

ಉಲಿವ ಮಂಗಳ ಪಾಠಕರ ಕಳ
ಕಳದೊಳುಪ್ಪವಡಿಸಿದನವನಿಪ
ತಿಲಕ ಮಾಡಿದನಮಲ ಸಂಧ್ಯಾವಂದನಾದಿಗಳ ।
ನಳಿನನಾಭನ ಪಾದ ಪದ್ಮವ
ನೊಲವಿನಿಂದಭಿನಮಿಸಿ ಸುಭಟಾ
ವಳಿಗೆ ನೇಮವ ಕೊಟ್ಟನಂತಕ ಸೂನು ಸಂಗರಕೆ ॥ ೧೧

ನಡೆದುದುರು ಸನ್ನಾಹದಲಿ ಸೂ
ಳಡಸಿ ಮೊಱೆವ ಗಭೀರ ಭೇರಿಯ
ಕಡು ರವದ [2]ರಿಪು ಭಟರ ಬೈಗುಳ ಗೌಱುಗಹಳೆಗಳ[2] ।
ಎಡಬಲಕೆ ತನಿಹೊಳೆವ ತೇಜಿಯ
ಕಡು ಮದದ ಕರಿ ಘಟೆಯ ತೇರಿನ
[3]ನಿಡುವರಿಯ[3]ಕಾಲಾಳ ಕಳಕಳವಾಯ್ತು ರಣದೊಳಗೆ ॥ ೧೨

ಎದ್ದುದೀ ಕಟಕದಲಿ ಬಲ ಮಿಂ
ಡೆದ್ದ ಸುಭಟರು ಸಮರ ಭೂಮಿಯ
ಹೊದ್ದಿದರು ಝಳಪಿಸುವಡಾಯ್ದದ ಹೊಗರ ಹೊಳಹುಗಳ ।

---

[1] ವರ ಪಟ್ಟಣದೊಳ (ಕ), ವರ ವಟುಕರದಲ್ (ಟ.ತ.ದ.ನ). [2] ತಂಬಟದ ನಿಸ್ಸಾಳಗಳ ಕಹಳೆಗಳ (ಗ.ಚ.ಪ). [3] ಕಡುಹುಗಳ (ಕ).

ಅದ್ದುದತಳ[1]ಕೆ ಅ[1]ವನಿಯೆನೆ ಹೊದ
ಱೆದ್ದು ನಡೆದುದು ದಂತಿ ಘಟೆ ಬರು
ತಿದ್ದುದಗಣಿತ ರಥ ಪದಾತಿಗಳಾಹವಾಂಗಣಕೆ ॥ ೧೩

ವಿನುತ ಸಂಧ್ಯಾವಂದನಾದಿಯ
ನನುಕರಿಸಿ ಹರಿಪದ ಪಯೋಜವ
ನೆನೆದು ವಿರಚಿತ ದೇವ ವಿಪ್ರಾನಳ ಸಮಾರ್ಚನನು ।
ಕನಕ ಕವಚವ ತೊಟ್ಟು ಗಡ್ಡದ
ಘನತೆಯನು ಗಂಟಿಕ್ಕಿ ವರ ಕಾಂ
ಚನ ಮಯದ ಯಜ್ಞೋಪವೀತವನಿಳುಹಿದನು ದ್ರೋಣ ॥ ೧೪

ನಿಱಿಯುಡಿಗೆಯಲಿ ಮಲ್ಲ ಗಂಟಿನ
ಸೆಱಗ ಮೋಹಿಸಿ [2]ಬೆರಳ[2] ದರ್ಭೆಯ
ಹಱಿದು ಬಿಸುಟನು ಜೋಡು ಸೀಸಕ ಬಾಹುರಕ್ಷೆಗಳ ।
ಮುರುಹಿ ಬಿಗಿದನು ನಿಖಿಳ ಭೂಸುರ
ರುಱುವ ಮಂತ್ರಾಕ್ಷತೆಯ ಕೊಳುತ
ಳ್ಳಿಱಿವ ಜಯರವದೊಡನೆ ರಥವೇಱಿದನು ಕಲಿ ದ್ರೋಣ ॥ ೧೫

ಸೂಳವಿಸಿದವು ಸನ್ನೆಯಲಿ ನಿ
ಸ್ಸಾಳ ಕೋಟಿಗಳುರವಣಿಸಿ ಹೆ
ಗ್ಗಾಳೆಗಳು ಸಾಱಿದವು ಸುಭಟರ ವೀರ ವಿತರಣವ ।
ಸಾಲು ಝಲ್ಲರಿಗಳ ಪತಾಕಾ
ಜಾಲ [3]ಸಬಳದ ಹೊದಱ[3] ಗೋವಳಿ
ಗೋಲ ತೂಗಾಟದಲಿ ಸಮರಕೆ ದ್ರೋಣ ನಡೆತಂದ ॥ ೧೬

ನೆಗಹಿ ಬೀಸುವ ಚೌರಿಗಳ ಸ
ನ್ನೆಗೆ ಚತುರ್ಬಲವೆಲ್ಲ ದ್ರೋಣನ
ದೃಗುಪಥಕೆ ತೋಱಿದರು ತಂತವ್ಮಾಳು ಕುದುರೆಗಳ ।
ತೆಗೆದು ಯೋಜನವಾಱಱಲಿ ಕಾ
ಳೆಗಕೆ ಶಕಟವ್ಯೂಹವನು ಹೂ
ಣಿಗರ ಬಲಿದನು ಕೌರವೇಂದ್ರಾನುಜರ ಗಡಣದಲಿ ॥ ೧೭

---

[1] ದೊಳ (ತ.ದ.ನ.ಪ). [2] ಬಿಗಿದ (ಕ). [3] ದೊಂಕಣಿಬಲದ (ಗ), ದಲಿಹೊದಱೆದ್ದ (ಚ.ಪ).

ಇದಿರೆ ಶಕಟ ವ್ಯೂಹವದರ
ಗ್ರದಲಿ ದುಶ್ಶಾಸನನು ಕೆಲಬಲ
ದೊದವಿನಲಿ ಬಾಹ್ಲಿಕನು ಸೌಬಲ ಸಿಂಧು ಮಾಗಧರು ।
ಇದಱ ಹಿಂದಣ ವ್ಯೂಹ ಯೊಳ್ಳೆಗಾ
ವುದದ [1]ನೀಳ[1]ದೊಳೆರಡುವರೆ ಗಾ
ವುದದ ವಿಸ್ತಾರದಲಿ ಮಕರ ವ್ಯೂಹವನು ಬಲಿದ ॥ ೧೮

ಹಿಂದೆ ಯೋಜನ[2]ವೈದ[2]ಱಳವಿಯೊ
ಳೆಂದು ಚಕ್ರವ್ಯೂಹವನು ನಲ
ವಿಂದ ಬಲಿದನು ನಿಲಿಸಿದನು ಕಾಂಭೋಜ ಭೂಪತಿಯ ।
ವಿಂದನನುವಿಂದನನು ದಕ್ಷಿಣ
ವೃಂದ ಸಮಸಪ್ತಕರ ಬಲವನು
ಸಂದಣಿಸಿದರು ಹತ್ತು ಸಾಸಿರ ನೃಪರ ಗಡಣದಲಿ ॥ ೧೯

ತುರಗವಱುವತ್ತಾಱು ಕೋಟಿಯ
ನುರು ಮದೇಭವನೆಂಟು ಲಕ್ಷವ
ವರ ರಥವನಱುವತ್ತು ಸಾವಿರವನು [3]ಸಗಾಢದಲಿ[3] ।
ಧುರದ ಕಾಲಾಳಗಣಿತವ ಮೋ
ಹರಿಸಿ ಹಂಸವ್ಯೂಹವನು ಸಡ
ಗರಿಸಿದನು ನಿಯುತಾಯು ಮೊದಲಾದವರ ಕಾಹಿನಲಿ ॥ ೨೦

ಕೆಲಬಲದ ಸಬಳಿಗರು ಸಬಳದ
ವಳಯದಲಿ ಹರಿಗೆಗಳು ಹರಿಗೆಗ
ಳೊಳಗೆ ಬಿಲ್ಲಾಳುಗಳ ಮಱೆಯಲಿ ವಾಜಿ ಗಜ ರಥವ ।
ನಿಲಿಸಿ ಗರ್ಭವ್ಯೂಹವನು ಮಂ
ಡಳಿಸಿದನು ಸಂವೀರರನು ಸಿಂ
ಹಳರ ನಿಲಿಸಿದ ಹತ್ತು ಸಾವಿರ ಮಂಡಳೇಶ್ವರರ ॥ ೨೧

ಅಪರ ಭಾಗದಲಳವಿಯಲಿ ಭೂ
ಮಿಪರ ಭೂರಿಶ್ರವನ ಶಲ್ಯನ
ಕೃಪನ ವೃಷಸೇನನ ಸುಲೋಚನ ದೀರ್ಘಬಾಹುಕರ ।

---

[1] ನಿಳಯ (ಕ.ಜ.ಪ).　[2] ವಾಱ (ಕ).　[3] ಸಗಾಢಿಕೆಯ (ಕ), ರಣಾಗ್ರದಲಿ (ಟ.ತ.ದ.ನ).

ನೃಪತಿಗಳನೆಂಬತ್ತು ಸಾವಿರ
ಚಪಳ ಗಜ ಹದಿನೆಂಟು ಕೋಟಿಯು
ನಪರಿಮಿತ ತೇಜಿಯಲಿ ಪದ್ಮವ್ಯೂಹವನು ಬಲಿದ ॥ ೨೨

ಆ ಮಹಾಮೋಹರದ ಬಳಿಯಲಿ
ಸೋಮದತ್ತನ ದಂಡಧರನನು
ತಾಮರಸ ಬಂಧುವಿನ ಮಗನನು ಕ್ಷೇಮಧೂರ್ತಕನ।
ಆ ಮಹಾಬಾಹುಕನನಶ್ವ
ತ್ಥಾಮನನು ಕೃತವರ್ಮಕರೆನಿಪ ಸ
ನಾಮರನು ನಿಲಿಸಿದನು ಸೂಚಿವ್ಯೂಹ [1]ವಳಯದಲಿ[1] ॥ ೨೩

ಪದುಮ ಸೂಚಿವ್ಯೂಹ ಮಧ್ಯದೊ
ಳದಟರನು ನಿಲಿಸಿದನು ಸಮರಾ
ಗ್ರದಲಿ ಅವನಳಲಿಗರನಾಪ್ತರನವನ ಬಾಂಧವರ।
ಕದನಗಲಿ ಸೈಂಧವನನಾ ಮ
ಧ್ಯದಲಿ ನಿಲಿಸಿದನಮಮ ಸಮರಕೆ
ಮದನ [2]ಮಥನನು[2] ಮೊಗಸಲಸದಳವೆನಿಸಿ ರಂಜಿಸಿತು ॥ ೨೪

ತಿವಿವ ಸಿಡಿಲೊಬ್ಬುಳಿಯೊ ಪ್ರಳಯದ
ಜವನ ನೆರವಿಯೊ ಕಾಳಕೂಟಾ
ರ್ಣವದ ಸೀಮೋಲಂಘನವೊ ಮೃತ್ಯುವಿನ ಪಾಳಯವೊ।
ಅವನಿ ಕುಸಿದುದು ನೆರೆದ ಸೇನೆಯ
ಹವಣಿಗೀಶ್ವರ ಬಲ್ಲನೆನೆ ಸೈಂ
ಧವನ ಕಾಹಿನ ಮೋಹರಂಗಳು ಕಿಡಿಯನುಗುಳಿದವು ॥ ೨೫

ಜಡಿವ ಮದದಾನೆಗಳ ಗಗನವ
ನಡರ್ವ ಕಡುಗುದುರೆಗಳ ಸೂರಿಯೊ
ಳೆಡಬಲಕೆ ಬಿಱುವರಿವ ತೇರಿನ ಸೂತರೋಜೆಗಳ।
ಖಡುಗ ಕೊಂತವ ನಭಕೆ ಹಾಯಿಕಿ
ಹಿಡಿವ ಸುಭಟರ ಭುಜದ ಹೊಯ್ಲಿನ
ಕಡುಮನದ ರಣದವಕಿಗರ ಸೌರಂಭ ರಂಜಿಸಿತು ॥ ೨೬

---

[1] ರಚನೆಯಲಿ (ಕ). [2] ಮದಹರ (ಗ.ಚ.ಪ).

ಮೊಳಗಿದವು ನಿಸ್ಸಾಳ ಕೋಳಾ
ಹಳಿಸಿದವು ಕಹಳೆಗಳು ಪರ್ವತ
ಹಿಳಿಯೆ ಹೆಚ್ಚಿದ ಪಟಹ ಪಣಹ ಮೃದಂಗ ಡಿಂಡಿಮದ।
ಉಲಿ[1][ಯ][1] ತೇಜಿಯ ಹೇಷಿತದ ವೆ
ಗ್ಗಳೆಯ ಕರಿಗಳ ಬೃಂಹಿತದ ಗೊಂ
ದಳದ [2][ಕ]ಳಗರ್ಜಾಯ್ತು[2] ಕೌರವ ಸೈನ್ಯ ಶರಧಿಯಲಿ॥ ೨೭

ಮುಂದೆ ಶಕಟವ್ಯೂಹದಲಿ ನಡೆ
ತಂದು ನಿಂದನು ದ್ರೋಣ [3]ನಿಜ[3]ಬಲ
ದಂಡವನು ನೆಱೆ ನೋಡಿ ನೋಡಿ ಕಿರೀಟವನು ತೂಗಿ।
ಇಂದು ಗೆಲಿದರೆ ಧರ್ಮಸುತನವ
ರಿಂದುಕುಲದಗ್ಗಳರು ಬರಹೇ
ಳೆಂದು ಭಟ್ಟರನಟ್ಟಿದನು ಪಾಂಡವರ ಪಾಳಯಕೆ॥ ೨೮*

ಕೇಳು ಧೃತರಾಷ್ಟ್ರಾವನಿಪ ಸಿರಿ
ಲೋಲ ಸಹಿತ ಯುಧಿಷ್ಠಿರಾದಿಗ
ಳಾಳ ಮೇಳಾಪದಲಿ ಪೊಕ್ಕರು ಕಾಳೆಗದ ಕಳನ।
ಸಾಲಱಿದು ನಿಜಸೇನೆಯನು ಪಾಂ
ಚಾಲಸುತ ವೋಹರಿಸಿದನು ಕೆಂ
ಧೂಳಿ ಮಾಣಿಸಿತನಿಮಿಷತ್ವವನಮರ ಸಂತತಿಯ॥ ೨೯

ಅರಸನೆಡವಂಕದಲಿ ಮತ್ಸ್ಯರು
ಬಿರುದ ಕೈಕೆಯ ಚೈದ್ಯ [4]ಕೇರಳ[4]
[5]ಮರು[5] ಯವನ ಸಂವೀರ [6]ಕೌಸಲ[6] ಪಾಂಡ್ಯ ಮಾಗಧರು।
ಧರಣಿಪನ ಬಲವಂಕದಲಿ ವೋ
ಹರಿಸಿ ಪಾಂಚಾಲಕರು ಚೂಣಿಯೊ
ಳುರವಣಿಸಿದರು ನಕುಲ ಸಾತ್ಯಕಿ ಭೀಮನಂದನರು॥ ೩೦

---

[1] ವ (ಸ). [2] ಗಳಗಚ್ಚಾಯ್ತು (ಕ), ಗಳಘರ್ಜಿಸಿತು (ಗ.ಚ), ಗಳಗಜರ್ಾಯ್ತು (ಟ.ತ), ಗಳಗಜನೆಯ್ತು (ದ), ಗಳಲಿಗಜರ್ಾಯ್ತು (ಪ). [3] ನೀ (ಕ.ಗ.ಚ). * ಇಲ್ಲಿಗೆ (ಗ) ಪ್ರತಿಯಲ್ಲಿ ಸಂಧಿ ಮುಗಿದಿದೆ.

(ಗ) ಪ್ರತಿಯಲ್ಲಿರುವ ಸೂಚನೆ:—

ಅಳಲು ಮಿಗೆ ಕುರುರಾಯನನುಜನ
ಗಲಿದು ಮಾರುತ ಪಾರ್ಥ ಕಂಡನು
ಕಳನೊಳತಿರಥನನು ಧನುರ್ಧರ ಭಾಳಲೋಚನನ॥

[4] ಶೃಂಜಯ (ಗ). [5] ಮುರ (ಕ). [6] ಶೃಂಜಯ (ಟ.ತ.ನ).

ನರ ಮುರಾಂತಕರೊಂದು ಕಡೆಯಲಿ
ಮುರಿಯೆ ಕಂಡನು ನೃಪತಿ ಕೃಷ್ಣನು
ಹೊರೆಗೆ ಬಂದನು ನಮಿಸಿ ಬಿನ್ನಹ ಮಾಡಿದನು [1]ಬಳಿಕ[1] |
ನರನಿವನು ಮಗನಿದಿರುಗಾಣದೆ
ಹಿರಿದನೇಱಿಸಿ ನುಡಿದನಿದ ಪ[2]ತಿ
ಕ[2]ರಿಸಬೇಹುದು ನಿನ್ನ ಕರುಣವೆ ಹರಣವೆಮಗೆಂದ || ೨೧

ಹಗೆಯ ತಲೆ ಹೋಗದಡೆ ವಹ್ನಿಯ
ಹೊಗುವ ನುಡಿ ತಮ್ಮನದು ಬಳಿಕಾ
ಸೆಗಳಿಕೆಯೊಳುಳಿದೆಮ್ಮ ನಾಲ್ವರ ದೇಹ [3]ನಿ[3]ಕ್ಷೇಪ |
ಬಗೆಯಲೈವರ ಜೀವನದ ವಿಲ
ಗಿಗನು ನೀನೆಂದರಸ ಕರುಣಾ
ಳುಗಳ ದೇವನ ಬೇಡಿಕೊಂಡನು ಕೇಳು ಧೃತರಾಷ್ಟ್ರ || ೨೨

ಪಸೆಗಡಲು ಕುಡಿನೀರು ನೆಱೆ ನೀ
ರಡ[1]ಸಿದುದು[1] ಪಾರ್ಥನ ಶರಾವಳಿ
ವಡಬನಿದಱೊಳು ಕೆಲಬಲದ ಹಂಗೇಕೆ ಕದನದಲಿ |
ಕಡುಹಿನಲಿ ಸೈಂಧವನ ತಲೆಯನು
ಹೊಡೆದು ನಿನ್ನಯ ಕಾಲ [5]ಬಳಿ[5]ಯಲಿ
ಕೆಡಹುವನು ನಿಮಿಷದಲಿ ಫಲುಗುಣನೆಂದನಸುರಾರಿ || ೨೩

ಕರೆದು ಸಾತ್ಯಕಿ ಭೀಮನನು ನೃಪ
ವರನ ಸುಯ್ಧಾನದಲಿ ನಿಲಿಸಿದ
ನರಿಬಲಕೆ ನೂಕಿದನು ಕೈಕೆಯ [6]ಚೈದ್ಯ[6] ಸೃಂಜಯರ |
ಮುರಮಥನನೊಡಗೂಡಿ ನಿಜ ಮೋ
ಹರವ[7]ನಂದೈನೂಱು[7] ಬಿಲ್ಲಂ
ತರಕೆ ತೊಲಗಿ ಮಹಾಸ್ತ್ರಮಂತ್ರವ ಜಪಿಸಿದನು ಪಾರ್ಥ || ೨೪

ಇಳಿದು ರಥವನು ಮುರಹರನ ಪದ
ತಳದ ಧೂಳಿಯ ಕೊಂಡನತಿ ನಿ
ರ್ಮಲ ಸಮಾಧಾನದಲಿ ಕೃಷ್ಣನ ಚರಣಕೆಱಗಿದನು |

---

1 ನಗುತ (ಕ.ಗ.ಚ). 2 ರಿಹ (ಕ). 3 ವಿ (ತ).
4 ಸುವುದು (ಕ). 5 ಬಾ (ಕ.ಗ.ದ). 6 ಮತ್ಸ್ಯ (ಟ.ತ.ದ).
7 ನುಳಿದಿನ್ನೂಱು (ಗ.ಚ.ಪ).

ತಲೆಯ ಹಿಡಿದೆತ್ತಿದನು ಹರಿ ಕೋ
ಮಳ ಕರಾಂಬುಜದಿಂದ ಪಾರ್ಥನ
ನೊಲಿದು ಮೈದಡವಿದನು ಗೆಲು[1]ಹೋಗೆಂ[1]ದು ಹರಸಿದನು ॥ ೩೫

ಖುರಕೆ ರತುನವ ಸುರಿದು ತೇರಿನ
ತುರಗವನು ವಂದಿಸಿದನಾ ಪಳ
ಹರದ ಹನುಮಂಗೆಱಗಿದನು ಸುರಕುಲಕೆ ಕೈಮುಗಿದು ।
ವರ ರಥವ ಬಲಗೊಂಡು ಕವಚವ
ಬರಿಗೆ ಬಿಗಿದನು ಕೈಗೆ ವಜ್ರದ
ತಿರುವೊಡೆಯನವಚಿದನು ರಥವೇಱಿದನು ಕಲಿ ಪಾರ್ಥ ॥ ೩೬

ದೇವದತ್ತವ ಮೊಳಗಿದನು ಗಾಂ
ಡೀವಿ ಚಾಪವ ಮಿಡಿ[2]ದ[2]ನಿಷ್ಠುರ
ರಾವ ತಿವಿದುದು ಜರಿದವಡಕಿಲು ಜಗದ ಜೋಡಿಗಳ ।
ರಾವು ಫಲುಗುಣಯೆನುತ ಪಾರ್ಥನ
ಭಾವ ಕುಡಿ ಚಮ್ಮಟಿಗೆಯಲಿ ತುರ
ಗಾವಳಿಯುನದುಹಿದನು ಸುಳಿಸಿದನಾಹವಕೆ ರಥವ ॥ ೩೭

ವರ ಯುಧಾಮನ್ಯೂತ್ತಮೌಂಜಸ
ರೆರಡು ಕಡೆಯಲಿ ಬರೆ ಮುರಾರಿಯು
ಪರಮ ಸಾಹಾಯ್ಯದಲಿ ಸಾಹಸಮಲ್ಲನುರವಣಿಸೆ ।
ಅರಿ ಬಲವ ಕೆಣಕಿದನು ಪಾರ್ಥನ
ಬರವನೀಕ್ಷಿಸಿ ತನ್ನ ಸೇನೆಗೆ
ಬೆರಳ ಚೌರಿಯ ಬೀಸಿ ದುಶ್ಶಾಸನನು ಮಾಱಾಂತ ॥ ೩೮

ಇವನ ಕೊಂದರೆ ಮುನ್ನ ಮಾಡಿದ
ಪವನ ತನಯನ ಭಾಷೆಗೂಣೆಯು
ವಿವನ ಕೊಲ್ಲದೆ ಗೆಲುವ ಹದನೇನೆನುತ ನಿಮಿಷದಲಿ ।
ಕವಲುಗೋಲಿನಲರಿಭಟನ ಚಾ
ಪವನು ಸೂತನ [3]ರಥವ[3] ರಥವಾ
ಹವನು ಖಂಡಿಸಿ ಬಿಸುಡಲವ ಜಾಱಿದನು ದುಗುಡದಲಿ ॥ ೩೯

---

[1] ನೀನೆಂ (ಟ.ತ.ದ). [2] ಯೆ (ಚ.ಪ). [3] ಶಿರವ (ತ.ದ.ನ).

ಉರಿಯ ಬಂದಿಯ ಹಿಡಿದು ಹೆಚ್ಚುವ
ದೊರೆಯಲೇ ದಿಟ ಪಾದರಸವೆಲೆ
ಯರಸ ನಿನ್ನ ಕುಮಾರನೇಸಱಿ ಪಾಡು ಪಾರ್ಥಂಗೆ ।
ತೆರಳಿದನು ನಿನ್ನಾತ ಸೂಱಿಯೊ
ಳುರವಣಿಸಿತಾ ತೇರು ನರನ್ನೈ
ತರಲು ಕಂಡನು ಶಸ್ತ್ರವಿದ್ಯಾ ಭಾಳಲೋಚನನ ॥ ೪೦

ಅರುಣಮಯ ರಥವಾಜಿಗಳ ವಿ
ಸ್ತರದ ಹೇಮದ ಕಳಶ ಸಿಂಧದ
ಸರಳು ತೀವಿದ ಬಂಡಿ ಬಳಿಯಲಿ ಲಕ್ಷಸಂಖ್ಯೆಗಳ ।
ತರಣಿಯನು ಸೋಲಿಸುವ ರತ್ನಾ
ಭರಣ ಕಾಂತಿಯ ರಾಯ ಕಟಕದ
ಗುರುವ ಕಂಡನು ಪಾರ್ಥ ಶಕಟವ್ಯೂಹದಗ್ರದಲಿ ॥ ೪೧

ಆರಿವನು ಕಲಿ ಪಾರ್ಥನೇ ತ್ರಿಪು
ರಾರಿ ಹಿಡಿವಂಬಾಯಿತೆಂಬ ದೊ
ಠಾರನೇ ದೈತ್ಯಾರಿ ಸಾರಥಿಯೆಂಬ ಗರ್ವಿತನೆ ।
ಹಾರುವರು ನಾವಸ್ತ್ರವಿದ್ಯಾ
ಪಾರಗರು ನಾವಲ್ಲ ರಣದೌ
ದಾರಿಯವ ತೋಱುಮಗೆನುತ್ತಡಹಾಯ್ದನಾ ದ್ರೋಣ ॥ ೪೨

ನಾಳೆ ಹಗೆವನ ಹೊಯ್ವೆನೆಂಬು
ಬ್ಬಾಳುತನವಿನ್ನೊಮ್ಮೆ ಭೂಪತಿ
ಯೋಲೆಗಾತಿಯರಿದಿರಲಾಡಿದ ಭಾಷೆಯಿನ್ನೊಮ್ಮೆ ।
ಆಳು ನೆರೆದಿಹೆ ಚೂಣಿಯೊಳಗೊಂ
ದಾಳ ಹೊಯ್ದರೆ ಗೆಲವು ನಿನ್ನದು
ಕಾಳಕೂಟದ ಕಮಲ ತುಂಬಿಗೆ ಪಥ್ಯವಲ್ಲೆಂದ ॥ ೪೩

ಎಂಬಡಿದಿರುತ್ತರವಲೇ ಗರ
ಳಾಂಬುಜದ ಪರಿಮಳಕೆ ಗರುಡನು
ತುಂಬಿಯಾದರೆ [1]ಸೇ[1]ರುವುದಲೇ ಸಾಕದಂತಿರಲಿ ।

[1] ತೀ (ಗ.ಚ.ಪ).

ಅಂಬುಗಳಿಗೆಡೆದೆಱಹ [1]ಕು[1]ಡಿ ನೀ
ವೆಂಬ ನುಡಿಗಂಜುವೆನು ಸೈಂಧವ
ನೆಂಬವನ ತೋಱಿಸಿರೆಯೆಂದನು ನಗುತ ಕಲಿ ಪಾರ್ಥ ‖ ೪೪

ಎಲೆ ಮರುಳೆ ಮುಂದಿದ್ದ ನಮ್ಮಯ
ವಿಲಗವನು ಪರಿಹರಿಸಿ ಸೈಂಧವ
ನಳಿವುಪಾಯವ ಮಾಡು ಗರುವರು ನುಡಿದು ಕೆಡಿಸುವರೆ ।
ಅಳವಿಗೊಡು ಕೊಳ್ಳೆಂಬನೆನುತ
ಗ್ಗಳೆಯನೆಚ್ಚನು ನರನ ಮೆಯ್ಯಲಿ
ತಳಿತವಂಬುಗಳೇನನೆಂಬೆನು ವಿಗಡ ವಿಗ್ರಹವ ‖ ೪೫

ಅವರ ಪಾದಾಂಬುಜಕೆ ಫಲುಗುಣ
ಕವಿಸಿದನು ಸರಳುಗಳ ಲೆಕ್ಕಿಸ
ದವಗಡಿಸಿ ಗುರುವೆಚ್ಚು ಕಡಿದನು ಗಾಂಡಿವದ ತಿರುವ ।
ಸವತಳಿಸಿ ಮಾರ್ತಿರುವಿನಲಿ ಸಂ
ತವಿಸಿಕೊಂಡರ್ಜುನನು ದ್ರೋಣನ
ನವ ನಿಶಿತ ಬಾಣೌಘದಲಿ ಹೂಳಿದನು ನಿಮಿಷದಲಿ ‖ ೪೬

ಸರಳ ಸವಱ ಮಹಾಸ್ತ್ರಚಯದಲಿ
ನರನನೆಚ್ಚನು ನಮ್ಮ ಲಾಗಿನ
ಧುರವು ತಾನಿದು ದಿಟ್ಟನಹೆಯೋ ಪಾರ್ಥ ಲೇಸೆನುತ ।
ಸರಳು ಸುರಿಯಲು ಕೃಷ್ಣ ಪಾರ್ಥನ
ಕೆರಳಿದನು ಫಡ ಮರುಳೆ ಗುಣದಲಿ
ಗುರುವ ಗೆಲುವುದ ಮಾಡು ಗೆಲುವಾ ಕಾದಿ ನೀನೆಂದ ‖ ೪೭ *

ಇಳುಹಿದನು ಗಾಂಡಿವವನುರು ಬ
ತ್ತಳಿಕೆಯನು ಕಳಚಿದನು ರಥದಿಂ
ದಿಳಿದು ಮೈಯಿಕ್ಕಿದನು ದ್ರೋಣನ ಚರಣ ಕಮಲದಲಿ ।
ತಿಳಿಯಲೆಮ್ಮೈವರಿಗೆ ಜೀವನ
ದುಳಿವು ನಿನ್ನದು ನಿನ್ನ ಮಕ್ಕಳ
ಸಲಹು ಮೇ[2]ಣ್ ಕೊಲ್ಲೆನುತ ನುಡಿದನು ವಿನಯದಲಿ ಪಾರ್ಥ[2] ‖

[1] ಕೊ (ಟ). * ಇಲ್ಲಿಗೆ (ಗ) ಪ್ರತಿಯಲ್ಲಿ ಸಂಧಿ ಮುಗಿದಿದೆ. ಮುಂದಿನ ಸೂಚನೆ :— ನಿಜಗುರುವ ವಂದಿಸುತ ವೈರಿ
ವ್ರಜವ ನೆಱ ತಱಿಪುತ್ತ ಬಂದನು
ವಿಜಯನಾ ರಿಪು ಸೈಂಧವನನರಸುತ್ತ ಕಣದೊಳಗೆ ‖

[2] ಣ್ಮಳಿಯೆಂದು ನುಡಿದನು ವಿನಯಪರನಾಗಿ (ಗ).

ಆ ಶಿಶುತ್ವದಲೆಮ್ಮ ಬೊಪ್ಪನು
ವಾಸವನ ಪುರಕ್ಕೈದಿದನು ನಿ
ಮ್ಮಾಸೆಯಲಿ [1]ಗಾಂಗೇಯರಿಂದವೆ ಹಿರಿದು[1] ಬದುಕಿದೆವು ।
ಘಾಸಿಯಾದೆವು ಜೂಜಿನಲಿ ವನ
ವಾಸವನು [2]ನೂಕಿ[2]ದೆವು ಮೈ ಮಱೆ
ದೀಸನೇಱಿಸಿ ನುಡಿದ ನುಡಿಗಳ ಕಾಯಬೇಕೆಂದ ॥ ೪೯

ನೀವು ಹೂಣಿಗರಾಗಿ ರಿಪುವನು
ಕಾವ[3]ಡಿತ್ತಲೆ ತೊಲಗು[3]ವೆನು ಕರು
ಣಾವಲೋಕನವೆನ್ನ ಮೇಲುಂಟಾದಡಿದಿರಹೆನು ।
ಆವುದನು ನಮಗೇನು ಗತಿ ತಲೆ
ಗಾವ[4]ಮತವೇ[4] ನಿಮ್ಮ ಚಿತ್ತದೊ
ಳಾವ ಹದನೆನೆ ಮುಗುಳು ನಗೆಯಲಿ ದ್ರೋಣನಿಂತೆಂದ ॥ ೫೦

ಕಂದನಶ್ವತ್ಥಾಮ ಹುಸಿಯೆನ
ಗಿಂದು ಬೇಹ ಕುಮಾರ ನೀ ನಿ
ನ್ನಿಂದ ತನ್ನಯ ಕೀರ್ತಿ ಮೆಱೆವುದು ಮೂಱು ಲೋಕದಲಿ ।
ತಂದೆ ನಿನಗಾ ಮುನಿಯ[5]ಲಾಪೆನೆ[5]
ಸಂದುದಾಡಿದ ಭಾಷೆ ನೀ ಹೋ
ಗೆಂದು ಗುಣದಲಿ ಬೀಳುಕೊಟ್ಟನು ದ್ರೋಣನರ್ಜುನನ ॥ ೫೧

ಬಲದೊಳಧಿಕರು ಭಟರೊಳತಿ ವೆ
ಗ್ಗಳರು ಹೆಸರುಳ್ಳವರು ವಿದ್ಯಾ
ಕುಲ ತಪೋಧರ್ಮಾದಿಗುಣಿಗಳು ಧೈರ್ಯ ಸಂಯುತರು ।
ಹಲಬರಿಹುದುಸುರಿಲ್ಲದೊಡಲಿನ
ಚೆಲುವಿನಂತಿರೆ ನಮ್ಮ ಬಲ ಹರಿ
ಯೊಲವಿನವರಭ್ಯುದಯವನು ಧೃತರಾಷ್ಟ್ರ ಕೇಳೆಂದ ॥ ೫೨

ಒಂಬತ್ತನೆಯ ಸಂಧಿ ಮುಗಿದುದು.

---

1 ತಲೆಕಾದುಕೊಂಡೆವು ನಾವು (ಟ.ತ). 2 ಮಾಡಿ (ಕ). 3 ದತ್ತಲೆ ತಿರುಗು (ಕ.ಚ). 4 ದುಂಡೇ (ಟ.ತ.ದ.ನ), ಮಾತೋ (ಕ). 5 ಲಱಿವೆನೆ (ಕ), ಬಲ್ಲೆನೆ (ಟ.ತ.ದ.ನ).

ಹತ್ತನೆಯ ಸಂಧಿ

ಸೂಚನೆ ॥ ನಡೆದು ಪರಬಲ ಮಧ್ಯದಲಿ ನೀ
ಗರ್ಜಿಸಿ ಹರಿಯನು ಸಕಲ ಸುಭಟರ
ಮಡುಹಿ ಫಲುಗುಣ ಗೆಲಿದನಗ್ಗದ ಕೌರವೇಶ್ವರನ ॥

ನರನು ಕಳುಹಿಸಿ[1]ಕೊಳಲು ಗುರು[1] ವೋ
ಹರವನಪಸವ್ಯದಲಿ ವಂಚಿಸಿ
ಮುರುಹಿದನು ಮುರವೈರಿ ರಥವನು [2]ಮುಂ[2]ದಿಱೊಡ್ಡಿಂಗೆ ।
ಅರರೆ ನರನೋ ನೂಕು ನೂಕರಿ
ಬಿರುದರಾವೆಡೆ ಪೂತು ಮಝು ಎಂ
ದುರವಣಿಸಿದರು [3]ಮುರಿದು ಮಕರ[3]ವ್ಯೂಹದತಿರಥರು ॥ ೧

ನೂಕಿತರಿ ಚತುರಂಗ ಬಲ ನೆಲ
ನೋಕರಿಸಿತೋ ಪ್ರಳಯ ಜಲಧಿಯ
ನೂಕು ತೆರೆಗಳ ಲಹರಿಯೋ ನಿಲುವಾತನಾರಿದಕೆ ।
ನಾಕು ಕಡೆಯಲಿ ಕವಿದುದಳವಿಗೆ
ನೂಕು ನೂಕಾಯಿತ್ತು ನರನ
ವ್ಯಾಕುಳತೆಯಲಿ ಸವಱ ತೊಡಗಿದನಹಿತ ಬಲ ವನವ ॥ ೨

ಕುಸುರಿದಱಿದವು ಜೋಡು ವಜ್ರದ
ಬೆಸುಗೆಗಳ [4]ಬಾಹುರಿಕೆ[4]ಗಳ ಖಂ
ಡಿಸಿದನದಟರ ಕವಚ ಬಿರಿದವು ಕೋಲ ಘಾಯದಲಿ ।
ನೊಸಲ ಸೀಸಕ ನುಗ್ಗುನುಸಿ ಬಂ
ಧಿಸಿದ ಸರಪಣಿ ಹಿಳಿದವರಿಬಲ
ದೆಸಕ ನಿಂದುದು ಪಾರ್ಥನೆಚ್ಚನು ವೈರಿ ಮೋಹರವ ॥ ೩

[5]ಕುಳುವೆಳಗು[5] ಕಿಡಿಗೆದಱೆ ಹೊಗರಿನ
ಹೊಳಹು ಗಗನವನುಗುಳೆ ಧಾರೆಯ
ಬಲುಗಿಡಿಗಳುರಿ ಮಸಗೆ [6]ತ[6]ಳಿಹದ ಬಣ್ಣ ಗಜಗಜಿಸೆ ।

---

[1] ಕೊಂಡುರಿಪು (ಗ.ಚ.ಪ). [2] ಹಿಂ (ಟ.ತ). [3] ಮಕರಚಕ್ರ (ಗ.ಚ.ಟ.ತ.ದ.ಪ). [4] ಬಾಹುರಕ್ಕೆ (ತ.ದ.ಪ), ಬಾಹಕ್ಕರಿಕೆ (ಗ). [5] ಕುಳುವೆಗಳು (ಕ), ಹೊಳೆವಲಗು (ಗ), ಕುಳಿವೆಳಗು (ಟ.ದ.ನ). [6] ಬ (ಕ), ತೊ (ಗ).

ಹಿಳುಕು ಬೊಬ್ಬಿಡೆ ಹೊದಱಿಡಸಿ [1]ಕಣ
ಗಿಲೆಯು[1] ಕೋಲುಳಿಯಂಬು ಕವಲಂ
ಬಲಗಿನಂಬೀಸಾಡಿದವು ಪರಸೈನ್ಯ ಸಾಗರವ ॥ ೪

ವ್ರಣದ ಬಲುವ್ರೇನಲೊಳಗೆ ತಲೆಗಳು
ಕುಣಿದವರ್ಜುನನಂಬಿನುಱುಬೆಗೆ
ಹೆಣನ ದಾವಣಿ ಹಾಸಿದವು ಸೂಸಿದವು ದೊಂಡೆಗಳು ।
ತಣಿದನಂತಕನಟ್ಟಗಳ ರಿಂ
ಗಣದ ನಾಟಕದೊಳಗೆ ಸಮರಾಂ
ಗಣದ ರೌರವ ರೌದ್ರವಾಯಿತು ಕಳನ ಚೌಕದಲಿ ॥ ೫

ಏಱುಗಳು ಬುದುಬುದಿಸಿ ರಕುತವ
ಕಾಱಿ ಕಾಣಿಜ ಖಂಡ ನೆಣ ಜಿಗಿ
ದೋಱಿ ಬೆಳುನೊರೆ ಮಸಗಿ ನಸುಬಿಸಿ ರಕುತ ಹೊನಲಿಡಲು ।
ಕೌಱಿಡಲು ಕಡಿದುಡಿದವೆಲು ಮೊಗ
ದೋಱುಗಳ ಪೂರಾಯ ಘಾಯದ
ತಾಱುಥಟ್ಟಿನ ಹೆಣನ ಮೆದೆ ಹೇರಾಳ ರಂಜಿಸಿತು ॥ ೬

ಎಲೆಲೆ ಪ್ರಳಯದ ರುದ್ರನನು ತಲೆ
ಬಳಿಚಿ ಬಿಟ್ಟನು ದ್ರೋಣನಕಟಾ
ನೆಲನೊಡೆಯ[2]ನಾಪ್ತಿಗರು[2] ಬಗೆದರು ಸ್ವಾಮಿದ್ರೋಹಿಕೆಯ ।
ಕೊಲುವವನು ಫಲುಗುಣನೊ ದ್ರೋಣನೊ
ಕೊಲೆಗಡಿಗನೋ ಕೊಂದನೋ ಕುರು
ಕುಲತಿಲಕ ನೆಱೆ ಪಾಪಿಯೆಂದರು ನಿಖಿಳ ಪರಿವಾರ ॥ ೭

ಈತನರ್ಜುನನಿತ್ತಲಿದೆ ಪುರು
ಹೂತ ಸುತನ ವರೂಥವಿದೆ ಕಪಿ
ಕೇತನನ ಬೊಬ್ಬಾಟವಿದೆ ಫಲುಗುಣನ ಶರಜಾಲ ।
ಈತ ಪಾರ್ಥನು ಹೊಕ್ಕನಿತ್ತಲು
ಶ್ವೇತಹಯನಿತ್ತಲು ಧನಂಜಯ
ನೀತನೆನೆ ಫಲುಗುಣನ ಮಯವಾಯ್ತಖಿಳ ತಳತಂತ್ರ ॥ ೮

---

[1] ಕಣ್ಣಲಿಗೆ (ಕ.ಗ.ಚ). [2] ನಾಪತ್ತಿಗರು (ಕ), ನಾಪ್ತಿಜನ (ಚ.ಪ).

ಇದೆ ಕಿರೀಟಿಯ ಬಿಲ್ಲ ಜೇವಡೆ
ಯದೆ ಸಿತಾಶ್ವನ ಸಿಂಹಗರ್ಜನೆ
ಯಿದೆ ಮುರಾರಿಯ ಮನಕೆ ಮುಂಚುವ ಹಯದ ಖುರ ನಿನದ |
ಅದೆ ವಿಜಯನಸೌತ್ರಘವತ್ತಲು
ಕದನಕಾಲಾನಲನ ತೀವ್ರತೆ
ಯದೆಯೆನುತ ಹೆದಱೆದೆಯ ಸುಭಟರು ಬಿಸುಟರುತ್ಸಹವ ‖ ೯

ಉಡಿದು ಕುಪ್ಪಳಿಸಿದವು ರಥ ಕಡಿ
ವಡೆದುದಗ್ಗದ ಸಾರಥಿಗಳೆಡೆ
ಗೆಡೆದುದತಿರಥ ಸಮರಥಾರ್ಧಮಹಾರಥಾದಿಗಳು |
ಹೊಡೆಗೆಡೆದ ದಂತಿಗಳು ರಕ್ತದ
ಕಡಲೊಳೀಸಾಡಿದವು ತೇಜಿಯ
ಕಡಿಕು ಹರಿದವು ಹೊರೆದನಂತಕನುರು ಪರಿಗ್ರಹವ ‖ ೧೦

ಸರಳು ಸೇನೆಯ ತಾಗಿ ರಿಪುಗಳ
ಕೊರಳ [1]ಕೊಯ್ಯದ[1] ಮುನ್ನವರಿ ಮೋ
ಹರವ ಹಿಂದಿಕ್ಕುವುದು ರಥವತಿ ಜವದ ಜೋ[2]ಕೆ[2]ಯಲಿ |
ಹೊರಳಿದವು ಭಟರಟ್ಟೆ ಶೋಣಿತ
ಶರಧಿ ಮಸಗಿತು ಮಕುಟ ಬದ್ಧರ
ಹರಣದನಿಲ ಸಮೂಹ ಬೀಸಿತು ನಭಕೆ ಬಿಱುಬಿನಲಿ ‖ ೧೧

ಮುಱಿವಡೆದು ಚತುರಂಗವರ್ಜುನ
ನುಱುಬೆಗಾಱದೆ ನಿಲೆ ಶ್ರುತಾಯುಧ
ನಿಱಿಯಲುತ್ಸಾಹಿಸಿದನಿದಿರಾದನು ಧನಂಜಯನ |
ಮುಱಿಯೆಸುತ ಮುಂಕೊಂಡು ಪಾರ್ಥನ
ತಱುಬಿದನು [3]ಬಳಿಕೀತನಾ[3]ತನ
ನೆಱೆವಣಿಗೆ ಲೇಸೆನುತ ತುಳುಕಿದನಂಬಿನಂಬುಧಿಯ ‖ ೧೨

ನರನ ಬಾಣಾನೀಕವನು ಕ
ತ್ತರಿಸಿದನು ನಿಜ ಗದೆಯಲಾತನ
ಧುರ ಚಮತ್ಕಾರವನು ನೋಡುತ ಪಾರ್ಥ ಬೆಱಗಾಗೆ |

---

[1] ನರಿಯದ (ಸ.ಕ.ಪ). [2] ಡಿ (ಚ.ಟ.ತ.ದ.ನ). [3] ಕಲಿಪಾರ್ಥನೀ (ಗ.ಟ.ತ).

ಕೆರಳಿ ವಾಘೆಯ ಕೊಂಡು ರಥವನು
ಧುರಕೆ ದುವ್ವಾಳಿಸಲು ಮುರಹರ
ನುರವಣಿಗೆ ಕನಲುತ ಶ್ರುತಾಯುಧ ಹೊಯ್ದನಚ್ಯುತನ ॥ ೧೩

ವರುಣನಿತ್ತುಪದೇಶ ಬಱಿ[1]ದಿ
ದ್ದ[1]ರನು ಹೊಯ್ದರೆ ತನ್ನ ಕೊಲುವುದು
ನಿರುತವೆನಲದ ಮಱೆದು ಹೊಯ್ದನು ಹರಿಯ ಮಸ್ತಕವ ।
ಕೆರಳಿ ಗದೆ ಮುರಹರನ ಮುಟ್ಟದೆ
ಮರಳಿ ತನ್ನನೆ ಕೊಂದುದೇನ
ಚ್ಚರಿಯೊ ದೈವದ್ರೋಹಿಗೆತ್ತಣ ಲೇಸು ಬಹುದೆಂದ ॥ ೧೪

ಆ ಶ್ರುತಾಯುಧ ಮಡಿದನಲ್ಲಿ ಮ
ಹಾಸುರದ ರಣವಾಯ್ತು ಕಾಂಭೋ
ಜೇಶ ಕೈದುಡುಕಿದನು ಕದನವನಿಂದ್ರಸುತನೊಡನೆ ।
ಸೂಸಿದನು ಸರಳುಗಳನಾತನ
[2]ಸಾಸವನು[2] ಮನ್ನಿಸುತ ಫಲುಗುಣ
ಜೇಸಱಿದೆ ಕೊಂಡಾಡಿ ಕಾದಿದನೊಂದು ನಿಮಿಷದಲಿ ॥ ೧೫

ಸರಳು ಸವೆಯಲು ಶಕ್ತಿಯಲಿ ಕಾ
ತರಿಸಿ ಕವಿ[3]ದಿಡೆ[3] [4]ಶಕ್ತಿಯನು[4] ಕ
ತ್ತರಿಸಿದನು ಕಾಂಭೋಜ ಭೂಪನ ಮಕುಟ ಮಸ್ತಕವ ।
ಕೊರಳ ತೊಲಗಿಸಿ ಮುಂದೆ ನೂಕುವ
ವರ ಶ್ರುತಾಯುವಿನೊಡನೆ ಘನ ಸಂ
ಗರಕೆ ತೆಗೆದನು ಕಳುಹಿದನು ಕಾಂಭೋಜನೊಡನವರ ॥ ೧೬

ಹರಿಬದಯುತಾಯುವನು ಮಗುಳಿ
ಬ್ಬರು ಸುತರು ನಿಯತಾಯು ಘನ ಸಂ
ಗರದ ದೀರ್ಘಾಯುವನು ಕಳುಹಿದನಮರ ಮಂದಿರಕೆ ।
ಧುರಕೆ ನೂಕಿದವಂಗರಾಜನ
ಕರಿ ಘಟೆಗಳಂಬಟ್ಟವೊದಲಾ
ದರಿ ಸುಭಟ ಸಂದೋಹ ಮುತ್ತಿತು ಮತ್ತೆ ಫಲುಗುಣನ ॥ ೧೭

---

[1] ಗೆಯ್ಯ (ಜ). [2] ವಾಸಿಯನು (ಚ). [3] ದರೆ (ಕ). [4] ಕದಲಿಸಿದ.

ಕರಿ ಘಟೆಯನಂಬಟ್ಟ ಭೂಪನ
ಶಿರವನೆಚ್ಚನು ಪಾರಸೀಕರ
ತುರಗ ಕವಿಯಲು ಕುಸುರಿದಱಿದನು ಕೋಟಿ ಸಂಖ್ಯೆಗಳ ।
ಬಿರುದ ಹೊಗಳಿಸಿಕೊಂಡು ದಾತಾ
ರರ ಹಣವ ಸಲೆ ತಿಂದು [1]ಹೆಚ್ಚಿದ[1]
ಹಿರಿಯ ಡೊಳ್ಳಿನ ರಾವುತರ ಕೆಡಹಿದನು ನಿಮಿಷದಲಿ ॥ ೧೮

ಇಱಿದು ಚಕ್ರವ್ಯೂಹವನು ಕುಱಿ
ದಱಿಯ ಮಾಡಿ ಕಿರೀಟಿಯದಱಿಂ
ಹೊಱಗೆ ಹಂಸವ್ಯೂಹದಲಿ ಕೆಣಕಿದನು ಕಾಳಗವ ।
ತುಱುಗಿದವು ತೂಱಂಬು ತಲೆಗಳ
ತಱಿದು ಬಿಸುಟವು ಘಮ್ಮ ಘಲಿಲೆನೆ
ನಿಱಿನಿಳಿಲುಗರೆದೊಱಲಿದವು ಫಲುಗುಣನ ಶರಜಾಲ ॥ ೧೯ *

ಬಿಲು ರವದ ಮೊಳಗಿನಲಿ ಕೃಷ್ಣನ
ಫಲುಗುಣನ ಮೈ[2]ಕಾಂ[2]ತಿ ಮೇಘಾ
ವಳಿಗಳಲಿ ಹೊಂಗಱಿಯ ಗಾಳಿಯ ಸರಳ ಸೋನೆಯಲಿ ।
ನಿಲುವ ಹಂಸವ್ಯೂಹವೆಲ್ಲಿಯ
ದೆಲೆ ಮಹೀಪತಿ ಕೇಳು ನಿನ್ನ
ಗ್ಗಳೆಯ ಸುಭಟರ ವಿಧಿಯನೆಂದನು ಸಂಜಯನು ನಗುತ ॥ ೨೦

ಅಳಿದುದೈನೂಱರಸುಗಳು ಮು
ಮ್ಮಳಿತವಾಯ್ತ್ತೈವತ್ತು ಸಾವಿರ
ಬಲಗುದುರೆ ನುಗ್ಗಾದುದೊಂಬೈನೂಱು ಭದ್ರಗಜ ।
[3]ಅ[3]ಳಿದುದಕೆ ಕೊಲೆಕೊತ್ತುವಡೆದ
ಗ್ಗಳ ಪದಾತಿಗೆ ಗಣನೆಯಿಲ್ಲೀ
ಬಲದ ಮೈವಶವವರ ಕೈವಶವೇನು ಹೊಸತೆಂದ ॥ ೨೧

---

[1] ಕೊಬ್ಬಿದ (ಗ) ಸೊಕ್ಕಿದ (ಟ. ಕ.) * ಇಲ್ಲಿಗೆ (ಗ) ಪ್ರತಿಯಲ್ಲಿ ಸಂಧಿ **ಮುಗಿದಿದೆ.** ಮುಂದಿರುವ ಸೂಚನೆ :—

ಬಂಧಿಸಿದನಹಿತೌಘಸೇನೆಯ
ನಂದು ಗುರು ಕೌರವರ ಗೆಲಿದು ಪು
ರಂದರನ ಸುತ ಮತ್ತೆ ತಪದನು ರಾಯಮೋಹರವ ॥

[2] ಘಾ (ಕ) [3] ಉ (ತ. ಗ. ಟ).

ಕೆಡಹಿದನು ವಿಂದಾನುವಿಂದರ
ನಡಗುದಱಿಯಾಯ್ತಖಿಳ ಬಲದು
ಗ್ಗಡದ ವೀರರು ಕಾದಿ ಬಿದ್ದುದು ಕಾಯಮಾಱಿಗಳು |
ನಡುಹಗಲು ಪರಿಯಂತ ಕಾಳೆಗ
ಬಿಡದೆ ಬಲುಹಾಯ್ತ[1]ಖಿಳ[1] ವೇಗದ
ಕಡುಗುದುರೆ ಬಳಲಿದವು ಬಗೆಯದೆ ಹರಿಯ ಗರ್ಜನೆಯ || ೨೨

ಭಾರಿಸಿತು [2]ಮೈ[2] ಮುಷ್ಟಿಯಲಿ ಲುಳಿ
ಸಾರತರಲಂಬಿಸಿತು ತಾಗಿದ
ಕೂರಲಗು ಗಱಿದೋಱಿದವು [3]ನಿಜ ಹಯದ[3] ಮೈಗಳಲಿ |
ಹಾರಿದರ್ಜುನನಱಿದನಾ ದೈ
ತ್ಯಾರಿಗೆಂದನು ದೇವ ಬಿನ್ನಹ
ವಾರುವಂಗಳ ವಹಿಲತೆಯ ಚಿತ್ತೈಸಿದಿರೆಯೆಂದ || ೨೩

ಕಡಿಯಣನ ಕಾಱಿದವು ಕಂದವ
ನಡಿಗಡಿಗೆ ಹಾಯ್ಕಿದವು ಸುತ್ತಿದ
ಕುಡಿನೊರೆಯ ಕಟವಾಯ ಲೋಳೆಯ ನಿಮಿರ್ದ ಮೈಲುಳಿಯ |
ತಡಿ ನೆನೆದ ಬಲು ಬೆಮರ ಘುಡುಘುಡು
ಘುಡಿಪ ನಾಸಾಶ್ವಾಸಲಹರಿಯ
ಕಡು ಮನದ ರಥತುರಗ ಮಿಕ್ಕವು ಸರಳ ಸೂಠಿಯಲಿ || ೨೪

ಗಮನ ತಪ್ಪೆಯವಾಯ್ತು ವೇಗ
ಭ್ರಮಣ ಜಡವಾಯ್ತಡಿಗಡಿಗೆ ನಿ
ಗ್ಗಮದೊ[4]ಳಗೆ ರಥವದ್ದುದರಿ ಭಾರಣಿ[4]ಯ ಭರವಸದ[4] |
ಸಮತೆ ನಿಂದು[5]ದು[5] ಸಾಹಸೀಕರು
ಭ್ರಮಿಸುತಿದೆ ಭಟ ಜಲಧಿ ತುರಗ
ಶ್ರಮವ ನಾವ್ ಪರಿಹರಿಸಿದಲ್ಲದೆ ಕಾದಲರಿದೆಂದ || ೨೫

ಉಂಟು ಹೊಲ್ಲೆಹವಲ್ಲ ರಣದೊಳ
ಗೆಂಟು ಮಡಿ ಬಳಲಿದವು ತೇಜಿಗ
ಳೆಂಟುವರೆ ನೀರಿಲ್ಲ ಮುರಿದರೆ ಬೆನ್ನ ಬಿಡರಿವರು |

---

[1] ಧಿಕ (ಗ.ತ). [2] ಬಲು (ಕ). [3] ರಿಪುಭಟನ (ಕ.ಗ.ಚ), ಹಯತತಿಯು (ಪ), ಸಿತಹಯದ (ನ). [4] ಳೀತಡವಾದುದಗ್ಗದ ಭರದ ಭಾರವಣೆ (ಚ.ಪ). [5] ಡ (ಕ.ಗ.ಚ).

[1]ಗೆಂಟಚಲಿ ನಮ್ಮೊಡ್ಡ[1] ಸುತ್ತಲು
ವೆಂಟಣಿಸಿ ರಿಪು ಸೇನೆಯಿದೆ ಪ
ನುಂಟು ಮಾಡುವುಪಾಯವೆಂದನು ನಗುತ ಮುರವೈರಿ ॥ ೨೬

ದೇವ ಕಾಳೆಗ ಬಲುಹು ಬಿಸಿಲಿನ
ಡಾವರಕೆ ರಥತುರಗವತಿ ನಿ
ರ್ಜೀವಿಯಾದವು ಹರಿಯ ಗಮನದ ಹದನನಱಿಯೆನಲು ।
ಆ ವಿನೋದಿಗಳರಸ ಶರಣರ
ಕಾವ ಭರದಲಿ ದನುಜ ಕುಲ ವಿ
ದ್ರಾವಣನು ನಸುನಗುತ ಬೋಳೈಸಿದನು ತೇಜಿಗಳ ॥ ೨೭

ದೇವ ವಾಘೆಯ ಹಿಡಿ ತುರಂಗಕೆ
ಜೀವನವನೀ ಕಳನೊಳಗೆ ಸಂ
ಭಾವಿಸುವೆ ನೋಡೆನುತ ಧುಮ್ಮಿಕ್ಕಿದನು ಧಾರುಣಿಗೆ ।
ತೀವಿ ತೆಗೆದನು ವಜ್ರ ಶರದಲಿ
ಡಾವರಿಸಿದನು [2]ಕಳನೊಳು[2]ದಕದ
ಸೈವಳೆಯ [3]ಸ[3]ಲೆಯಱಿದು ಚೌಕಕೆ ಸೀಳಿದನು ನೆಲನ ॥ ೨೮

ನೋಡಿ ನರನುದ್ದಂಡತನವನು
ತೋಡುತೈದನೆ ತುರಗ ಲೀಲೆಗೆ
ಖೇಡಕುಳಿಯನು ಶೌರ‍್ಯ ಗರ್ವಿತನೈ ಶಿವಾ ಎನುತ ।
ಕೂಡೆ ಮುಸಗಿತು ರಿಪು ಚತುರ್ಬಲ
ಜೋಡು ಮಾಡಿತು [4]ಕಡಹದ[4]ಮುರರು
ಹೂಡಿದದ್ರಿಯನಂಬುಧಿಯ ತೆರೆವಾಲೆ ಕವಿವಂತೆ ॥ ೨೯

ಒದಱಿ ಮೇಲಿಕ್ಕಿದರು ನಿಸ್ಸಾ
ಳದ ನಿರಂತರ ಸೂಳುವೋಯ್ಲಿನ
ಹೊದಱುಗಳ ಹೊಸಮುಸೆಯಡಾಯ್ದದ ಸಾಲ ಸಂದಣಿಯ ।
ಸದರವೀ ಹೊತ್ತೆನುತ ಗೆಲವಿನ
ಕುಮುಕುಳಿಗಳುರವಣಿಸೆ ಕಾಣುತ
ಗದಗದಿಸಿ ಮುರವೈರಿ ಚಾಚಿದನರ್ಜುನಗೆ ರಥವ ॥ ೩೦

---

[1] ಎಂಟು ದೆಸೆಯಲಿ ನಮ್ಮ ಸುತ್ತಲು (ಪ. ನ). [2] ನೆಲನನು (ಕ).
[3] ನೆ (ಕ.ದ). [4] ಕದನಕ (ಕ).

ಆಲಿಕಲುಗಳ ಕಡಿವಡುಕ್ಕಿನ
ಚೀಲಣದ ಹಂಗೇಕೆ ನಿಮ್ಮಡಿ
ಮೇಲುನೋಟ[1]ವ ನೋಡೆ[1] ರಥ ಪರಿಯಂತ ಕಾಳೆಗವೆ ।
ಹೋಳುಗಳೆವೆನು ಹುಗ್ಗಿಗರನೆನು
ತಾಳೊಳಗೆ ಬೆರಸಿದನು ಬಱಿಗಾ
ಲಾಳುತನದಲಿ ಕಾದಿ ಕೊಂದನು ಕೋಟಿ ರಿಪು ಭಟರ ॥ ೩೧

ವರುಣ ಬಾಣದಲುದಕವನು ತ
ತ್ಸರಸಿಯಲಿ ತುಂಬಿದನು ತಮಗವ
ಸರವಿದೆಂದೌಕುವ ಮಹೀಶರ ಮತ್ತೆ [2]ಬಱಿಕೈದು[2] ।
ಕರಿ ರಥಾಶ್ವ ಪದಾತಿಯನು ಸಂ
ಗರದ ಮಧ್ಯದೊಳೊಬ್ಬನೇ ಸಂ
ಹರಿಸಿದನು ಶತಗುಣವನೊಂದೇ ಲೋಭ ಗೆಲುವಂತೆ ॥ ೩೨

ಕೊಳನ ತಡಿಯಲಿ ಹೂಡಿದನು ಶರ
ವಳಯದಲಿ ಚಪ್ಪರವನಾತನ
ಬಲುಹ ಕಂಡಸುರಾರಿ ಮೆಚ್ಚಿದನಡಿಗಡಿಗೆ ಹೊಗಳಿ ।
ಕಳಚಿ ನೊಗನನು[3]ತೆಗೆದು[3] ಕಬ್ಬಿಯ
ನಿಳುಹಿ ಪಡಿವಾಘೆಗಳ ಸರಿದನು
ಕೊಳಿಸಿ ಪಿಡಿಯಲು ಪಾಡಿಗೈದವು ಮರಳಿದೆಡಬಲಕೆ ॥ ೩೩

ಮುರುಹಿ ನಿಂದವು ಕೊಡಹಿದವು ಕೇ
ಸರವನಧ್ವಶ್ರಮದ ಥಗೆ ಪರಿ
ಹರಿಸೆ ನೀರೊಳು ಹೊಗಿಸಿದನು ಹರಿ ಹಯ ಚತುಷ್ಟಯವ ।
ಸರಸಿಯಲಿ ಮೊಗವಿಟ್ಟು ಮೊಗೆದವು
ವರ ಜಲವನೆರದಳ್ಳೆ ಹಿಗ್ಗಲು
ಮುರುಹಿದವು ಮುಖವನು ಮುರಾಂತಕ ತಡಿಯನಡರಿ[4]ಸಿ[4]ದ ॥ ೩೪

ಕರತಳದಿ ಮೈದಡವಿ ಗಾಯದ
ಸರಳ ಕಿತ್ತೌಷಧಿಯ ಲೇಪವ
ನೊರಸಿದನು ಕರುಣದಲಿ [5]ಚಪ್ಪರಿಸಿದನು ಕಂಧರವ[5] ।

---

[1] ದಲಿರಲು (ಟ. ತ. ದ). [2] ಸವಱಿದನು (ಟ. ತ. ದ. ನ).
[3] ಹಾಯ್ಕಿ (ಕ). [4] ಚಿ (ಕ). [5] ಕಂಧವತಟ್ಟಿ ಬೋಳೈಸಿ(ಟ.ತ.ದ.ನ).

ಹರುಷ ಮಿಗೆ [1]ಕೊರಳೆತ್ತಿ[1] ನಯನವ
ತಿರುಹಿ ದೇವನ ನೋಡುತಿರ್ದವು
ತುರಗ ನಾಲ್ಕರ ಪುಣ್ಯ ಸನಕಾದಿಗಳಿಗಿಲ್ಲೆಂದ ॥ ೩೫

ಮೊಗಕೆ [2]ಭಾ[2]ಣವ ಕಟ್ಟಿ ನೆಳಲಲಿ
ಬಿಗಿದು [3]ಫಲುಗುಣ[3] ಸಹಿತ ಕೊಳನನು
ನಗುತ ಹೊಕ್ಕನು ನೋಡುತಿದ್ದುದು ಕೂಡೆ ಕುರುಸೇನೆ ।
ಬಿಗಿದ ಕತ್ತಲೆ ದೂರದಲಿ ದೀ
ವಿಗೆಯ ಸುತ್ತಲು ಕಟ್ಟಿ ನಿಂದವೊ
ಲಗಣಿತ ಪ್ರತಿಸುಭಟರಿದ್ದುದು ನರನ ಬಳಸಿನಲಿ ॥ ೩೬

ಚರಣ ವದನವ ತೊಳೆದು ನಿರ್ಮಳ
ವರ ಜಲವನೀಂಟಿದರು ನಿರುಪಮ
ಪರಮ ಕರುಣಾರ್ಣವನು ಮೈದುನ ಸಹಿತ ಸರಸಿಯಲಿ ।
ಪರಿಹೃತ ಶ್ರಮನಾಗಿ ಹರುಷೋ
ತ್ಕರುಷದಲಿ ಹರಿ ಕಳೆದುಕೊಂಡನು
ನರಗೆ ಕೊಟ್ಟನು ಹೋಳಿಸಿದ ಕರ್ಪುರದ ವೀಳೆಯವ ॥ ೩೭

ರಾಗ ಮಿಗೆ ಬ್ರಹ್ಮಾಂಡ ಕೋಟಿಯ
ನಾಗುಮಾಡುವನಲಸಿದರೆ [4]ಮುನಿ[4]
ದಾಗ ನುಂಗುವುದೊಂದು ಲೀಲೆ ಮನುಷ್ಯ[5]ದೇಹದಲಿ[5] ।
ಲೋಗರೆಂದುದನೈದೆ ಮಾಡುವ
ನಾಗಿ ಜನಿಸಿಹುದೊಂದು ಲೀಲಾ
ಸಾಗರನು ಲಕ್ಷ್ಮೀಪತಿಗೆ ನಮೊ ಎಂದುದಮರಗಣ ॥ ೩೮

ಸೆಳೆದು ಪಡಿವಾಘೆಯಲಿ ತುರಗಾ
ವಳಿಯನನುಕೊಳಿಸಿದನು ಹರಿ ಕೈ
ಚಳಕದಲಿ ತುಡುಕಿದನು ಫಲುಗುಣನತುಳ ಗಾಂಡಿವವ ।
ಉಲಿದುದಾಹವ ಸೇನೆ ರಿಪು ಮುಂ
ಡಳಿಕ[6]ರೋರಣ[6]ಗೆಡಲು ರಣ ಮುಂ
ಡಲದ ಪದ್ಮವ್ಯೂಹದಲಿ ಕೆಣಕಿದ[7]ನು[7] ಕಾಳೆಗವ ॥ ೩೯

---

[1] ಮೊಗವೆತ್ತಿ (ಟ.ಚ.ತ.ದ.ನ.ಪ). [2] ಬಾ (ಟ). [3] ಮುರಹರ (ಗ).
[4] ನೆನೆ (ಟ.ತ.ದ.ನ). [5] ಲೀಲೆಯಲಿ (ಗ.ಟ.ತ.ನ), ವೇಷದಲಿ (ಚ.ಪ).
[6] ರುರವಣೆ (ತ.ದ.ನ). [7] ರು (ಕ.ಗ.ಚ).

ಇದು ಕೃತಾಂತನ ಸೀಮೆಗಳವ
ಟ್ಟುದು ಸುಯೋಧನ ನೃಪತಿ ವಿಗತಾ
ಭ್ಯುದಯನಾದನೆನುತ್ತ ಕರ್ಣಾದಿಗಳು ಕಳವಳಿಸೆ ।
ಹೆದಱಿದೆಯ ಹೇರಾಳ ವೀರರ
ಕದನದನುವನು ಕಂಡು ಕಡುಗೋ
ಪದಲಿ ಕೌರವರಾಯ ಸಮರೋದ್ಯೋಗ ಪರನಾದ ॥ ೪೦

ತಳಿತವಮಳಚ್ಛತ್ರ ಚಾಮರ
ವಲುಗಿದವು ನವ ಹೇಮ ದಂಡದ
ಹಳವಿಗೆಯ ತುದಿವಲಗೆಯಲಿ ಹಾಯ್ಕಿದರು ಪನ್ನಗನ ।
ಮೊಳಗಿದವು ನಿಸ್ಸಾಳ ಬಿರುದಾ
ವಳಿಯ ಕಹಳೆಗಳೂದಿದವು ನೆಲ
ಮೊಳಗಿದಂತಿರೆ ಬಿರುದ ಹೊಗಳಿತು ಭಟ್ಟ ಸಂದೋಹ ॥ ೪೧

[1]ತಳಿತುದ[1]ರೆನೆಲೆ ರಾಯ ಥಟ್ಟಿನ
[2]ಕಳವಳಿಗರು[2]ರವಣಿಸಿದರು ಮುಱಿ
ದೊಳಸರಿವ ಮನ್ನೆಯರ ಹೊಯ್ದರು ಮುಂದೆ ಕಂಬಿ[3]ಯಲಿ[3] ।
ಉಲಿವ ಪಾಠಕರೋದುಗಳ ಕಳ
ಕಳಿಕೆಯಲಿ ನೃಪ ಬಂದು ಗುರುವಿನ
ದಳವ ಹೊಕ್ಕನು ನಮಿಸಿ ಬಿನ್ನಹಮಾಡಿದನು ನಗುತ ॥ ೪೨

ನರನ ಬಲುಗೈತನವನೀ ಮೋ
ಹರದ ಹೆಂಗುಸುತನವ ನೀವವ
ಧರಿಸಿದಿರೆ ಜಗಭಂಡರಿವರಿಗೆ ಮತ್ತೆ ಬಿರುದುಗಳೆ ।
ತುರಗ ನೀರಡಸಿದರೆ ರಣದಲಿ
ಸರಸಿಯನು ತೋಡಿದನು ನಮ್ಮನು
ಸರಕುಮಾಡನು ಕಂಡು ಬಲ್ಲಿರೆ ಮುನ್ನ ನೀವೆಂದ ॥ ೪೩

ಅರಸ ಮೃತಸಂಜೀವಿನಿಯ ಬಲು
ಹಿರಲು ಬಹಳ ವ್ಯಾಧಿ ಮಾಡುವ
ದುರುಳತನ ತಾನೇನು ನರರಿಗೆ ದಿಟ ವಿಚಾರಿಸಲು ।

[1] ಚಲಿಸಿತ (ಗ.ಜ.ತ.ಟ.ನ), ಕಲಕಿತ (ಚ). [2] ಬಲುಕಣಿಗಳು (ಗ.ತ.ದ. [illegible]

ಪರಮ ಪುರುಷೋತ್ತಮ ಮುಕುಂದನ
ಕರುಣ ಕವಚದ ಬಲದಿನಮರಾ
ಸುರರ ಬಗೆಯನು ಪಾರ್ಥನಿದು ನಮ್ಮಾರ ಹವಣೆಂದ ॥ ೪೪

ಹಗೆಯ ಪತಿಕರಿಸುವರೆ ನಾಲಗೆ
ನಿಗುರುವುದು ನೂಱು ಮಡಿಯಲಿ ಕಾ
ಳೆಗಕೆ ತನ್ನನು ಬಿಟ್ಟು ನೋಡಿರೆ ನುಡಿದು ಫಲವೇನು ।
ತೆಗೆಸುವೆನು ಫಲುಗುಣನನೆನೆ ನಸು
ನಗುತ ಗುರು ಕೌರವ ಮಹೀಶನ
ಮೊಗದ [1]ಸು[1]ಮ್ಮಾನಕ್ಕೆ ಹರುಷಿತನಾಗುತಿಂತೆಂದ ॥ ೪೫

ಆದಡೆಲೆ ಭೂಪಾಲ ನರನೊಳು
ಕಾದಲೀಶಂಗರಿದು ನೀನಿದಿ
ರಾದಡಪಜಯವಾಗದಿದ್ದರೆ ನಮ್ಮ ಪುಣ್ಯವದು ।
ಕಾದಲಾಪರೆ ಮಗನೆ ಪರರಿಗೆ
ಭೇದಿಸುವರಳವಲ್ಲ ಕವಚ[2]ವ
ನಾ[2]ದಿಯದು ಕೊಳ್ಳೆಂದು ಕೊಟ್ಟನು ಗವಸಣಿಗೆದೆಗೆದು ॥ ೪೬

ಇದು ಮಹಾದೇವರದು ವೃತ್ರನ
ಕದನದಲಿ ಕೈಸಾರ್ದುದೀಶಂ
ಗಿದು ಸುರೇಂದ್ರಂಗಾ ಸುರೇಶ್ವರನಾಂಗಿರಂಗಿತ್ತ ।
ಇದು ಬೃಹಸ್ಪತಿಗಾಂಗಿರನಿನಾ
ದುದು ಭರದ್ವಾಜಂಗೆ ಬಳಿಕಾ
ದುದು ಭರದ್ವಾಜಾಖ್ಯನಿತ್ತನು ತನಗೆ ಕರುಣದಲಿ ॥ ೪೭

[3]ನರ ಸುರಾಸುರರಿದನು[3] ಭೇದಿಸ
ಲರಿದು ಕೈಕೊಳ್ಳೆಂದು ಮಂತ್ರಿಸಿ
ಬರಿಗೆ ಕವಚವ ಕಟ್ಟಿದನು ಕೌರವ ಮಹೀಪತಿಗೆ ।
ಗುರುವಿನಂಘ್ರಿಯೊಳೆಱಗಿ ಮರಳಿದು
ಧುರವ ಹೊಕ್ಕನು ಶಕ್ರ ತನುಜನ
ಕರೆದು ಮೂದಲಿಸಿದನು ತುಳುಕಿದನಂಬಿನಂಬುಧಿಯ ॥ ೪೮

---

[1] ದು (ನ). [2] ವಿದಾ (ತ.ಟ). [3] ಸುರನರೋರಗರಿದನು (ತ.ಚ.ಟ.ತ.ನ).

ಎಲವೊ ಕೌರವ ಹಿಂದೆ ವಂಚಿಸಿ
ಕಳವಿನಲಿ ಜೂಜಾಡಿ ರಾಜ್ಯವ
ಗೆಲಿದ ಗರ್ವವನುಗುಳು ಸಮರದ್ಯೂತ ಕೇಳಿಯಲಿ ।
ಹಲಗೆಯ್ಕೆ ಕುರುಭೂಮಿ ಕೌರವ
ಕುಲದ ತಲೆ ಸಾರಿಗಳು ಸೆಜೆಯಲಿ
ಗೆಲಲು ಬಂದೆನು ಕೊಳ್ಳು ಹಾಸಂಗಿಗಳನೆನುತೆಚ್ಚ ॥ ೪೯

ಎಸಲು ಪಾರ್ಥನ ಬಾಣವನು ಖಂ
ಡಿಸಿದನೆಲವೋ ತಮ್ಮ ನಿಮಗಿಂ
ದಸುರರಿಪು ತೆತ್ತಿಗನಲೇ ತುಡುಕಲಿ ಸುದರ್ಶನವ ।
ನುಸಿಗಳೌಕಿದರಕಟ ದಿಗ್ಗಜ
ಘಸಣಿಗೊಂಬುದೆ ನಿನ್ನ ಬಾಣ
ಪ್ರಸರಕಾನಂಜುವೆನೆ ಫಡ ಹೋಗೆನುತ ತೆಗೆದೆಚ್ಚ ॥ ೫೦

ಕಾಲುವೊಳೆಗೇಕವನಿಪತಿ ಹಱು
ಗೋಲು ನೀವಿನ್ನಱಿಯದಿದ್ದರೆ
ಹೇಳೆವಾತ್ಮಸ್ತುತಿಯ ಮಾಡೆವು ಸಾಕದಂತಿರಲಿ ।
ಮೇಲುಗವಚವ ನಂಬಿ ನಮ್ಮೊಳು
ಕಾಳೆಗವ [1]ನೀ ಬಯಸಿ[1] ಬಂದೆ ನೃ
ಪಾಲ ಜೋಡಿನ ಬಲದಿ ನಮ್ಮನು ಜಯಸುವ್ಯೆ ಎಂದ ॥ ೫೧

ಆರ ದೀಪನ ಚೂರ್ಣ ಬಲದಲಿ
ವೀರ ರುದ್ರನು ಜಗವ ನುಂಗುವ
ನೋರೆಗೆಡೆಯದಿರಂಬ ಸುರಿ ಸ'ರಿ ಹೊಳ್ಳು ನುಡಿಯೇಕೆ ।
ಸಾರು ನೀ ಬರಹೇಳು ಕೀಚಕ
ವೈರಿಯನು ಪಡಿಸಣವ ನೋಡಲಿ
ಭೂರಿ ಬಾಣದ ಸವಿಯನೆಂದನು ಕೌರವರ ರಾಯ ॥ ೫೨

ಗರುಡನಾರೋಗಣೆಯ ಬೋನಕೆ
ಮರಳಿ ಪಡಿಸಣವೇಕೆ ಮಾತಿನ
ಮುರಿವುಗಳು [2][ಗೆಲ್ಲವಲೆ][2] ನೀ ನೆಱೆ ನೋಡು ಕೈಗುಣವ ।

[1] ನಿಶ್ಚಯಿಸಿ (ಟ.ತ.ದ.ನ.ಪ). [2] ಗೆಲಮಾ (ಪ).

ಅರಸ ನಿನ್ನಯ ಕೊರಳ ಕಡಿತಕೆ
ಸರಳು ಕುದಿತದಲೆನಗೆ ತನಗೆಂ
ದೊರಲುತಿವೆ ನಿನಗಿಂದಿನಲಿ ಸಾವಿಲ್ಲ ಹೋಗೆಂದ ॥ ೫೩

ಎನುತ ಕೂರಂಬಿನಲಿ ದುರ್ಯೋ
ಧನನನೆಚ್ಚನು ವಜ್ರ ಕವಚದ
ಲನಿತು ಶರವಕ್ಕಡಿದವು ಸೊಪ್ಪಾದವೇಣುಗಳು ।
ಅನಲಗಿರಿ ವಜ್ರಾಸ್ತ್ರದಲಿ ಫಲು
ಗುಣನು ಬೊಬ್ಬಿಱಿದೆಚ್ಚನೆಚ್ಚಂ
ಬನಿತು ಮುಱಿದವು ಮಸೆಯ ಕಾಣದು ಮೈ ಮಹೀಪತಿಯ ॥ ೫೪

ಹರಿಯನೆಚ್ಚನು ಫಲುಗುಣನ ತನು
ಬಿರಿ[1]ಯೆ ಬಿಗಿದನು[1] ಶರವನಾ ರಥ
ತುರಗದೊಡಲಲಿ ಹೂಳಿದನು ಹೇರಾಳದಂಬುಗಳ ।
ವರ ಕಪೀಂದ್ರನ ಘಾಸಿಮಾಡಿದ
ನುರವಣಿಸಿ ಕವಿದೆಸುವ ಭೂಪನ
ಭರದ ಬಲು ವೇಗಾಯ್ಲತನವನು ಹೊಗಳಿದನು ಪಾರ್ಥ ॥ ೫೫

ಕವಚವಿದೆ ಸರ್ವಾಂಗದಲಿ ನೃಪ
ನವಯವಕೆ ಕೇಡಿಲ್ಲ ಕೆಲಬಲ
ದವರು ನೆಱೆ ಕೈ[2]ಮಾಡು[2]ತಿವೆ ಕರ್ಣಾದಿ ನಾಯಕರು ।
ರವಿಯ ಕೈಗಳನಸ್ತಗಿರಿಯಾ
ನುವವೊಲಿದೆ ಮುನಿದಿವನ ಕೊಂದರೆ
ಪವನಜನ ಕೊಂದವನು ಹದನೇನೆಂದು ಚಿಂತಿಸಿದ ॥ ೫೬

ಎನುತ ಮೂಱಂಬಿನಲಿ ರಾಯನ
ಧನುವ ಖಂಡಿಸಿ ಮತ್ತೆ ಕೂರಂ
ಬಿನಲಿ ನೃಪನಂಗೈಯನೆಚ್ಚನು ಬಾಣ[3] ಧಟ್ಟುಗಿಯೆ[3] ।
ಜನಪ ನೊಂದನು ಬಳಿಕ ಕೃತವ
ರ್ಮನು ಕೃಪಾಚಾರಿಯನು ನಿನ್ನಯ
ತನುಜನನು ತೊಲಗಿಸಿದರೈ ಧೃತರಾಷ್ಟ್ರ ಕೇಳೆಂದ ॥ ೫೭

---

[1] ಯಲೆಚ್ಚನು (ಗ.ಚ.ಪ). [2] ಗೈವು (ಟ.ತ.ದ.ನ). [3] ವುಚ್ಚಳಿಸೆ (ಕ).

ರಾಯ ನೊಂದನು ಹರಿಬಕಿಲ್ಲದ
ನಾಯಕರ ಸುಡು ಹೊಟ್ಟೆಹೊರೆಕ[1]ರ
ವಾಯಕಿ[1]ವದಿರ ಸಂತವಿಟ್ಟನು ಸ್ವಾಮಿ[2]ಕಂಟಕರ[2] ।
ಆಯುಧವ ಹಿಡಿದಕಟ ರಣದಲಿ
ಸಾಯಲಮ್ಮರು ಬಿರುದ ಹೊಗಳುವ
ಬಾಯ ನೋಡೆನುತಿದ್ದುದಾ ದುಶ್ಶಾಸನಾದಿಗಳು ॥ ೫೮

ಕದಡಿತೀ ಬಲಜಲಧಿ ಸುಭಟರು
ಹೊದಱುಗಟ್ಟಿತು ಹೊಳೆವಡಾಯುಧ
ಹೊದಕೆಗಳ [3]ಸತ್ತಿಗೆಯ ಸೂಸುವ ಚಮರ ಸೀಗುರಿಯ[3] ।
ತುದಿವೆರಳ ಕಿರುದನಿಯ ಕೆಂಪಿನ
ಕದಡುಗಂಗಳ ಕುಣಿವ ಮೀಸೆಯ
ಕದನಗಲಿಗಳು ಕವಿದರೀ ಕರ್ಣಾದಿ[4]ನಾಯಕರು[4] ॥ ೫೯

ಮುತ್ತಿದರು ಹಿಂದೆಡಬಲನ ಮುಂ
ದೆತ್ತಲೀಕ್ಷಿಸಲತ್ತ ರಾಯನ
ತೆತ್ತಿಗರ ಕೂರಂಬು ಕವಿದವು ನರನ ಹಯ ರಥವ ।
ಎತ್ತ ನೋಡುವಡತ್ತ ಬಲದು
ರ್ವೃತ್ತ ಸುಭಟರ ಬಲ ಶರೌಘದ
ಕತ್ತಲೆಗೆ ಹದನೇನೆನುತ ದೈತ್ಯಾರಿ ಚಿಂತಿಸಿದ ॥ ೬೦

ಅರಿಭಟರು ಕಟ್ಟಳವಿಯಲಿ ಮು
ಕ್ಕುಱುಕೆ ಮುರರಿಪು ಪಾಂಚಜನ್ಯವ
ನಿರದೆ ಮೊಳಗಿದ ಹನುಮ ಗರ್ಜಿಸಿದನು ಪತಾಕೆಯಲಿ ।
ಸುರರ ದೈತ್ಯರ ಸಮರ ಸಿರಿ ವಿ
ಸ್ತರಿಸಿತಿತ್ತಲು ದ್ರೋಣನತ್ತಲು
ತೆರಳಿಚಿದನೈ ಪಾಂಡುಪುತ್ರರ ಸೈನ್ಯ ಸಾಗರವ ॥ ೬೧

ನಕುಲನನು ಮಸೆಗಾಣಿಸಿ[5]ಯೆ[5] ಸಾ
ತ್ಯಕಿಯ ವಿರಥನ ಮಾಡಿ ಪಾಂಚಾ
ಲಕರನೋಡಿಸಿ ಮತ್ಸ್ಯ ಕೇಕಯ ಬಲವ ಬಱಿಕೈದು ।

---

[1] ರುನಾಯ್ಗಳಿ (ಚ.ಪ). [2] ದ್ರೋಹಿಗಳ (ಚ.ಪ). [3] ಹೊಸ ಮಸೆಯ ಧಾರೆಯ ಸಾಲ ಸಂದಣಿಯ (ಚ.ಪ). [4] ಷಡುರಥರು (ಕ). [5] ದ (ಟ.ತ.ದ.ನ.ಪ).

ಸಕಲ ಸನ್ನಾಹದಲಿ [1]ಚೈದ್ಯ[1]
ಪ್ರಕರವನು ತವೆ ಕೊಂದು ಭೂಪಾ
ಲಕನ ಬೆಂಬತ್ತಿದನು ಭೀಮ ಘಟೋತ್ಕಚರ ಗೆಲಿದ ॥ ೬೭

ದಾನವರು ಬಲುಗೈಗಳಪ್ರತಿ
ಮಾನರಹುದಾದಡೆಯು ಸಮರದೊ
ಳಾನಲ[2]ಸದಳ[2]ವಸುರರಿಗೆ ಸುರರಿಗೆ ಜಯಾಭ್ಯುದಯ ।
ಏನ ಹೇಳು[3]ವುದಲ್ಲಿ[3] ಸುಭಟ ನಿ
ಧಾನರಿದ್ದುದು ಪಾಂಡವರೊಳವ
ಧಾನಗುಂದನು ರಾಯ ಗದುಗಿನ ವೀರ ನಾರಯಣ ॥ ೬೮

ಹತ್ತನೆಯ ಸಂಧಿ ಮುಗಿದುದು.

[1] ವೈರಿ (ಚ.ಪ). [2] ಪಜಯ (ತ.ದ). [3] ವನಿತ್ತು (ಟ.ತ.ಪ.ನ).

ಮತ್ತೆ ಸಾತ್ಯಕಿ ಬಿಲ್ಲನಿಳುಹಿದ
ನುತ್ತಮಾಂಗಕೆ ಕರಯುಗವ ಚಾ
ಚುತ್ತೆ [1]ಬಿನ್ನೈಸಿದ ಧನುರ್ಧರ ಫಾಲನೇತ್ರಂಗೆ[1] ॥ ೮

ಕಳುಹಿದನು ಯಮಸೂನು ಪಾರ್ಥನ
ಬಳಿಗೆ ನೀ ಕೃಪೆ ಮಾಡಿ ತನ್ನನು
ಕಳುಹಬೇಹುದು ನಿಮ್ಮೊಳಿದಿರೇ ರಣಕೆ ತಾನೆನುತ ।
ಸೆಳೆದ ಬಾಣವನಿಳುಹಿ[2]ದರೆ[2] ಗುರು
ತೊಲಗಿ ಕೊಟ್ಟನು ಪದವನಹಿತಾ
ವಳಿಗೆ ಸಾತ್ಯಕಿ ಮೊಳಗಿದನು ಕಳಶಜನ ನೇಮದಲಿ ॥ ೯

ಪಾರಸಿಕ ನೇಪಾಳ ಸಿಂಹಳ
ವೀರ ಬಾಹ್ಲಿಕ ಯವನ ಕೌಸಲ
ಪಾರಿಯಾತ್ರರು ತುರುಕ ಬರ್ಬರ ವಂಗ ಮಾಗಧರು ।
ಕೌರವೇಂದ್ರನ ಮನ್ನಣೆಯ ಪರ
ಪಾರವೀತನ ಕೆಣಕಿದರು ಸರ
ಘೋರಣವ ಸೈಗಜೆದರದುಭುತವಾಯ್ತು ಸಂಗ್ರಾಮ ॥ ೧೦

ಚೀನ ಘೋಟ ವರಾಳ [4]ಕೇತಿ ಸು[4]
[4]ದೀನ[4] ಖುರ[5]ಸಾ[5]ಣಾದಿ ದೇಶದ
ಮಾನನಿಧಿಗಳು ಕವಿದು ಮುತ್ತಿತು ಕೈಯ ಕೋಲ್ಗಳಲಿ ।
ಏನನೆಂಬೆನು ಸಮರದಲಿ ರಾ
ಜಾನು[6]ಮಿ[6]ತ ಮಂತ್ರಣವೆನಿಪ ಮು
ಪಾನುಮತವರಿದಾಯ್ತು ಸಾತ್ಯಕಿಗಾ ಮಹಾಕದನ ॥ ೧೧

ಕಡಿದನನಿಬರ ಕೈಯ ಕೋಲ್ಗಳ
ನಡಗು ದಜಿದನನೇಕ ಭೂಪರ
ಗಡಣವನು ಘಾಡಿಸಿದನಂಬಿನ ಸರಿಯ[7]ನುರವಣಿಸಿ[7] ।
ಕಡಗಿ ಸಾತ್ಯಕಿಯೊಡನೆ ಬವರವ
[8]ಹಿಡಿದ ಭಟ[8]ರಮರರ ವಿಮಾನವ
ನಡರುತಿದ್ದರು ಕೊಂದನತಿಬಳನಹಿತ ಮೋಹರವ ॥ ೧೨

---

[1] ನಮಿತಾಜಿಾಧನಾದನು ಕಟಕಗುರುವಿನಲಿ (ಕ.ಗ.ಚ.ಪ). [2] ದನು (ತ.ನ). [3] ಖರ್ಪರ (ಚ.ಪ). [4] ಚೋನೆ (ಚ.ಪ). ಜೀನ (ತ.ನ). [5] ಸಹ (ನ). [6] ಮ (ಪ). [7] ನಂಬರಕೆ (ಚ.ಪ). [8] ತುಡುಕಿದವ (ಕ.ಗ.ದ).

ಎಡ ಬಲಕೆ ತೂಳುವ ಮದೇಭವ
ಕಡಿದು ಹರ[1]ಿಹಿದನೌಕಿ[1] [2]ಚೂ[2]ರಿಸಿ
ಗಡಣಿಸುವ ಭೂಪರಿಗೆ ಮಾಡಿ[3]ದನಮರ ಪದವಿಯನು[3] ।
ಕಡಿದು ಬಿಸುಟನು ಕೇಣವಿಲ್ಲದೆ
ಕಡುಗಲಿಗಳನು ವೈರಿ ಸೇನೆಯ
ನಡಗು ದಱಿದನು ಕೆಡಹಿದನು ಜಲಸಂಧ ಭೂಪತಿಯ ॥ ೧೩

ಒಂದು ದೆಸೆಯಲಿ ಪಾರ್ಥ ಸವಱಿದ
ನೊಂದು ದೆಸೆಯಲಿ ಸಾತ್ಯಕಿಯು ಸರ
ಳಿಂದ ನೊಂದುದು ಸೇನೆಯೊನೆ ಕೃತವರ್ಮನಿದಿರಾಗಿ ।
ನಿಂದನೆಲಪ್ಪೋ ಮರುಳೆ ಮಿಾಱಿದ
ಡಿಂದುಧರ ತಲೆಗಾವಡೀಗಳೆ
ಕೊಂದಡಲ್ಲದೆ ಬಿಡೆನೆನುತ ಮೂದಲಿಸುತೈತಂದ ॥ ೧೪

ನರನ ಮೈಗಂಡೀತನಲಿ ಸಂ
ಗರವನಾದರಿಸುವೆನು ಬಳಿಕೆಂ
ದರಿದು ಕೃತವರ್ಮಕನ ರಥವನು [4]ಧನು[4]ವ ಸಾರಥಿಯ ।
ಸರಳು ಮೂಱಱಲೆಚ್ಚು ರಿಪುವನು
ಧುರ[5]ದಿ[5] ಹಿಂಗಿಸಿ ಹಂಸ ಮಯ ಮೋ
ಹರದೊಳಗೆ ಮೊಳಗಿದನು ತಾಗಿದನತಿರಥಾವಳಿಯ ॥ ೧೫

ಹೊಗಿಸದಿರಿ ಸಾತ್ಯಕಿಯ ಹಿಂದಕೆ
ತೆಗೆಸು ತೆಗೆಸೋ ಫಲುಗುಣನ ತೆ
ತ್ತಿಗನಿವನು ಹೊಯ್[6] ಹೊಯ್ಯೆನುತ ಹೊಱವಂಟರತಿರಥರು ।
ಬಿಗಿದ ಬಿಲುಗಳ ತಿರು[6]ವೆರಳ[6] ಬೊ
ಬ್ಬೆಗಳ ಕಿವಿಗಡಿಯಂಬುಗಳ[7]ನಾ[7]
ಳುಗಳ ದೇವನ ತಱುಬಿದರು ಕೌರವ ಸಹೋದರರು ॥ ೧೬

ಅವರ ಬಲನೆಡವಂಕದಲಿ ಸ್ಯಂ
ಧವನ ಮೊನೆಯವರೌಕಿದರು ಕೌ
ರವನ ಬಳಿಯಲಿ [8]ಸಂದಣಿಸಿದರು ಕರ್ಣ ನಂದನರು[8] ।

---

[1] ಹುತನೂಕಿ (ಕ). [2] ಭೂ (ಕ.ಗ.ಟ). [3] ಶಿ ಪರಮಸದ್ಗತಿಯ (ಕ).
[4] ಹಯ (ಗ). [5] ಕೆ (ಕ.ಗ.ಚ). [6] ಪುಗಳ (ತ). [7] ಗಾ (ಕ.ಗ.ಪ.ನ).
[8] ಕವಿದರಿನಗುರುಸುತರು ಸಾತ್ಯಕಿಯ (ಟ.ತ ನ).

ಬವರವಸದಳವಾಯ್ತು ರಿಪು ಭಟ
ನಿವಹ ಮಧ್ಯದೊಳೀತ ಸಿಲುಕಿದ
ನವಿರಳಾಸ್ತ್ರವ ಸುರಿದು ಕಾಣನು ಹಗೆಗೆ ಹಜ್ಜೆವುಗಳ ॥ ೧೭

ಅತ್ತ ಸಾತ್ಯಕಿಗಾಯ್ತು ರಣದೊ
ತ್ತೊತ್ತೆ ಮೋಹರ ಮಧ್ಯರಂಗದೊ
ಳಿತ್ತಲರ್ಜುನನಾಹವವನೇನೆಂಬೆನದ್ಭುತವ ।
ಮತ್ತೆ ಕೃಷ್ಣನ ಶಂಖ ನಾದವ
ನಿತ್ತಲವನೀಪಾಲ ಕೇಳಿದು
ಚಿತ್ತ ಕದಡಿದುದಡಿಗಡಿಗೆ ಮನನೊಂದು ಬಿಸುಸುಯ್ದು ॥ ೧೮

ಹನ್ನೊಂದನೆಯ ಸಂಧಿ ಮುಗಿದುದು.

ಹನ್ನೆರಡನೆಯ ಸಂಧಿ

ಸೂಚನೆ ॥ ರಾಯಸೇನಾ ಸೂಚೀಕಾಟನ
ಜೇಯ ಮಾರುತ ಸುತನು ಕೌರವ
ರಾಯನನುಜರ ಸೀಳಿದನು ಕಳಶಜನ [1]ಪರಿಹರಿ[1]ಸಿ ॥

ದೃಗುಯುಗಳ ನೀರೇಱಿದವು ಸೆರೆ
ಬಿಗಿದು ಹಲುಬಿದನಕಟ ಕಡು ಪೇ
ಸಿಗನು ತಾ ತನ್ನೊಡನೆ ಫಲುಗುಣನೇಕೆ ಜನಿಸಿದನೊ ।
ಹಗೆಯ ಹಱಿಪಿಂಗೊಪ್ಪುಗೊಟ್ಟನು
ಮಗನಳಲು ಮಿಗೆ ಹೂಣ್ ಹೊಕ್ಕನು
ಮಗುಳಲಱಿಯನು ತಮ್ಮನೆನುತವನೀಶ ಚಿಂತಿಸಿದ ॥ ೧

ಕಳುಹಲತ್ತ[2]ಲು ಹೋಗಿ[2] ಸಾತ್ಯಕಿ
ತಿಳಿದು ಮರಳಿದುದಿಲ್ಲ ಫಲುಗುಣ
ನಳಿದನೋ ಮೇಣುಳಿದನೋ ಶರ ಹತಿಗೆ ಬಳಲಿದನೊ ।
ತಿಳಿದು ಹೇಳುವರಾರು ಪಟು ಭಟ
ರೊಳಗೆ ಮಕುಟದ ಮಹಿಮರೆನುತಳ
ವಳಿದು ಭೀಮನ ವದನವನು ನೋಡಿದನು ಭೂಪಾಲ ॥ ೨

ಎಲೆ ವೃಕೋದರ ವೈರಿ ಮೋಹರ
ದೊಳಗೆ ಸಿಲುಕಿದನೋ ಕಿರೀಟಿಗೆ
ನೆಲದ ಋಣ ಸಂಬಂಧ ಸವೆದುದೊ ಮೇಣು ಸಮರದಲಿ ।
ತಿಳಿಯಲಟ್ಟಿದ ಸಾತ್ಯಕಿಗೆ ಕೊಳು
ಗುಳದ ಘಾರಣೆಯಾಯ್ತು ಫಲುಗುಣ
ನಳಬಳವನಱಿದಲ್ಲದೆನ್ನಸು ಸೈರಿಸದು ತನುವ ॥ ೩

ಮುರ ವಿರೋಧಿಯ ಪಾಂಚಜನ್ಯದ
ಪರಮ ರವ ಪಾರ್ಥನ ಪತಾಕೆಯ
ವರ ಕಪೀಂದ್ರನ ರಭಸವೇ ತುಂಬಿತು ಜಗತ್ರಯವ ।

[1] ಪರಿಭವಿ (ತ.ನ), ನವಪುಟಿಸಿ (ಚ.ಪ). [2] ಲೆ ಹೋದ (ಗ.ಟ.ತ.ನ).

ನರನ ಧನುವಿನ ದನಿಯ ಕೇಳಿನು
ಕರಗಿತಂತಃಕರಣವರ್ಜುನ
ಸಿರವ ಕಾಣಿಸಿ ಬಾಯೆನಲು ಕೈಕೊಂಡನಾ ಭೀಮ ‖ ೪

ಅರನೆಲೆಯ ಸುಯ್ದಾನ ಪಾಂಚಾ
ಲರಿಗೆ ನೇಮಿಸಿತನಿಲ ತನಯನ
ಬೆರಳ ಸನ್ನೆಗೆ ತೀವಿದಂಬಿನ ತೇರ ಬಾಚಿದರು ।
ಕರೆದು ತನ್ನ ವಿಶೋ[1]ಕ[1]ಗಖಿಳಾ
ಭರಣವನು ಕೊಟ್ಟನು ವರೂಥದ
ಹರಿಗೆ ಹೊಡವಂಟಡರಿದನು ನವ ರತುನ ಮಯ ರಥವ ‖ ೫

ಸೂಳು ಮಿಗಲಳ್ಳಿಱಿದವುರು ಪ
ಸ್ಸಾಳ ತತಿ ದಿಗುವಳಿಯುದಲಿ ಕೈ
ಮೇಳವಿಸಿದವು ತಂಬಟ ಧ್ವನಿ ಜಡಿವ ಕಹಳೆಗಳು ।
ಕೀಳ ಬಗೆಯದೆ ಕೆರಳಿ ಹೊಯ್ದವು
ಕಾಲಲಿಳೆಯನು ಕುದುರೆ ಮೋಟೆಯ
ತೋಳಿನಲಿ ಮೋ[2]ದಿ[2]ದವು ಮಹಿಯನು ಸೊಕ್ಕಿದಾನೆಗಳು ‖ ೬

ಒದಗಿತೆಡ ಬಲವಂಕದೊಯ್ಯಾ
ರದಲಿ [3]ರಾವುತರು[3] ಮುಂದೆ ತಲೆದೋ
ಱಿದರು ಮುಂಗುಡಿಯವರು ಜೋಡಿಯ ಹೊಂತಕಾರಿಗಳು ।
[4]ಅ[4]ದಿರ್ವ ಖಡುಗದ ಕಾಂತಿ ಸೂರ್ಯನ
ಹೊದಿಸಿದುದು ಹೊದಱಿದ್ದ [5]ಕೊಂತದ[5]
ತುದಿಗಳಿತ್ತವು ರಾಹು ಭಯವನು ರವಿಯ ಮಂಡಲಕೆ ‖ ೭

[6]ಕೆಲಕೆ[6] ಹೊಳೆದವು ಕಡುಗುದುರೆ ನೆಲ
ನಳುಕೆ ನಡೆದವು ದಂತಿ ದೆಸೆಗಳ
ಹೊಲಿಗೆ ಹಱಿಯದೆ ಮಾಣವೆನೆ ಹೊಕ್ಕವು ರಥಾನೀಕ ।
ತಳಪಟವ ತುಂಬಿತ್ತು ಪಯದಳ
ವುಲಿವ ಕಹಳೆಯ ಚೆಂಬುಕನ ಕಳ
ಕಳಿಕೆ ಮಿಗೆ ಕೈಕೊಂಡುದನಿಲ ಕುಮಾರಕನ ಸೇನೆ ‖ ೮

---

[1] ಖಿ (ಕ). [2] ಹಿ (ಟ.ತ.ನ). [3] ರಾಯರು (ಚ.ತ.ನ). [4] ಬಿ (ಗ.ಟ.ತ.ನ). [5] ಸಿಂಧದ (ಪ). [6] ಕಲಕಿ (ಕ.ಗ.ಚ).

ಮುಸುಕಿದನು ರವಿ ಧೂಳಿಯಲಿ ಹೊಳೆ
ವಸಿ ಮುಸುಂಡಿ ತ್ರಿಶೂಲ ಕೊಂತ
ಪ್ರಸರ ಕಾಂತಿಗಳಳುಕಿದವು ಖದ್ಯೋತ[1]ದೀಧಿತಿಯ[1] ।
ಬಿಸಜ ಸಖನಡಗಿದರೆ ನಭದಲಿ
[2]ಮಸಗಿ[2]ದವು ತಾರೆಗಳೆನಲು ಶೋ
ಭಿಸಿದವವನೀ ಪಾಲ ಮೌಳಿ ಸುರತ್ನ ರಾಜಿಗಳು ॥ ೯

ಎಲೆಲೆ ರಿಪು[3]ಸಂವರ್ತನೊ[3]ಳು ಕೊಳು
ಗುಳಕೆ ವರ್ತಿಸಲರಿದೆನುತ ತ
ಲ್ಲಳಿಸಿ ತೆತ್ತುದು ಮನವನವನೀಪಾಲ ಸಂದೋಹ ।
ಹಳಿವಿನಬ್ಬರಕಂಜದಿರಿ ನಿಜ
[4]ಗಳದ ಹಸುಗೆಯ[4]ಹಾರದಿರಿಯೆಂ
ದಳಿ ಮನರು ಬೆಂಗೊಟ್ಟು ಹೊಕ್ಕುದು ಕಳಶಜನ ಮಱೆಯ ॥ ೧೦

[5]ಮಿಗೆ[5] ವಿರೋಧಿಯ ಬಸುಱನುಗಿ ಕು
ನ್ನಿಗಳ ಕೆಡೆ ಬಡಿ ಸೀಳು ಹಣ ನುಂ
ಗಿಗಳ ಹೊಯ್ ಹೊಯ್ ರಣಕೆ ಹದಱುವ ಕೌರವಾ[6]ನುಜರ[6] ।
ಹಗೆಯ ಶೋಣಿತ ಪಾನದಱವ
ಟ್ಟಿಗೆಗೆ ಕರೆ ಭೇತಾಳ ಭೂತಾ
ಳಿಗಳನೆನುತ ಸುಧೈರ್ಯ ನಡೆದನು ಗರುಡಿಯಾಚಾರ್ಯ ॥ ೧೧

ಏನಿದೆತ್ತಣ ರಭಸವೆಲೆ ಪವ
ಮಾನ ಸುತ ಫಡ ಮರಳು ನಿನ್ನನು
ಮಾನವಾವುದು ಗಮನವೆಲ್ಲಿಗೆ ಮಾಡು ಬಿನ್ನಹವ ।
ಆನಿರಲು ಕೈಕೊಳ್ಳದುಱುಬುವ
ದಾನವಾಮರರಿಲ್ಲ ನಿನ್ನಳ
ವೇನು ಸಾಕೊಮ್ಮಿಂಗೆ ಕಾವೆನು ಬೇಡ ಮರಳೆಂದ ॥ ೧೨

ಎಲೆ ಮರುಳೆ ಗುರುವೆಮಗೆ ನೀ ಹೆ
ಕ್ಕಳಿಸಿ ನುಡಿದರೆ ಮೊದಲಲಂಜುವೆ
ನುಳಿದ ಮಾತಿನಲೇನು ನಿಮ್ಮೊಡನೆನಗೆ ಸಂಗ್ರಾಮ ।

---

[1] ವೀಧಿಗಳ (ಕ.ನ). [2] ಮುಸುಕಿ (ಕ.ಗ). [3] ಸಮವರ್ತಿಯೊ (ಗ.ತ.ದ).
[4] ದಳದ ವಿಜಯುವ (ಟ.ತ ನ). [5] ಬಗಿ (ಚ.ಟ.ತ ನ). [6] ಹನರ (ಕ.ಗ. ಟ.ತ.ನ).

¹ಬಳಿಕವೀಗಳು ನಿಮ್ಮ¹ ಮೋಹರ
ದೊಳಗೆ ಕೊಡಿ ಬಟ್ಟೆಯನು ಸಿಲುಕಿದ
ಫಲುಗುಣನ ತಹೆನಣ್ಣದೇವನ ನೇಮ ತನಗೆಂದ ॥ ೧೩

ಆದರೆಲವೋ ಭೀಮ ಪಾರ್ಥನ
ಹಾದಿಯಲಿ ಗಮಿಸುವರೆ ಸಾತ್ಯಕಿ
ಹೋದವೊಲು ನೀನೆಮಗೆ ವಂದಿಸಿ ಮಾರ್ಗವನು ಪಡೆದು ।
ಹೋದಡೊಪ್ಪುವುದಲ್ಲದೇ ಬಿಱು
ಸಾದಡಹುದೇ ಬೀಳು ಚರಣಕೆ
ಕಾದುವರೆ ಹಿಡಿ ಧನುವನೆಂದನು ದ್ರೋಣನನಿಲಜನ ॥ ೧೪

ತರಳರರ್ಜುನ ಸಾತ್ಯಕಿಗಳವ
ದಿರಿಗೆ ಪಂಥವದೇಕೆ ನಿಮ್ಮನು
ಗರುಡಿಯಲಿ ವಂದಿಸುವ ವಂದನೆಯುಂಟೆ ಸಮರದಲಿ ।
ಮರುಳಲಾ ಮಱುಮಾತು ಕಡು ವೃ
ದ್ಧರಿಗದೇಕೆಂಬಂತೆ ಚಿತ್ತವ
ಕುರುಳ ಬಲ್ಲೆನು ಪಥವ ಬಿಡಿ ಕೆಲಸಾರಿ ಸಾಕೆಂದ ॥ ೧೫

ಫಡ ಫಡೆಲವೋ ಭೀಮ ²ಬಣ²ಗುಗ
ಳೊಡನೆ ಸರಿಗಂಡೆನ್ನ ಬಗೆಯದೆ
ಕಡುಗುವ್ವೆ ಕಾಳಗಕೆ ತಪ್ಪೇನಾದಡನುವಾಗು ।
ಒಡಲನೀವೆನು ವಿನಯದೆಡೆಗವ
ಗಡಿಸಿದರೆ ಕೊಲುವೆನು ರಿಪುವ್ರಜ
ಮೃಡನನಱಿಯಾ ದ್ರೋಣ ತಾನೆನುತೆಚ್ಚನನಿಲಜನ ॥ ೧೬

ಈತನೊಡನಂಬಿನಲಿ ಕಾದಲು
ಭೂತನಾಥಂಗರಿದು ಸಾರಥಿ
ಪೂತುರೇ ಎನುತಿಳಿದು ರಥವನು ತುಡುಕಿದನು ಗದೆಯ ।
ಆತನಸ್ತ್ರಕೆ ದಂಡೆಯೊಡ್ಡಿ ಮ
ಹಾತಿಬಳ ಕವಿದನು ವಿರೋಧಿಯ
ಸೂತನನು ಕೆಡೆಹೊಯ್ದು ಕೊಂದನು ರಥದ ಕುದುರೆಗಳ ॥ ೧೭

¹ ಬಳಿಕ ನೋಡುವ ನಿಮ್ಮ (ಕ), ಬಳಿಯಲೀಗಳು ನಿನ್ನ (ಚ), ಕಲಿಗಳೇ ನಿಮ್ಮವರು (ಟ.ನ). ² ಬಿನ (ಕ.ಚ.ಪ).

ಇದು ನಿಮಗೆ ವಂದನೆಯೆನುತ ನಿಜ
ಗದೆಯಲಾತನ ರಥವ ಹುಡಿಗು
ಟ್ಟಿದನು ಸುರಗಿಯನುಗಿಯಲಪ್ಪಳಿಸಿದನು ಮೋಹರವ ।
ಇದಿರಲಿರಲಳವಡದೆ ಗುರು ಹಿಂ
ಗಿದನು ಶಕಟವ್ಯೂಹವನು ಮ
ಧ್ಯದೊಳು ಥಟ್ಟುಗಿದುರವಣಿಸಿ ಪವಮಾನ ಸುತ ನಡೆದ ॥ ೧೮

ಹರಿಯ ಕುಲಿಶದ ಧಾಳಿಯಲಿ ಕುಲ
ಗಿರಿಗಳಿಬ್ಬಗಿಯಾದವೊಲು ಮಂ
ದರದ ಘಾರಾಘಾರಿಯಲಿ ಬಾಯ್ಬಿಡುವ ಕಡಲಂತೆ ।
ಅರಿ ವರೂಥಿನಿ ಕೆದಱಿ [1]ತಳಿತ[1]ವು
ತುರಗ ಕರಿ ರಥ ಪಾಯಿದಳ ಬಲ
ಹೊರಳಿಯೊಡೆದುದು [2]ಹೊದಱು ತಗ್ಗಿತು[2] ಹೂಣಿಗರ ಮನದ ॥೧೯

ಹೊಸ ರಥವ [3]ತಾ ಹೋದನೇ[3] ಸಂ
ಧಿಸುವೆನಿನ್ನಾನಿಲಜನು ಕುಂತಿಯು
ಬಸುಱಿ ಹೊಕ್ಕರೆ ಹೊಗುವೆನೆನುತಾ ದ್ರೋಣ ಗಜಬಜಿಸೆ ।
ಕುಸುರಿ ದಱಿದನು ಮುಂದೆ ವೈರಿ
ಪ್ರಸರವನು ಸಂವರ್ತ ರುದ್ರನೊ
ಹೊಸಬನಿವನಾರೆಂದು ತಲ್ಲಣಿಸಿತ್ತು ರಿಪು ಸೇನೆ ॥ ೨೦

ಎಚ್ಚನುಚ್ಚಳಿಸುವ ತುರಂಗವ
ನೊಚ್ಚತವೆ ಕೊಂದನು ರಥೌಘವ
ನಚ್ಚರಿಯರೊಡನಾಡಿಸಿದನುರವಣಿಪ ಕಾಲಾಳ ।
ಕಿಚ್ಚುಗಿಡಿ ಗೆದಱುವ ಸಿಳೀಮುಖ
ಕೊಚ್ಚಲಿಭದವಯವವನಮರರಿ
ಗಚ್ಚರಿಯ ತನಿ ಸೂಱೆ ಬಿಟ್ಟನು ಭೀಮ ಬವರದಲಿ ॥ ೨೧

ತನತನಗೆ ಮುಂಕೊಂಡು ಸಂಗರ
ವೆನಗೆ ತನಗೆಂಬಖಿಳ ವೀರಾ
ವನಿಪರಹಮಿಕೆಯಿಂದ ಹೊಯ್ದರು ಪವನ ನಂದನನ ।

[1] ತುಳಿದ (ಕ). [2] ಹೊದಱುದೆಗೆದುದು (ಗ.ದ.ಪ). [3] ಮೋಳ್ಕೈಸಿ ತಾ (ಚ.ಟ.ದ).

ಮೊನೆಯಲಗಿನಂಬುಗಳ ಬಿಱು ಸರಿ
ಗನಿಬರಂಗವ ತೆತ್ತು [1]ವಾತಾ
ಯನಿತ[1]ವಿಗ್ರಹವಾಯ್ತು ನಿಗ್ರಹದತಿ ಮಹಾರಥರು ‖ ೨೨

ಸಿಡಿದ ಕಣ್ಣಾಲಿಗಳ ಮೀಂಗಳ
ಕೆಡೆದ ಸತ್ತಿಗೆಯಬುಜ ಪಂಕ್ತಿಯ
ಬಿಡುಮಿದುಳ ರಾಸಿಗಳ ರಚನೆಯ ರಾಜ ಹಂಸೆಗಳ।
ಬಿಡದೆ ಬೆಂಡೆದ್ದೇಳ್ವ ತಲೆಗಳ
ಗಡಣ ನೀರ್ವಕ್ಕಿಗಳ ಸರಸಿಯ
ನಡುವೆ ನಲಿ ನಲಿದಾಡುತಿರ್ದುದು ಭೀಮ ವನ ದಂತಿ ‖ ೨೩

ಮಕುಟ ಬದ್ಧ ಮಹೀಶ ವೇಣು
ಪ್ರಕರದಲಿ ಛಟಛಟಿಸಿ ತುರಗ
ಪ್ರಕರ ಪಲ್ಲವ ಭೂಜ ರಾಜಿಗಳೊಳಗೆ ಘುಳುಘುಳಿಸಿ।
ಸಕಲ ಗಜ ರಥ ಭೂಧರಾಧಿ
ತ್ಯಕೆಯೊಳಗೆ ಭುಗಿಭುಗಿಸಿ ರಿಪು ವನ
ನಿಕರದಲಿ ಸಲೆ ಬೀದಿ ವರಿದುದು ಭೀಮ ದಾವಾಗ್ನಿ ‖ ೨೪

ಕಲಕೆ ಚಕ್ರ ವ್ಯೂಹ ಹಂಸಾ
ವಳಿಗೆ ಹಂಸ ವ್ಯೂಹ ಹಿಂದಣ
ಬಲದೊಳಾ ಮೋಹರಕೆ ತರಹರವಾಯ್ತು ಪದ್ಮದಲಿ ।
ಬಳಿಕ ಮಕರ ವ್ಯೂಹದಲಿ ಮಂ
ಡಳಿಕರಾಂತುದು ಭೀಮಸೇನನ
ಕೊಳುಗುಳಕೆ ಕೈಕೊಂಡರಾ ಕರ್ಣಾದಿ ಪಟು ಭಟರು ‖ ೨೫

ನಿಲಿಸಿದರು ರವಿ ಸುತನಸೀತನ
ತಲೆಯ ಮೀಸಲು ತಮ್ಮ ಸರಳದು
ಗೆಲವು ನಿಮಗಲ್ಲೆನುತ ಹೊಕ್ಕರು ಕೌರವಾನುಜರು ।
[2]ಚಲಿಸಿತ[2]ರನೆಲೆ ಕೋಡ ಕೈಯಲಿ
ಮೊಳಗಿದವು ನಿಸ್ಸಾಳ ಬಲು ಮಂ
ಡಳಿಕರೆಡ ಬಲ ವಂಕದಲಿ ನೆರೆದುದು ಕುಮಾರಕರು ‖ ೨೬

[1] ನಾನಾತನಸು (ಕ), ನಾನಾವಿನುತ (ನ). [2] ತುಳುಕಿತ (ಕ), ತಳಿ
ತುಡ (ಚ.ಪ).

ಸಾಲು ಗೋವಳಿ ಗಟ್ಟಿಗೆಯ ಕುಂ
ತಾಳಿಗಳ ತೂಗಾಟ ಮಿಗೆ ದು
ವ್ವಾಳಿಗಳ ದೆಖ್ಖಾಳ ಗಜ ರಥ ತುರಗ ಸೇನೆಯಲಿ ।
ಮೇಲೆ ಹೇಳಿಕೆಯಾಯ್ತು ಕವಿವ ನೃ
ಪಾಲಕರು ಭೀಮಂಗೆ ಹರಣದ
ಸಾಲಿಗರು ಸಂದಣಿಸಿತಬುಜ ವ್ಯೂಹ[1]ದಗ್ರ[1]ದಲಿ ॥ ೨೭

ದುರುಳರುರವಣಿಸಿದರು ಜವ್ವನ
ದುರು ಮದದ ಭರತಾನ್ವಯದ ದು
ರ್ಧರ ಮದದ ಘನ ಭುಜ ಮದದ ದಿವ್ಯಾಸ್ತ್ರದಟಕಿಗಳ ।
[2]ಭರ[2] ಮದದ ಮರ್ಕಟ ವಿಲಾಸರು
ಧುರ ರಚಿತ ಪರಿಹಾಸರಭಿಜನ
ಕುರುವಿ[3]ನಾಶ[3]ರು ತಾವಕರು ಧೃತರಾಷ್ಟ್ರ ಕೇಳೆಂದ ॥ ೨೮

ಎಳೆಯ ಬಾಳೆಯ ಸುಳಿಗೆ ಸೀಗೆಯ
ಮೆಳೆಯೊಡನೆ ಸರಸವೆ ಕುಮಾರರ
ಬಲುಹ ನೋಡು ವಿಶೋಕ ತೊಡಗಿದರೆಮ್ಮೊಡನೆ ರಣವ ।
ಕಲಹದಲಿ ಮೈದೋರಿದಿವದಿರ
ತಲೆಗಳಿವು ವಾರಕದ[4]ವಿವನ[4]ರೆ
ಗಳಿಗೆಯಲಿ ತಾ ಕೊಂಬೆನೆಂದನು ನಗುತ ಕಲಿ ಭೀಮ ॥ ೨೯

ಬಿಲುದೆಗಹಿನಾಕರ್ಣಪೂರದ
ಹಿಳುಕನನಿಲಜನಿರಲು ಸಿಂಹದ
ಹೊಲನ ಹೊಗುವಿಭದಂತೆ ಹೊಡಕಾಲ್ಗೊಳುತಲಿರೆ ಕಂಡು ।
ತೊಲಗದಿರಿ ತಮ್ಮಂದಿರಿರ ಕುರು
ಕುಲ ಲಲಾಮರು ಜಗದೊಳತಿ ಪೆ
ಗ್ಗ[5]ಳೆಯ[5] ಸುಭಟರು ನೀವೆನುತ ತೆಗೆದೆಚ್ಚನಾ ಬೀಮ ॥ ೩೦

ಸರಳ ಸೊಂಪಿನ ಸೋಹಿನಲಿ ಸಿಋ
ಗರುಳ [6]ದಾ[6]ವಣಿ ವಲೆಗಳಲಿ ಸಂ
ಗರ[7]ದ ಸುಭಟ ವ್ರಜದ ಮಧ್ಯದ[7] ಗೂಡು ವಲೆಗಳಲಿ ।

---

[1] ಮಧ್ಯ (ಚ.ಪ). [2] ಸಿರಿ (ಗ.ಜ.ಪ). [3] ಲಾಸ (ಕ.ಗ.ಚ). [4] ತಲೆಯ (ಕ.ದ), ನಿವನ (ಚ). [5] ಳರು (ಕ.ಚ.ತ). [6] ಡಾ (ಕ.ಗ.ಜ.ನ.ಪ). [7] ಕಠೋರ ಧ್ವನಿಯ ವಾದ್ಯದ (ಗ.ಚ.ಪ)

ಉರುಗದೆಯ ದಡಿ ವಲೆಯಲಸಿ ಮು
ದ್ಗರದ ಸಿಡಿ ವಲೆಗಳಲಿ ಸಮರದೊ
ಳರಿ ಮೃಗ ವ್ರಾತವನು ಭೀಮ ಕರಾತ [1]ಕೈಕೊಂಡ[1] ॥ ೩೧

ಏಂದನನುಪಿಂದನನು ಚಿತ್ರಕ
ನಂದನನ ಚಿತ್ರಾಂಗದನ ಸಾ
ನಂದ ದುಸ್ಸಹ ಶಂಕುಕರ್ಣ ಸುದೀರ್ಘಬಾಹುಕನ ।
ನಂದ ಚಿತ್ರಾಂಬಕನ ಕುಂತಿಯು
ನಂದನನು ಬಱಿಕೈದು ಭಾಸ್ಕರ
ನಂದ[2]ನಾ[2]ಶ್ವತ್ಥಾಮರನು ಮೂದಲಿಸಿ ತಾಗಿದನು ॥ ೩೨

ಕೆಡೆದುದ[3]ನುಜರು[3] ಕೇಣವಿಲ್ಲದೆ
ತೊಡಗಿದಾಹವದೊಳಗೆ ಕೊಂದವ
ಕೊಡನ ಮಗನೋ ದೂಱು ಹೊತ್ತುದು ಬಱಿದೆ ಹಗೆಗಳಿಗೆ ।
ನುಡಿದು ಫಲವೇನಿನ್ನು ಭೀಮನ
ಬಿಡದೆ ಸುಭಟರು ನೂಕಿ ಯೆಂಬೀ
ನುಡಿಯ ಕೇ[4]ಳಿದು[4] ಖಾತಿಗೊಂಡನು ಮತ್ತೆ ಕಲಿ ದ್ರೋಣ ॥ ೩೩

ಹನ್ನೆರಡನೆಯ ಸಂಧಿ ಮುಗಿದುದು.

---

[1] ತವೆಕೊಂದ (ನ.ಟ.ತ.ದ), ಸವಱಿದನು (ಚ.ಪ). [2] ನ (ಸ.ತ).
[3] ನಿಬರು (ಟ.ತ.ನ). [4] ಳುತ (ಕ.ಗ.ಚ).

ಹದಿಮೂರನೆಯ ಸಂಧಿ

ಸೂಚನೆ || ಗಂಡುಗಲಿ ಕೋದಂಡ ರುದ್ರನ
ಕಂಡು ವಿರಥನ ಮಾಡಿದನು ಮಾ
ರ್ತಾಂಡ ತನಯನ ಗೆಲಿದು ರಣದಲಿ ನೊಂದನಾ ಭೀಮ || *

ಕೇಳು ಜನಮೇಜಯ ಧರಿತ್ರೀ
ಪಾಲ ಕಡುಗೋಪದಲಿ ಕಳಶಜ
ನಾಳ ಮೇಳೈಸಿದನು ನಿಜ ಮೋಹರವ ಹಿಂದಿಕ್ಕ |
ಕಾಳೆಗದೊಳನಿಲಜನನಟಿಸುತ
ಲೋಲುಪತಿ ಮಿಗೆ ಬರುತ ಭೀಮನ
ಕೋಲ ಕೋಳಾಹಳವನೀಕ್ಷಿಸುತಲ್ಲಿಗೈತಂದ || ೧

ಇಡೆ ಗದಾ ದಂಡದ ಹತಿಗೆ ಮು
ಗ್ಗಿದ ಮತಂಗ ವರೂಥ ಚಯಪ
ಕ್ಕಿದ ಶರಾಳಿಯಲಶ್ವರಥರ ಗೋನಾಳಿ ಗಡಿತಪಿಪ |
ಇಡೆ ರಥದ ಪದ ಘಾತದಲಿ ಹೆಣ
ಮಿದೆಯ ಪಾಯದಳೌಘ ಭೀಮನ
ಕದನ ಪಥವಿದೆಯೆನುತ ನಗುತ್ತೈತಂದನಾ ದ್ರೋಣ || ೨

ಕಡಿದ ಖಡೆಯದ ಕುಸುರಿಗಳ ಘನ
ಕಡಿಯ ಹೀರಾವಳಿಯ ಮುಕುಟದ
ನಡಿಲಿದನುಪಮ ರತುನ ರಾಜಿಯ ಮುಱಿದ ಕಂಕಣದ |
ಕಡಿಕು ಪಸರಿಸೆ ಕೌರವಾನುಜ
ರಡೆಗೆಡೆದ ರಣ ಕಾಂಚನಾದ್ರಿಯ
ಸಿಡಿಲ ಕಾಳೆಗದಂತೆ ಮುಱಿದಿರೆ ಕಂಡನಾ ದ್ರೋಣ || ೩

ಉಡಿದ ಬೆಳುಗೊಡೆಯುಬುಜ ಪಂಕ್ತಿಯ
ಸಿ[1]ಡಿದ ಚಮರಿಯ ಹಾವಸೆಯ ಕೆಸ
ಱುಡುವ ರಕುತಾಂಬುಗಳ ನರವಿನ [2]ನಾಳದೇಳಿಗೆಯ[2] |

---

* ಕ.ಚ.ಪ. ಪ್ರತಿಗಳಲ್ಲಿ ಈ ಸೂಚನೆಯು ೬ ಸಂಧಿಯ ೧೯ನೆಯ ಪದ್ಯವಾದ ಮೇಲೆ ಬರುತ್ತದೆ.

[1] ಹಿ (ಕ.ಗ), ಜ (ಚ). [2] ನಾಣದೇಳ್ಗೆಗಳ (ಕ.ಗ.ಚ).

ಕಡು ಮದದ ಕಾಡಾನೆ ಹೊಕ್ಕೊಡ
ನೊಡನೆ [1]ಕಲಕಿ[1]ದ ಕೊಳನವೊಲು ಭಯ
ವಡಸುತಿದೆ ಪವನಜನ ರಣ ಪಥವೆನುತ ಬರುತಿರ್ದ ॥ ೪

ಧುರದೊಳಗೆ ಗುರು ವಹಿಲ ಮಿಗಲ್ಕೆ
ತರಲು ದೂರಕೆ ಕೇಳಲಾದುದು
ಹರಿ ಸುತನ ಹರಿ ನಾದ [2]ತೇಜಿಯ ರಥದ ರೌದ್ರ ರವ[2] ।
ತಿರುವಿನಬ್ಬರವಂಬಿನುಬ್ಬರ
ಧುರ ರಭಸ ಕಲ್ಪಾಂತ ಘನ ಸಾ
ಗರದ ಮೊರೆವಾಳಾಪ ಭೀಮನ ಸಮರದಾಟೋಪ ॥ ೫

ಅತ್ತಲದೆ ಪವನಜನ ಕಳಕಳ
ದತ್ತ ಹರಿಸೈ ರಥವನೆನುತು
ದ್ವೃತ್ತ ಭೀಮನನೈದಿದನು ಚಾಪಾಗಮಾಚಾರ್ಯ ।
ಇತ್ತಲತ್ತಲು ಭೀಮ ಬಣಗುಗ
ಳತ್ತಲೇಕೈ ವೀರ ಶೌರ್ಯೋ
ನ್ಮತ್ತನಹೆ ಯಿದಿರಾಗೆನುತ ಕೆಣಕಿದನು ಪವನಜನ ॥ ೬

ತಿರುಗಿ ನೋಡಿದನಸ್ತ್ರ ಶಿಕ್ಷಾ
ಗುರುವ ಕಂಡನು ಮನದೊಳಾತನ
ಚರಣಕಭಿನಮಿಸಿದನು ನುಡಿದನು ವಿನಯ ಪರನಾಗಿ ।
ಗುರುವೆ ಬಿಜಯಂಗೈದ ಹದನನು
ಕರುಣಿಸೈ ಕಾಳಗದ ಭಾರಿಯ
ಭರವಸದಲಾನಿದ್ದೆನೆಂದನು ನಗುತ ಕಲಿ ಭೀಮ ॥ ೭

ಅನಿಲ ಸುತ ಫಡ ಮರಳು ರಕ್ಕಸ
ವಿನಯವೇ ನಮ್ಮೊಡನೆ ಕೌರವ
ನನುಜರನು ಕೆಡೆಹೊಯ್ದು ಗರ್ವದ ಗಿರಿಯನಿಳಿಯೆನುತ ।
ಕನಲಿ ಕಿಡಿ ಸುರಿವಂಬ ತೆಗೆದು
ಬ್ಬಿನಲಿ ಕವಿದೆಸುತಿರೆ ವೃಕೋದರ
ನನಿತು ಶರವನು ಕಡಿದು ಬಿನ್ನಹ ಮಾಡಿದನು ನಗುತ ॥ ೮

---

[1] ಕದಡಿ (ಚ.ಟ.ತ.ದ.ಪ). [2] ತೇಜಿಯ ರಥದ ನಿಷ್ಠುರ ರವ (ಕ.ಚ), ಜಿತಲಯ ರುದ್ರನಾಟೋಪ (ಗ), ಜಿತಲಯರುದ್ರ ನಿಷ್ಠುರದ (ಟ.ತ.ನ).

ಗುರುವೆಮಗೆ ನೀವ್ ನಿಮಗೆ ನಾವ್ ಡಿಂ
ಗರಿಗರೆಮ್ಮಿತ್ತಂಡವಿದಱಲಿ
ವರ ವಿನೀತರು ಕೆಲರು ಕೆಲಬರು ಧೂರ್ತರಾಗಿಹರು ।
ನರ ಯುಧಿಷ್ಠಿರ ನಕುಳ ಸಹದೇ
ವರವೊಲೆನಗಿಲ್ಲತಿ ಭಕುತಿ ಸಂ
ಗರದೊಳೆನ್ನಯ ದಂಡಿ ಹೊಸ ಪರಿ ಬೇಡ ಮರಳೆಂದ ॥ ೯

ಎಲವೊ ದುಷ್ಟ ಗ್ರಹದ ಬಾಧೆಯು
ನಿಲಿಸಲಱಿಯರೆ ಮಂತ್ರವಾದಿಗ
ಳಳಿ ಬಲ[1]ವ[1]ನಂಜಿಸಿದ ಕೊಬ್ಬುಗಳಕಟ ಸಮ್ಮೊಡನೆ ।
ಗೆಲುವ ಕೊಡುವೆನು ವಾಸಿಯೇ ಮು
ಕ್ಕಳುಗಳೊಡನೆಂದಿರ್ದ್ದತಿ ವೆ
ಗ್ಗಳನು ನೀನೆಂದಂಬ ಸುರಿದನು ಪವನಜನ ಮೇಲೆ ॥ ೧೦

ಸಿಲ್ಲು ಕಳಶಜ ತಪ್ಪಿದವ ನಾ
ನಲ್ಲ ಫಲುಗುಣ ಸಾತ್ಯಕಿಯವ್ರೋ
ಲಿಲ್ಲ ತನ್ನಲಿ ವಿನಯ ಹಾರದಿರಿಲ್ಲಿ ಮನ್ನಣೆಯು ।
ಬಿಲ್ಲ ಗುರುವಿನ ಬಿಂಕ ಒಯಲಾ
ಯ್ತಿಲ್ಲಿ ಯೆಂಬಪಕೀರ್ತಿ ಹೊಱುವುದು
ಬಲ್ಲೆನೆನುತುರವಣಿಸಿದನು ಮುಂಗೈಯ ಮುಸಿ ಪಿಡಿದು ॥ ೧೧

ಮಳೆಗೆ ತೆರಳದೆ ಕೋಡ ಬಾಗಿಸಿ
ಕಲಿ ವೃಷಭ ಹೊಗುವಂತೆ ದ್ರೋಣನ
ಬಲು ಸರಳ ಸರಿ ವಳೆಗೆ ದಂಡೆಯನೊಟ್ಟಿ ದಳವುಳಿಸಿ ।
ಅಳವಿ ದಪ್ಪದೆ ಕೆಲದ ಖಡ್ಗವ
ಸೆಳೆದು ಗುರುವಪ್ಪಳಿಸಿ ಕೈಯಲಿ
ಕಳೆದು ಕಟ್ಟಳವಿಯಲಿ ಹೊಕ್ಕನು ಭೀಮ ಬೊಬ್ಬಿಱಿದು ॥ ೧೨

ಗಜಱಿನಲಿ ಗಿರಿ ಬಿರಿಯೆ ದಿವಿಜ
ವ್ರಜ ಭಯಂಗೊಳೆ ಹೂಣೆ ಹೊಕ್ಕರಿ
ವಿಜಯನಿಟ್ಟಣಿಸಿದ[2]ರೆ[2] ಪಿಮ್ಮೆಟ್ಟಿದರೆ ಬಳಿಸಲಿಸಿ ।

---

[1] ರ (ಟ.ತ). [2] ನು (ತ.ಟ).

ಸುಜನ ವಂದ್ಯನ ರಥವ ಹಿಡಿದನಿ
ಲಜನು ಮುಂಗೈಗೊಂಡು ಪಟೆ ಗಜ
ಬಜಿಸೆ ನಭಕೀಡಾಡಿದನು ಹಿಡಿ ಬಾಗುರಿಯಂದದಲಿ ॥ ೧೩

ಗಗನದಲಿ ರಥ ಯೋಜನಾಂತಕೆ
ಚಿಗಿದು ಧರಣಿ[1]ಯ ಮೇಲೆ[1] ಬೀಳಲು
ನಗುತ ಕರಣವ ಹಾಯ್ಕು ಮಂಡಿಯೊಳಿರ್ದನಾ ದ್ರೋಣ ।
ಜಗದೊಳಾವಭ್ಯಾಸಿಯೋ ತಾ
ಳಿಗೆಯ ತಲ್ಲಣದೊಳಗೆ ನೆಗಹಿನ
ಸುಗಮ ಸಾಹಸನರರೆ ಮಝು ಭಾಪೆಂದುದುಭಯ ಬಲ ॥ ೧೪

ತೂಗಿ ಕೆಡೆದುದು ತೇರು ಹುಡಿ ಹುಡಿ
ಯಾಗಿ ಹೋದುದು ದ್ರೋಣ ಮನದನು
ರಾಗ ಮಿಗೆ ಮತ್ತೊಂದು ಹೊಸ ರಥದೊಳಗೆ ವೆಂಠಣಿಸಿ ।
ಹೋಗ ಬಿಡೆನಿನ್ನನಿಲಜನ ತಲೆ
[2]ವಾ[2]ಗಿಸುವೆನಿನ್ನೆನುತ ಶಕಟದ
ಬಾಗಿಲಲಿ ಗಿರಿಯಂತೆ ನಿಂದನು ಸಮರಕನುವಾಗಿ ॥ ೧೫

ಕೊಲುವುದನುಚಿತವೆಂದು ಗಗನ
ಸ್ಥಳಕೆ ರಥವನು ಬಿಸುಡೆ ಯೋಜನ
ದಳವಿಯಲಿ ಲಂಘಿಸಿತು ಹಯ ತತಿ ಸೂತಜರು ಸಹಿತ ।
ಎಲೆಲೆ ಕಟಕಾಚಾರ್ಯನಕಟಾ
ಕೊಳುಗುಳದೊಳಪದೆಸೆಯ ಕಂಡನೊ
ಗೆಲಿದನೋ ರಿಪುವೆಂದುಲಿಯೆ ನಿಜ ಪಾಯ ದಳವಂದು ॥ ೧೬

ನಿಜ ವರೂಥದಲಂದು ಕೌರವ
ವಿಜಯ ಮಾರುತಿ ಹೊಕ್ಕು ರಿಪು ಭೂ
ಭುಜರನಜ್ಜೆಯುಟ್ಟಿದನು ಬಹಳಿತ ಸಿಂಹ ನಾದದಲಿ ।
ತ್ರಿಜಗ ತಲ್ಲಣಿಸಿದುದು ವರ ವಾ
ರಿಜ ವಿಲೋಚನ ಕೇಳಿದನು ಪವ
ನಜನ ಪಡಿಬಲ ಬಂದುದೆಂದಬ್ಬರಿಸಿದನು ಪಾರ್ಥಂಗೆ ॥ ೧೭

[1] ಗೆ ಕವಿದು (ಗ.ಟ.ದ.ನ). [2] ದೂ (ಕ.ಚ.ಪ).

ಭಕುತ ಮುಖ ದರ್ಪಣನು ಬಹ ಸಾ
ತ್ಯಕಿಯ ಕಂಡನು ಭೀಮಸೇನನ
ವಿಕಟ ಸಿಂಹಧ್ವನಿಯನಾಲಿಸಿ ಹಿಗ್ಗಿದನು ಪಾರ್ಥ ।
ವಿಕಳತನವನು ಮಾಡು ಧರ್ಮಜ
ಸುಕರ ಪರಿತೋಷದಲಿರಲು ರಿಪು
ನಿಕರ ಮುಱಿದುದು ಪವನಪುತ್ರನ ರಥದ ಖುರಪುಟಕೆ ॥ ೧೮

ಅರಿ ಭಟರು ಪವನಜನನಾನುತ
ಮರಳುತುಬ್ಬರ ಬವರವನು ತಂ
ದರನೆಲೆಗೆ ಹಾಯ್ಕಿದರು ಕರ್ಣಾದಿಗಳ ಮುಂಬಿನಲಿ ।
ಜರಿದುದತಿರಥ ರಾಜಿ ಬಾಯಲಿ
ಕರಿಷ ಹಾಯ್ದುದು ಭೂಮಿಪಾಲರ
ಬಿರುದು ಮುದ್ರಿಸಿದವು ಸಮೀರ ಕುಮಾರನುರವಣಿಗೆ ॥ * ೧೯

ಓಡುವುದು ಗರುವಾಯಿಯೇ ಭಯ
ಬೇಡ ಭೂಮಿಪರೆನ್ನ ತೇರಿನ
ಕೂಡೆ ಗಡಣಿಸಿ ಸಾಕು ತಾರೆನು ನಿಮಗೆ ಕಾಳಗವ ।
ನೋಡಿ ನಿಮಿಷಕೆ ಭೀಮನಡಗಿನ
ಲೂಡುವೆನು ರಣ ಭೂತವನು ಭಯ
ಬೇಡೆನುತ್ತನಿಲಜನ ರಥವನು ತಱುಬಿದನು ಕರ್ಣ ॥ ೨೦

ಬಿಗಿದ ಹುಬ್ಬಿನ ಬಿಲ್ಲ ತೆಗಹಿನ
ಹೊಗರಲಗಿನುರವಣೆಯ ರಥದಲಿ
ಮಗುಳ್ದ ಮಂಡಿಯ ದೃಷ್ಟಿಯೋರೆಯ ಬಾಗಿದವಯವದ ।
ಅಗಿದು ಕಡುಗೋಪವನು ಬೆಸಲಹ
[1]ನ[1]ಗೆಯ ನಿಱುಗೆಯಲರಿಯ ನುಂಗುವ
ಬಗೆಯ ಬಲುಗೈ ಕರ್ಣ ಮೂದಲಿಸಿದನು ಪವನಜನ ॥ ೨೧

ಸಾರೆಲಪ್ಪೊ ಸಾಯದೆ ವೃಥಾಹಂ
ಕಾರವೇತಕೆ ನುಗ್ಗ ಸವೆದ ಕ
ಠೋರ ಸಾಹಸವಿಲ್ಲಿ ಕೊಳ್ಳದು ಕರ್ಣ ತಾನೆನುತ ।

* ಇಲ್ಲಿಗೆ (ಕ.ಚ.ಪ.) ಪ್ರತಿಗಳಲ್ಲಿ ಸಂಧಿ ಮುಗಿದಿದೆ. [1] ನಿ (ಕ ಗ.ಚ).

ಆರಿದ್ದೈದಂಬಿನಲಿ ಪವನಕು
ಮಾರಕನನೆಸೆ ಮೇಘ ಘನ ಗಂ
ಭೀರ ರವದಲಿ ಭೀಮ ನುಡಿದನು ಭಾನುನಂದನನ ॥ ೨೨

ದೇವ ದಾನವ ಭಟರು ನುಗ್ಗಂ
ದಾವು ಬಗೆದಿಹೆವುಳಿದ ಮರ್ತ್ಯರು
ನೀವು ತಾವೇಸಟಿ ಸಮರ್ಥರು ಕರ್ಣ ಗಳಹದಿರು ।
ಡಾವರಿಗತನವಾರ ಕೂಡೆ ವೃ
ಥಾ ವಿಲಾಸಿಗಳೆಲವ್ರೋ ಸುಭಟರೆ
ನೀವೆನುತ ಹದಿನೈದು ಶರದಿಂದೆಚ್ಚನನಿಲಸುತನ ॥ ೨೩

ಎಸಲು ಭೀಮನ ಬಾಣವನು ಖಂ
ಡಿಸಿದ ಮೂಱಂಬಿನಲಿ ರವಿಸುತ
ನಸಮ ಸಾಹಸಿ ಯೆಚ್ಚಡೆಚ್ಚನು ಭೀಮ ಮಱು ಗಣೆಯ ।
ನಿಶಿತ ಶರವನು ಹತ್ತು ಶರದಲಿ
ಕುಸುರಿ ದಱಿದನು ಕರ್ಣನಿಬ್ಬರ
ದೆಸೆಗೆ ದೇವಾನೀಕ ಮೆಚ್ಚಿತು ಭೂಪ ಕೇಳೆಂದ ॥ ೨೪

ತೋಳು ವಲಕಿದಿರಿಲ್ಲ ಬಿನುಗು ನೃ[1]
ಪಾಲನೆಲವ್ರೋ ಕರ್ಣ ಫಡ ಫಡ
ಮೇಳವಾದರೆ ಮೊಗೆವೆನರುಣಾಂಬುವನು ನಿನ್ನೊಡಲ ।
ಕೋಲ ಸುರಿ ಸುರಿ ಯೆನುತ ಕುರು ಭೂ
ಪಾಲಕನ ಮದದಾನೆಯನು ಹೀ
ಹಾಳಿಗೆಡಿಸಿ ತುರಂಗ ರಥ ಸಾರಥಿಯ ಖಂಡಿಸಿದ ॥ ೨೫

ಉಡಿದು ರಥ ಸಾರಥಿಗಳವನಿಗೆ
ಕೆಡೆಯೆ ಕಾಲಾಳಾಗಿ ಭೀಮನ
ಬಿಡದೆ ಥಟ್ಟೈಸಿದನು ಶರ ನಿಕರದಲಿ ರವಿಸೂನು ।
ಕಡಿದು ಬಿಸುಡದೆ ಕರುಣಿಸಿದಡವ
ಗಡಿಸಿದನೆ ತಪ್ಪೇನೆನುತ ಕೈ
ಗಡಿಯ ಪವನಜನೆಚ್ಚು ಕರ್ಣನ ಧನುವ ಖಂಡಿಸಿದ ॥ ೨೬

---

[1] ಳಬ (ದ).

ಕರದ ಬಿಲು ಕಳಚಿದರೆ ಖಾತಿಯೊ
ಳಿರದೆ ಹೊಸ ಹೊಂದೇರ ತರಿಸಲು
ತಿರುಗಿದನು ನಿಜ ಮೋಹರಕೆ ದುಗುಡದಲಿ ಕಲಿ ಕರ್ಣ ।
ತೆಱಹು ಕೊಡದಿರಿ ಸೋತ ಕರ್ಣನ
ಹರಿಬವೆಮ್ಮದು ನೂಕು ನೂಕೆಂ
ದುರವಣಿಸಿದರು ಮತ್ತೆ ಕೌರವನನುಜರವಗಡಿಸಿ ॥ ೨೭

ಎಲವೊ ಕರ್ಣನ ಗೆಲಿದ ಗರ್ವವ
ಕಲಕುವೆವು ಫಡ ನಿಲ್ಲೆನುತ ಕೈ
ಚಳಕಿಗರು ಪೂರಾಯ ಚಾಪದ ಬೆರಳ ಕಿವಿಗಡಿಯ ।
ಬಲುಸರಳ ಸರಿವಳೆಯ ಸಾಹಸಿ
ಗಳು[1]ರವಣಿಸಿ ಕವಿದೆಸುತ ಬರೆ ಕಂ
ಡೆಲೆ[1]ಮಿಡುಕನಾ ಭೀಮ ಮೂಗಿನ ಬೆರಳ ಬೆಱಗಿನಲಿ ॥ ೨೮

ರಾಯನೊಡಹುಟ್ಟಿದರಲಾ ಪೂ
ರಾಯವಿವದಿರ ಕೈ ಮಹಾದೇ
ವಾಯುಧದ ಮಳೆ ಗಱೆದರೈ ನಿಲಲರಿದು ನಮಗೆನುತ ।
ವಾಯುಸುತನಬ್ಬರಿಸೆ ಗಾಳಿಯು
ಘಾಯ ಮೇಘದ ಮೇಲೆ ಬಿದ್ದಪೊ
ಲಾಯಿತೇನೆಂಬೆನು ಕುಮಾರರ ಹೊಯಿಲ ಬೆಳೆ ಸಿರಿಯ ॥ ೨೯

ಬಲ್ಲಡಗ್ನಿ ಸ್ತಂಭವನು ಸಿಡಿ
ಲಲ್ಲಿ ಮೇಳವೆ ಬಿನುಗುಗಳ ಗೆಲ
ಬಲ್ಲಡಿವರಿಗೆ ಭೀಮ ಸದರವೆ ಹೇಳಲೇನಿದನು ।
ಚೆಲ್ಲಿದರೆ ಬಳಿವರಿದು ಚೌಪಟ
ಮಲ್ಲ ಹೊಕ್ಕನು ಹೊಯ್ದು ಗದೆಯಲಿ
ಘಲ್ಲಿಸಿದನಸಿಯರೆದು ಕೊಂದನು ಕೌರವಾನುಜರ ॥ ೩೦

ವರ ಸುಲೋಚನ ಚಿತ್ರರಥ ದು
ರ್ಮರುಷಣ ಶತಾನೀಕ ನೀಲಾಂ
ಬರ ವಿವಿಂಶತಿ [2]ಚಿತ್ರಸೇನರ ದೀರ್ಘಲೋಚನನ[2] ।

---

[1] ಲಿದು ಕವಿದೆಸುತ್ತೈದಿಬರೆ ಕಂಡೆವೆ (ಗ.ಪ.ನ.ಪ). [2] ಚಿತ್ರಲೋಚನ ದೀರ್ಘಬಾಹುಕನ (ಚ.ಪ).

ತಱಿದು ತಿರುಗಿ ಸುಯೋಧನನ ಮೋ
ಹರಕೆ ವೊಳಗಲು ಮತ್ತೆ ಬಲ ಸಂ
ವರಣೆಯಲಿ ಕೈಗೈದು ಭೀಮನ ಹಳಚಿದನು ಕರ್ಣ ॥ ೩೧

ಫಡ ತೊಲಗು ಪವಮಾನಸುತ ನಿ
ನ್ನೊಡಲಸೀ [1]ಶಾ[1]ಕಿನಿಯ ಬಳಗಕೆ
ಬಡಿಸುವೆನು ಬದುಕುವರೆ ಹಿಮ್ಮೆಟ್ಟೆನುತ ಬಳಿಸಲಿಸೆ ।
ಕಡು ನುಡಿಗೆ ಮೆಚ್ಚಿದನು ಹಿಂದಕೆ
ಮಿಡುಕುವವನೇ ಕರ್ಣನೀತನ
ಕಡುಹ ನೋಡು ವಿಶೋಕ ಎಂದನು ನಗುತ ಕಲಿ ಭೀಮ ॥ ೩೨

ತಗರು ತೊಲಗಿದಡೇನು ಬಲು ಗಾ
ಳಿಗದ ಗಾಢಕೆ ಮೇಲೆ ಶೌರ್ಯದ
ಸೊಗ[2]ಡ[2] ಸ್ಫುರಿಸಲಱಿಯೆ ಕಲಿತನದಂಗ ನಿನಗೇಕೆ ।
ಉಗಿ ಸರಳ ಬಿಲುಗಾಱನಾದರೆ
ತೆಗೆದು ಕೈದುವ ಕೊಳ್ಳೆನುತ ತನಿ
ಹೊಗರು ಗಣೆಗಳ ಸೂಸಿದನು ರವಿಸೂನು ಸಮರದಲಿ ॥ ೩೩

ಸರಳ ಸರಳಲಿ ಕಡಿದನೆಚ್ಚರೆ
ತರಹರಿಸಿ ಮಗುಳೆಚ್ಚನೌಕಿದ
ದುರವಣಿಸಿದನು ಸಿಂಹ ಗರ್ಜನೆಯೊಡನೆ ಗರ್ಜಿಸಿದ ।
ತಿರುಗೆ ತಿರುಗಿದನೊತ್ತಲಗಿದೊ
ತ್ತರಿಸಿದನು ಭುಜ ಬಲಕೆ ಭುಜ ಬಲ
ಸರಿಯೆನಿಸಿ ಸಮ ಬೆಸನನೆಚ್ಚಾಡಿದನು ಕಲಿ ಕರ್ಣ ॥ ೩೪

ಬಳಲಿದವು ತೇಜಿಗಳು ಸಾರಥಿ
ಯಳುಕಿದನು ಶರ ಹತಿಗೆ ಭೀಮನ
ಬಲು ಪತಾಕೆ ತನುತ್ರ ರಥ ಕರ್ಣಾರ್ಸ್ತ್ರ ಮಯವಾಯ್ತು ।
ಹಿಳುಕ ಹೊದಿಸಿದನಖಿಲ ದೆಸೆಗಳ
ನಿಲುಕಲರಿವೆನೆ ನಿಮಿಷ ಮಾತ್ರಕೆ
ಕಳಚಿ ಕಳೆದನು ಭೀಮ ತೊಟ್ಟನು ಮತ್ತೆ ಮಾರ್ಗಣವ ॥ ೩೫

---

[1] ಡಾ (ಕ.ಟ.ತ). [2] ಸ (ಕ.ಟ.ತ.ದ).

ತರಹರಿಸು ಬಿಲುಗಾಱನಾದರೆ
ಪರಿಹರಿಸಿಕೊಳ್ಳೆನುತ [1]ಪವನಜ
ಬಿಱು ಗಣೆಯಲಿರವೆ[1]ಚ್ಚನಹಿತನ ಧನುವ ಸಾರಥಿಯ ।
ತುರಗವನು ಸಿಂಧವನು ಮಾರ್ಗಣ
ವೆರಡಱಲಿ ನುಗ್ಗೊತ್ತಿ ರಥದಿಂ
ಧರಣಿಗಿಳಿದನು ಕರ್ಣ ಕೊಂಡನು ಹಲಗೆ ಖಂಡೆಯವ ॥ ೩೬

ಉಳಿಯಲೊಲೆದಿದಿರಾಗಿ ತಾಗಿದ
ಬಲು ಕಣಿಯ ಕರವಾಳನಿಕ್ಕಡಿ
ಗಳೆದು ಹಲಗೆಯನೆಂಟು ಕಡಿ ಮಾಡಿದನು ಕಲಿ ಭೀಮ ।
ತೊಲಗು ಬಾಹಿರ ಮತ್ತೆ ಸಾರಥಿ
ಬಿಲು ರಥವನನುಮಾಡು ಪಾ[2]ರ್ಥಗೆ
ಕಳೆ[2]ದ ಮಿಾಸಲು ಕೊಲ್ಲೆನೆಲವೋ ಕರ್ಣ ಹೋಗೆಂದ ॥ ೩೭

ತೇರ ಚಾಚಲಿ ಬೇಗ ಬಲುಗೈ
ಸಾರಥಿಯ ಬರ ಹೇಳು ಹಿಂದಣ
ಸಾರಥಿಯ ದೆಸೆಯಿಂದ ಬಂದುದು ಕರ್ಣ ಸೋಲುವನೆ ।
ವೀರನಾವೆಡೆ ಶೌರ್ಯ ಪಾರಾ
ವಾರನಾವೆಡೆ ಯೆನುತ ಕೌರವ
ಧಾರುಣೀ ಪತಿ ಬೆಸಸಿದನು ತನ್ನನುಜ ದುರ್ಜಯಗೆ ॥ ೩೮

ಬಿಲು ದುಡುಕಿ ರಿಪು ಭಟನೊಡನೆ ಮುಂ
ಕೊಳಿಸಿದನು ದುರ್ಜಯನು ಹಿಮ್ಮೆ
ಟ್ಟೆಲವೊ ಪವನಜ ನಿಂದಡರಿವೆನು ನಿನ್ನೊಡಲನೆನುತ ।
[3]ಒಲುಮೆಯೊಡ[3]ಹುಟ್ಟಿದರ ಬಯಕೆಯ
ಸಲಿಸುವರೆ [4]ನಾವಲ್ಲವೇ[4] ಕುರು
ಕುಲ ಲಲಾಮರು ತಪ್ಪಿ ನುಡಿಯರೆನುತ್ತ [5]ಮಂಡಿಸಿದ[5] ॥ ೩೯

ಕೀಲಿಸಿದನೆಂಟಂಬಿನಲಿ ತುರ
ಗಾಳಿಯನು ಸಾರಥಿಯನಾತನ
ಕೋಲ ಖಂಡಿಸಿ ಧನುವ ಕಡಿದನು ಮೂಱು ಬಾಣದಲಿ ।

---

1 ದಳ್ಳುರಿದುರುಗಿಲಂಬಿನಲೆ (ಗ.ಜ.ಪ). 2 ರ್ಥಂಗುಳಿ (ದ). 3 ಒಲವಿನೊಡ (ಗ.ಪ). 4 ನೀವಹುದೆಲವೊ (ಜ.ಪ), ಕೊಲುವೆನುಕಣಾ (ದ). 5 ತೆಗೆದೆಚ್ಚ (ಗ.ಜ.ಪ).

ಹೋಳು ಗಳೆದನು ಸುಭಟನಿಟ್ಟೆಲು
ಮೂಳೆಯನು ಮುಂಕೊಂ[1]ಡ[1] ಬಿರುದರ
[2]ಸೀ[2]ಳಿದನು ಕರೆ ಮತ್ತೆ ಕರ್ಣನನೆನುತ ಬೊಬ್ಬಿಱಿದ ॥ * ೪೦

ರಥವ ಮೇಳೈಸಿದನು ಹೊಸ ಸಾ
ರಥಿಯ ಕರಸಿದನಾಹವದೊಳತಿ
ರಥ ಭಯಂಕರನೇಱಿದನು ಬಲು ಬಿಲ್ಲನೊದಱಿಸುತ ।
ಪೃಥುವಿ ನೆಗ್ಗಲು ಸುಭಟ ಸಾಗರ
ಮಥನ ಕರ್ಣನು ಭೀಮಸೇನನ
ರಥವನಱಸುತ ಬಂದು ಪುನರಪಿ ಕಾಳೆಗವ ಹಿಡಿದ ॥ ೪೧

ಗೆಲಿದು ಹೋಗದಿರಿನ್ನು ಕರುಳನು
ಕಲಕುವೆನು ನಿಲ್ಲೆನುತ ರವಿಸುತ
ಸೆಳೆದು ಮುಷ್ಟಿಯ ಕೆನ್ನೆಗಡಿಯಂಬಿನಲಿ ಬರೆ ಕಂಡು ।
ಎಲವೊ ಲೋಕದ ಭಂಡ ನಿನ್ನೊಡ
ನುಲಿವವರು ನಾವಲ್ಲ ಮಲೆತರೆ
ತಲೆಯ ಕಾಯಿದು ಬಿಡುವೆನಲ್ಲದೆ ಕೊಲುವನಲ್ಲೆಂದ ॥ ೪೨

ಸರಳ ಸರಿಸೋನೆಯನು ಪವನಜ
ಗಿರಿಗೆ ಕಱೆದುದು ಕರ್ಣ ಮೇಘದ
ಹೊರಳಿ ಯೇನೆಂಬೆನು ಮಹಾಸಂಗ್ರಾಮ ಸಂಭ್ರಮವ ।
ಸರಳಿನಲಿ ಧನುವಿನಲಿ ಗದೆಯಲ
ಕರಹತಿಯಲಹಿತಾಸ್ತ್ರವನು ಸಂ
ಹರಿಸಿ ಬೀಸಿತು ಭೀಮ ಮಾರುತ ಕರ್ಣ ಮೇಘದಲಿ ॥ † ೪೩

---

[1] ಬ (ಗ.ಚ.ಪ). [2] ಹೂ (ಗ.ಚ.ಪ).

* ೪೦ನೆಯ ಪದ್ಯವಾದಮೇಲೆ (ಗ.ಪ.) ಪ್ರತಿಗಳಲ್ಲಿ ಈ ಕೆಳಗಿನ ಪದ್ಯವು ಹೆಚ್ಚಾಗಿದೆ :—

ಅರಿವಿವಿಂಶತಿ ಸತ್ಯನಂದನ
ಧುರಧುರಂಧರ ದೀರ್ಘದತ್ತನು
ದುರುಳ ಜಯನಂದನು ಮಹೋದರ ಪುಂಡ್ರಜಾನುಕನು ।
ಉರುಭುಜವನಂದೋಪನಂದನ
ಪರಬಲಾಂತಕನೆಸಲು ಕೌರವ
ರುರುಳಿದರು ಹೊರಳಿದರು ತನುಗಳು ತಲೆಯ ನೀಗಿದವು ॥

† ೪೩ನೆಯ ಪದ್ಯವಾದಮೇಲೆ (ಗ.ದ.) ಪ್ರತಿಗಳಲ್ಲಿ ೧೮೫ನೆಯ ಪುಟದ ಕೆಳಗಿರುವ ಪದ್ಯವು ಹೆಚ್ಚಾಗಿದೆ.

ಧನುವನಿಕ್ಕಡಿ ಗಳೆದು ರಿಪು ಸೂ
ತನ ಶಿರವ ಹಱಿಯೆಸಲು ಸಾರಥಿ
ತನವ ತಾನೇ ಮಾಡುತಿದಿರಾದನು ಕೃಪಾಣದಲಿ ।
ಕನಲಿ ಖಡ್ಗವ ಮುಱಿಯೆಸಲು ಮು
ಮ್ಮೊನೆಯ ಶೂಲದಲಿಟ್ಟನಂತದ
ನನಿಲಸುತ ಖಂಡಿಸಲು ಮುರಿದನು ಮೋನದಲಿ ಕರ್ಣ ॥ ೪೪

ಪವನಜನ ಬಡಿಹೋರಿ ಹೋದನೆ
ರವಿಸುತನು ಹೋಗಲಿ ವೃಕೋದರ
ನವಯುವವ ಕೇಣಿಯನು ಕೊಟ್ಟೆವು ಬಾಣ ತತಿಗೆನುತ ।
ತವ ಕುಮಾರರು ಮತ್ತೆ ಬಹಳಾ
ಹವವ ಹೊಕ್ಕರು ಸಕ್ಕಲಾದವ
ರವಗಡಿಸಿ ಕೆಣಕಿದರು ರಿಪು ಕಲ್ಪಾಂತ ಭೈರವನ ॥ ೪೫

ವೀರರೆಂದೆನಿಸುವರು ತೊಡೆಹದ
ಶೌರಿಯದ ಸಿರಿವಂತರರಸು ಕು
ಮಾರಕರು ನಿನ್ನವರು ಕೋಮಲ ಧೈರ್ಯರಾಹವಕೆ ।
ಮಾರಿ ಮುಖದವ ಕಠಿನ ಮನ ನಿ
ಸ್ಸಾರ ಹೃದಯನು ಭೀಮನವನೊಳು
ಹೋರಿದವರೇನಹರು ಕೇಳೈ ನಿನ್ನವರ ವಿಧಿಯು ॥ ೪೬

ಒಳಗೊಳಗೆ ತನ್ನಾಣೆ ಘೋಷಣೆ
ಸಲುವುದಲ್ಲದೆ ಸೊಡರು ಬೀದಿಗೆ
ಸುಳಿಯಲೆಲ್ಲಿಯು ಬೆಳಗು ತನ್ನುಳಿವಿಂಗೆ ಹೊಣೆಯಾರು ।
ಕೆಲ ಬಲದ ಮನ್ನೆಯರ ಹೊಯ್ಯು
ಗ್ಗಳಿಕೆ ಕೊಂಬುದೆ ಭೀಮನಲಿ ಕೈ
ಹೊಲಸುಗಾಱನು ಹಿಂಡಿದನು ಕೌರವ ಸಹೋದರರ ॥ ೪೭

ಸರಳ ಕಡಿಕಡಿದಿಳುಹಿ ಸೂತನ
ಕೊರಳ ಹರಿಯೆಸಲಾಗ ಕರ್ಣನು
ಯಿರದೆ ಮತ್ತಿದಿರಿದನು ಹಲಗೆ ಕೃಪಾಣ ಸುರಿಗೆಯಲಿ ।
ಬರಸೆಳೆದು ಖಡುಗವನು ಮುಱಿಯೆಸ
ಲಿರದೆ ಹೊಗಲು ಕೃಪಾಣದಲಿ ಸಂ
ಗರದೊಳವಮುಱಿಯೆಸಲು ಮುರಿದನು ಮೌನದಲಿ ಕರ್ಣ ॥

ದ್ರುಮ ವಿಕರ್ಣ ಸುಷೇಣ ಚಾರು
ಕ್ರಮ ವಿವಿತ್ಸುಕ ವಜ್ರಬಾಹುಕ
ದಮನ ದೀರ್ಘೋದರ ಮಹೋದರ ಕುಂಡದಾರುಕನ ।
ಯಮನ ಕೈಯೆಡೆಗೊಟ್ಟು ಘನ ವಿ
ಕ್ರಮದ ಸಿರಿ ಹೊದಱೋಳೆ ಜಯ ವಿ
[1]ಕ್ರ[1]ಮದೊಳಬ್ಬರಿಸಿದನು ನಿಷ್ಠುರ ಸಿಂಹನಾದದಲಿ ॥ ೪೮

ಇದೆ ಸಮೀರ ಕುಮಾರಕನ ಜಯ
ಮುದದ ಸಿಂಹ ಧ್ವನಿಯೆನುತ ಓ
ಗ್ಗಿದನು ಧರ್ಮಜನೊದಱಿದವು ಗಂಭೀರ ಭೇರಿಗಳು ।
ಕದನ ಲಗ್ಗೆಯ ಕಹಳೆ ಬಹು ವಾ
ದ್ಯದ ಮಹಾದ್ಭುತ ರಭಸ ಮಿಗೆ ಹೂ
ಡಿದನು ಸನ್ನಾಹದಲಿ ಹೊಕ್ಕನು ಮತ್ತೆ ಕಲಿ ಕರ್ಣ ॥ ೪೯

ನವ ವರೂಥ ತುರಂಗ ಸಾರಥಿ
[2]ಸವಗ ವೊಚ್ಚಯದಲ್ಲಿ[2] ಬಹಳಾ
ಹವದೊಳಗೆ ಮುಂಕೊಂಡು ಭೀಮನ ಹಳಚಿದನು ಕರ್ಣ ।
ತವಕ ಮಿಗಲೆಚ್ಚಾಡಿ ಪುನರಪಿ
ಪವನಜನ ಘಾಯದಲಿ ಸೋಲಿದು
ಬವರ ಮುಖದಲಿ ಓಂಗಿದನು ಹದಿನೆಂಟು ಸೂಳಿನಲಿ ॥ ೫೦

ಮುಳಿದು ಮೀಸೆಯ ಮುರಿದು ಹುಬ್ಬನು
ಬಲಿದು ದಳ್ಳುರಿ ದಿರುಳನಕ್ಷಿಗ
ಳೊಳಗೆ ಪಸರಿಸಿ ಘುಡುಘುಡಿಸಿ ರೋಮಾಳಿ ಸೈನಿಮಿರೆ ।
ಹಲು ಮೊರೆದು ಹೊಗರಿಡುವ ಮೋಱೆಯ
ಲಳಿವ ಬೆಮರನು ಬೆರಳ ಕೊನೆಯಲಿ
ಬಳಿದು ಭಾರ್ಗವ ದತ್ತ ಬಾಣಕೆ ನೀಡಿದನು ಕರವ ॥ ೫೧

ಎಲವೆಲವೊ ಕಲಿಯಾಗು ಮಾರುತಿ
ಗೆಲಿದನೆಂದಿರಬೇಡ ಸೋಲದ
ಗೆಲವಿನುದಯ ಮುಹೂರ್ತ ವಶ ಮೈಗುಡದೆ ಕಾದುವುದು ।

---

[1] ಧ್ರ (ಪ). [2] ಕವಚ ಬಾಹಕ್ಕರಿಕೆಯಲಿ (ಚ.ಪ).

ಛಲವದುಳ್ಳಡೆ ಸಾಕು ನೀನೀ
ಹಲಗೆಯಲಿ ಹೊಕ್ಕಾಡಿ [1]ಮರಳಿದು[1]
ತಲೆವೆರಸಿ ನೀ ಹೋದಡಸ್ತ್ರತ್ಯಾಗ ತನಗೆಂದ ॥ ೫೨

ಉಂಟು ಶಿವ ಶಿವ ಹುಸಿಯು ನುಡಿ ನಿನ
ಗುಂಟೆ ಗೆಲ್ಲದೆ ಮಾಣೆ ಶೌರ್ಯದ
ಗಂಟು ಬಲುಹದ ಕಂಡು ಬಲ್ಲೆನು ಹಲವು ಬಾರಿಯಲಿ ।
ಸುಂಟಿಗೆಯನಾಯ್ವೆನು ಕಣಾ ಬಲು
ಕಂಟಕವಲೇ ನರನ ನುಡಿ ನೀ
ನೆಂಟು ಮಡಿ ಗಳಹಿದರೆ ತಪ್ಪೇನೆಂದನಾ ಭೀಮ ॥ ೫೩

ಆದಡೆಲವೊ ದುರಾತ್ಮ ಮಾರುತಿ
ವಾದದಲಿ ಫಲವೇನು ಬಲ್ಲರೆ
ಕಾದುಕೊಳ್ಳಾ ಸಾಕು ಕಡು ಸಾಹಸಿಕ ಗಡ ನೀನು ।
ಹೋದೆ ಹೋಗಿನ್ನೆನುತ ಕಣೆ ಹದಿ
ನೈದಱಲಿ ಕೆಡಹಿದನು ತುರಗವ
ನೈದು ಬಾಣದಲೆಚ್ಚು ಕಡಿದೀಡಾಡಿದನು ರಥವ ॥ ೫೪

ಎರಡು ಶರದಲಿ ಸಾರಥಿಯು ಹೇ
ರುರವನೆಸೆಯಲು ಘಾಯದಲಿ [2]ತರ
ಹರಿಸ[2]ದವ ಹಾಯ್ದನು ಯುಧಾಮನ್ಯುವಿನ [3]ಹೊರೆಗಾಗಿ[3] ।
ಮರಳಿ ಹತ್ತಂಬಿನಲಿ ಭೀಮನ
ಕೆರಳಿಚಿದನಾಱಂಬಿನಲಿ ಹ
ನ್ನೆರಡಱಲಿ ಹದಿನೆಂಟಱಲಿ [4]ಮಗುಳೆ[4]ಚ್ಚು ಬೊಬ್ಬಿಱಿದ ॥ ೫೫

ಶರ ಹತಿಗೆ ಸೆಡೆಯದೆ ವೃಕೋದರ
ನೆರಡು ಕವಲಂಬಿನಲಿ ಕರ್ಣನ
ಶಿರವನೆಚ್ಚಡೆ ತಱಿದನೆಡೆಯಲಿ ಭಾನುಸುತ ನಗುತ ।
ತಿರುಹಿ ಶಕ್ತಿಯಲಿಟ್ಟರೆಡೆಯಲಿ
ತಱಿದು ಭೀಮನ ಕರದ ಚಾಪವ
ನೆರಡು ಕಡಿ ಮಾಡಿದನು ಬಳಿಯಲಿ ನೊಸಲನೊಡೆಯೆಚ್ಚ ॥ ೫೬

---

[1] ಬಳಿಕೀ (ಗ.ಚ.ಪ). [2] ನಿಲಲಱಿಯು (ಕ.ಗ.ಟ.ತ). [3] ರಥಕಾಗಿ (ಗ.ದ).
[4] ಮುರಿಯೆ (ಗ.ಚ).

ವಾಯುಸುತ ಖಾತಿಯಲಿ ಹಲಗೆಯ
ಡಾಯುಧವ ಕೊಂಡರಿ ಭಟನ ಮೇ
ಲ್ವಾಯಿದಡೆ ಸಮ್ಮುಖವ ಬಿಟ್ಟನು ಧ್ವಜದ ಕಂಭದಲಿ ।
ಆಯುಧವ ಕೊಂ[1]ಡ್ಯೆದಿದಡೆ[1] ಹಗೆ
ಮಾಯವಾದನು ಪೂತುರೆನುತ ಗ
ದಾಯುಧನು ಮರಳಿದರೆ ಕೈಯೊಡನೆದ್ದನಾ ಕರ್ಣ ॥ ೫೭

ಅರಿ ಬೊಬ್ಬಿಡಿದೆಚ್ಚನನಿಲ ಕು
ಮಾರಕನ ಖಂಡೆಯವನೊಂದೇ
ಕೂರಲಗಿನಲಿ ಕಡಿದು ಬಿಸುಟನು [2]ಒಡಿದ ಹಲಗೆಯನು[2] ।
ಆರುಭಟೆಯಲಿ ಭೀಮ ಕಾವವ
ರಾರು ಕರೆಯಾ ಕರ್ಣ ಕೊಲುವಡ
ದಾರು ಘಡ ಹಿಂದಿಕ್ಕಿ ಕೊಂಬವರೆನುತ ಗರ್ಜಿಸಿದ ॥ ೫೮

ಮಡಿದ ಕರಿಗಳ ಕಾಯವನು ನಿ
ಟ್ಟೊಡಲ ತುರಗಂಗಳನು ಮುಗ್ಗಿದ
ಕೆಡೆದ ತೇರಿನ ಗಾಲಿಗಳ [3]ಕೊಂಡಿ[3]ಟ್ಟನಾ ಭೀಮ ।
ಎಡೆಯಲಾ ಕರಿಯೊಡಲನಾ ಹಯ
ದೊಡಲನಾ ರಥ ಚಕ್ರವನು ಕಡಿ
ಕಡಿದು ಬಿಸುಟನು ಹೊದ್ದಿದನು ಕಟ್ಟಳವಿಯಲಿ ಕರ್ಣ ॥ * ೫೯

---

[1] ಡಾಕಿದರೆ (ಗ.ಚ), ಢಹುವರ (ನ). [2] ಹರಿಗೆ ಬದ್ದಿಗೆಯ (ಗ.ಚ).
[3] ಕಿರುಹಿ (ಗ.ಚ.ದ.ಪ).

* ೫೯ನೆಯ ಪದ್ಯವಾದಮೇಲೆ (ಗ.) ಪ್ರತಿಯಲ್ಲಿ ಮುಂದಿನ ಎರಡು ಪದ್ಯ
ಗಳು ಹೆಚ್ಚಾಗಿವೆ :—

ತೇರು ಮುರಿದವು ಕುದುರೆ ಬೀಳ್ವವು
ಸಾರಥಿಗಳೆಡೆಗೆಡೆದರೆಂತಾ
ಚಾರುಭಾರಿಯ ಬಿಲ್ಲು ನೋವವು ಭೀಮನುರವಣೆಗೆ ।
ಸೂರಯನಸುತ ಮರಳೆ ಮರಳಿದು
ಸ್ಮೈರಣೆಯ ಸಮಕೊಳಿಸಿ ಪದಿನೆ
ಣ್ಬಾರಿ ಭೀಮನ ತಾಗಿದನು ಭಾಪೆಂದುದಮರಗಣ ॥

ಒಡೆಯ ಹರನಂಬಿನಲಿ ಭೀಮನ
ಕಡುಹನಾನುತ ಕರ್ಣ ನಸುನಗು
ತೊಡನೊಡನೆ ಸನ್ನದ್ಧನಾದನು ತಾಗಿದನು ಮುನಿದು ।
ಗಡಣಿಸಿದ ಬಾಣಾಬ್ಧಿಯನು ಗುಡು
ಗುಡಿಸುತನಿಲಜ ಕಾದುತಿರುತಿರೆ
ತೊಡೆಮುರಿಯಲಳವಡವನಲು ಹೊಯ್ದನು ಚಾಪದಂಶದಲಿ ॥

ಕೈದು ನೆಱೆ ತೀರಿದರೆ ಹೆಣನೇ
ಕೈದುವಾದವು ಪರ ಬಲಾಂತಕ
ಕೈದುಕಾಱರ ಕೈಯ ಬಾಯಲಿ ಭೀಮ ಸಿಲುಕಿದೆಲಾ ।
ಕಾದುಕೊಳ್ಳನೆ ಕೃಷ್ಣ ನಿನ್ನಯ
ಮೈದುನನು ಗಡ ಮಱೆಯ ಹೊಗು ಹೋ
ಗೈದೆಯಹಳೋ ವಿಧವೆಯೋ ಪಾಂಚಾಲಿ ಹೇಳೆಂದ ॥ ೬೦

ಬಿಲ್ಲ ಕೊಪ್ಪಿನಲಿಱಿದು ಭೀಮನ
ಘಲ್ಲಿಸಿದನೆಲವೆಲವೊ ಮಾರುತಿ
ಯುಳ್ಳಿ ಗಡ್ಡದ ಹಱಿದಱೆಯ ರಣ ಮೂಢ ಸಿಲುಕಿದೆಲಾ ।
ಎಲ್ಲಿ ನಿನ್ನಾಟೋಪ [1]ಹಿಂದಣ[1]
ಹೊಳ್ಳು ನುಡಿ ಹಾಱಿದವೆ ಕೌರವ
ರೆಲ್ಲರನು ಸವಱಿದೆಯೆಲಾ ಸಂದೇಹವೇನೆಂದ ॥ ೬೧

ಒಡೆಯ ದುರಿಯೋಧನನ ತೊಡೆಗಳ
ನುಡಿವೆ ದುಶ್ಶಾಸನನ ರಕುತವ
ಕುಡಿವೆನೆಂದುಬ್ಬಟೆಯ ಭಾಷೆಯಲಾ ಮಹಾದೇವ ।
ನುಡಿದ ನುಡಿ[2]ವಳಿ ಸಂದುದೇ[3] ನಿ
ಮ್ಮಡಿಗಳಿಗೆ ಕಲಿ ಭೀಮ ದುಗುಡವ
ಬಿಡು ಮರುಳೆ ತಲೆಗುತ್ತಲೇತಕೆ ಯೆಂದನಾ ಕರ್ಣ ॥ ೬೨

ಎಲ್ಲಿ ಷಡು ರಸ ಮಯದ ಭೋಜನ
ವೆಲ್ಲಿ ಮಧುರ ಫಲೌಘದುಬ್ಬರ
ವೆಲ್ಲಿ ನಾನಾ ಭಕ್ಷ್ಯ ಗಿರಿಗಳು ಘೃತದ ಕಡಲುಗಳು ।
ಅಲ್ಲಿ ನಿನ್ನುರವಣೆಗಳೊಪ್ಪುವ
ದಲ್ಲದೀ ಸಂಗ್ರಾಮ ಮುಖದಲಿ
ಬಿಲ್ಲ ಹಬ್ಬದ ತುಷ್ಟಿ ನಿನಗೇಕೆಂದನಾ ಕರ್ಣ ॥ ೬೩

ತಾಯ ಮಾತನು ಮಿಱಿ ನಿನ್ನನು
ನೋಯಿಸಿದೆನದೆ ಸಾಕು ಜೀವವ
ಕಾಯಿದೆನು ಬಿಟ್ಟೆನು ವೃಕೋದರ ಹೋಗು ಹೋಗೆನಲು ।

[1] ವಂದಿನ (ಚ). [2] ಸಂಭವಿಸಿತೇ (ಕ.ಟ.ತ). [3] ನಿನ್ನಾಟೋಪಸ್ರೊ (ಗ.ಚ).

ವಾಯುಸುತ ಸಿಲುಕಿದನಲಾ ಕಾ
ಳಾಯಿತೆನುತಸುರಾರಿ ರಥವನು
ಹಾಯಿಸಲು ಮುರಿಯೆಚ್ಚು ಕರ್ಣನ ತೆಗೆಸಿದನು ಪಾರ್ಥ ॥* ೬೪

ಹದಿಮೂಜನೆಯ ಸಂಧಿ ಮುಗಿದುದು.

---

* ೬೪ನೆಯ ಪದ್ಯವಾದಮೇಲೆ (ಕ ಗ.) ಪ್ರತಿಗಳಲ್ಲಿ ಈ ಕೆಳಗಿನ ಪದ್ಯವು ಹೆಚ್ಚಾಗಿದೆ :—

ಜನಪ ಕೇಳ್ದೈ ದೈವ ದೂರರು
ಮುನಿದು ಮಾಡುವುದೇನು ನಿನ್ನವ
ರೆನಿತು ಭವದಲಿ ಭಜಿಸಿದರೊ ನಿಷ್ಠೆಯಲಿ ಹರಿಪದವ ।
ಇನ ತನೂಜಗೆ ಸಿಕ್ಕಲನಿಲಜ
ದನುಜಹರನಡಹಾಯ್ದು ನಿಲ್ಲಿಗೆ
ನೆನಹದೆಂತುಟೊ ರಾಯ ಗದುಗಿನ ವೀರ ನರಯಣನ ॥

ಹದಿನಾಲ್ಕನೆಯ ಸಂಧಿ

ಸೂಚನೆ ॥ ಸಂಗರದೊಳಂದಹಿತ[1]ಭಟ[1]ಮಾ
ತಂಗ ಕಂಠೀರವನು ರಣದೊಳ
ಭಂಗ ಮುಱಿದನು ಫಲುಗುಣನು ರಿಪು ರಾಯ ಸೈಂಧವನ ॥

ಚಿತ್ತವಿಸು ಧೃತರಾಷ್ಟ್ರ ರವಿಸುತ
ನಿತ್ತ ಮುರಿದನು ಸಾತ್ಯಕಿಯ ರಥ
ದತ್ತ ತಿರುಗಿದನನಿಲಸುತ ಭಾರಣೆಯ ದುಗುಡದಲಿ ।
ಇತ್ತ ಭೂರಿಶ್ರವನು ಭಾರಿಯ
ಹತ್ತುಸಾವಿರ ರಥ ಸಹಿತ ಕೈ
ಗುತ್ತಿದನು ರಣ ವಿಜಯ ಲಕ್ಷ್ಮಿಯ ಲಲಿತ ಕಬರಿಯಲಿ ॥ ೧

ಒಂದು ಕಡೆಯಲಿ ಕರ್ಣ ಗುರುಸುತ
ರೊಂದು ದೆಸೆಯಲಿ ಶಲ್ಯ ಶಕುನಿಗ
ಳೊಂದು ದೆಸೆಯಲಿ ಭೂರಿ ಕೃತವರ್ಮಕ ಸುಯೋಧನರು ।
ಮುಂದುಗೆಡಿಸಿದರರ್ಜುನನನೀ
ಬಂದ ಭೂರಿಶ್ರವನ ನಿಲಿಸುವೆ
ನೆಂದು ಸಾತ್ಯಕಿ ಬಿಟ್ಟನಾತನ ಹೊರೆಗೆ ನಿಜ ರಥವ ॥ ೨

ಎಲವೆಲವೊ ಭೂರಿಶ್ರವನೆ ಘಡ
ಗೆಲಿದು ಹೋಗದಿರೆಲ್ಲಿ ಹೊಗುವಡೆ
ತಲೆವೆರಸಿ ಹೊಗಲೀಯೆನಿದಿರಾಗೆನುತ ಮೂದಲಿಸೆ ।
ಎಲವೊ ಸಾತ್ಯಕಿ ಸುಭಟ ಬಾಹಿರ
ಗಳಹದಿರು ದಿಟ ವೀರನೇ ಕೂ
ರಲಗಿನಲಿ ಮಾತಾಡು ಬಱಿನುಡಿ ಭಂಡತನವೆಂದ ॥ ೩

ಆದಡಿದ ಕೊಳ್ಳೆನುತ ಸಾತ್ಯಕಿ
ಕೋದನಭ್ರವನಂಬಿನಲಿ ಬಲು
ಹಾದನೈ ಮಱು ಎನುತ ಕಡಿದನು ಸೋಮದತ್ತಸುತ ।

---

[1] ಬಲ (ಕ), ಮದ (ಟಿ.ಪ).

ಕಾದುಕೊಳ್ಳೆನುತೆಚ್ಚನಂಬಿನ
ಬೀದಿವರಿ ಬಲುಹಾಯ್ತು ಖತಿಯಲಿ
ಕೈದುಕಾಱರು ಮೆಚ್ಚಿಸಿದರಮರಾಸುರಾವಳಿಯ ॥ ೪

ದೂರದಲಿ ನಿಂದೊಬ್ಬರೊಬ್ಬರ
ನಾರು ಮಾಡುವುದೇನು ಸಾತ್ಯಕಿ
ಕೂರಸಿಯನುಗಿ ಬಿಸುಟು ಕಳೆ ಕೋದಂಡ ಮಾರ್ಗಣವ ।
ವೀರನಹಡಿದಿರಾಗೆನುತ ಬಹು
ಭಾರಣದ ಚಮ್ಮಟದ ಖಡುಗದ
[1]ಪಾರಗ[1]ದ ಪರಿಣತರು ಹೆಣಗಿದರುಬ್ಬಣಾ[2]ಯುತರು[2] ॥ ೫

[3]ನೆಲನ[3] ತಗ್ಗನಲುಪ್ಪರದ ಮೆ
ಯ್ಯೊಲವಿನಲಿ [4]ಪಾರಗದ[4] ಬವರಿಯ
ಸುಳುಹಿನಲಿ ಚಮ್ಮಟದ ಪಯವಂಚನೆಯ[5]ಲುಜ್ಜುಟದ[5] ।
ಬಲಿದ ದಂಡೆಯ ಮಸೆಯ ಬಯಸಿಕೆ
ಲುಳಿಯ ಮೈಗಳ ಲವಣಿಸಾರರು
[6]ಕೊ[6]ಳುಗಿಡಿಯ ಖಂಡೆಯದ ಖಣಿಕಟಿಲಸೆಯೆ ಕಾದಿದರು ॥ ೬

ತಳಿತ ಮಿಂಚಿನ ಮುರಿವುಗಳೊ ತನಿ
ಹೊಳಹುಗಳೊ ಖಂಡೆಯದ ಧಾರೆಯ
[7]ಕೊ[7]ಳುಗಿಡಿಯೊ ಖದ್ಯೋತ ರಾಸಿಯೊ ಹೇಳ[8]ಲೇನ[8]ದನು ।
ಖಳಿಕಟಿಲ ಬಿಡುಪ್ರೊಯಿಲೊ ಸಿಡಿಲಿನ
ಸುಳಿಯೊ ಮೈಮಸೆಯರುಣ ವಾರಿಯೊ
ಮಳೆಗಳಿಲ್ಲದ ಹೊನಲೊ ರಣದಲಿ ಚಿತ್ರವಾಯ್ತೆಂದ ॥ ೭

ಲುಳಿಯ ಪಯಪಾಡುಗಳ ಬವರಿಯ
ಸುಳಿವುಗಳ ಜಾಡುಗಳ ಘಾಯದ
ಕಳವುಗಳ ಕೈ[9]ಮೆಗಳ[9] ಮೋಡಾಮೋಡಿಯುಬ್ಬಣದ ।

---

[1] ತೋರಣ (ಗ), ಪಾರಣ (ಚ.ಪ). [2] ಯುಧರು (ಗ). [3] ಕೆಲದ (ಚ.ಪ). [4] ಪಂಟಿಸಿದ (ಗ), ಬೋರಣದ (ಚ), ಯೋರಣದ (ಪ). [5] ಝುಡತೆಯಲಿ (ಗ), ಲುತ್ಕಟದ (ಪ), ಲುಬ್ಬಟದ (ನ). [6] ಕ (ನ.ಪ). [7] ತ (ಗ.ತ), ಕು (ಚ.ಟ.ತ), ಕ (ದ). [8] ಲರಿದ (ಕ.ಟ.ದ). [9] ಮೈಯ (ತ).

[1]ಲಲಿತ[1] ಚಿತ್ರದ ಚದುರ ಭಟರ
[2]ವ್ವಳಿಸಿ[2] ಹೊಯ್ದಾಡಿದರು ನೋಟಕ
ರುಲಿದುದಿಬ್ಬರ ಶ್ರಮದ ಶೌರ್ಯದ ವೆಗ್ಗ[3]ಳೆಯತನಕೆ[3] || ೮

ಮಸೆಯ ಮೈಗಳೊಳೊ[4]ಱೆವುತಿರ್ದವು[4]
ಬಿಸಿ ರಕುತ ವೊನೆಗುತ್ತುಗಳ ಕಿ
ಬ್ಬಸುಱಿನಲಿ ಜೋಲಿದವು ಕರುಳುಗಳಾಹವದ ಭಟರ |
[5]ಮ[5]ಸಕ ಮಸುಳದು ಮನದ ಖಾತಿಯ
ಮುಸು[6]ಡು[6] ಮುಱಿಯದು ಬಿಗಿದ ಹುಬ್ಬಿನ
ಬೆಸುಗೆ ಸಡಿಲದು ಭೂಪ ಭೂರಿಶ್ರವನ ಸಾತ್ಯಕಿಯ || ೯

ಬರಬರಲು ರಿಪುಭಟನ ಹೊಯ್ಯುಗ್ಗಳ
ಧರಧುರಕೆ ಕಲಿ ಸಾತ್ಯಕಿಯು ತರ
ಹರಣೆ ತಗ್ಗಿತು ಮಹಿಮೆ ಮುಗ್ಗಿತು ಮುಱಿದುದಗ್ಗಳಿಕೆ |
ಉರವಣಿಸಿ ಭೂರಿಶ್ರವನು ರಿಪು
ವರನ ಖಡುಗವ ಮುಱಿಯ ಹೊಯ್ದು
ಬ್ಬರಿಸಿ ಕಡೆಗಾಲಿಂದ ಹೊಯ್ದನು ಹಾಯ್ದು ಮುಂದಲೆಗೆ || ೧೦

ಕೊಡಹಿ ಕುಸುಕಿಱಿ[7]ದಡ್ಡಬೀಳಿಕಿ[7]
ಮಡದಲುಱೆ ಘಟ್ಟಿಸಿ ಕೃಪಾಣವ
ಜಡಿದು ಗಂಟಲ ಬಳಿಗೆ ಹೂಡಿದನರಿ[8]ವುದಕೆ ಕೊರಳ[8] |
[9]ಹಿಡಿ[9] ಮಹಾಸ್ತ್ರವ ನಿನ್ನ ಶಿಷ್ಯನ
ಕಡು ನಿರೋಧವ ನೋಡು ಫಲುಗುಣ
ನುಡಿಗೆ ತೆಱಹಿಲ್ಲೆಂದು ಮುರರಿಪು ಜಱೆದನರ್ಜುನನ || ೧೧

ದೇವ ನಮ್ಮದು ಧರ್ಮ ಯುದ್ಧವಿ
ದಾವ ಹದನನು ಬೆಸಸಿದಿರಿ ತಲೆ
ಗಾವು[10]ದೇನರಿ[10]ದಲ್ಲ ಮೊದಲಲಿ ನುಡಿದ ಸಮಯವನು |

---

[1] ಲುಳಿಯ (ಗ.ಚ.ದ.ಪ), ಲಳಿಯ (ನ). [2] ಪ್ಪಳಿಸಿ (ಚ). [3] ಳಾಯತಕೆ (ಚ.ಪ). [4] ಗುತಲಿರ್ದುದು (ಚ.ಪ). [5] ಲ (ದ). [6] ಕು (ಕ.ಗ). [7] ದಡ್ಡಬಳಿಕೀ (ಕ), ದಡ್ಡಬೀಳಿಸಿ (ಗ.ದ), ದಡಱಿಕೋಪದಿ (ಚ.ಪ). [8] ವಸಮಯದಲಿ (ತ.ನ). [9] ತೊಡು (ಪ) [10] ದೆನಗರ (ಗ.ನ).

ಭಾವಿಸುವುದೆನೆ ಮುಗುಳು ನಗೆಯಲಿ
ರಾವಣಾಂತಕನೆಂದನೆಲೆ ಮರು
ಳಾವ ನಿರುತದ ಧರ್ಮವಿದ್ದುದು ಕೌರವೇಂದ್ರನಲಿ ॥ ೧೨

ನೆರೆದ ಷಡುರಥರೊಬ್ಬ ಹಸುಳೆಯು
ಕೊರಳನರಿವಂದಾವ ಧರ್ಮದ
ನಿರುತವನು ನೀ ಕಂಡೆಯೆನಲುರಿ ಮಸಗಿತುದರದಲಿ ।
ಸರಳ ಕೆನ್ನಿಗೆ ಸೇದಿದನು ಸಂ
ಗರದ ಭೂರಿಶ್ರವನ ಖಡುಗದ
ಕರವ ಕತ್ತರಿಸಿದನು ತಲೆಗಾಯಿದನು ಸಾತ್ಯಕಿಯು ॥ ೧೩

ಭರದಲೆತ್ತಿದ ತೋಳು ಕಟಿವಡೆ
ದುರುಳಿತವನಿಗೆ ಸುರಿವ ರಕುತದ
ಸರಿವಿನಲಿ ನೆಱೆ ನನೆದು ಭೂರಿಶ್ರವನು ನಸು ನಗುತ ।
ಮುರಿದು ಪಾರ್ಥನ ನೋಡಿ ವಾಮದ
ಬೆರಳನೊಲೆದನು ಲೇಸು ಲೇಸ
ಬ್ಬರದ ಬಿರುದಿನ ಧರ್ಮನಿಷ್ಠರು ಪಾಂಡುಸುತರೆಂದ ॥ ೧೪

ಆರು ಕೊಟ್ಟರು ಶರವನಿದ ಮದ
ನಾರಿಯೋ ನಿಮ್ಮಯ್ಯನಹ ಜಂ
ಭಾರಿಯೋ ಮೇಣ್ ಕೃಷ್ಣ ದ್ರೋಣ[1]ರೊ[1] ಹೇಳು ಹುಸಿಯದಿರು ।
ವೀರನಹೆಯೋ ಪಾರ್ಥ ನಿನ್ನವೊ
ಲಾರು ಬಿಲುಗಾಱರು ಮಹಾಸ್ತ್ರವಿ
ದಾರು ಕಲಿಸಿದ ವಿ[2]ದ್ಯವು[2]ಪಯೋಗಿಸಿತು ನಿನಗೆಂದ ॥ ೧೫

ಅಱಿದೆನೀ ವಿದ್ಯವನು ಕೃಷ್ಣನೊ
ಳಱಿದೆಯಾಗಲು ಬೇಕು ಕಪಟದ
ನೆಱವಣಿಗೆಗಳನಱಿಯರಿಂದ್ರ ದ್ರೋಣ ಶಂಕರರು ।
ಮಱೆ ಮಱೆಯಲಿಱಿಗಾಱನಸುರರ
ಮುಱಿದನೆಂಬರು ಕುಹಕ ತಂತ್ರದ
ಹೊಱಗೆವಾಳನ ಸಂಗದಲಿ ನೀವ್ ಕೆಟ್ಟಿರಕಟೆಂದ ॥ ೧೬

[1] ನೊ (ಕ.ಗ.ಚ). [2] ದ್ಯೆಯು (ತ).

ಓಡಿ ಕೊಂದನು ಕಾಲಯವನನು
ಬೇಡಿ ಕೊಂದನು ಕೈಟಭನ ಕೈ
ಮಾಡಿ ಕೊಲಿಸಿದ ಮಾಗಧನನಭಿಮಾನ ಗೇಡುಗನ ।
ಕೂಡಿಕೊಂಡಿರಿ ಮೂಱು ಲೋಕದ
ಬೀಡಱಿಯೆ ಬಾಹಿರನನೀ ಹರಿ
ಯಾಡಿಸಿದವೋಲಾಡಿ ಕೆಟ್ಟಿರಿ ಖಳರು ನೀವೆಂದ ॥ ೧೭

ಪೊಡವಿಯೊಳು ಯಾದವರು ಕ್ಷತ್ರಿಯ
ಗೆಡುಕರದಱೊಳು ಹುಟ್ಟಿದನು ಕೊಲೆ
[1]ಗಡಿಗ[1] ಹಾವಿನ ಹುತ್ತದಲಿ ಹಾಮ್ಮೆಕ್ಕೆ ಬೆಳೆದಂತೆ ।
ನಡೆವಳಿಯ ನೋಡಿದರೆ ಲೋಗರ
ಮಡದಿಯರು ತನ್ನವರು ಠಕ್ಕಿನ
ಕಡಲು ಕೃಷ್ಣನ ನಂಬಲಿಹ ಪರವಿಲ್ಲ ನಿಮಗೆಂದ ॥ ೧೮

ಎಂದಡೆಂದನು ಪಾರ್ಥನೆಲವೋ
ಮಂದಮತಿ ನೀನೆಂದರಹುದೆ ಮು
ಕುಂದನನು ನಂಬಿದರಿಗಿಹ ಪರ[2]ಸೌಖ್ಯ[2] ಭಯವಿಲ್ಲ ।
ಇಂದು ನಾವ್ ಮಾಡಿದುದು ಹೊಲ್ಲೆಹ
ವೆಂದೆ ನೀನದನಱಿಯೆ ಶಿಷ್ಯನ
ಕುಂದು ಹೆಚ್ಚುಗಳಾರದೆಂಬುದ [3]ಹೇಳು[3] ನೀನೆಂದ ॥ ೧೯

ಎನಗೆ ಸಾತ್ಯಕಿ ಕೋಲ ಮಗನಾ
ತನ ವಧೆಯನಾ ಕಾಣಲಾಗದು
ಮನಕೆ ಮತವೇ ನಮ್ಮ ಹರಿಬಕೆ ಬಂದು ಕಾದುವನ ।
ನಿನಗೆ ಕೊಡುವೆನೆ ನಮ್ಮ ಧರ್ಮವ
ಜನವಱಿಯದೇ ಹೋಗು ಹೋಗೆನೆ
ಮನದೊಳಗೆ ನಗುತಿರ್ದನಾ ಭೂರಿಶ್ರವ ಕ್ಷಿತಿಪ ॥ ೨೦

ಎಲವೋ ಸಾತ್ಯಕಿ ಬದುಕಿದೈ ನರ
ನುಳುಹಿಕೊಂಡನು ಹೋಗೆನುತ ಹೆಡ
ತಲೆಯನೊದೆದನು ನಿಂದು ಬರಿಕೈ ಮುಱಿದ ಗಜದಂತೆ ।

---

1 ಗಡಿಯ (ತ), ಗಡುಕ (ದ). 2 ಕಲ್ಲ (ಕ), ಜನ್ಮ (ಗ.ಚ.ದ).
3 ನೋಡು (ಕ.ಗ.ಚ).

ಒಲೆವುತ್ತೈತಂದೊಂದು ರಣಮುಂ
ಡಲಮೊಳಗೆ ಪದ್ಮಾಸನವನನು
ಕೊಳಿಸಿ ಯೋಗಾರೂಢನಾದನು ವರ ಸಮಾಧಿಯಲಿ ॥ ೨೧

ತರಣಿ ಮಂಡಲದಲ್ಲಿ ದೃಷ್ಟಿಯ
ನಿರಿಸಿ ಬಹಿ[ರಿ]ಂದ್ರಿಯದ ಬಳಕೆಯ
ಮುಱಿದು ವೇದಾಂತದ ರಹಸ್ಯದ [1]ವಸ್ತು[1] ತಾನಾಗಿ ।
ಇರಲು ಸಾತ್ಯಕಿ ಕಂಡು ಖತಿಯು
ಬ್ಬರಿಸಿ ಕಿತ್ತ ಕಠಾರಿಯಲಿ ಹೊ
ಕ್ಕರವಣಿಸಿ ಭೂರಿಶ್ರವನ ತುಱುಬಿಂಗೆ ಲಾಗಿಸಿದ ॥ ೨೨

ಆಗದಾಗದು ಕಷ್ಟವಿದು ತೆಗೆ
ಬೇಗವೆನಲರ್ಜುನನ ಕೃಷ್ಣನ
ನಾಗಳವ ಕೈಕೊಳ್ಳದರಿದನು ಗೋಣನಾ ನೃಪನ ।
ಹೋಗು ಹೋಗೆಲೆ ಪಾಪಿ ಸುಕೃತವ
ನೀಗಿ ಹುಟ್ಟಿದೆ ರಾಜಋಷಿಯುವ
ನೇಗಿದನು ನಿನಗೆನುತ ಬೈದುದು ನಿಖಿಳ ಪರಿವಾರ ॥ ೨೩

ಒಡಲನೊಡೆದಾ ಜ್ಯೋತಿ ಗಗನಕೆ
ನಡೆದುದಿತ್ತಲು ಸುರರು ಮರ್ತ್ಯರು
[2]ಸುಡು ಸುಡೆಂದುದು[2] ಸಾತ್ಯಕಿಯ ದುಷ್ಕರ್ಮ ವಾಸನೆಗೆ ।
ಬಿಡದ ದುಗುಡದಲರ್ಜುನನು ಮನ
ಮಿಡುಕಿದನು ಕುರುನೃಪರು ಶೋಕದ
ಕಡ[3]ಲೊಳದ್ದರು[3] ಬೈವುತಿದ್ದರು ಕೃಷ್ಣ ಫಲುಗುಣರ ॥ ೨೪

ಇತ್ತ ರವಿ ರಶ್ಮಿಗಳು [4]ನೆಱೆ[4] ಕೆಂ
ಪೊತ್ತಿದವು ಸೈಂಧವನನೀಗೊ
ತ್ತೊತ್ತೆಯಲಿ ನೆ[5]ಲೆ[5] ಕಾಣಬಾರದು ಸಾಕು ದುಮ್ಮಾನ ।
ಇತ್ತ [6]ನಿಜ[6] ಭಾಷೆಗೆ ಪರಾಭವ
ಹತ್ತಿರಾಯಿತು ನರ ನಿದಾನಿಸೆ
ನುತ್ತ ಮುರರಿಪು ರಥವ ಬಿಟ್ಟನು ಕಡೆಯ ಮೋಹರಕೆ ॥ ೨೫

[1] ರೂಪು (ಕ.ಗ). [2] ಮಿಡುಕಿ ಬಯ್ದರು (ಕ). [3] ಲೊಳರ್ದುದು (ಕ.ಗ). [4] ನಸು (ಗ.ಚ). [5] ಱೆ (ಕ.ಗ.ದ). [6] ಮುರಿ (ಕ.ಚ).

ಕಾದಿರ್ಪ [1]ಷಡು[1]ರಥರು ನೃಪತಿಗೆ
ಕಾದು ಕೊಡಿರ್ಪ ಸೈಂಧವನನಿದು
ಕೈದುಕಾಱರ ಠಾವು ಸಾಹಸಿಗರಿಗೆ ಸಮಯವಿದು ।
ಮೊದಲೆಗಳಿವು ಮುಟ್ಟು [2]ವಡೆ[2] ಮುನಿ
ಸಾದಡೊಳ್ಳಿ[3]ತು ನಿಪ್ಪಸರ[3]ದಲಿ
ಕಾದುವಿರಲೈ ಕಾಣಲಹುದೆಂದೊಱಲಿದನು ಪಾರ್ಥ ॥ ೨೬

ಜರಿದು[4]ದೀ[4] ಬಲ ರಾಸಿ ಗಾಳಿಯ
ಹೊರಳಿಗೊಡ್ಡಿದ ಹೊಟ್ಟು ಹಾಱುವು
ದರಿದೆ [5]ಗಿರಿಗಳು[5] ನೆಲನ ಬಿಟ್ಟುದನೇನ ಹೇಳುವೆನು ।
ಗುರುತನುಜ ಕೃಪ ಕರ್ಣ ಮಾದ್ರೇ
ಶ್ವರ ಸುಯೋಧನ ಚಿತ್ರಸೇನರು
ಮುರಿದು ತರಹರಿಸಿದರು ಸೂಚಿ ವ್ಯೂಹದಗ್ರದಲಿ ॥ ೨೭

ಹರಿಯ ಬೊಬ್ಬೆ ರಥಾಶ್ವದಬ್ಬರ
ನರನ ಬಿಲು ಟಂಕಾರ ಭೇರಿನ
ಧರಧುರದ ಚೀತ್ಕಾರ ಹನುಮನ ಸಿಂಹ ನಿರ್ಘೋಷ ।
ಅರಿ ಬಲವ ತಿವಿದುದು ಚತುರ್ಬಲ
ಹೊರಳಿಯೊಡೆದುದು ಸುಭಟರೆದೆ ಜ
ರ್ಝರಿತವಾದುದು ಪಾರ್ಥ ಹೊಕ್ಕನು ಸೈಂಧವನ ದಳವ ॥ ೨೮

ಅಳವಿಗೊಡಲಿ ಮಹಾರಥರು ಕೈ
ಕೊಳಲಿ [6]ಸೈಂಧವ ನೃಪನ[6] ನೊಂದರೆ
ಫಳಿಗೆ [7]ಕಾಯ್ದರೆ ನಾವು ನೆಱೆ[7] ಕೊಂದವರು ಫಲುಗುಣನ ।
ಹೊಳಹುಗಳಿದುದು ಕಾಲವಿನ್ನರೆ
ಘಳಿಗೆ ಸೈರಿಸಿ ಶಿವ ಶಿವಾ ಯೆಂ
ದೊಳಗೊಳಗೆ ಮೂದಲಿಸುತಿರ್ದರು ಭಟರು ತಮ್ಮೊಳಗೆ ॥ ೨೯

ಧನುವನೊದಱಿಸಿ ಸಕಲ ಸುಭಟರು
ಮನವ ಬಲಿದೊಗ್ಗಾಗಿ ಸರಳಿನ
ಜಿನುಗು ವಳೆಯಲಿ ನಾದಿದರು ನಾರಾಯಣಾರ್ಜುನರ ।

---

[1] ಸಮ (ಕ.ಟ.ತ.ದ). [2] ಫಡ (ಕ.ಗ.ಚ.ಟ.ತ). [3] ತೆನುತ್ತ ಶರ (ಕ). [4] ದರಿ (ತ.ಟ). [5] ಬಿರುದರು (ಗ.ಚ). [6] ಕೈಕೊಳಲಿವನ (ಕ.ಟ.ತ). [7] ತಡೆದರೆ ಸಾಕು ನೀವ್ (ಕ.ಗ.ದ).

ಅನಿಬರಂಬನು ಕಡಿದು ಗುರುನಂ
ದನನ ಕರ್ಣನ ಕೃಪನ ದುರಿಯೋ
ಧನನ ಮೆಯ್ಯಲಿ ಮೆತ್ತಿದನು ಮುಮ್ಮೊನೆಯ ಬೋಳೆಗಳ ‖ ೩೦

ಘಡಘಡರ್ಜುನ ಹೋಗು ಹೋಗಳ
ವಡದು ಸೈಂಧವ[1]ನಳಿವು[1] ಭಾಷೆಯು
ನಡಸ ಬಲ್ಲರೆ ಬೇಗ ಬೆಳಗಿಸು ಹವ್ಯವಾಹನನ ।
ಕಡಲ ಮಧ್ಯದ ಗಿರಿಗೆ ಸುರಪತಿ
ಕಡುಗಿ ಮಾಡುವುದೇನೆನುತ [2]ಕೈ
ಗಡಿಯು[2] ಬಿಲ್ಲಾಳುಗಳು ಬಿಗಿದರು ಸರಳಲಂಬರವ ‖ ೩೧

ದ್ಯುಮಣಿಯೊ[3]ದೆ[3]ದರೆ ತರಹರಿಸುವುದೆ
ತಿಮಿರ ರಾಜನ ದೇಹವೀ ವಿ
ಕ್ರಮ ದರಿದ್ರರಿಗಳುಕಿದರೆ ಬಳಿಕವ ಧನಂಜಯನೆ ।
ಸಮತಳಿಸಿ ಶರ ವಳೆಯ ಕಱೆದು
[4]ದ್ಭ್ರ[4]ಮಿ ಮಹಾರಥ ಭಟರ ವಿಜಯದ
ಮಮತೆಗಳ ಮಾಣಿಸಿದನಂದಮಳಾಸ್ತ್ರ [5]ಬೋ[5]ಧೆಯಲಿ ‖ ೩೨

ನೊಂದು ಮರಳದೆ ಮಸಗಿ ಸೂರ್ಯನ
ನಂದನನು ತಾಗಿದನು ಗುರುಸುತ
ಮುಂದುವರಿದನು ತಲೆ ಹಱಿ[6]ದರೆನ್ನಟ್ಟೆ ಕಲಿಯೆನುತ[6] ।
ಇಂದಿನಲಿ ಮಹನವಮಿ ತಲೆಗಳಿ
ಗೆಂದು ಕವಿದರು ಸಕಲ ಭಟರರ
ವಿಂದ ಸಖ ಹೊದ್ದಿದನು ಮೆಲ್ಲನೆ ಪಶ್ಚಿಮಾಂಬುಧಿಯ ‖ ೩೩

ಮೇಲೆ ಬಿದ್ದುದು ಸೇನೆ ಸವೆಯದು
ನಾಳೆ ಪರಿಯಂತರಘಳಿಗೆಗಿನ
ನಾಳುವನು ಜಲ[7]ಧಿಯಲಿ[7] ಕಾಣೆನು ವೈರಿ ಸೈಂಧವನ ।
ಹೇಳಿ ಫಲವೇನಿನ್ನು ವಹ್ನಿ
ಜ್ವಾಲೆ ಕೊಳ್ಳಲಿ ದೇಹವನು ಸಾ
ಕೇಳು ಮುರಹರ ತೇರ ತಿರುಹೆನ್ನೆಂದನಾ ಪಾರ್ಥ ‖ ೩೪

---

[1] ದಳದ (ಕ), ವಿಜಯ (ಗ.ಚ). [2] ಬಲುಕಡಿಯ (ಕ.ಗ.ಟ.ತ). [3] ಗೆ (ಕ). [4] ಭ್ರ (ನ). [5] ಬಾ (ಕ.ಗ.ದ). [6] ದರನ್ನಟ್ಟಿ ಬಲುಹೆನುತ (ಕ). [7] ದೊಳಗೆ (ಕ.ಗ).

ಸಲಿಸಬೇಹುದು ಭಕುತ ಮಾಡಿದ
ಛಲದ ಭಾಷೆಯನೆನುತ ರವಿ ಮಂ
ಡಲಕೆ ಮಱೆಯೊಡ್ಡಿದನು ಮುರರಿಪು ವರ ಸುದರ್ಶನವ ।
ಕಳನೊಳಗೆ ಕತ್ತಲಿಸಿತಹಿತನ
[1]ಕೊ[1]ಲೆಗೆ ಕಾವಳ ಕವಿದವೋಲರೆ
ಘಳಿಗೆಯಲಿ ಸುಮ್ಮಾನ ಮಸಗಿತು ಸಕಲ ಕುರು ಬಲಕೆ ॥ ೩೫

ಸೆಱಗ ಬೀಸಿದರಾರಿದರು ಬೊ
ಬ್ಬೆಱೆ[2]ದರುರು[2] ಗಂಭೀರ ಭೇರಿಯ
ಬಿಱುದನಿಗಳುಬ್ಬರಿಸಿದವು ಗಬ್ಬರಿಸಿದವು ನಭವ ।
ತೆಱಹ ಕೊಡು ಕೊಡು ಭಾಷೆಕಾಱನು
ಮೆಱೆದು ಹೋಗಲಿ ವಹ್ನಿಕುಂಡದೊ
ಳೊಱಗುವುದ ನೋಡುವೆವೆನುತ ತನಿಗೆದಱಿತರಿ ಸೇನೆ ॥ ೩೬

ಹೊಲಬು ದಪ್ಪಿದ ತಳಪಟದ ಹೆ
ಬ್ಬುಲಿಯವೊಲು ನಿನ್ನಾತ ಸಿಲುಕಿದ
ನಿಲುಕಿ ನೋಡಿದನೆಲ್ಲಿ ತೋಱರ್ಜುನನನೆನಗೆನುತ ।
ಉಲಿಯೆ ಸೈಂಧವನಿತ್ತ ಪಾರ್ಥನ
ಮುಳಿದು ಜಱೆದನು ಕೃಷ್ಣನಹಿತನ
ತಲೆಗೆ ಹರ ಹಿಡಿವಂಬ ತೊಡು ತೊಡು ಬೇಗ ಮಾಡೆಂದ ॥ ೩೭

ದೇವ ರವಿಯಸ್ತಮಿಸಿದನು ನೀ
ವಾವುದುಚಿತವ ಕಂಡಿರೆನೆ ನಿನ
ಗಾವ ಭಯ ಬೇಡಾಡಬಾರದು ತೊಡು ಮಹಾಶರವ ।
ಈ ವಿರೋಧಿಯ ಕೆಡಹು ಸೂರ್ಯನ
ನಾವು ತೋಱಿಸಿ ಕೊಡುವೆವೆನೆ ಗಾಂ
ಡೀವದಲಿ ಹೂಡಿದನು [3]ಫಲುಗುಣ[3] ಪಾಶುಪತ ಶರವ ॥ ೩೮

ತೆಗೆಯೆ ಜಗ ಕಂಪಿಸಿತು ತಾರೆ[4]ಗ
ಳೊ[4]ಗಡಿಸಿತು ನಭ ಜಲಧಿ ರತ್ನಾ
ಳಿಗಳನೋಕರಿಸಿತು ಕುಲಾದ್ರಿಗಳೊಲೆದವೆಡ ಬಲಕೆ ।

---

[1] ತ (ಕ.ಗ). [2] ದು ವರ (ಕ.ಗ). [3] ವಿಧಿಯಲಿ (ಟ.ತ).
[4] ಯನೊ (ತ.ದ.ನ).

ದಿಗಿಭ ತತಿ ನಡುನಡು[1]ಗೆ[1] ತಳವಾ
ಸುಗಿ ಫಣಾಳಿಯು ಸೆಳೆಯೆ ಬಲು ಸರ
ಳುಗಿದು ದಳ್ಳುರಿ ದಿರುಳ ಕಾಱಿತು ಬೆಸಸು ಬೆಸಸೆನುತ ॥ ೩೯

ಬಲಿದು ಮಂಡಿಯನೂಱಿ ಕೆನ್ನೆಗೆ
ಸೆಳೆದು ಮುಷ್ಟಿಯ ಪಾರ್ಥನಹಿತನ
ತಲೆಯನೆಚ್ಚನು ಗೋಣ ಕಡಿದುದು ಪಾಶುಪತ ಬಾಣ ।
ಹೊಳೆವ ಮಕುಟದ ವದನ ಗಗನಾಂ
ಗಳಕೆ ಚಿಮ್ಮಿತು ರಕುತ ಧಾರಾ
ವಳಿಯ ಱಿಂಗಣವಾಯ್ತು ಮುಂಡದ ತಲೆಯ ಮಧ್ಯದಲಿ ॥ ೪೦

ಬೀಳು ಬೀಳಭಿಮನ್ಯುವಿನ ವಧೆ
ಬಾಳಲೀವುದೆ ನಿನ್ನನೆನುತು
ಬ್ಬಾಳುತನದಲಿ ಪಾರ್ಥ ಬೊಬ್ಬಿಡೆ ಕೃಷ್ಣ ಖಾತಿಯಲಿ ।
ಖೂಳ ಕೇಳಿಳೆಗವನ ತಲೆಯನು
ಬೀಳ[2]ಕಿ[2]ದನ ಕಪಾಲ ಸಾವಿರ
ಹೋಳಹುದು ತೊಡು ಪಾಪಿ ಬೇಗದಲಂಬ ಕಳುಹೆಂದ ॥* ೪೧

ಇವನ ತಂದೆಯ ಶಾಪವಾವವ
ನಿವನ ತಲೆಯನು ನೆಲಕೆ ಕೆಡಹುವ
ನವನ ಮಸ್ತಕ ಬಿರಿದು ಬೀಳಲಿ ಯೆಂದನೀ ತಲೆಯ ।
ಇವನ ತಂದೆಯ ಕೈಯೊಳಗೆ ಬೀ
ಳುದವುಪಾಯವ ಮಾಡು ನೀನೆನೆ
ದಿವಿಜಪತಿಸುತನಾ ಮಹಾಸ್ತ್ರಕೆ ಬೆಸಸಿದನು ಹದನ ॥ ೪೨

---

1 ಗಿ (ಕ.ಟ). 2 ಸಿ (ಗ), ಚಿ (ಚ).

* ೪೧ನೆಯ ಪದ್ಯವಾದಮೇಲೆ (ಗ.) ಪ್ರತಿಯಲ್ಲಿ ಈ ಕೆಳಗಿನ ಪದ್ಯವು ಹೆಚ್ಚಾಗಿದೆ :—

ದೇವ ಬಿನ್ನಹವಿವನತಲೆಯನ
ದಾವ ದೇಶದೊಳಾವಗಿರಿಯಲ
ದಾವ ವೃಕ್ಷದಲಾವನದಿಯಲದಾರ ಕರದೊಳಗೆ ।
ಸೈವರಿಯ ಬೇಕದರ ನೇಮವ
ದೇವ ಬೆಸಸೆನೆ ಕೃಷ್ಣರಾಯನು
ಘೋವಿದನು ಮಾನಸದ ಬಡಗಣ ಕಡಲ ತೀರದಲಿ ॥

ತುಡುಕಿ ಖಂಡವ ಕಚ್ಚಿ [1]ನಭದಲಿ
ಗಿಡಿಗ ಹಾಯ್ವಂದದಲಿ ತಲೆಯನು
ಹಿಡಿದು[1] ಹಾಯ್ದುದು ಬಾಣ ವೃದ್ಧಕ್ಷತ್ರನಿದ್ದೆಡೆಗೆ ।
ಕುಡಿತೆಯೆರಡಱೊಳರ್ಘ್ಯಜಲವನು
ಹಿಡಿದು ಹಾಯ್ಕುವ ಸಮಯದಲಿ ತಲೆ
ನಡುವೆ ಬಿದ್ದುದು ಅರ್ಘ್ಯಜಲ ನವ ರಕ್ತಮಯವಾಗೆ ॥ ೪೩

ಏನಿದದ್ಭುತವೆನುತ ತಲೆಯನು
ತಾನೆ ಕೊಡಹಿದನಂಜಲಿಯನದ
ನೇನನೆಂಬೆನು ಕೃಷ್ಣರಾಯನ ಮಂತ್ರ ಶಕ್ತಿಯನು ।
ಆ ನರೇಂದ್ರನ ತಲೆ ಸಹಸ್ರ ವಿ
ಧಾನದಲಿ ಬಿರಿದುದು ಸುಯೋಧನ
ಸೇನೆ ಹರಿದುದು ಜರಿದುದರಿಭಟ ಧೈರ್ಯ ಗಿರಿ ನಿಕರ ॥ ೪೪

ನಡುಗಿ ಸಂಗರ ಭೀತಿಯಲಿ ಬೆಂ
ಗೊಡುವ ನಾಯಕವಾಡಿಗಳ ವಂ
ಗಡವ ನೋಡುತ ಮಱೆಯ ಚಕ್ರವ ತೆಗೆದನಸುರಾರಿ ।
ಪಡುವಲಿಳಿಯದ ರವಿಯ ಬಯ್ವುತ
ನಡೆದನಾ ಕುರುರಾಯನಿತ್ತಲು
ಹಿಡಿದ ಚೌರಿಗಳಾಡಿದವು ಪಾಂಡವರ ಸೇನೆಯಲಿ ॥ ೪೫

ದೈವ ಪೌರುಷದೊಳಗೆ ಶಿವ ಶಿವ
ದೈವ ಬಲವೇ ಬಲವಲಾ ನಿ
ರ್ದೈವರಂಗೈತಳಕೆ ಬಂದರೆ ಪರುಷ ಪಾಷಾಣ ।
ದೈವ ದೂರರು ಧರ್ಮ ಹೀನರು
ನೆಯ್ವ ನೆಯ್ಗಗಳೆನುತ ಮಿಗೆ ಬಿಸು
ಸುಯ್ವುತಿರ್ದರು ಕರ್ಣ ಕೃಪ ಗುರುನಂದನಾದಿಗಳು ॥ ೪೬

ಕಡಲ ಮೊರಹಿನ ಲಹರಿ ಲಘುವಿೀ
ಪಡೆಯನೊಡೆಯಲು ಯುಗ ಸಹಸ್ರದೊ
ಳೊಡೆಯಬಹುದೇ ದ್ರೋಣ ರಚಿಸಿದ ವ್ಯೂಹ ಪರ್ವತವ ।

---

[1] ಹಾಱುವ ಗಿಡಿಗನಂತಿರೆ ಭಟನ ಗಂಟಲ ತುಡುಕಿ (ಕ).

ಒಡೆದು ಹೋಯಿತ್ತೊಡ್ಡು ಸೈಂಧವ
ನೊಡಲು ನೀಗಿತು ತಲೆಯನಕಟಾ
ತೊಡಗಿದೆವು ದೈವದಲಿ ಕಲಹವನೆಂದನಾ ಕರ್ಣ ॥ ೪೭

ಮುನಿದು ಮಾಡುವುದೇನು ಕೃಷ್ಣನ
ನೆನಹು ಘನ ನಮ್ಮಸುವ ನಾವೀ
ಜನಪತಿಗೆ ಮಾಱಿದೆವು ನಮಗೀ ಚಿಂತೆಯೇಕೆನುತ ।
ಇನಸುತಾದಿಗಳಿದ್ದರಿತ್ತಲು
ಮನದ ಹರುಷದ ಹರಹಿನಲಿ ಪಾ
ರ್ಥನ ರಥವ ತಿರುಹಿದನು ಗದುಗಿನ ವೀರ ನಾರಯಣ ॥ ೪೮

ಹದಿನಾಲ್ಕನೆಯ ಸಂಧಿ ಮುಗಿದುದು.

ಹದಿನೈದನೆಯ ಸಂಧಿ

ಸೂಚನೆ ॥ ರಾಯ ಕಟಕಾಚಾರ್ಯನೊಡ್ಡಿದ
ರಾಯ ಥಟ್ಟಿನೊಳಿರುಳು ಕೊಂದನು
ವಾಯು ತನಯನ ತನುಜನಗ್ಗದ ದೈತ್ಯ ಕೋಟಿಗಳ ॥

ಕೇಳು ಜನಮೇಜಯ ಧರಿತ್ರೀ
ಪಾಲ ಕೃಷ್ಣಾರ್ಜುನರು ಬರೆ ಭೂ
ಪಾಲ[1]ನಂದಿ[1]ದಿರಾಗಿ ಬಂದನು ಸಕಲ ದಳ ಸಹಿತ ।
ಹೇಳಲಱಿಯೆನು ಹರುಷದುದಯವ
ನಾಲಿ ಹೂಳಿದವಶ್ರು ಜಲದಲಿ
ಮೇಲುವಾಯ್ದಪ್ಪಿದನು ದೇವನ ಪಾದ ಪಂಕಜವ ॥ ೧

ಮಾತುದೋಱದು ಹೆಚ್ಚಿದಾನಂ
ದಾತಿರೇಕಕೆ ಚಿತ್ತ ನೆಱೆಯದು
ಹೂತು ಹಿಗ್ಗುವ ಪುಳಕ ರಾಜಿಗೆ ದೇಹ ಕಿಱಿದೆನುತ ।
ಕಾತರಿಸಿದನು[2] ಮೇಲೆ ಮೇಲೆ[2] ಮ
ಹೀತಳಾಧಿಪ ಮೈ ಮಱೆಯೆ ತೆಗೆ
ದಾತನನು ತಕ್ಕೈಸಿದನು ಕಾರುಣ್ಯನಿಧಿ ನಗುತ ॥ ೨

[3]ಫಲಿಸಿತರಸಾ[3] ನಿನ್ನ ಭಾಗ್ಯದ
ಬೆಳಸು ನಿನ್ನೊಡವುಟ್ಟಿದನ ನುಡಿ
ಕಳಸಗಂಡುದು ಕದನವಿದು ಭಾರಾಂಕವುಳಿದರಿಗೆ ।
ಕಳಿದುದೊಂದಪಮೃತ್ಯುವೆನೆ ನೃಪ
ತಿಲಕ ನುಡಿದನು ನಿನ್ನ ಭಾಷೆಯ
ಬಲಿದೆ ನಿನ್ನಯ ಬಿರುದ ಸಲಿಸಿದೆ ನಮಗಿದೇನೆಂದ ॥ ೩

ತೆಗೆಸು ದಳವನು ಸಾಕು ಬರಿದೇ
ಹೊಗಳುತಿಹೆ ನೀ ನಮ್ಮನೀ ಕಾ
ಳೆಗದೊಳಳಿದುದು ಹಗೆಯೊಳೇಳಕ್ಷೋಹಿಣೀ ಸೇನೆ ।

---

[1] ನೊಲಿ (ತ) ತಾನಿ (ದ) [2] ಮತ್ತೆ ಮತ್ತೆ (ಕ.ಗ.ಚ). [3] ಚೆಲುವ ನರಸಾ (ಕ.ಗ.ಟ), ಇಳೆಯುವಲ್ಲಭ (ದ).

ಬಗೆಯ[1]ದಿಱಿದರು[1] ಭೀಮ ಪಾರ್ಥರು
ಜಗದೊ[2]ಳದ್ಭುತ[2] ವೀರರಿವರೆಂ
ದಗಧರನು ಪತಿಕರಿಸಿದನು ಪವನಜನ ಫಲುಗುಣನ ॥ ೪

ಇತ್ತ ದುಗುಡುವ ಹಿಡಿದ ರಾಯನ
ಕೆತ್ತ ಮುಖವನು ಕಂಡು ಭಟರೆದೆ
ಹೊತ್ತಿದವು ಹೊ[3]ಗೆದೋ[3]ಱಿದವು ಮೋಱೆಗಳು ಪಟುಭಟರ ।
[4]ಇತ್ತ ನೋಡವನೀಶ[4] ಸೈಂಧವ
ನೆತ್ತಲಿಹನತ್ತಲು ಮುರಾರಿಯ
ತೆತ್ತಿಗರ ಕಳುಹಿಸುವೆನೆಂದನು ಖಾತಿಯಲಿ ಕರ್ಣ ॥ ೫

ಇನ್ನು ನೋಡಾದಡೆ ಕಿರೀಟಿಯ
ಬೆನ್ನಲುಗಿವೆನು ಕರುಳನರ್ಜುನ
ಗನ್ನಗತಕದಲರಿಯ ಹೊಯ್ದನು ಹಾಯ್ಕು ವೀಳೆಯವ ।
ನಿನ್ನ ಕಂಗಳ ಬಱಿನ ಕಳೆವೆನು
ಬೆನ್ನಲಿರು ನೃಪ ನೋಡು ಚಿತ್ರವ
ನಿನ್ನು [5]ತೋಱುವೆನೆನುತ ಭಾಷೆಯ ಕೊಟ್ಟನಾ ಕರ್ಣ[5] ॥ * ೬

ಉಂಟು ಗರುಡನನೊಳ್ಳೆ ತುಡುಕುವ
ದುಂಟಲೇ ಲೋಕದಲಿ ರಾಯನ
ನಂಟರಿಷ್ಟರೊಳಧಿಕನಲ್ಲಾ ಕರ್ಣ ಕಿಱುಕುಳನೆ ।
[6]ಕಂ[6]ಟಣಿಸಬೇಡಿನ್ನು ಭಾಷೆಗ
ಳುಂಟು ನಿನ್ನಲಿ [7]ನಗುವ[7]ರಾವ
ಲ್ಲೆಂಟು ಮಡಿಯನು ಸೊರಹು ಸಾಕೆಂದನು ಕೃಪಾಚಾರ್ಯ ॥ ೭

ಗರುವರನು ಮಾನ್ಯರನು ರಣಧೀ
ರರನು ದೂರದಲಿರಿಸುವರು ಹ
ತ್ತಿರಕೆ ಕರೆವರು ಬಾಯಿಬಡಿಕರ ಜಗದ ಭಂಡರನು ।
ಅರಸುಗಳು ದುಶ್ಶೀಲರೆಂಬುದ
ನಱಿಯದೇ ಜಗವಕಟ ಟೆಕ್ಕೆಯ
ಹರಳು ಗಡ ಕೌಸ್ತುಭಕೆ ಸರಿ[8]ಯೆಂದನು ಕೃಪಾಚಾರ್ಯ[8] ॥ ೮

---

[1] ದಗ್ಗದ (ಚ). [2] ಳಗ್ಗಳ (ಚ). [3] ಗರೇ (ಕ.ಗ.ಚ). [4] ಚಿತ್ತವಿಸು ಭೂಪಾಲ (ಟ.ತ.ನ). * ಈ ಪದ್ಯವು (ಟ) ಪ್ರತಿಯಲ್ಲಿಲ್ಲ. [5] ನೋಡಾ ಬೆಳಗ ತೋಱುವೆನೆಂದ ನಾ ಕರ್ಣ (ಕ). [6] ಟೆಂ (ಗ.ಟ.ತ.ನ). [7] ಗರುವ (ಚ) ನುಡಿವ (ತ). [8] ಯೋ ಶಿವಶಿವಾ ಎಂದ (ತ.ನ).

ನೀವು ಮಾಡುವುದೇನು ರಣದಲಿ
ಕಾವೆವೆಂದಿರಿ ಸೈಂಧವನ ನಾ
ನಾವಿಧದ ವ್ಯೂಹದಲಿ ನಿಮ್ಮೀ ದ್ರೋಣ[1]ನೇ[1]ಗಿದನು ।
ತಾವು ಭಟರಾದರೆ ವಿಭಾಡಿಸಿ
ಹೇವಗೆಡಿಸುವುದುಚಿತ ಭಂಡರು
ತಾವು ಲೋಗರ ಚುನ್ನವಾಡುವರೆಂದನಾ ಕರ್ಣ ॥ ೯

ಎಲವೊ ಘಡ ಮಾವನ [2]ವಿಭಾಡಿಸಿ[2]
ಗಳಹುವೀ ನಾಲಗೆಯ ಕೀಳುವೆ
ನೆಲೆ ಮಹಾದೇವಿಲ್ಲಿ ಮೇಳವೆನುತ್ತ ಖಂಡೆಯವ ।
ಸೆಳೆದು ಝೊಂಪಿಸಿ ಗುರು ತನುಜನ
ವ್ವಳಿಸಲುಗಿದನಡಾಯುಧವನ
ಗ್ಗಳೆಯ ರವಿಸುತ ಮೇಲು ವಾಯ್ದನು ದ್ರೋಣ ನಂದನನ ॥ ೧೦

ಬೆಂದುದೊಳ ತೋಟಿಯಲಿ ಕೌರವ
ವೃಂದವಕಟಕಟೆನಲು ಜನವೈ
ತಂದು ನಿಂದನು ನಡುವೆ ಕೌರವ ರಾಯ ಖಾತಿಯಲಿ ।
ಇಂದಿನಾಹವ ಲೇಸು ಲೇಸಿದು
ಮುಂದ ಭಾಗ್ಯನು ತಾನು ಸಾಕಿ
ನ್ನೆಂದು ಮಾಡುವುದೇನು ನಿಮ್ಮೊಳು ಕದನ ಬೇಡೆಂದ ॥ ೧೧

ಹೇವವುಳ್ಳರೆ ಭೀಮ ಪಾರ್ಥರ
ನೀವು ಕೊಲುವುದು ಮೇಣು ರಣದಲಿ
ಸಾವುದಲ್ಲದೆ ಗರುವರೊಳ ತೋಟಿಯಲಿ ತೊಡಕುವರೆ ।
ಕಾವೆವೆಂದಿರಿ ಸೈಂಧವನ ಸುಭ
ಟಾವಳಿಯ ಮೂಗುಗಳನರ್ಜುನ
ದೇವ ಕೊಯ್ದನು ಸಾರಿ ನೀವೆಂದರಸ ಮಾಣಿಸಿದ ॥ ೧೨

ನೆಱೆವಣಿಗೆಯುಳ್ಳರೆ ವಿರೋಧಿಯ
ನಿಱಿವುದೋಲೆಯಕಾಱತನವನು
ಮೆಱೆವುದುಚಿತವಿದೇಕೆ ದೊಂಬಿನ ಶೌರ್ಯವೊಳಗೊಳಗೆ ।

---

[1] ನೆಸ (ತ). [2] ದೊಠಾರಿಸಿ (ಕ).

ಕಿಱುಕುಳರು ನೀವಲ್ಲ ನಿಮ್ಮಲಿ
ಕೊಱತೆಯಿಲ್ಲದು ನಮ್ಮ [1]ಪುಣ್ಯದ[1]
ಬಱ[2]ನ ದಿನ[2] ನೀವೇನ ಮಾಡುವಿರೆಂದು ಬಿಸುಸುಯ್ದ ‖ ೧೩

ಖ್ಯಾತಿಯೇಕೈ ಸೈಂಧವನ [3]ಕಾ[3]
ವಾತನಾರೈ ತ್ರಿಪುರ ದಹನದ
ಭೂತನಾಥನ ಬಾಣ ಬಂದುದು ನರನ ಗಾಂಡಿವಕೆ ।
ಆತನೆಚ್ಚದು ಪಾಶುಪತವದ
ನಾತುಕೊಂಬವರಾರು ಬಱಿದೆ ಭ
ಟಾತಿಶಯವನು ಹುರುಳುಗೆಡಿಸುವಿರೆಂದನಾ ದ್ರೋಣ ‖ ೧೪

ಒಂದು ಹರ ಹಿಡಿವಂಬು ಶಕ್ರನ
ದೊಂದು ಕೌಬೇರಾಗ್ನಿ ವಾಯುವ
ದೊಂದು ಪಾರ್ಥನ ಬತ್ತಳಿಕೆ ದಿವ್ಯಾಸ್ತ್ರ ತುಂಬಿಹವು ।
ಕೊಂದಡಲ್ಲದೆ ಮಾಣವವು ನಾ
ವ್ಪೊಂದಕೊಬ್ಬರು ಗುಱಿ ನಿದಾನಿಸ
ಲಿಂದು ನಮಗಳವಡದು ಜಯವಿಲ್ಲೆಂದನಾ ದ್ರೋಣ ‖ ೧೫

ಅರಸ ಮರುಳೈ ನೀನು ಸುರರನು
ಸರಕುಮಾಡನು ಸಕಲ ದೈವದ
ದೊರೆಯಲೇ ಹರನಾತನಸ್ತ್ರವನಾರು ತಱುಬುವರು ।
ಹರನ ಶರವಿಲ್ಲಿನ್ನು ಹಗೆಗಳ
ನಿರುಳು ರಣದಲಿ ಹಿಂಡುವೆನು ಸಂ
ವರಿಸು ಕೈದೀವಿಗೆಯನೆಂದನು ದ್ರೋಣನುಬ್ಬಿನಲಿ ‖ ೧೬

ಘಾಯವಡೆದಾನೆಗಳ ಕೈ ಮೈ
ನೋಯೆ ಕಾದಿದ ರಾಜಪುತ್ರರ
ನಾಯುಧದ ಮಳೆಗಳಲಿ [4]ನನೆದ[4] ಜವಾಯ್ಲ ತೇಜಿಗಳ ।
ಹಾಯಿದುರೆ ಸೊಪ್ಪಾದ ಶಕಟ ನಿ
ಕಾಯವನು ಪೂರಾಯದೇಱಿನ
ನಾಯಕರ ಕರೆಕರೆದು [5]ಬವರಕೆ[5] ಕಳುಹಿದನು ದ್ರೋಣ ‖ ೧೭

[1] ಭಾಗ್ಯದ (ಟ.ತ.ನ). [2] ತನದಿ (ಕ.ಗ.ಚ.ಟ.ತ). [3] ಕೊಲು (ಟ.ಚ.ತ).
[4] ಬಸಿವ (ಕ.ಗ.ಚ). [5] ಭವನಕೆ (ಕ.ಗ.ಚ.ತ.ಟ).

ಜರಿದ ಜೋಡನು ನೆಱೆ ಹಱಿದ ಹ
ಕ್ಕರಿಕೆಗಳ ನುಗ್ಗಾದ ಗುಳವನು
ಬಿರಿದ ಸೀಸಕ ಬಾಹುರಕ್ಕೆಯ ಮುಱಿದ ಬಲ್ಲೆಹದ ।
ಅರೆಗಡಿದ ಬಿಲ್ಲುಗಳ ನೆಗ್ಗಿದ
ಹರಿಗೆಯನು ಮುಕ್ಕಾದ ಕೈದುವ
ತರಿಸಿ ಕಳುಹಿಸುತಿರ್ದನತಿರಭಸದಲಿ ಕಲಿ ದ್ರೋಣ ॥ ೧೮

ಎಣಿಸಲಱಿಯೆನು ಬಂಡಿಗಳು ಸಂ
ದಣಿಸಿದವು ಹಕ್ಕರಿಕೆಗಳ ಹ
ಲ್ಲಣದ ಕವಚದ ಸೀಸಕದ ಜೋಡುಗಳ ಱೆಂಚೆಗಳ ।
ಮಣಿಮಯದ ಮೋಹಳದ ಹಿರಿಯು
ಬ್ಬಣದ ಸಬಳದ [1]ಶೂಲ ಸುರಗಿಯ[1]
ಕಣೆಯ ಹೊಱೆ ಚಾಚಿದವು ಕಟಕಾಚಾರ್ಯನಿದಿರಿನಲಿ ॥ ೧೯

ಕರೆಕರೆದು ರಥಿಕರಿಗೆ ಮಾವಂ
ತರಿಗೆ ಕಾಲಾಳಿಂಗೆ ರಾವು
ತ್ತರಿಗೆ ಕೊಡಿಸಿದನವರವರಿಗವರಂಗದಾಯುಧವ ।
ತರಿಸಿ ಸಾದು ಜವಾದಿಯನು ಕ
ರ್ಪುರದ ವೀಳೆಯವುಡುಗೊಱೆಗಳಲಿ
ಹಿರಿದು ಪತಿಕರಿಸಿದನು ಪರಿವಾರವನು ಕಲಿ ದ್ರೋಣ ॥ ೨೦

ಉರವಣಿಸುವುದು ಕೊಂಡ ಹಜ್ಜೆಗೆ
ಮುರಿಯಲಾಗದು ಶಸ್ತ್ರ ಧಾರಾ
ಪರಮ ತೀರ್ಥಸ್ನಾನ ತೊಳೆವುದು ಭವದ ಕಿಲ್ಬಿಷವ ।
ಹರಣದಲಿ ಕಕ್ಕುಲಿತೆ ಬೇಡು
ದ್ಧರಿಸುವುದು ಸತ್ಕುಲತೆಯನು ಸಂ
ವರಿಸುವುದು ಸದ್ಗತಿಯನೆಂದನು ದ್ರೋಣ ನಿಜ ಬಲಕೆ ॥ ೨೧

ಲಟಕಟಿಸಿತಾಹವಕೆ ರಾಯನ
ಕಟಕ ಸುಮ್ಮಾನದಲಿ ಮೊಳಗುವ
ಪಟಹ ಡಮರು ಮೃದಂಗ ಘನ ಗಂಭೀರ ಭೇರಿಗಳ ।
ಚಟುಳ ಕಹಳೆಯ ಗಜರು ಮಿಗಲು
ತ್ಕಟಿಸಿತಂಬುಜ ಭವನ ನಿರ್ಮಿತ
ಘಟ ಬಿರಿಯೆ ಬಿಗುಹಾಯ್ತು ದ್ರೋಣನ ಸಮರ ಸನ್ನಾಹ ॥ ೨೨

---

[1] ನೂಲ ಹರಿಗೆಯ (ಕ.ಚ.ದ).

ನರನ ಕರೆಕರೆ ಸಿಂಧುರಾಜನ
ಹರಿಬವೆಮ್ಮದು ತಮ್ಮದೆಂದ
ಬ್ಬರಿಸಿ ನೂಕಿತು ಕದನ ಲಂಪಟರಾಗಿ ಪಟುಭಟರು ।
ಸರಿಸದಲಿ ಲಟಕಟಿಸಿ ಮೋಹರ
ಮುರಳಿ ನಿಂದುದು ರಣಕೆ ರಜನೀ
ಚರರ ಥಟ್ಟಣೆ ಧಾತುಗೆಡಿಸಿತು ದಿಟ್ಟರುಬ್ಬಟೆಯ ॥ ೨೩

ಹಿಂದೆ ಸೆಳೆದುದು ವೈರಿ ಬಲ ಭಟ
ವೃಂದ ನಿಲಲಿ ಕಿರೀಟಿ ಭೀಮರ
ಕುಂದುಗಾಬುದು ಲೋಕ ನಮ್ಮನು ತೆಗೆದು ಹಿಂಗಿದರೆ ।
ಬಂದ ಜಯವಕ್ಕುವುದು ರಜನಿಯು
ಕೊಂದೆವಾದರೆ ನಮಗೆ ಸರಿಯಿ
ಲ್ಲೆಂದು ಧೃಷ್ಟದ್ಯುಮ್ನ ಕರಸಿದನಖಿಳ ನಾಯಕರ ॥ ೨೪

ಸೋತ ಬಲ ಸಂವರಿಸಿಕೊಂಡುದು
ಪೂತುರೇ ರಣವೆಂಬುದೆಮ್ಮಯ
ಘಾತು ಕಲಿ ಮೂದಲಿಸಿ ಕರೆದರೆ ರಾಜ್ಯಸಿರಿಯೇಕೆ ।
ಭೀತಿ ಮನದಲಿ ಪೌರುಷಾಂಗದ
ಮಾತು ಮುಖದಲಿ ಮುರಿವು ಕಾಲಲಿ
ಬೂತುಗಳು ಕುರುವೀರರೆನುತಿದಿರಾದುದರಿ ಸೇನೆ ॥ ೨೫

ಇಳಿದುದೀ ಕಣನೊಳಗೆ ದಿಗು ಮಂ
ಡಲದ ಸಂಧ್ಯಾರಾಗವೆನೆ ಪರಿ
ದಳಿತ ಚತುರಂಗದಲಿ ಮುಸಗಿದುದರುಣ ಜಲರಾಶಿ ।
ಕಲಿಗಳುಬ್ಬಿನ ರೋಷ ತಾಮಸ
ತುಳುಕಿತೆನೆ ದಿಗುವಳಯದಲಿ [1]ಕುಡಿ[1]
ವೆಳಗ ಕುಡಿ ಕುಡಿವಡರುತಿರ್ದುದು ತಿಮಿರ ಲತೆ ಜಗವ ॥ ೨೬

ಜಡಿವ ಖಡುಗದ ಕಿಡಿಗಳಲಿ ಬೇ
ಗಡೆ[2]ಯನಾಂತುದು[2] ಮುಕುಟ ಬದ್ಧರ
ಮುಡಿಯ ರತ್ನ ಪ್ರಭೆಗಳಲಿ ಜರ್ಝರಿತ ತನುವಾಯ್ತು ।
ಗಡಣದಂಬಿನ ಮುಸೆಯ ಬೆಳಗಿನೊ
ಳಡಸಿದಾಕ್ಷಣ ಮತ್ತೆ ನಿಮಿಷಕೆ
ಹೊಡಕರಿಸಿ ಹಬ್ಬಿದುದು ಮಬ್ಬಿನ ಧಾಳಿ ದೆಸೆದೆಸೆಗೆ ॥ ೨೭

1 ತರು (ಕ). 2 ಗಳಾದುವು (ಕ.ಗ.ಚ.ದ).

ಖಳರ ಹೃದಯದ ಗರುಡಿ ಘೂಕಾ
ವಳಿಯ ನಯನಾಂಜನ ಧರಿತ್ರಿಯ
ನಳಿನಕೆಱಗಿದ ತುಂಬಿ ಸುಭಟಸ್ವಾಂತ ಶಶಿರಾಹು ।
ಪ್ರಳಯ ತಿಮಿರದ ಬೀಜ ನೀಲಾ
ಚಳದ ಸಾಯುಜ್ಯವೊ ನಭೋವಿುಂ
ಡಲದೊಳದನೇವೊಗಳುವೆನು ಮಸಗಿತು ತಮಸ್ತೋಮ ॥ ೨೮

ದಳದ ಬೊಬ್ಬೆಯ ಸಿಡಿಲ ಬಲುಗ
ತ್ತಲೆಯ ಝೂಡಿಯ ಮುಗಿಲ ಮಿಗೆ ಹೊಳೆ
ಹೊಳೆವ ಮಹಿಪರ ಮಕುಟ ರತ್ನದ ಬಳ್ಳಿ ಮಿಂಚುಗಳ ।
ಬಲು ಸರಿಯ ನಾರಾಚ ಜಾಳದ
ಮಳೆಯ ನೆತ್ತರ ಹೊನಲುಗಳ ರೌ
ಕುಳದ ಮಳೆಗಾಲದಲಿ ಹೆಚ್ಚಿತು ಭಟರ ಶೌರ್ಯ [1]ಶಿಖಿ[1] ॥ ೨೯

ಹೆಣಗಿ ಮಿಗೆ ತಲೆಯೊತ್ತಿ ಹೊಯ್ದರು
ಹಣಿದ[2]ದಲಿ[2] ತಮ್ಮೊಳಗೊಳಗೆ ಸಂ
ದಣಿಗಳಲಿ ಸೈಗೆಱೆದರಂಬಿನ ಸಿರಿಯನುರವಣಿಸಿ ।
ರಣಮು[3]ಹೀಸಂತಮುಸಶಾಂತೇ[3]
ಕ್ಷಣರು ದಿಗುಭ್ರಮೆಯಲಿ ಸ್ವಕೀಯ
ಕ್ಷಣನವನು ರಚಿಸಿದರು ರೌರವವಾಯ್ತು ರಾತ್ರಿಯಲಿ ॥ ೩೦

ಆರ ವಂಗಡದಾಳಿವನು ನೀ
ನಾರು ಹೆಸರೇನೆಂದು ಬಳಿಕ ವಿ
ಚಾರ ಮಿಗೆ ಹೊಯ್ದಾಡಿದರು ಕರೆ ಕರೆದು ಮೂದಲಿಸಿ ।
ಭಾರಿಸಿತು ಬಲು ತಿಮಿರ ಬಲ ಸಂ
ಹಾರವನು [1]ವಿವರಿ[4]ಸುವನಾವನು
ಭೂರಿ ಭಟರಂಘವಣೆ ಬೀತುದು ಭೂಪ ಕೇಳೆಂದ ॥ ೩೧

ತೆಗೆಸು ಚೂಣಿಯ ಬಲವ ದೀವ
[5]ಟ್ಟಿಗರ[5] ಕರೆ ಕರೆ ತೈಲ ಪೂರ್ಣದ
ತೊಗಲ ಕುನಿಕಿಲ ಬಂಡಿ [6]ಕವಿಯಲಿ[6] ಕೋಟಿ ಸಂಖ್ಯೆಯಲಿ ।

---

[1] ಸಿರಿ (ಕ), ಶಶಿ (ದ). [2] ವನು (ಕ.ಚ.ದ). [3] ಹೀಶಂತಯ ಶುಶುಪ್ತಿ (ಕ). ಹೀಸಮ್ಮತರುಶಾಂತೆ (ಟ). [4] ಹವಣಿ (ಕ.ಗ). [5] ಷ್ಠಿ (ಕ.ಗ). [6] ನೂಕಲಿ (ತ).

ಬಿಗಿದ ಮಳವೆ[1]ಯನೆ[1]ಣ್ಣೆಗೊಪ್ಪರಿ
ಗೆಗಳೊಳದ್ದಲಿ ಗಳೆಗಳಲಿ ಸೀ
ರೆಗಳ ಸುತ್ತಲಿಯೆಂದು ಕೈವೀಸಿದನು ಕಲಿ ದ್ರೋಣ ॥ ೩೨

ಬೆಳಗಿದವು ಬೊಂಬಾಳ ದೀವಿಗೆ
ಬಲದೊಳಾನೆಗೆ ಹತ್ತು ರಥಿಕಾ
ವಳಿಗೆ ನಾಲುಕು ಹಯಕೆರಡು ಕಾಲಾಳಿಗೊಂದೊಂದು ।
ಬಲ ಸಮುದ್ರದೊಳೊಗೆದ ವಡಬಾ
ನಳನ ಝಳವೋ ಮೃತ್ಯುವಿನ ದೀ
ವಳಿಗೆಯಿರುಳೋ ತಿಳಿಯಲರಿದೆನೆ ಚಿತ್ರವಾಯ್ತೆಂದ ॥ ೩೩

ಬಗೆಯಲರಿದಿದು ಗರ್ಭ ಬಲಿಯದೆ
ಹಗಲನೀದುದೊ ರಾತ್ರಿ ಕುಡಿಕುಡಿ
ದುಗುಳುತಿರ್ದುವು ತಿಮಿರವನು ಕರದೀಪ್ತಿಕಾಳಿಗಳು ।
ಹೊಗರುಗೆಟ್ಟುದು ಕುಮುದ ಕಮಳದ
ಬಿಗುಹು [2]ಬಿಟ್ಟುದು[2] ಚಕ್ರವಾಕದ
ತಗಹು ಕೆಟ್ಟುದು [3]ಹೇ[3]ಳೆನಲು ರಂಜಿಸಿತು ದೀಪಾಳಿ ॥ ೩೪

ತಿಮಿರವಡಗಿತು ಮನದ ರೋಷದ
ತಿಮಿರವಡಗದ ಮುನ್ನ ಭುಜ ವಿ
ಕ್ರಮದ [1]ವಿತರಣೆ[4]ಯುಳ್ಳಡವಸರವಿದು ನೃಪಾಲರಿಗೆ ।
ನಿಮ ನಿಮಗೆ ಮುಂಕೊಂಡು ವಂ[5]ಶ
ಕ್ರ[2]ಮ ಸಮಾಗತ ಕೀರ್ತಿ ಸತಿಯಲಿ
ಮಮತೆಗಳ ನೆಱೆ ಮಾಡಿಯೆಂದನು ದ್ರೋಣ ನಿಜ ಬಲಕೆ ॥ ೩೫

ಮತ್ತೆ [6]ಹೊಕ್ಕುದು[6] ಭಟರಮಮ ದಿಗು
ಭಿತ್ತಿ [7]ಬಿ[7]ರಿಯಲು ಮೊರೆವ ಭೇರಿಯ
ಕಿತ್ತು ನೆಲ ಹೊಡೆ ಮರಳೆ ಮೊಳಗುವ ಪಟಹ ಡಿಂಡಿಮದ ।
ಹತ್ತು ಸಾವಿರ ನೃಪರು ರಿಪುಗಳ
ಮುತ್ತಿದರು ಮುಸುಕಿದರು ಮೆಯ್ಯಲಿ
ಮೆತ್ತಿದರು ಮೊನೆಗಣೆಗಳನು ಪಾಂಡವರ ಬಲದೊಳಗೆ ॥ ೩೬

---

[1] ಗಳೆ (ತ.ಟ). [2] ಬೀತುದು (ಗ.ದ). [3] ಕೇ (ತ). [4] ಮನ್ನಣೆ (ಕ.ಟ.ತ). [5] ಶೋತ್ತ (ಕ.ಚ). [6] ಕವಿದುದು (ಕ). [7] ಜ (ಗ.ಚ.ನ).

ಅಕಟ ಫಡ ಕುನ್ನಿಗಳಿಗಸುರಾಂ
ತಕನ ಕಪಟ[1]ದ[1] ಮಂತ್ರವೇ ಬಾ
ಧಕವಿದಲ್ಲದೆ ನಿಮಗೆ ಸೋಲುವುದುಂಟೆ ಕುರುಸೇನೆ ।
ಸಕಲ ಸನ್ನಾಹದಲಿ ಯಾದವ
ನಿಕರ ಸಹಿತೀ ಯಿರುಳು ರಣದಲಿ
ಚಕಿತರಾದರೆ ಜೋಡಿಸೆನುತಿದಿರಾದನಾ ದ್ರೋಣ ॥ ೩೭

ತವಕ ತಗ್ಗಿತು ಭಟರ ತಾಳಿಗೆ
[2]ಜವಳಿ[2]ದೆಗೆದುದು ಮನಕೆ ಭೀತಿಯು
ಗವಸಣಿಗೆ ಘಾಡಿಸಿತು ಜಾಳಿಸಿತದಟರಪಸರಣ ।
ಸವೆದ ಶೌರ್ಯದ ಘಾಯ ಘಲ್ಲಿಸಿ
ತವಯುವದ ಮಡಮುರಿವ ಮೋಹರ
ದವನಿಪತಿಗಳ ನಿಲವ ನೋಡಿದನಸುರ ರಿಪು ನಗುತ ॥ ೩೮

ನಿಲ್ಲಿ ಭಯ ಬೇಡಾವ ರಣವಿದು
ತಲ್ಲಣಕೆ ತಡಿವಾಯೆ ದೀವಿಗೆ
[3]ಪಲ್ಲವಿಸಿದರೆ[3] ತಳಿತುದೇ ಭುಜ ಶೌರ್ಯ ಕುರುಬಲಕೆ ।
ಖುಲ್ಲರಾರೋ ಬಲವ ತಿರುಹಿದ
ರಿಲ್ಲಿ ನಿಲಲಂಜಿದರೆನುತ ಕರ
ಪಲ್ಲವವ ನೆಗಹಿದನು ಲಕ್ಷ್ಮೀಕಾಂತ ಕರುಣದಲಿ ॥ ೩೯

ಆವನೊಬ್ಬನ ಮಧುರ ವಚನ ಕೃ
ಪಾವಲೋಕನದಿಂದ ಶತ ಜ
ನ್ಮಾವಳಿಯ [4]ಘನ[4] ದುರಿತ ವಹ್ನಿಯ ಝಳಕೆ ಕಡೆಯಹುದು ।
ದೇವರೀತನ ಲಲಿತ ವಚನ ಸು
ಧಾವಸೇಚನದಿಂದ ಭಟರುರೆ
ಜೀವಿಸುವುವೇನರಿದೆ ಕೇಳ್ ಜನಮೇಜಯ ಕ್ಷಿತಿಪ ॥ * ೪೦

ಹಿಂಗಿದುದು ಭಯ ಕಂಠದ ಸುಸ
ರ್ವಾಂಗದಲಿ ಪಸರಿಸಿತು ಕಾಳಿಗ
ದಂಘವಣೆ ಹೊಗರೇರಿದುದು ವಿಕ್ರಮ ಘಡಾಳಿಸಿತು ।

[1] ಕು (ಗ.ಚ.ತ). [2] ದ್ರವವ (ಗ). [3] ಕೆಲ್ಲೆಸಿದರೆ (ಚ.ಟ.ತ.ನ).
[4] ಭವ (ಗ.ಚ). * ಈ ಪದ್ಯವು (ನ) ಪ್ರತಿಯಲ್ಲಿಲ್ಲ.

ಹೊಂಗಿದರು ಹೊಂಪುಳಿಯ ಪುಳಕದ
ಮುಂಗುಡಿಯ ರೋಮಾಂಚನದ ರಣ
ರಂಗ ಧೀರರು ತಱುಬಿ ನಿಂದರು ಮತ್ತೆ ಕಾಳೆಗವ ॥ ೪೧

ಭಟರು ಬಳಲಿದರಿಂದು ರಣವು
ತ್ಕಟವು ಧೀವಶಿಗಳು ಮಹಾರಥ
ರಟಕಟಿಸುತಿದೆ ಮತ್ತೆ ನಾವಿದನೇನ ಹೇಳುವೆವು ।
ಕುಟಿಲ ಭಾರದ್ವಾಜನಿವನು
ಬ್ಬಟೆಗೆ ಮದ್ದರೆವೆನು ನಿಶಾ ಪರಿ
ಯಟನ ಪಟುಗಳು ಬರಲಿ ಕಾಳೆಗಕೆಂದನಸುರಾರಿ ॥ ೪೨

ಕರಸು ಧರ್ಮಜ ಕಲಿ ಘಟೋತ್ಕಚ
ನಿರುಳು ಬವರಕೆ ನಿಲಲಿ ಸಾತ್ಯಕಿ
ನರ ವೃಕೋದರ ನಕುಲ ಸಹದೇವಾದಿಗಳಿಗರಿದು ।
ಇರುಳು ರಣದಾಯತವನವನೇ
ಪಿರಿದು ಬಲ್ಲನು ಗೆಲುವನೆನೆ ಮುರ
ಹರನ ನೇಮದಲನಿಲ ತನಯನ ತನಯನೈತಂದ ॥ ೪೩

ಜಡಿವ ಪಿರಿಯುಬ್ಬಣದ ಹೆಚ್ಚಿದ
ಮುಡುಹುಗಳ ಮುರಿದಲೆಯ ಚರಣದ
ತೊಡರ [1]ಮೊ[1]ಳಗಿನ ಬಾವುಲಿ[2]ಗಳಲಿ ಘಣಘಣ ಧ್ವನಿಯ[2] ।
ನಿಡಿಯೊಡಲ ಮುರಿಮೀಸೆಗಳ ಕೆಂ
ಪಡರ್ದ ಕಂಗಳ ಹೊಳೆವ ದಾಡೆಯ
ದಟಗ ದಾನವನವನಿ ಹೆಜ್ಜೆಗೆ ನೆಗ್ಗಲೈತಂದ ॥ ೪೪

ಏನು ಧರ್ಮಜ ಕರಸಿದೈ ಕುರು
ಸೇನೆ [3]ಮಲೆತುದೆ[3] ಬಿಡು ಬಿಡಾ ತಡ
ವೇನು ತಾ ವೀಳೆಯವನೆನುತೆಡಗಯ್ಯನರಳಿಚುತ ।
ದಾನವಾಮರರೊಳಗೆ ನಿನ್ನಯ
ಸೂನುವಿಗೆ ಸರಿಯಿಲ್ಲೆನಿಸಿ [4]ನಿ[4]ಲ
ಲಾನು ಬಲ್ಲೆನು ನೋಡೆನುತ ಬಿದಿರಿದನು ಖಂಡೆಯವ ॥ ೪೫

1 ಬೆ (ಕ). 2 ಯ ಝಣ ಝಣ ಝಣಸ್ವನದ (ಗ.ಚ). 3 ಯಾಂತುದೆ (ಕ.ಗ). 4 ಗೆ (ಗ.ಟ.ತ).

ಜಡಿದು ಝೊಂಪಿಸಿ ವೀಳೆಯವ ಕೊಂ
ಡೆಡದ ಕಯ್ಯಿಂಪೆಱಗಿ ಮುದಮುಖ
ನೆಡಬಲನ ನೋಡಿದರೆ ರಕ್ಕಸ ಕೋಟಿ ಜೀಯೆನುತ |
ಸಿಡಿಲ ಸೆಱೆ ಬಿಟ್ಟಂತೆ ಭುಜವನು
ಹೊಡೆದು ಮುಂಚಿತು ದೈತ್ಯಬಲ ವುಲಿ
ದಡಿಯಿಡಲು ಮೇಲುಸುರು ಮಸಗಿತು ಫಣಿಪ ಕಮಠರಿಗೆ || ೪೬

ಕಾಳರಾತ್ರಿಯ ಕಟಕವೋ ಮೇಣ್
ಕಾಲರುದ್ರನ ಪಡೆಯೊ ದಾನವ
ನಾಳಿನಗ್ಗಳಿಕೆಗಳ ಬಣ್ಣಿಸಬಲ್ಲ ಕವಿಯಾರು |
ಆಳ ಬೋಳೈಸಿದನು ಕಪ್ಪುರ
ವೀಳೆಯವ ಹಾಯ್ಕಿದನು ಲೋಹದ
ಗಾಲಿ ಘೀಳಿಡೆ ರಥವನೇಱಿದನನಿಲ ಸುತ ಸೂನು || ೪೭

ಸಾಲು ಮಿಗೆ ಮೋಹರದೊಳಗೆ ಬೊಂ
ಬಾಳ ದೀವಿಗೆ ಬೆಳಗಿದವು ಶರ
ಜಾಳ ದೀಧಿತಿ ತೊಳಗಿದವು ಧನುರ್ಧರರ ಕೈಗಳಲಿ |
ಬಾಳ ಹೊಳಹನು ಜಱೆದು ದಾಡೆಯ
ಥಾಳ ಮಿಗೆ ಗಜಗಲಿಸೆ ದಾನವ
ಕಾಳೆಗಕ್ಕನುವಾಗಿ ನಿಂದನು ಬಿಗಿದ ಬಿಲುವೆಗೆದು || ೪೮

ಹಯಕೆ ಹಯ ರಥ ರಥಕೆ ಪಯದಳ
ಪಯದಳಕೆ ಗಜಸೇನೆ ಗಜಸೇ
ನೆಯಲಿ ಭಾ[1]ಷೆ[1]ಯ ಭಟರು ಭಾ[2]ಷೆ[2]ಯ ಭಟರ ಗಡಣದಲಿ |
ನಿಯತ ಚಾತುರ್ಬಲವೆರಡು ನಿ
ರ್ಭಯದಲೊದಗಿತು ಮಕುಟ ಮಸ್ತಕ
ಮಯ ಮಹೀತಳವೆನಲು ಹಳಚಿದು ಹೊಯ್ದುದುಭಯಬಲ ||* ೪೯

---

[1] ರಿ (ಗ.ಟ.ದ). [2] ರಿ (ಗ.ಟ.ದ).

* ೪೯ನೆಯ ಪದ್ಯವಾದಮೇಲೆ (ಗ) ಪ್ರತಿಯಲ್ಲಿ ಕೆಳಗಿನ ಪದ್ಯ ಹೆಚ್ಚಾಗಿದೆ.

ಹರನು ನೆಟ್ಟನೆ ಮುನಿದು ತ್ರಿಪುರವ
ನುರುಹುವಂದಿನ ನೊಸಲಗಣ್ಣಿಂ
ದುರವಣಿಸಲಲ್ಲಿಂದ ಸಡಲಿದ ಕಿಡಿಗಳೆಲ್ಲವನು |
ಪರಗಣಿಸೆ ಬೊಂಬಾಳ ದೀವಿಗೆ
ಯುರವಣಿಸಿದವು ಭೀಮಸೇನನ
ಹಿರಿಯಮಗ ಸಮರವನು ಹೊಕ್ಕನು ರಣಭಯಂಕರನು ||

ಕೌರವನ ತಳತಂತ್ರ ಕಟಕಾ
ಚಾರಿಯನ ಕಾಹಿನಲಿ ರಿಪು ಪರಿ
ವಾರ ನಿಂದುದು ಭೀಮಸೇನನ ಸುತನ ಬಳಸಿನಲಿ ।
ಆರಿದನು ಜಗ ನಡುಗೆ ಬೊಬ್ಬೆಯ
ಭಾರದಲಿ ವೈರಿಗಳ ಬಲ ಸಂ
ಹಾರ ರುದ್ರನು ಕಲಿ ಘಟೋತ್ಕಚ ಹೊಕ್ಕನಾಹವವ ॥ ೫೦

ಬೆಳೆದವೋ ಕೈ ಕಾಲು ನೀಲಾ
ಚಲಕೆ ಹೇಳೆನೆ ಮುಗಿಲ ತುಡುಕುವ
ತಲೆಯ [1]ತೋಕೆ[1]ಯ ತೋರಹತ್ತನ ಕಂಡು ಕುರುಸೇನೆ ।
ಕಳವಳಿಸಿದರು ಕಾಯದಲಿ ಕ
ಕ್ಕುಲಿತೆಗಾಱರು ಕೈದೆಗೆದರ
ಗ್ಗಳೆಯನುಱುಬೆಗೆ ಬೀಳುಕೊಟ್ಟರು ಭಟರು ಸೈರಣೆಯ ॥ ೫೧

ಏನ ಹೇಳುವೆನವರ ರಣ ಸು
ಮ್ಮಾನವನು ನಮ್ಮವರ ಮೊಗದು
ಮ್ಮಾನವನು ಪ್ರಥಮ ಪ್ರವೇಶದೊಳಾದುದೀ ಹದನು ।
ದಾನವರ ಧಟ್ಟಣೆಗೆ ನಿಲುವರ
ನಾನು ಕಾಣೆನು ದಿಟ್ಟತನದಲಿ
ತಾನೆ ನಿಂದನು ಕೌರವೇಂದ್ರನು [2]ಸಕಲ ಬಲ[2] ಸಹಿತ ॥ ೫೨

ಘಡ ನಿಶಾಚರ ಹೋಗು [3]ಹೋಗಳ[3]
ವಡದು ಕರೆ ನಿಮ್ಮಯ್ಯನನು ಹೇ
ರೊಡಲ ತೋಱಿಸಿ ಬಲವ ಬೆದಱಿಸಲ[4]ಗ್ಗಳಿಕೆಯಹುದೇ[1] ।
ಮಿಡುಕುವರೆ ಕರೆ ನಿಮ್ಮ ತೆತ್ತಿಗ
[5]ನ[5]ಡಗಲೇತಕೆ ಕೃಷ್ಣ ನಿಮಗಿ
ನ್ನೊಡಲ ಬಳಿನೆಳಲವ ಸಹಿತ ಬಾಯೆಂದು ಗರ್ಜಿಸಿದ ॥ ೫೩

ಮರುಳು ಕೌರವ ಜಂಗಮ ಸ್ಥಾ
ವರದ ದೇಹಕೆ ನೆಳಲಹುದು ದಿನ
ಕರನ ದೇಹಕೆ ನೆಳಲು ಶ್ರುತವೋ ದೃಷ್ಟವೋ ನಿನಗೆ ।

---

[1] ತೆಕ್ಕೆ (ಕ), ಜೋಕೆ (ಟ). [2] ರಾಜದಳ (ಟ.ತ.ನ). [3] ನಿನಗಳ (ಟ.ತ.ನ).
[4] ಗ್ಗಳೆಯನಹುದೊ (ಚ). [5] ರ (ಗ).

ಸುರ ನಿಶಾಚರ ಮರ್ತ್ಯರೊಳು ತಾ
ನೆರವ ಬಯಸುವುದುಂಟೆ ಹರಿಯಂ
ತಿರಲಿ ಚೈತನ್ಯಾತ್ಮನಾತನ ಮಾ[1]ತದೇಕೆಂದ[1] ॥ ೫೪

ಹೆಣನನಱಸುತ ರಕುತ ಪಾನಕೆ
ಸೆಣಸಿ ಶಾಕಿನಿ ಢಾಕಿನಿಯರೊಳು
ಹೆಣಗಿ ಗೆಲುವುದೆಯಾಯ್ತು ದಾನವ ವಿದ್ಯೆ ಜಗವಱಿಯೆ ।
ರಣದೊಳಗ್ಗದ ಕೈದುಕಾಱರ
ಕೆಣಕಿ ಗೆಲುವುದ ಕೇಳಿದಱಿಯೆವು
ಹೆಣದಿನಿಹಿಗಳು ಹೇವ ಮಾರಿಗಳೆಂದನಾ ಭೂಪ ॥ ೫೫

ಬಯ್ಯಲಱಿವೆ ದುರುಕ್ತಿ ಶರದಲಿ
ಮೆಯ್ಯನೆಸುವೆಯೊ ಮೇಣು ಮಾರ್ಗಣ
ಕಯ್ಯಲುಂಟೇ ನಿನಗೆ ಸಂಬಳವೇನು ಸಮರದಲಿ ।
ಅಯ್ಯನನು ಕರೆಯೆಂಬ ಬಾಯನು
ಕೊಯ್ಯಬೇಡಾ ಸಿಂಹ ಕೇಸರ
ದುಯ್ಯಲಾಡುವ ಗಜವ ನೋಡೆಂದುಱುಬಿದನು ನೃಪನ ॥ ೫೬

ಎಸುತ ಹೊಕ್ಕನು ದಳ್ಳಿಸುವ ಹೊಸ
ಮಸೆಯ ಕಣೆ ಮುಕ್ಕುಱುಕಿದವು ನಿ
ಪ್ಪಸರದಲಿ ನೃಪನೆಚ್ಚು ಕಾಣನು ಹಱಿವನಾ ಕಣೆಗೆ ।
ಕುಸುರಿದಱಿದವು ಜೋಡು ಸೀಸಕ
ಬೆಸುಗೆಯೊಡೆದುದು ಘಾಯದಲಿ ಮೈ
ಬಸಿಯೆ ಬಿರಿದುದು ಶೌರ್ಯ [2]ಬಿಗಿ[2]ದುದು ಭೀತಿ ಭೂಪತಿಗೆ ॥ ೫೭

ಅಕಟ ದೊರೆ[3]ಯೋ ಸಿಕ್ಕಿದನು ಪಾ
ತಕರು ರಥಿಕರು ಶಿವ ಹಿಡಿಂಬಾ
ರ್ಭಕನಿಗೊಪ್ಪಿ[3]ಸಿಕೊಟ್ಟು ಕೊಂದರು ದ್ರೋಣ ಕೃಪರೆನುತ ।

---

1 ತೆ ನಿನಗೆಂದ (ಕ ಗ.ಚ). 2 ಬಲಿ (ಗ.ಚ). 3 ಸಿಕ್ಕಿದನು ಕಟಕಟ ಪಾತಕರು ರಥಿಕರು ನಾಯಕಿತ್ತಿಯ ನೃಪನ ನೊಪ್ಪಿಸಿ (ಕ), ಯೋ ಸಿಕ್ಕಿದನು ನಾಯಕರು ಮಡಿದರೆ ಶಿವಮಹಾಪಾತಕನ ನೊಪ್ಪಿಸಿ (ಗ), ರಿಪುನಿಕರ ವೀಗಳೆಕೊಲುವ ರಿಂತರ್ಭಕನ ನಿಂತೊಪ್ಪಿಸಿ (ಚ), ಸಿಕ್ಕಿದನು ಕರೆ ನಾಯಕರು ಸರಿದರೆ ಶಿವಮಹಾ ಪಾತಕನನೊಪ್ಪಿಸಿ (ಟ), ಸಿಲುಕಿದನಲಾ ಪಾತಕಕೆ ಸಲ್ಲರೆ ಪಾಪಿಗಳು ಬಲುವಿಕಟ ರಾಕ್ಷಸಗೊಪ್ಪುಗೊಟ್ಟರೆ (ದ).

[1]ಸಕಲ ಪರಿಚಾರಕರು ಮಂತ್ರಿ
ಪ್ರ[1]ಕರವೊರಲಲು ಕೇಳಿ ಬದ್ಧ
ಭ್ರುಕುಟಿ ಭೀಷಣ ಮುಖರು ಮಸಗಿತು ದೈತ್ಯ ಬಲ ಜಲಧಿ ‖ ೫೮

ಬಕನ ಮಕ್ಕಳು ಜಟನ ಕಿಮ್ಮೀ
ರಕನ ಸುತರು ಹಿಡಿಂಬ ತನುಜರು
ವೃಕ ಜರಾಸಂಧಾತ್ಮಜರು ಶಿಶುಪಾಲ ನಂದನರು ।
ಸಕಲ ಸನ್ನಾಹದಲಿ ದೈತ್ಯ
ಪ್ರಕರ ಹೊಕ್ಕುದು ರಾಯ ರಥ ಪಾ
ಲಕರು [2]ಕವಿದರು[2] ತುಡುಕಿದರು ರಣವನು ಘಟೋತ್ಕಚನ ‖ ೫೯

ಕೆಣಕಿದರಲಾ ರಣವ ರಕ್ಕಸ
ಬಣಗುಗಳು ಮುಝು ಪೂತು ಸಮರಾಂ
ಗಣದೊಳಗೆ ನಾವಾವ ಸದರವೊ ನೋಡಿರೈ ಭಟರು ।
ಸೆಣಸು ಗಡ ನಮ್ಮೊಡನೆ ಸಲೆ [3]ಟೆಂ[3]
ಠಣಿಸುವರು ಗಡ ಬವರಕೋಸುಗ
ಹೊಣಕೆ ಗಡ ನಮ್ಮೊಡನೆನುತ ಸಾರಥಿಯ ಕೈವೊಯ್ದು ‖ ೬೦

ಹೆಸರುಗೊಂಡರೆ ಕವಿಗಳಿಗೆ ಕ
ರ್ಕಶರು ರಕ್ಕಸರೆಂಬ ಹೆಸರಿ[4]ದು[4]
ನುಸಿಗಳೊಳಗಾಶ್ರಯಿಸಿ [5]ಕೆಟ್ಟುದು[5] ಶಿವ ಶಿವಾಯೆನುತ ।
ಹೊಸ ಮಸೆಯ ಹೊಗರಂಬುಗಳನೆ
ಬ್ಬಿಸಿದನುಬ್ಬಿಸಿದನು ವಿರೋಧಿಗ
ಳಸು ಸಮೀರಣನಿಂದ ನಿಜ ಭುಜ ವಿಕ್ರಮಾನಳನ ‖ ೬೧

ಒಡಲೀಯದೆ ಸದರಗೊಡುತ ವಿ
ಭಾಡಿಸುತ [6]ಮೇಲಿ[6]ಕ್ಕಿದರೆ ಕೈ
ಮಾಡಿದರೆ ಶರಹತಿಗೆ ದೇಹವ ಕೊಟ್ಟು [7]ಸೈರಿ[7]ಸುತ ।
ಖೇಡತನವನು ಬಿಡಿಸಿ ಸಲೆ ಕೊಂ
ಡಾಡಿ ಕಾದಿದನಸುರ ಜಾತಿಯೊ
ಳೋಡೆ ಪರಿಭವ ತನ್ನದೆಂಬ [8]ಪದಸ್ಥತನದಿಂದ[8] ‖ * ೬೨

[1] ಚಕಿತ ತನುಗಳು ನೃಪನ ಸಾರಥಿ ನಿ (ಕ.ಚ.ದ). [2] ತಜುಬಿತು (ಕ.ಗ). [3] ವೆಂ (ಗ.ಚ). [4] ನ (ಕ.ಗ.ಟ). [5] ಕೆಟ್ಟರು (ದ). [6] ಮೈಯಿ (ಕ). [7] ಮನ್ನಿ (ಚ.ತ.ನ). [8] ಕೀರ್ತಿಭಯದಿಂದ (ದ). * ಈ ಪದ್ಯವು (ಟ) ಪ್ರತಿಯಲ್ಲಿಲ್ಲ.

ಎಸುಗೆಯೊಳ್ಳಿತಲಾಯುಧನ ಲಂ
[1]ಬು[1]ಸನ ಪರಿ ತಪ್ಪಲ್ಲ ತಪ್ಪ
ಲ್ಲಸುರನಹೆಯೋ ಜಾಗು ಕಿಮ್ಮೀರಾತ್ಮಜಾ ಯೆನುತ ।
ಅಸಿ ಪರಶು ಪಟ್ಟಿಸ ಮುಸುಂಡಿ
ಪ್ರಸರ ಧಾರಾ[2]ಪಾತ[2]ದಲಿ ಮೈ
ಬಸಿಯೆ ರಕುತದ [3]ಸಾರ ಸಾಲಿಡೆ ಬಲದೊಳೊಳಹೊಕ್ಕು[3] ॥ ೬೩

ಉರು ತಿಮಿಂಗಿಳನಬುಧಿಯಲಿ ಡಾ
ವರಿಸುವುದು ಹುಲುಮೀ[4]ನಿನಂತಿರ
ಲರಸ ಹೇಳುವುದೇನು ಮೊಗೆದನು ದೈತ್ಯ ಜಲನಿಧಿಯ[4] ।
ಅರಿದ ಕೊರಳಿನ ಬಸಿವ ಬಂಬಲು
ಗರುಳ ಜರಿವ ಕಪಾಲದೊಗುನೆ
ತ್ತರ [5]ರಣಾವನಿ[5] ಕಱೆವುತಿರ್ದುದು ರೌದ್ರಮಯ ರಸವ ॥ ೬೪

ಜಾಗು ದೈತ್ಯರ ರಭಸದಲಿ ಲೇ
ಸಾಗಿ ಕಾದಿದಿರೀಸು ನಮ್ಮಲಿ
ತಾಗಿ ನಿಂದವರಾರು ಕೆಚ್ಚುಳ್ಳವರು ಕಲಿತನದ ।
ಆಗಲಿನ್ನಾವುದು ನಮಗೆ ಕೈ
ಲಾಗು ನಿಮ್ಮಸುಗಳು ಶರೀರವ
ನೀಗಿ ಕಳೆಯಲಿ ಎಂದು ಬೊಬ್ಬಿಱಿದೆಚ್ಚನತಿರಥರ ॥ ೬೫

ಸಿಡಿಲು ಮೊರೆದರೆ ಸರ್ಪನಂಜುವು
ದಡಗುವನೆ ಗರುಡನು ವೃಥಾ ಕೆಡೆ
ನುಡಿಯ ನುಡಿದರೆ ಧಿಟ್ಟನೆಂಬರೆ [6]ವೀರ[6]ರಾದವರು ।
ಘಡ ಘಡೆನುತ ಬಕಾಸುರನ ಮಗ
ನಡಸಿದನು ಕೂರಂಬನಾತನ
ಕಡುಹ ಹೊಗಳುತ ಹೊಕ್ಕು ಪಿಡಿದನು [7]ಸೀಳಿದನು[7] ಖಳನ ॥ ೬೬

ರಥಚಯವ ನುಗ್ಗೊತ್ತಿದನು ಸಾ
ರಥಿಗಳನು ಸೀಳಿದನು ಸುಮಹಾ
ರಥರ ಬಿಂಕದ ಬಿಗುಹ ಮುಱಿದನು ಹೊಕ್ಕು ಬೀದಿಯಲಿ ।

---

[1] ಬ (ಕ.ಗ.ಚ). [2] ಸಾರ (ಕ.ಗ ಚ). [3] ಧಾರೆಯಲಿ ರಣದೊಳಗೆ ನಡೆತಂದ (ದ). [4] ನದಂತರವರಿನದಂಗೈಸಿದನು ವೊಗೆದನು ದೈತ್ಯ ಬಲ ನಿಧಿಯ (ಕ). [5] ಸರಿಯಸಾರಥಿ (ಕ). [6] ಗರುವ (ಕ.ಗ ಚ). [7] ಬೀಸಿದನು (ಕ), ಬಿಗಿದನಾ (ಗ).

ಶಿಥಿಲವಾಯಿತು ವೈರಿ ಬಲವತಿ
ಮಥನವಾಯಿತು ದೈತ್ಯನೊಳಿಗ
ಪೃಥುವಿ ಲಘುತರವಾಯ್ತು ಫಣಿಪನ ಕೊರಳು ಸೈನಿಮಿರೆ ‖ ೬೭

ಬರಸಿದನು ರಣದಲಿ ಹಿಡಿಂಬಾ
ಸುರನ ಮಕ್ಕಳ ಚೈದ್ಯ ಮಾಗಧ
ನರಕ ಕಿರ್ಮ್ಮೀರಕ ಜಟಾಸುರ ಸೂನು ಸಂತತಿಯು ।
ಬರಲಿ ಕರ್ಣ ದ್ರೋಣರುಳಿದೀ
ಜರಡ ಜೋಡಿಸಬೇಡ ಭೀಮನ
ನರನ ಬಯಸುವರೆನ್ನೊಡನೆ ಕೈಮಾಡ [1]ಹೇಳೆಂದ[1] ‖ ೬೮

ಎನಲು ಕವಿದುದು ಸೇನೆ ಕಂಗನೆ
ಗನಲಿ ಕರ್ಣ ದ್ರೋಣರಿಗೆ ನೀ
ನೆನಿತಱವ ಘಡ ಬಾಯಿಬಡಿಕನು ಭೀಮ ಸುತನೆನುತ ।
ತನತನಗೆ ಕಾಲಾಳು ಮೇಲಾ
ಳನುಪಮಿತರೌಕಿದರು ಚಾಪ
ಧ್ವನಿಯೊಳಗೆ ನೆಱೆ ಮುಳುಗೆ ಬಹುವಿಧ ವಾದ್ಯ ನಿರ್ಘೋಷ ‖ ೬೯

ಆಳಹಿರಿ ನಿಮಗಂಜುವೆನು ಕಾ
ಲಾಳ ಹೊಯ್ಯೆನು ಕುದುರೆಕಾಱರು
ಮೇಲುವಾಯಲಿ ರಥಿಕರೊಡೆಹಾಯಿಸಲಿ ತೇರುಗಳ ।
ತೂಳಿಸಲಿ ಗಜದಳವನವರಿಗೆ
ಕೋಲ ತೊಡಚುವನಲ್ಲ ನೆಱೆ ಹೀ
ಹಾಳಿಯುಳ್ಳರೆ ಬರಲಿ ಕರ್ಣ ದ್ರೋಣ ಕೃಪರೆನುತ ‖ ೭೦

ಹಲಬರಸುರರು ಮಡಿದರಿವನ
ಗ್ಗಳೆಯನಿರುಳಿನ ಬವರದಾಯತ
ತಿಳಿವುದೀತಂಗೆನುತ[2]ಲಾ ದ್ರೋಣಾದಿ ನಾಯಕರು[2] ।
ಅಳುಕಿದರು ಬಳಿಕೇನು ಭಕುತಿಯ
ಲೊಲಿಸಿದರಲೈ ಪಾಂಡವರು ಯದು
ಕುಲ ಲಲಾಮನನಮಳ ಗದುಗಿನ ವೀರ ನರಯಣನ ‖ ೭೧

ಹದಿನೈದನೆಯ ಸಂಧಿ ಮುಗಿದುದು

[1] ಲರಿದೆಂದ (ತ), ಬೇಕೆಂದ (ಗ.ಚ), ಡಿ ನೀವೆಂದ (ದ). [2] ಲಿರಲಾಗು ರುಕೃಪಾದಿಗಳು (ಕ.ಗ).

ಹದಿನಾರನೆಯ ಸಂಧಿ

ಸೂಚನೆ॥ ಚಂಡಬಲ ಕುರುಪತಿಗೆ ಮಲೆವರ
ಗಂಡನಿರುಳಿನ ಕಾಳೆಗದೊಳು
ದ್ದಂಡ ಭಟ ಕಲಿ ಕರ್ಣ [1] ಕೊಂದನು [1] ಭೀಮ ನಂದನನ ॥

ಕೇಳು ಧೃತರಾಷ್ಟ್ರಾವನಿಪ ದೊರೆ
ಯಾಳನಟಿಸುತ [2] ಹೊಕ್ಕು [2] ಸೂಟಿಯೊ
ಳಾಳು ಕುದುರೆಯ ಥಟ್ಟನಿಬ್ಬಗಿ[3]ಮಾಡಿ[3] ದಳವುಳಿಸಿ ।
ಕೋಲ ತೊಡಚ್ಚೈ ಕರ್ಣ ಕುರುಭೂ
ಪಾಲ ಕೈದುವ ಹಿಡಿ ಕೃಪಾದಿಗ
ಳೇಳಿ ಸಮ್ಮುಖವಾಗೆನುತ [4]ಕೈಮಾಡಿ[4] ಬೊಬ್ಬಿರಿದ ॥ ೧

ಚೆಲ್ಲಿತರಿ ಬಲ ಜಲಧಿ ಭಟರ
ಲ್ಲಲ್ಲಿ ಮುಕ್ಕುರುಕಿದರು ಸಬಳದ
ಸೆಲ್ಲಹದ ತೋಮರದ ಚಕ್ರದ ಸರಿಯ ಸೈಗರೆದು ।
ಘಲ್ಲಿಸಿದವಾನೆಗಳು ತೇರಿನ
ಬಿಲ್ಲವರು ತುಡುಕಿದರು ಕಂಬುಗೆ
ಯಲ್ಲಿ ಖುರ ಕುಣಿದಾಡೆ ಹೊಕ್ಕರು ರಾಯ ರಾವುತರು ॥ ೨

ಎಡಬಲದಿ ಹಿಂದಿದಿರಿನಲಿ ಕೆಲ
ಕಡೆಯ ದಿಕ್ಕಿನೊಳೌಕಿದರು ಬಲು
ಗಡಲ ಕಡೆಹದ ಗಿರಿಯನಬುಧಿಯ ತೆರೆಗಳೊದೆವಂತೆ ।
ಕೊಡಹಿದರೆ ಕಟ್ಟಿರುಹೆಗಳು ಬೆಂ
ಬಿಡದೆ ಭುಜಗನನಳಲಿಸುವವ್ರೋ
ಲಡಸಿ ತಲೆ[5]ಯೊತ್ತಿ[5]ದರು ಬೀಳುವ ಹೆಣನನೊಡಮೆಟ್ಟಿ ॥ ೩

ಹೊಕ್ಕ ಸುಭಟರು ಮರಳಿದಿರಿ ಖಳ
ಸಿಕ್ಕಿದನು ಸಿಕ್ಕಿದನು ಚಲಿಸುವ
ಚುಕ್ಕಿಗರ ಹೊಯ್[6] ಬೀಳಗುತ್ತೆನುತರಸನುಬ್ಬರಿಸೆ ।

---

[1] ಮುರಿದನು (ಕ), ಗೆಲಿದನು (ದ). [2] ಬಿಟ್ಟು (ಕ.ಟ). [3] ಗಳೆದು (ಕ.ನ). [4] ಹೊಕ್ಕಿಚ್ಚು (ಕ.ನ). [5] ಯಿಕ್ಕಿ (ಕ.ಗ).

ಹೊಕ್ಕು ತಿವಿದರು ನೀಡಿ ಹರಿಗೆಯು
ನಿಕ್ಕಿ ನಿಂದರು ತಮತಮಗೆ ಮೇ
ಲಿಕ್ಕಿದರು ತೆರೆ ಮುಱಿಯೆ ಬಳಿದೆರೆ ಮುಸಗಿ ಕವಿವಂತೆ ॥ ೪

ಅಗಡು ದಾನವನಿವನು ಕಡ್ಡಿಗೆ
ಬಗೆವನೇ ಸಾಗರವನಱ[1]ವ
ಟ್ಟಿ[1]ಗೆಯನಿಟ್ಟರೆ ವಡಬನಲ್ಲಾ ನೀರ ಕುಡಿವವನು ।
ಹೊಗೆದುದೈ ಹೆಚ್ಚಾಳುಗಳ ನಗೆ
ಮೊಗವು ಮೋಡಾಮೋಡಿಯಲಿ ಕೈ
ಮುಗುಚಿ ಕಳೆದನು ನಿಮಿಷದಲಿ ಹೇರಾಳ ರಾಶಿಗಳ ॥ ೫

ಕೆಲರ ನುಂಗಿದನೊದೆದು ಕೊಂದನು
ಕೆಲ[2]ಬರನು[2] ಹೊಱಕೈಯ್ಯ ಹೊಯಿಲಲಿ
ಕೆಲಬರನು ಧನುವಿನಲಿ ಗದೆಯಲಿ ಹೊಯ್ದು ಕೆಲಕೆಲರ ।
ಕಲಕಿದನು ಬಲ ಜಲಧಿಯನು ಮೇ
ಲುಲಿದು ಕವಿದುದು ಮತ್ತೆ ಹೆಣನನು
ತುಳಿದು ಮು[3]ಗ್ಗಿ[3]ತು ಮೇಲೆ ಬಿದ್ದುದು ಮುಸುಕಿತರಿ ಭಟನ ॥ ೬

ಸೂತುರೇ ಕುರು ಸೈ[4]ನಿ[4]ಕವಸಂ
ಖ್ಯಾತವೆಂದಿಗೆ ಸವೆವುದೋ ಕೈ
ಸೋತವೇ ಹರ ಕೊಲುವೆನೆನುತಮುರಾರಿ ಚಿಂತಿಸಿದ ।
ಈತಗಳಿಗಿದು ಮದ್ದೆನುತ ಮಾ
ಯಾತಿಶಯ ಯುದ್ಧದಲಿ ಬಲಸಂ
ಘಾತವನು ಪದಱಿಸಿದನದನೇವಣ್ಣಿಸುವೆನೆಂದ ॥ ೭

ಮಾಯದಲಿ ಹುಲಿಯಾಗಿ ಗರ್ಜಿಸಿ
ಹಾಯಿದನು ಕಲಿ ಸಿಂಹವಾಗಿ ಗ
ದಾಯುಧದಲಪ್ಪಳಿಸಿದನು ಭೈರವನ ರೂಪಾಗಿ ।
ಬಾಯಲಡಸಿದನಹಿತರನು ದಂ
ಡಾಯುಧದ ನಿಲವಿನಲಿ ಸುಭಟರ
ದಾಯುಗೆಡಿಸಿದನೊಂದು ನಿಮಿಷದೊಳೊರಸಿದನು ಬಲವ ॥ ೮

---

1 ಪಂಟಿ (ಕ.ಗ). 2 ಬಲನ (ಕ.ಗ), ಕೆಲರ (ದ). 3 ತ್ತಿ (ಕ.ಗ).
4 ನ್ಯ (ಕ).

ಬೀಳಹೊಯ್ದನು ಬಿರುದರನು ಬಿಱು
ಗಾಳಿಯಾಗಿ ವರೂಥ ಚಯವನು
ಕಾಳುಕಿಚ್ಚಾಗುರುಹಿದನು ಫಣಿಯಾಗಿ ತುಡುಕಿದನು ।
ಮೇಲುಗವಿದನು ಜಲಧಿಯಾಗಿ ನೃ
ಪಾಲ ನಿಕರದೊಳುರುಳಿದನು ಗಿರಿ
ಜಾಳವಾಗಿ ಘಟೋತ್ಕಚನು ಘಲ್ಲಿಸಿದ[1]ನತಿರಥರ[1] ॥ ೯

ಎಱಗಿದನು ಸಿಡಿಲಾಗಿ ಕಂಗ[2]ಳೊ
ಳ[2]ಱುಕಿದನು ಮಿಂಚಾಗಿ ಮಳೆಯನು
ಕಱೆದು ನಾದಿದನಾತಪತ್ರ ತನುತ್ರ ಸೀಸಕವ ।
ತುಱುಕಿದನು ಹೊಗೆಯಾಗಿ ಮಿಗೆ ಬೊ
ಬ್ಬಿಱಿದನೊಂದೆಡೆಯಲ್ಲಿ ಸುಭಟರ
ನೊಱಲಿಸಿದನೊಂದೆಡೆಯಲೇನೆಂಬೆನು ಮಹಾ ರಣವ ॥ ೧೦

ಸುರಿದ ಕರುಳ್ಗಳ ಸಿಡಿದ ಹಲುಗಳ
ಜರಿದ ತಲೆಗಳ ಹಾಯ್ದ ಮೂಳೆಯ
ಹಱಿದ ನರವಿನ ಬಿಗಿದ ಹುಬ್ಬಿನ ಬಿಟ್ಟ ಕಣ್ಣುಗಳ ।
ಮುಱಿದ ಗೋಣಿನ ಬಸಿವ ತೊರಳೆಯ
ಹರಿವ ರಕುತದ ತಳಿತ ಖಂಡದ
ಬಿರಿದ ಬಸುಱಿನ ರೌರವದ ರಣಭೂಮಿ ರಂಜಿಸಿತು ॥ ೧೧

ಗರುಡನುಬ್ಬಟೆಗಹಿ ನಿಕರ ಜ
ಜ್ಝರಿತವಾದವೊಲಿವನ ಕಡು ನಿ
ಬ್ಬರದ ಧಾಳಿಗೆ [3]ಧೈರ್ಯ[3]ಗೆಟ್ಟುದು ಕೂಡೆ ಕುರುಸೇನೆ ।
ಹೊರಳಿಯೊಡೆದರು ಭಟರು ಸಿಡಿದರು
ಜರುಗಿದರು ಜವಗುಂದಿದರು ಮಡ
ಮುರಿ[1]ದು[1] ಬಿರುದರು ತಣಿದುದೈ ಪರಿಭವದ ಸೂಱೆಯಲಿ ॥ ೧೨

ಧಾತುಗೆಟ್ಟುದು ದೊದ್ದೆಯೆಂಬೇ
ಭೂತಳಾಧಿಪ ಬಗೆಯದಿರು ತೆಗೆ
ಮಾತು ಹುಸಿ ಮರಳಿದರು ನಿನ್ನಯ ಪಟ್ಟದಾನೆಗಳು ।

---

1 ನರಿಬಲವ (ಕ.ಗ.ಟ.), ನಾರಥಪ (ದ). 2 ಳನಿ (ಗ.ಟ.ತ.ದ).
3 ಧಾತು (ಗ.ಚ). 4 ಯೆ (ಕ.ಗ.ಚ).

ಭೀತಿಗೊಂಡನು ದ್ರೋಣ ಸೋಲಕೆ
[1]ಕೇ[1]ತುವಾದನು ಶಲ್ಯನಪಜಯ
ಮಾತೃಕಾಕ್ಷರನಾದನಶ್ವತ್ಥಾಮನಿಂದಿನಲಿ ॥ ೧೩

ಇವನ ಧಾಳಿಯನಿವನ ಧೈರ್ಯವ
ನಿವನ ಹೂಣಿಗತನವನಿವನಾ
ಹವದ [2]ಹೊಱಗೆ[2]ಯನಿವನ ಭಾರಿಯ ವೆಗ್ಗಳೆಯತನವ ।
ದಿವಿಜರಾನಲು ನೂಕದಿದು [3]ನ
ಮ್ಮ[3]ವರ ಪಾಡೇನ್ನೈ ಪಲಾಯನ
ತವನಿಧಿಯಲೇ ನಿಮ್ಮ ಬಲ ಧೃತರಾಷ್ಟ್ರ ಕೇಳೆಂದ ॥ ೧೪

ಹಾಯಿಕಲಿ ಟೆಕ್ಕೆಯವ [4]ಭಟ್ಟರ[4]
ಬಾಯ ಹೊಯ್[6] [5]ಗಡಬಡೆಯ ಹೊತ್ತ
ಲ್ಲಾ[5]ಯುಧವನೀಡಾಡು ಕೊಯ್[6] ಕೊಯ್[6] ಜೋಡು ಹೊಲಿಗೆಗಳ ।
ರಾಯ ಕೊಂದರೆ ಕೊಲಲಿ ಸುಕೃತವು
ಬೀಯವಾಗಲಿ ನಾವು ರಕ್ಕಸ
ನಾಯ ಕಯ್ಯಲಿ ಸಾಯೆವೆನುತೊಡೆಮುರಿದರತಿರಥರು ॥ ೧೫

ಇಳಿದ ಕುದುರೆಗೆ ಬಿಸುಟ ರಥ ಸಂ
ಕುಳಕೆ ಹಾಯ್ಕಿದ ಟೆಕ್ಕೆಯಕೆ ಕೈ
ಬಳಿಚಿದಾಯುಧ ತತಿಗೆ ನೂಕಿದ ಜೋಡು ಸೀಸಕಕೆ ।
ಕಳಚಿದಾಭರಣಾತಪತ್ರಾ
ವಳಿಗೆ ಕಾಣೆನು ಕಡೆಯನೀ ಪರಿ
ಕೊಲೆಗೆ ಭಂಗಕೆ [6]ನಿನ್ನ ಬಿರುದರು ಬಂದುದಿಲ್ಲೆಂದ[6] ॥ ೧೬

ಸಿಡಿವ ತಲೆಗಳ ಬಳಿವಿಡಿದು [7]ಧಾ
ರಿ[7]ಡುವ ರಕುತದಲೆರಡು ಬಲದಲಿ
ಹಿಡಿದ ದೀವಿಗೆ ನಂದಿದವು ಕುಂದಿದುದು ಚತುರಂಗ ।
ಮಡಮುರಿಯ ಮಯವಾಯ್ತು ಸುಭಟರ
ನಿಡು ಮುಸುಕು ಮೋಹಿಸಿತು ಮುರುಹಿನ
ಕಡುಹುಕಾಱರು ಕೇಣಿಗೊಂಡರು ಬಹಳ ದುಷ್ಕೃತವ ॥ ೧೭

[1] ಸೇ (ಗ.ಪ.ದ.ನ). [2] ಲಾಘವ (ಗ.ಚ.ದ). [3] ಮಾನ (ಚ). [4] ಸುಭಟರ (ಕ.ಗ.ಚ). [5] ಗಡಬಡಿಸುತಿದೆ ಆ (ಕ). [6] ಸುಭಟರು ಸಂದರ್ಶ್ಯಯಿಂದ (ಗ.ತ). [7] ಸಾಲಿ (ಕ).

ದ್ರೋಣನೆಂಬರೆ ಮುನ್ನವೇ ನಿ
ರ್ವಾಣದೀಕ್ಷಿತನಾದನಾತನ
ಕಾಣೆವೈ ಗುರು ಸುತನದೃಶ್ಯಾಂಜನವೆ ಸಿದ್ಧಿಸಿತು ।
ಹೂಣಿಗರು ಮತ್ತಾರು ಶಲ್ಯ
ಕ್ಷೋಣಿಪತಿ ಕೃತವರ್ಮ ಕೃಪನತಿ
ಜಾಣರೋಟದ ವಿದ್ಯೆಗೆನುತಿರ್ದುದು ಭಟಸ್ತೋಮ ॥ ೧೮

ಏನ ಹೇಳುವೆನಮಮ ಬಹಳಾಂ
ಭೋನಿಧಿಯ [1]ವಿಷದುರಿಯ[1] ಧಾಳಿಗೆ
ದಾನವಾಮರರಿಂದುವಾಳಿಯ ಮಱೆಯ ಹೊಗುವಂತೆ ।
ದಾನವಾಚಳಮಥಿತ ಸೇನಾಂ
ಭೋನಿಧಿಯ ಪರಿಭವದ ವಿಷದುರಿ
ಗಾ ನರೇಂದ್ರ ನಿಕಾಯ ಹೊಕ್ಕುದು ರವಿಸುತನ ಮಱೆಯ ॥ ೧೯

ಶರಣು ಹೊಕ್ಕುದು ಬಂದು ಮಕುಟದ
ಗರುವರವನೀಪಾಲಕರು ವೋ
ಹರಕೆ ತೋರ್ಪಟ್ಟವರು ಭಾರಿಯ ಬಿರುದಿನತಿಬಳರು ।
ದುರುಳ ದೈತ್ಯನ ಬಾಧೆ ಘನ ಪರಿ
ಹರಿಸಲಱಿಯೆವು ಕರ್ಣ ನೀನೇ
ಮರಳಿ ಸೇನೆಯ ರಕ್ಷಿಸೆಂದುದು ನಿಖಿಳ ಪರಿವಾರ ॥ ೨೦

[2]ತಳಿತ [2]ಮುಸುಕಿನ ಬೆರಳ ಮೂಗಿನ
ನೆಲನ ನೋಟದ ಮೆಯ್ಯ ತೂಕದ
ಝುಳದ ಸುಯ್ಲಿನ ಮುಖದ ಮೋನದ ನಸಿದ ನೆನಹುಗಳ ।
ಕಳಿದ ಕಡುಹಿನ ಬೀತ ಬಿರುದಿನ
ಬಲಿದ ಭಂಗದ ನೃಪತಿಗಳನ
ಗ್ಗಳೆಯ ರವಿಸುತ ಕಂಡು ಹೊಗಳಿದನಾ ಘಟೋತ್ಕಚನ ॥ ೨೧

ಶಿವ ಶಿವಾ ಕೌರವನ ಸುಭಟರು
ದಿವಿಜರಿಗೆ ವೆಗ್ಗಳರು ನಿನಗಿಂ
ದಿವರು ಸೋತರು ಪೂತು ದಾನವ ನೀ ಕೃತಾರ್ಥನಲ ।

---

[1] ಲೆದ್ಬುರಿಯ (ಕ.ಗ.ಚ). [2] ತಲೆಯ (ಗ.ಚ).

ಇವನ ಪಾಡಿನ ಸುಭಟರೇ ನ
ಮ್ಮವರು ಗೆಲವೇನಿವನದೇ ಮಾ
ಧವನ ಸೂತ್ರದ [1]ಯಂತ್ರವಿದು ಲಯಕಾಲ ನಮಗೆಂದ[1] ॥ ೨೨

ಸಾಕು ದೈತ್ಯನ ಕೆಡಹು ಸೇನೆಯ
ಸಾಕು ಸುಭಟರು [2]ಬಾಯ ಬಿಡುತಿವೆ[2]
ನೂಕು ನೂಕಮುರಾರಿಯನು [3]ತಡೆ[3] ತಡವು ಮಾಡದಿರು ।
ಆಕೆವಾಳರು ವಿಗಡ ವೀರಾ
ನೀಕವಿದೆ ತಲ್ಲಣದ ತಗಹಿನ
ಲೇಕೆ ಕಾಲಕ್ಷೇಪವೆಂದನು ಕೌರವರ ರಾಯ ॥ ೨೩

ದುಗುಡವೋ ಮೇಣ್ ವಿಕ್ರಮಾಗ್ನಿಯ
ತಗಹುಗಳ ತನಿಹೊಗೆಯೊ ರಾಯರ
ಮೊಗವ ನೋಡೈ ಕೀರ್ತಿ ಕೌಮುದಿ ಕಳಿದ ಕತ್ತಲೆಯೊ ।
ಬಿಗಿದ ಭೀತಿಯ ಸೂಟಿಗೆಗಳೊ ಮೋ
ಟೆಗಳೊ ಸನಿಪಾತುಗಳ ಸೋನೆಯ
ಸೊಗಸುಕಾಱರು ನಿಂದ ನಿಲವನು ಕರ್ಣ ನೋಡೆಂದ ॥ ೨೪

ವಿಗಡತನವನು ವಹಿಲದಲಿ ಕೈ
ಮುಗುಚಿ ಕಳೆದರು ಹೂಸಿಕದ ಹೂ
ಣಿಗತನವ ಶೊನ್ನಾರವಿದ್ಯೆಯ ಸಾಹಸೋನ್ನತಿಯ ।
ಸೊಗಸ ಹುಟ್ಟಿಸಿ ಸುಲಿವ ರಸವಾ
ದಿಗಳನಿವರ ವಿಡಾಯಿಗಳ ನಂ
ಬುಗೆಯ ಕೇವಣ ಪಾಡುಕಾಱರ ಕರ್ಣ ನೋಡೆಂದ ॥ ೨೫

ನಡೆವುತೆಡಹಿದ ಪಟ್ಟದಾನೆಯ
ಮಿಡಿಯ ಹೊಯ್ವರೆ ಬೀಯ ರಣವವ
ಗಡವು ನಮಗಿದು ರಾತ್ರಿ ದೈತ್ಯರಿಗಿದುವೆ ನಡುಹಗಲು ।
ಮೃಡನನೊಂದವಸರಕೆ ಬಗೆಯದ
ಕಡುಹುಕಾಱರು ನಿನ್ನವರು ಕೆಡೆ
ನುಡಿದು ನೋಯಿಸಲೇತಕೆಂದನು ಕರ್ಣನರಸಂಗೆ ॥ ೨೬

---

[1] ತಂತ್ರವಿದು ಜಯವಾತನದೆಯೆಂ (ಕ.ಗ.ಪ). [2] ಭೀತಿ ಪಡುತಿವೆ (ಟ.ತ).
[3] ತರಿ (ಟ.ಕ), ಕಡ (ಚ).

ತಾಗಿ ವಜ್ರವ ಮುಕ್ಕುಗಳೆವಡೆ
ಸಾಗರವ ಹೊಗಲೇಕೆ ಗಿರಿಗಳು
ಹೋಗಲಿನ್ನಾ ಮಾತು ಮೀಱಿದ ದೈತ್ಯನುಪಟಳವ ।
ಈಗ ಮಾಣಿಸು ನಮ್ಮ ಸುಭಟರು
ಯೋಗಿಗಳವೊಲು [1]ದಂಡಹೀನರು[1]
ಬೇಗ ಮಾಡಿನ್ನಮರವೈರಿಯ ತಱಿದು ಬಿಸುಡೆಂದ ॥ ೨೭

ಕಳೆ[2]ದ[2] ವಾಸವ ಶಕ್ತಿ ಪಾರ್ಥನ
ತಲೆಗೆ ಬೈಚಿಟ್ಟಿಹುದನೀಗಳು
ಸೆಳೆದೆನಾದರೆ ಮುಂದೆ ಫಲುಗುಣನೆನ್ನ ಲೆಕ್ಕಿಸನು ।
ಉಳಿದ ಬಾಣಂಗಳಲಿ ದೈತ್ಯನ
ಗೆಲುವುದರಿದಿದಕಾವ ಹದನೋ
ತಿಳಿಯಲಱಿಯೆನು ಜೀಯಯೆಂದನು ಕುರುಪತಿಗೆ ಕರ್ಣ ॥ ೨೮

ಈಗಳೀ ದಾನವನ ಬಲೆಯಲಿ
ತಾಗಿ ಸಿಲುಕಿತು ನಮ್ಮ ಮೋಹರ
ಮೇಲೆ ಫಲುಗುಣನಾರ ಕೊಲುವನು ಮರಣ ನಮಗಾಗೆ ।
ನೀಗಿ ಕಳೆ ಕೊಲೆಗಡಿಗನನು ಜಯ
ವಾಗಲೀಗಳೆ ಮುಂದೆ ನರನು
ದ್ಯೋಗಕಾರೈವೆವು ಚಿಕಿತ್ಸೆಯನೆಂದನಾ ಭೂಪ ॥ ೨೯

ಆದಡಮರ ವಿರೋಧಿಯಸುವನು
ಸೇದುವೆನು [3]ಸರಿಸದಲಿ ನಿಂದರೆ[3]
ನಾದುವೆನು ನಿಚ್ಚೋಡಲ ರಕುತದಲಖಿಳ ದಿಗುತಟವ ।
ಕಾದುವೆನು ನಮ್ಮವರು ಕಳಚಿದ
ಕೈದುವನು ಕೈವಶವ ಮಾಡಿ ವಿ
ನೋದವನು ನೀವ್ ನೋಡಿ ಎಂದನು ಕರ್ಣನರಸಂಗೆ ॥ ೩೦

ಇತ್ತಲೈ ದನುಜೇಂದ್ರ ಕದನವ
ದಿತ್ತಲಿತ್ತಲು ಗಮನ ಸುಭಟರ
ಕತ್ತಲೆಯೊಳೋಡಿಸಿವ ಕಡುಹನು ತೋಱು ನಮ್ಮೊಡನೆ ।

---

[1] ದ್ವಂದ್ವರಹಿತರು (ದ). [2] ದು (ತ). [3] ರಣರಂಗಭೂಮಿಯ (ಕ).

ಮೃತ್ಯು ನಿನಗಾನೆನ್ನೊಡನೆ ತಲೆ
ಯೊತ್ತಿ ನೋಡೆಂದೆನುತ ಬೊಬ್ಬಿಱಿ
ವುತ್ತ ದೈತ್ಯನ ತಱುಬಿದನು ಬಲವೆಲ್ಲ ಬೆಱಗಾಗೆ ‖ ೩೧

ಎಲವೊ ನೆಱೆ ಗಂಡಹೆ ಕರ್ಣಾ ನೀ
ಮಲೆತು ನಿಂದುದು ಸಾಲದೇ ಸುರ
ರೊಳಗೆ ಸಿತಗರ ನೀಳುವೆನು ಮಾನವರ ಪಾಡೇನು ।
ಕಲಿತನಕೆ ಮೆಚ್ಚಿದೆನು ಸತ್ತರೆ
ಮೊಳೆಯದಿಹುದೇ ಕೀರ್ತಿ [1]ರಿಪುಬಲ[1]
ದೊಳಗೆ ದಿಟ್ಟನು ಕರ್ಣ ನೀನೆನುತಸುರ ಮಾಱಾಂತ ‖ ೩೨

ತಾನೆ ತನ್ನನೆ ಹೊಗಳಿಕೊಂಬರೆ
ಮಾನನಿಧಿಯಾದವರು ಸಾಕೀ
ದಾನವರ ಗರುವಾಯಿ ಭಾರಿಯ ಭಂಡ ವಿದ್ಯೆಗಳು ।
ಏನು ಹೊಸತೆಂತೆಂತು ಶರಸಂ
ಧಾನವುಳಿದಗ್ಗಳಿಕೆಗಳ [2]ಮಾ
ತೇನು ಬಲ್ಲರೆ[2] ಬಿಲ್ಲ ಹಿಡಿ ಹಿಡಿ ಕಾಣಲಹುದೆಂದ ‖ ೩೩

ಫಡ ದೊಠಾರಿಸಿ ನುಡಿದ ಜಿಹ್ವೆಯ
ಹೆಡತಲೆಯಲುಗಿವೆನು ಕರ್ಣಾ ಕೇಳ್
ತೊಡಕಿ ತನ್ನಲಿ ಬದುಕುವವರಾರಿಂದ್ರ ಯಮರೊಳಗೆ ।
ಕಡುಹುಕಾಱರ ಗರ್ವ ವಿಷ ಗಾ
ರುಡವನೆನ್ನಲಿ ನೋಡು ನೋಡೆನು
ತೊಡನೊಡನೆ ಶರವಳೆಯ ಕಱೆದನು ಪವನಸುತ ಸೂನು ‖ ೩೪

ದಾನವರು ದಕ್ಕಡರು ಧೈರ್ಯೋ
ದ್ದಾನ ಶೀಲರು ಘಾಯವನು ಗಿರಿ
ಯಾನಬಾರದು ಮುಷ್ಟಿಬಲ ವೆಗ್ಗಳರು ಸತ್ವದಲಿ ।
ಈ ನಿರಂತರ ಬಾಣ ರಚ[3]ನಾ
ನೂನ ಧನುರಭ್ಯಾಸದನುವನ
ದೇನ[3] ಹೇಳುವೆ ಲೇಸೆನುತ ಕಲಿ ಕರ್ಣ ತೆಗೆದೆಚ್ಚ ‖ ೩೫

[1] ಯಸದಳ (ಕ), ಕುರುಬಲ (ಗ). [2] ನೀನಾನಲಾಪರೆ (ಕ). [3] ನೆಯ ನೀನುನೋಡಭ್ಯಾಸದನುವನು (ಕ)

ಹಾಱಿದವು ಗಱಿ ಸಹಿತ ದೇಹವ
ಡೋಱುಗಳೆದಂಬುಗಳು ನೆತ್ತರ
ಜೋಱು ಮಸಗಿತು ಕೂಡೆ ಜಾಜಿನ ಗಿರಿಯ ರೌಕುಳದ ।
ಏಱ ಬಾಯ್ಗಳ ತಳಿತ ಖಂಡದ
ಸೂಱೆ ಗೊಂಡವು [1]ಹಿಂದಣಂ[1]ಬುಗ
ಳಾಱೆನಭಿವರ್ಣಿಸಲು ಕರ್ಣ ಘಟೋತ್ಕಚಾಹವವ ॥ ೩೬

ತಾರಕನ ಕೈಟಭನ ಮಹಿಷನ
ವೀರ ಜಂಭನ ಕಾಲನೇಮಿಯ
ತಾರಕಾಕ್ಷನ ಕುಂಭಕರ್ಣನ ಮುರ ಗುಹಾಸುರನ ।
ಆರುಭಟೆ ರಣದುಬ್ಬಟೆಯ ಜ
ಜ್ಝಾರತನವಿವನೊಬ್ಬನಲಿ ಕೈ
ವಾರವೇ ನೆಱೆ ಕಾಣಲಾಯ್ತೆಂದುದು ಸುರಸ್ತೋಮ ॥ ೩೭

ನಿಲುವಡಸುರನ ಮುಂದೆ ಕರ್ಣನೆ
ನಿಲಲು ಬೇಹುದು ಕರ್ಣನುಱುಬೆಗೆ
[2]ನಿಲು[2]ವಡೀಯಮರಾರಿಗೊಪ್ಪುವುದೈ ಮಹಾದೇವ ।
ಉಳಿದ ಭೂರಿಯ ಬಣಗುಗಳು ವೆ
ಗ್ಗಳೆಯ[3]ವೆಸರಿಗೆ ನೋಂತರೇ[3] ಕುರು
ಬಲದೊಳರಿಬಲದೊಳಗೆ ಸರಿಯಿನ್ನಿವರಿಗಿಲ್ಲೆಂದ ॥ ೩೮

ಎರಡು ಬಲವಿವರಿಬ್ಬರಾಹವ
ದುರವಣೆಯನೇ ನೋಡುತಿರ್ದುದು
ಸರಿಮಿಗಿಲ ಕಾದಿದರು ಶಿವಶಿವ ಭಾರಿಯಂಕದಲಿ ।
ಸರಳು ತೀರಲು ತೀರದಸುರನ
[4]ಕೆರಳಿದುರಿ[4] ಕುಡಿಯಿಟ್ಟುದಿವನ
ಬ್ಬರಣೆ ಕೆಡೆಬೀಳೆನುತ ಶೂಲದಲಿಟ್ಟನಿನಸುತನ ॥ ೩೯

ಹೊಗರುಗಿಡಿಗಳ [5]ಬಾಯಿ[5]ಧಾರೆಯ
ಲೊಗೆವ ಹೊಗೆಗಳ ಹೊದಱಿನುರಿ ಜಾ
ಳಿಗೆಯ ಭೋಂಕಾರದ ಭಯಂಕರ ಶೂಲವೈತರಲು ।

---

[1] ಕರ್ಣನಂ (ಗ.ಚ). [2] ಮಲೆ (ಟ.ತ). [3] ರನಲಹುದೆನ್ನೃಪತಿಯ (ಟ.ತ. ನ.ಪ). [4] ದುರುಳತನ (ಕ.ಗ.ಚ). [5] ಭೂರಿ (ತ.ಟ.ಪ).

ನಗುತ ಮೂಱಂಬಿನಲಿ ಕೈದುವ
ತೆಗೆಸಿದನು ನೆಱೆ ಹತ್ತು ಶರವನು
ಹಗೆಯ ಹೇರುರದೊಳಗೆ ಹೂಳಿದು ಕರ್ಣ ಬೊಬ್ಬಿಱಿದ ‖ ೪೦

ದರಿಗಳೊಳು ದರ್ವೀಕರಾವಳಿ
ಯುರವಣಿಸಿದರೆ ಬಲ್ಲುದೇ ಕುಲ
ಗಿರಿ ಮಹಾದೇವಾವ ಸತ್ವವೂ ದಾನವೇಶ್ವರಗೆ ।
ಅರಿಯ ಶರಹತಿಗೊಡಲು ನೆಱೆ ಜ
ರ್ಜ್ಝರಿತವಾಗಲು ನೊಂದುದಿಲ್ಲ
ಬ್ಬರಿಸಿ ಪರಿಘದಲಿಟ್ಟನಂಬುಜ ಬಂಧು ನಂದನನ ‖ ೪೧

ತಿರುಗುತ್ತೈತಹ ಪರಿಘ[1]ಕಾಂತರೆ[1]
ಗಿರಿಗಳಡಿ ಮೇಲಹವು ನಾವಿ
ನ್ನರಸ ಹೇಳುವುದೇನು ಕರ್ಣನ ಬಾಹು ವಿಕ್ರಮವ ।
ಪರಿಘವದು ಪರಮಾಣುಮಯವಾ
ಯ್ತೆರಡು ಶರದಲಿ ಸಾರಥಿಯುನಿ
ಟ್ಟೊರಸಿದನು ಹದಿನೈದು ಶರದಲಿ ರಥದ ಕುದುರೆಗಳ ‖ ೪೨

ಸಮರ ಸಾಧನ ಸವೆಯೆ ಕೋಪದ
ತಿಮಿರ ಗಱಿಗಟ್ಟಿತು ಮಹಾ ವಿ
ಕ್ರಮನ ಚಳಕವನೇನ ಹೇಳುವೆ ರಥದ ಬಳಸಿನಲಿ ।
ಸಮತಳಿಸಿ ಕೈದುಗಳ ಮಳೆಯನು
ದ್ಯುಮಣಿ ತನಯನ ಮೇಲೆ ಕಱೆದನು
ನಿಮಿಷಕದ ಪರಿಹರಿಸಿ ದೈತ್ಯನನೆಚ್ಚನಾ ಕರ್ಣ ‖ ೪೩

ತೂಱಿದರೆ ತನಿಹೊಟ್ಟು ಗಾಳಿಗೆ
ಹಾಱುವುದು ಕುಲಗಿರಿಯ ಬೈಸಿಕೆ
ಜಾಱುವುದೆ ಮಝು ಪೂತು ನಮ್ಮಾಯುಭಯ ಕಟಕದಲಿ ।
ತೋಱಲಿಲ್ಲೆಣೆ ಜಗದೊಳೋಲೆಯ
ಕಾಱ ನೀನಹೆಯೆನುತ ಸುರರಿಱಿ
ಗಾಱ ಕವಿದನು ಕರ್ಣನಳವಿಗೆ ಜಡಿವಡಾಯುಧದಿ ‖ ೪೪

[1] ವೈತರೆ (ಕ).

ಘಡ ದೊಠಾರಿಸಿ ನಿಂದರೆರಡೇ
ಕಡಿಯ ಮಾಡುವೆನೆಲವೊ ನಿನ್ನಯ
ಗಡಣಿಗರ ಕರೆ ಕಾಯ್ದುಕೊಳಲಿ ಸುಯೋಧನಾದಿಗಳು ।
ಮಡಮುರಿಯದಿದಿರಾಗು ರಕುತವ
ಕುಡಿಸುವೆನು [1]ಕೂರಸಿಗೆ[1]ಸುತ ಕೊಲೆ
ಗಡಿಗನೌಕಿದಡಿದಿರ ಬಿಟ್ಟನು ಕರ್ಣ ಕೆಲ ಸಿಡಿದ ॥ ೪೫

ಅಹಹ ಶಿವಶಿವ ದೈತ್ಯ ರಾಹು
ಗ್ರಹಣವಾಯಿತು ಕರ್ಣ ಸೂರ್ಯನ
ಮಹಿಮೆ ಮಸುಳಿತು ಕಟಕಟಾ ಯೆನುತಖಿಳ ಬಲ ಬೆದಱೆ ।
ಅಹಿತನ[2]ಟ್ಟುಳ[2]ಕಳುಕಿ ಕೆಲದಲಿ
ಮಿಹಿರ ನಂದನನೆಚ್ಚಡಂಬಿನ
ಲಹರಿ ಮಸಗಿತು ಖಳನ ಖಡುಗವ ಕಾಣೆನಾಕ್ಷಣಕೆ ॥ ೪೬

ಚಾರಿವರಿದನು ದನುಜ ಮುಡ್ಡು ಕ
ಠಾರಿಯಲಿ ಕರ್ಣಾಸ್ತ್ರ ಧಾರಾ
ಸಾರದಲಿ ಮೈ ನನೆದು ಹೊನಲಿಡುವರುಣ ವಾರಿಯಲಿ ।
ಆರಿ[3]ವ[3]ನು ಹೈಡಿಂಬನೀಚೆಯು
ಲಾರು ಭೀಮಜನಿತ್ತಲಾರು ಬ
ಕಾರಿ ನಂದನನೆನಲು ಬಲ[4]ವಿರುಳ[4]ಸುರ ಮಯವಾಯ್ತು ॥ ೪೭

ಅಣೆದನಶ್ವತ್ಥಾಮನನು ತ
ಕ್ಷಣದೊಳರಸನ ತಾಗಿ ದ್ರೋಣನ
ಕೆಣಕಿ ದುಶ್ಶಾಸನನ ಮುಸೆಗಾಣಿಸಿ ಕೃಪಾದಿಗಳ ।
ರಣದೊಳೋಡಿಸಿ ಮುರಿದು ಕರ್ಣನ
ಸೆಣಸಿ ನಿಂದನು ಮತ್ತೆ ಸಮರಾಂ
ಗಣದ ಚೌಪಟಮಲ್ಲನಿತ್ತನು ಪಡೆಗೆ ತಲ್ಲಣವ ॥ ೪೮

ಬಱಿಯ ಕಕ್ಕುಲಿತೆಯಲಿ ಕರ್ಣನ
ಮಱೆಯ ಹೊಕ್ಕವು ಕರ್ಣನೀತನ
ತಱುಬಿದನಲಾ ಶಕ್ತಿಯಾವೆಡೆಯೆಂದು ಕೆಲಕೆಲರು ।

---

[1] ಖಂಡೆಯಕೆ (ಕ). [2] ನುಪಟಳ (ಗ). [3] ದ (ಕ). [4] ವೆಲ್ಲ (ಗ) ದೊಳಗ (ದ).

ಕಱುಬತನವೇಕಕಟ ಪುಣ್ಯದ
ಕೊಱತೆ ನಮ್ಮದು ಕರ್ಣನೇಗುವ
ನಿಱುತಕಂಜಿದ ನಾವೆ ಬಾಹಿರರೆಂದರುಳಿದವರು ॥ ೪೯

ಕಾಱಿಸುವೆನಿವನಸುವನಿವ ಮೈ
ದೋಱಿ ನಿಂದರೆ ನಿಮಿಷದಲಿ ಬಾ
ಯಾಱದಿರಿ ಕಳ್ಗೆಱುಕಾಱನ ಕರುಳ ಹರಹುವೆನು ।
ಜಾಱದಿರಿಯೆನುತಭಯಹಸ್ತವ
ತೋಱಿ ತುಡುಕಿದನುಗ್ರ ಧಾರೆಯ
ತೂಱುಗಿಡಿಗಳ ತುಱುಗಿದುರಿಯ ಮಹಾಸ್ತ್ರವನು ಕರ್ಣ ॥ ೫೦

ತಳಿತ ಕಿಡಿಗಳ ಕೈದುವಿನ ಮೈ
ಝಳದ ಝಾಡಿಯೊಳುಭಯ ಬಲದ
ಗ್ಗಳದ ಹರುಷ ವಿಷಾದ ವಾರಿಧಿ ಕಾಲುಹೊಳೆಯಾಯ್ತು ।
[1]ಬಿ[1]ಳಿಯ ಚೌರಿಗಳೆಸೆಯೆ ಘಂಟಾ
ವಳಿಗಳಣಸಿನ ಹೊಗರನುಗುಳುವ
ಹೊಳೆವ ಧಾರೆಯ [2]ಭಾರಿ ಶಕ್ತಿಯ[2] ತೂಗಿದನು ಕರ್ಣ ॥ ೫೧

ಕಾಯಲಾಪರೆ ದನುಜ ಕರೆ ಕಮ
ಲಾಯತಾಕ್ಷನನಿಂದು ಬದುಕುವು
ಪಾಯವುಳ್ಳಡೆ ಬೇಗ ಬೆಸಗೊಳು ಭೀಮ ಫಲುಗುಣರ ।
ಆಯುಧಕೆ ತೆಱವಿಟ್ಟೆನೈ ನಿ
ನ್ನಾಯುಷವ ಹಿಂದಿಕ್ಕಿ ಕೊಂಬನ
ತಾಯೆನುತ ಬೊಬ್ಬಿಱಿದು ಶಕ್ತಿಯಲಿಟ್ಟನಾ ಕರ್ಣ ॥ ೫೨

ಅರಿದನು ಪರಿಹರಿಸುವರು ಜಂ
ಭಾರಿ ಕೊಟ್ಟನು ಕಮಲಭವ ಕಾ
ಮಾರಿಗಳಿಗುಬ್ಬಸದ ಕೈದುವಜೇಯವೆಂದಿದನು ।
ಧಾರೆಯಲಿ ದಳ್ಳಿಸುವ ಕಿಡಿಗಳ
[3]ಭಾ[3]ರಿಯಾಯುಧವಸುರ[4]ನುರವನು[4]
[5]ಡೋ[5]ಱುಗಳೆದುದು ಹಾಯ್ದು ಹೋದುದು ವಾಸವನ ಹೊರೆಗೆ ॥ ೫೩

1 ಬ (ಕ). 2 ಘೋರಿಯಸ್ತ್ರವ (ಕ. ಗ. ಚ. ಟ). 3 ಭೂ (ಕ. ಗ. ಚ).
4 ನೆದೆಯನು (ಕ. ಗ. ಚ). 5 ಹೋ (ಕ).

ಅರಿ ಬೊಬ್ಬಿಱಿವುತ್ತ ಕಂಡುದು
ಪಾರುಖಾಣೆಯನಸುರನಸು ಬಲು
ಭಾರಿಯೊಡಲೊರ್ಗುಡಿಸಿ ಕೆಡೆದುದು ಬಿರಿದ ಗಿರಿಯಂತೆ ।
ತೇರು ತುರಗ ಪದಾತಿ ಕರಿಘಟೆ
ವೈರಿ ಬಲದಲಿ ನಮ್ಮ ಬಲದಲಿ
ತೀರಿತೊಂದಕ್ಷೋಣಿ ಸುರರಿಪು ಬಿದ್ದ ಭಾರದಲಿ ॥ ೨೪*

ಕುರುಬಲದ ಕಳಕಳದ ಹವಣ
ಲ್ಲರಿಬಲದ ಸಂತೋಷವಿದುಮುರ
ಹರನ ಮಂತ್ರವು ಜೀಯ ಹರಿ ಸೂಳೈಸಿದನು ಭುಜವ ।
ಗರಳವಿಲ್ಲದ ಕುಪಿತ ಫಣಿ ಹಲು
ಮೊರೆದು ಮಾಡುವುದೇನು ಕರ್ಣನ
[1]ನೊರಸಿದೆವು ಹೋಗೆಂದು[1] ಸಂತೈಸಿದನು ಪಾಂಡವರ ॥ ೨೫

ಸಾರಿದನು ಶರಮಂಚವನು ಭಾ
ಗೀರಥೀನಂದನನು ಕರ್ಣನು
ಬೇರು ಹಱಿದಾ ದ್ರುಮದವೊಲು ಗತ ಶೌರ್ಯನಿನ್ನೇನು ।
ಭಾರಿಯಾಳ್ವೆ ದ್ರೋಣನಾತನು
ತೀರಿದನು ಹಾ ಪಾಂಡುಸುತರಿ
ನ್ನಾರ ಮುಱಿಯರು ವೀರನಾರಾಯಣನ ಕರುಣದಲಿ ॥ ೨೬†

ಹದಿನಾಱನೆಯ ಸಂಧಿ ಮುಗಿದುದು

---

* ೨೪ನೆಯ ಪದ್ಯವಾದ ಮೇಲೆ ಕ. ಗ. ಚ. ಪ್ರತಿಗಳಲ್ಲಿ ಕೆಳಗಿನ ಪದ್ಯವು ಹೆಚ್ಚಾಗಿದೆ :—

ತರಣಿಯೌರಸಪುತ್ರನೀತನ
ಕರಿಯುರಳು ಮಯಿಣಾಮುದೆಱಕದ
ಕರುವಿನಂದದಲಸುರನಿದಿರೊಳುದಾರಿಗಪಮಾನ ।
ಅರಸ ಚಿತ್ತೈಸೇನ ಹೇಳುವೆನುರು
ಧುರದ ವಿಜಯಾರ್ಥ ಜಯ ಮಿಗೆ
ಮೊರೆದುದಿದು ಕಲ್ಪಾಂತ ಸಾಗರದಂತೆ ಕುರುಸೇನೆ ॥

[1] ನೊರಸದಿರಿ ನೀವೆಂದು (ಗ), ನೊರೆ ಸಿದೆವುನಾವೆಂದು (ಚ).

† ಈ ಪದ್ಯವು (ನ) ಪ್ರತಿಯಲ್ಲಿಲ್ಲ.

ಹದಿನೇಳನೆಯ ಸಂಧಿ

ಸೂಚನೆ॥ ಇರುಳು ಸಮರದಲುಭಯ ರಾಯರ
ಗುರು ವಿರೋಧಿ ಮಹೀಶ ಸೇನಾ
ಶರಧಿಯನು ಕಲಕಿದನು ಗೆಲಿದನು ಮಕುಟವರ್ಧನರ ॥

ಕೇಳು ಧೃತರಾಷ್ಟ್ರಾವನಿಪ ನಿ
ಮ್ಮಾಳನವರಾಳನು ವಿಭಾಡಿಸಿ
ನೀಲಗಿರಿಯೆಡೆವೊಕ್ಕುದೆನೆ ಖಳನೊಡಲು ನಿಡುಗೆಡೆಯೆ ।
ಕಾಳೆಗದ ಕೈಚಳಕದವನು
ಬ್ಬಾಳುತನವಕ್ಕುಡಿಸೆ ಯಿಕ್ಕೆಲ
ದಾಳು ತೆಗೆದುದು ಬಿಗಿದ ಕತ್ತಲೆ ಮೊಗೆದುದಂಬರವ ॥ ೧

ಇನ್ನು ಬದುಕಿದೆವಮಮ ರಕ್ಕಸ
ಕುನ್ನಿಯೊಳಿಗ ವಡಗಿತೆಂದೇ
ನಿನ್ನವರ ಸುಮ್ಮಾನವುಕ್ಕಿತು ಸುಕ್ಕಿತತಿ ಭೀತಿ ।
ಇನ್ನು ಘಡಘಡ ಸೂತ ತನುಜನ
ಬೆನ್ನಲುಗಿವೆವು ಕರುಳನಾಹವ
ಕೆನ್ನ ಬಿಡು ಬಿಡು ಎನುತ ಗರ್ಜಿಸಿ ಹೊಕ್ಕುದರಿ ಸೇನೆ ॥ ೨

ಅಂಗವಣೆ ಮನದಲ್ಲಿ ಪದದಲಿ
ಮುಂಗುಡಿಯ ದುವ್ವಾಳಿ ಕಯ್ಯಲಿ
ಸಿಂಗದಾಯತ ಸವೆಯದೆರಡೊಡ್ಡಿನಲಿ ಸುಭಟರಿಗೆ ।
ಕಂಗಳನು ಕಾರಿರುಳ ರಕ್ಕಸಿ
ನುಂಗಿದಳು ನಾನೇನನುಸುರುವೆ
ನಂಗವಿಸಿ ಕಡುಗಲಿಗಳಿಱಿದಾಡಿದರು ತಮ್ಮೊಳಗೆ ॥ ೩

ಒಳಗೊಳಗೆ ಹೊಯಿದಾಡಿ ಹೊರಳುವ
ಬಲು ಭಟರನಗಿದೊಗುವ [1]ಬಲುಗ[1]
ತ್ತಲೆಯ ಕೋಲಾಹಳವನುಭಯದ ಚಾತುರಂಗದಲಿ ।

[1] ಕಗ್ಗ (ಕ.ಗ).

ಬಲಿದ ತೂಕಡಿಕೆಗಳ ನಸು ಬೆದ
ಱೊಲಹುಗಳ ಜವವೆದ್ದ ಘೂರ್ಮ್ಮಿನ
ಬಲೆಗೆ ಸಿಲುಕಿದ ಬಲವನರ್ಜುನ ದೇಪನೀಕ್ಷಿಸಿದ ॥ ೪

ಶಿವಶಿವಾ [1]ಬಳಲಿದುದು ಬಲವಗಿ
ದವಗಡಿಸಿದುದು[1] ನಿದ್ದೆ ನೂಕದು
ಬವರವುಬ್ಬಿದ ತಿಮಿರವಳಿಯಲಿ ಸಾಕು ರಣವೆನುತ ।
ದಿವಿಜಪತಿ ಸುತನೆದ್ದು ಸೇನಾ
ನಿವಹದಲಿ ಸಾಱಿದನು ಲಗ್ಗೆಯ
ರವವ ನಿಲಿಸಿದನಖಿಳ ಘನ ಗಂಭೀರ ನಾದದಲಿ ॥ ೫

ಬಳಲಿದಿರಿ ಹಗಲಿರುಳ ಕಾಳೆಗ
ದೊಳಗೆ ಕೈಮಾಡಿದಿರಿ ಕಗ್ಗತ್ತಲೆಯು
ಬಲು [2]ಬಂದಿ[2]ಯಲಿ ಸಿಲುಕಿತು ಕಂಗಳಂಗವಣೆ ।
ನಳಿನರಿಪುವುದಯಿಸಲಿ ಬೆಳುದಿಂ
ಗಳಲಿ ಕೈದುವ ಕೊಳ್ಳಿ ನಿದ್ರೆಯ
ನಿಳಿಯು ಬಿಡಬೇಡೆಂದು ಸೇನೆಗೆ ಸಾಱಿದನು ಪಾರ್ಥ ॥ ೬

ನರನ ಮಾತಿಂ ಮುನ್ನ ನಿದ್ರಾ
ಭರದ ಭಾರಿಯ ಹೊಱೆಯ ಭಟರಿ
ತ್ತರದಲೊಲೆದರು ಸಡಿಲಿದವು ಕೈದುಗಳು ಕರಗಳಲಿ ।
ನೆರೆದುಸುರ ವೈಹಾಳಿಗಳ ನಿ
ಬ್ಬರದ ವೊರಹಿನ ಮುರಿದ ಗೋಣಿನ
ಕರದ ತಲೆಗಿಂಬುಗಳ ಕಾಲಾಳೊಱಗಿತವನಿಯಲಿ ॥ ೭

ಒಲೆದ ಒಡಲನು ಮುರಿದು ಬರಿಕೈ
ಗಳನು ದಾಡೆಯೊಳಿಟ್ಟು ಪೊತ್ಕೃತಿ
ಬಲಿದ ನಾಸಾಪುಟದ ಜೋಲಿದ ಕರ್ಣಪಲ್ಲವದ ।
ತಳಿತ ನಿದ್ರಾರಸವನರೆ ಮು
ಕ್ಕುಳಿಸಿದಕ್ಷಿಯೊಳೆರಡು [3]ಗಲ್ಲದ
ಲು[3]ಲಿವ ತುಂಬಿಯ ರವದ ದಂತಿಗಳೆಸೆದವೊಗ್ಗಿನಲಿ ॥ ೮

---

[1] ಬಲಬಳಲಿ ತಿಂದಾಹವದೊಳಗೆ ಕಡು (ಕ.ಗ). [2] ಗಂಡಿ (ದ). [3] ಕಡೆಯಿಂದ (ಕ).

ಬಾಯ ಲೋಳೆಗಳಿಳಿಯೆ ಮೈಹಳು
ವಾಯಿ ಮಿಗೆ ತುದಿ ಖುರವನೂರಿ ನ
ವಾಯಿ ಮಿಗಲರೆನೋಟದಾಲಿಯು ಮಿಡುಕದವಿಲಣದ ।
ಲಾಯದಲಿ ಲಂಬಿಸಿದವೊಲು ವಾ
ನಾಯುಜದ ಸಾಲೆಸೆದುದೊಱಗಿದ
ರಾಯ ರಾವುತ್ತರ ಮಣಿಮಕುಟ ಮರಗೋಡನೋಲೈಸೆ ॥ ೯

ಒಲಿದ ಕಾಂತೆಯ ಕೂಡೆ ಮನುಮಥ
ಕಲಹದಲಿ ಬೆಂಡಾದ ಕಾಂತನು
ಕಳಶಕುಚ ಮಧ್ಯದಲಿ ಮಲಗುವ ವೋಲು ರಜನಿಯಲಿ ।
ಒಲಿದ ಸಮರಶ್ರಮದಲತಿ ವೆ
ಗ್ಗಳ ಗಜಾರೋಹಕರು ಕುಂಭ
ಸ್ಥಳದ ಮೇಲೊಱಗಿದರು ನಿದ್ರಾ[1]ಮುದ್ರಿತೇಕ್ಷಣರು[1] ॥ ೧೦

ಕಲಹವನು ಕನಸಿನಲಿ ಕಂಡ
ವ್ವಳಿಸಿ ಹಳುಹಳು ಪೂತು ಸಾರಥಿ
ಭಲರೆ ಸಾರಥಿ ಜಾಗುರೆನುತಿರ್ದುದು ಮಹಾರಥರು ।
ತೊಲಗದಿರಿ ತಿನ್ನಡಗನಹಿತನ
ತಿಳಿ ರಕುತವನು ಸುಱಿಯೆನುತ ಕಳ
[2]ವಳಿಸುತಿರ್ದರು ವೀರರೆರಡೊಡ್ಡಿನಲಿ ರಭಸದಲಿ[2] ॥ ೧೧

ಎಲೆ ಮಿಡುಕದೆರಡೊಡ್ಡು [3]ಲೆಪ್ಪದ[3]
ಬಲದವೊಲು ನಿದ್ರಾಸಮುದ್ರವ
ಮುಳುಗಿ ಝೊಮ್ಮಿನ ಝಾಡಿಯಲಿ ಝೊಂಪಿಸಿದುದರೆ ಜಾವ ।
ತಳಿತ ಮಱವೆಯ [4]ಪಾಳೆಯದ[4] ಕ
ಗ್ಗೊಲೆಗೆ ಕವಿವ ಗುರೂಪದೇಶಾ
ವಳಿಯವೊಲು ಮೈದೋಱಿದವು ಹಿಮರುಚಿಯ ರಶ್ಮಿಗಳು ॥ ೧೨

ತಣಿದುದಂತಃಕರಣ ನಿದ್ರಾ
ಗಣಿಕೆಯರ ರತಿಯಲ್ಲಿ ಱಿಂಗಣ
ಗುಣಿವ ಮನ ಹದುಳಿಸಿತು ತಿಳಿದುದು [5]ಝೊಮ್ಮಿನು[ವ್ಮೋ]ಹ[5] ।

---

[1] ಲುಳಿಯಲೋಚನರು (ಕ.ಗ.ದ). [2] ವಳಿಸಿತೆರಡೊಡ್ಡಿನಲಿ ಸುಭಟರು ಭೂಪ ಕೇಳೆಂದ (ಕ.ಗ.ಚ.ದ). [3] ಲೇಪದ (ಕ.ಗ). [4] ಕಾಳೆಗದ (ತ). [5] ಝೊಮ್ಮು ದುಮ್ಮಾನ (ದ), ಮ್ಮಾ (ಕ.ಗ.ಚ.ತ).

ರಣವ[1]ನೀಗಳೆ[1] ಕಾಣಬಹುದೆಂ
ಬಣಕಿಗರನೆಬ್ಬಿಸುವ ವೋಲು ಸುಳಿ
ದಣೆದು ಹೊದಱೆದ್ದುದು [2]ಸುಧಾ ದೀಧಿತಿಯ ಕರ ನಿಕರ[2] ॥ ೧೩

ಬಾಡಿದವು ತಾವರೆಗಳುಱೆ ಝುಳ
ವೋಡಿದವು ನೈದಿಲುಗಳಂಬುಧಿ
ಝಾಡಿ ಮಾಡಲು ಬೆರಸಿದವು ಝುಷ ಮಕರ ಕರ್ಕಟಕ ।
ತೋಡಿದವು ಮುಖದಲ್ಲಿ ತುಂಡದ
ಲೀಡಿಱಿದು ಕುಡಿಕುಡಿದು ಬೊಬ್ಬಿ
ಟ್ಟಾಡುತಿರ್ದುವು ಸಾಂದ್ರ ಚಂದ್ರಿಕೆಯಲಿ ಚಕೋರಿಗಳು ॥ ೧೪

ನಳಿನದಳದೊಳಗಡಗಿದವು ನೈ
ದಿಲುಗಳಲಿ ತನಿ ಮೊರೆವ ತುಂಬಿಯು
[3]ಕ[3]ಳರವಕೆ [4]ಬೆ[4]ಚ್ಚಿದವು [5]ಹೊಕ್ಕವು ಬಗಿದು ತಿಳಿಗೊಳನ[5] ।
ಝುಳಕೆ ಸೈರಿಸದೆಳಲತೆಯ ನೆಳ
ಲೊಳಗೆ ನಿಂದವು ಬೇಗೆ ಬಲುಹಿಂ
ದಳುಕಿ ಮಮ್ಮಲು ಮಱುಗುತಿರ್ದುವು ಜಕ್ಕವಕ್ಕಿಗಳು ॥ ೧೫

ವಿನುತ ಸುಕವಿಯ ಸೂಕ್ತಿ ತಾಗಿದ
ಮುನಿಗಳಂತಃಕರಣದಂತಿರೆ
ಹೊನಲುವರಿದವು ಚಂದ್ರಕಾಂತದ ಸಾಲ ಶಿಲೆ ಕರಗಿ ।
ಮನದ ಕತ್ತಲೆ ಗುರುವರನ ವಾ
ಕ್ಕಿನಲಿ ತೊಲಗುವ ವೋಲು ತುಂಬಿಯ
ತನತನಗೆ ನೂಕಿದವು ವಿಕಸಿತ ಕೈರವಾದಿಗಳು ॥ ೧೬

ವಿರಹಿಜನದೆದೆಗಿಚ್ಚು ಮನುಮಥ
ನರಸುತನದಭಿಷೇಕ ಘಟ ತಾ
ವರೆಯ ಕಗ್ಗೊಲೆಕಾಱನುತ್ಪಳವನ ವಿದೂಷಕನು ।
ಹರನ ಹಗೆಯಡ್ಡಣ ವಿಳಾಸಿನಿ
ಯರ ಮನೋರಥ ಫಲವೆನಲು ಮಿಗೆ
ಮೆಱೆದನುದಯಾಚಲದ ಚಾವಡಿಯಲಿ ಸುಧಾಸೂತಿ ॥ ೧೭

---

[1] ನಾಗಳು (ಕ.ಚ). [2] ಸಘಾಢದಲುಭಯ ಪಾಯದಳ (ಕ). [3] ಗ (ಕ). [4] ಮೆ (ಕ). [5] ಬಿಗಿದವು ಮೊಗೆದು (ಕ), ಹೊಗೆದವು ಬಗೆದು (ಗ), ಹೊಕ್ಕವು ಬಿಗಿದು (ಪ).

ತಳಿತ ತಂಪಿನ ತಂಗದಿರ ತೊಱೆ
ಯೊಳಗೆ ತೇಕಾಡಿದುದು ಬಲವ
ಗ್ಗಳದ ಬಳಲಿಕೆ ಬೀಳುಕೊಂಡುದು ಬಲಿದುದಂಗವಣೆ ।
ಒಲೆದು ಬರಿಕೈ ತೂಗಿ ಕಿವಿಗಳ
ನಲುಗಿದವು ಕರಿ ನಿಕರವವಿಲಣ
ಘಲಿಲೆನಲು ಕೊಡಹಿದವು ವಳಯವನಖಿಳ ಹಯ ನಿಕರ ॥ ೧೮

ತುಱುಬ ಬಲಿದೊಳಗೌಕಿ ಮೊನೆ ಮುಂ
ಜೆಱಗನಳವಡೆ ಸೆಕ್ಕಿ ಸುತ್ತಿನೊ
ಳಿಱುಕಿ ಬಿಗಿದ ಕಠಾರಿ ದಾರದ ಗೊಂಡೆಯವ ಕೆದಱಿ ।
ಒಱಗಿದೆಡಬಲದವರನೆಬ್ಬಿಸಿ
ಜಱೆದು ವೀಳೆಯಗೊಂಡು ಕೈದುವ
ತಿರುಹುತಾಯತವಾಯ್ತು ಪಡೆಯೆರಡಱಲಿ ಪಾಯದಳ ॥ ೧೯

ಬಿಗುಹನೇಱಿಸಿ ಮತ್ತೆ ತುರಗಾ
ಳಿಗಳ ಬಿಗಿದರು ರಾವುತರು ಹೊರ
ಜಿಗಳ ಜೋಡಿಸಿ ಜೋದರಾಯತವಾಯ್ತು ಕರಿಗಳಲಿ ।
ಬಿಗಿದು ಕೀಲಚ್ಚುಗಳ ರಥಿಕಾ
ಳಿಗಳು ಮೇಳೈಸಿದರು ಕೈದುವ
ನುಗಿದು ಕಾಲಾಳೆದ್ದು ನಿಂದುದು ಕದನಕನುವಾಗಿ ॥ ೨೦

ಕದಡಿದವು ಬಲವೆರಡು ಕಲ್ಪದೊ
ಳುದಧಿಯುದಧಿಯನೊದೆವವೋಲು ತಾ
ಗಿದರು ನೀಗಿದರಸುವ ನಸೆಮಸೆಗಕ್ಕುಡಿಸಿದವರು ।
ಬಿದಿರಿದರು ಕೊಯ್ದಲೆಗಳನು ಕಾ
ಱಿದರು ಕರುಳನು ಕುಸುರಿ ಖಂಡದ
ಕದಳಿ ಮೈಗಳ ಚೂಣಿ [1]ಮಲಗಿತು[1] ತಾಱು ಥಟ್ಟಿನಲಿ ॥ ೨೧

ಚೂಣಿ ತೆಗೆಯಲಿ ಮಿಸುಕಿದರೆ ನೃಪ
ನಾಣೆ ಬಱಿದೇಕಾಳು ಕುದುರೆಯ
ಗೋಣನವರಿಗೆ ಮಾಱುವಿರಿ ಕೌರವನ ಥಟ್ಟಿನಲಿ ।

1 ಯರೆದುದು (ಕ). ಮಸಗಿತು (ಚ.ದ).

ದ್ರೋಣನಲ್ಲಾ ರಕ್ಷಕನು ರಣ
ಹೊಣೆಗರು ನಿಲಿ ಭೀಮ ಪಾರ್ಥರ
ಕಾಣಬಹುದೋ ಕರೆಯೆನುತ ಗರ್ಜಿಸಿದನಾಚಾರ್ಯ ॥ ೨೨

ರಥವ ಸಂವರಿಸಿದನು ನಿಜ ಸಾ
ರಥಿಯ ಬೋಳೈಸಿದನು ಬಳಿಕತಿ
ರಥ ಮಹಾರಥ ರಾಜಿಗಿತ್ತನು ರಣಕೆ ವೀಳೆಯವ ।
ಪೃಥೆಯ ಮಕ್ಕಳ ಕರೆ ಮಹೀಸಂ
ಪ್ರಥಿತ ಬಲರನು ಕರೆಯೆನುತ ನಿ
ರ್ಮಥಿತ ರಿಪು ಪರ ಬಲವ ಹೊಕ್ಕನು ಬಿಟ್ಟ ಸೂಟಿಯಲಿ ॥ ೨೩

ರಾಹುವೆತ್ತಲು ಲಲಿತ ತಾರಾ
ವ್ಯೂಹವೆತ್ತಲು ದಳ್ಳಿಸುವ ದವ
ದಾಹವೆತ್ತಲು ನೀರಸದ ತೃಣ ರಾಶಿ ತಾನೆತ್ತ ।
ಗಾಹು ಗತಕವನುಳಿದು ಕಾದುವ
ಡಾಹವಕೆ ಗುರು ಭೀಷ್ಮರಿಗೆ ಸರಿ
ಸಾಹಸಿಕರಾರುಂಟು ಮುಖಿದುದು ಪಾಂಡುಸುತ ಸೇನೆ ॥ ೨೪

ಉದಧಿಯುದರದೊಳಿಳಿದು ತೆರೆಗಳ
ನೊದೆವ ಮಂದರದಂತೆ ಮದಕರಿ
ಕದಳಿಯಲಿ ಕೈಮಾಡುವಂತಿದೆ ಪರರ ಥಟ್ಟಿನಲಿ ।
ಹೊದಱ ಹರೆಗಡಿದೌಕಿದನು ತೋ
ಕಿದನು ಸುಭಟರ ಜೀವವನು ಹಳೆ
ವಿದಿರ ಮೆಳೆಯಲಿ ಮೊಳಗಿದುರಿಯವೊಲುರುಹಿದನು[1] ದ್ರೋಣ ॥

ಹೊಕ್ಕ ಸಾಲರುಣಾಂಬುಮಯ ಕೈ
ಯಿಕ್ಕಿದತ್ತಲು ಖಂಡಮಯ ಮೊಗ
ವಿಕ್ಕಿದತ್ತಲು ಮೊರೆವ ಹೆಣಮಯವೇನನುಸುರುವೆನು ।
ಇಕ್ಕಡಿಯ ಬಸುಱುಬ್ಬುಗಳ ನರ
ಸೊಕ್ಕು ಡೊಳ್ಳಾಸದ ಮಹಾಭಯ
ವೆಕ್ಕ[2]ಸರ[2]ದಲಿ ಕಾಣಲಾದುದು ವೈರಿ ಬಲದೊಳಗೆ ॥ ೨೬

[1] ಲುರುಬಿದನು (ಕ). [2] ತುಳ (ಗ).

ಹಸಿದ ಹೆಬ್ಬುಲಿ ಮಸಗಿದರೆ ಮೃಗ
ವಿಸರವೇನಹುದರಸ ಕೇಳ್ ನಿ
ಪ್ಪಸರದಲಿ ಪಾಳಿಸಿದನಹಿತರನುಗಿದನುಸುರುಗಳ ।
ಕುಶಲರೇ ಭೀಮಾರ್ಜುನರು ಪಾ
ಲಿಸುವ ಬಿರುದೇ ಕೃಷ್ಣನದು ಹರಿ
ಹುಸಿಕನೋ ಬೆಸಗೊಂಬೆವೆನುತಱೆಯಟ್ಟಿದನು ದ್ರೋಣ ॥ ೨೭

ಆಱು ಸಾವಿರ ಕುದುರೆಯೊಂಬೈ
ನೂಱು ಗಜಘಟೆ ಸಾವಿರದ ಮೂ
ನೂಱು ರಥವೊಗ್ಗಾಗಿ ಬಿದ್ದುದು ಲಕ್ಷ ಪಾಯದಳ ।
ಏಱುವಡೆದವರನು ಪಲಾಯನ
ಸೂಱೆಕಾಱರನವರ ದಳದಲಿ
ತೋಱಿ ಹೇಳುವರೆನ್ನ ಹವಣೇ ಭೂಪ ಕೇಳೆಂದ ॥ ೨೮

ಎಲೆಲೆ ದೊದ್ದೆಗರೇಕೆ ಕೊಬ್ಬಿದ
ರಳವನಱಿಯದೆ ನುಗ್ಗು ಮುಱಿದರೆ
ದಳದ ದೊರೆಗದು ಭಂಗವೇ ಬಾಹಿರನ ಹೊಯ್ಯೆನುತ ।
ಒಳಸರಿವ ನಾಯಕರ ನೆಱೆ ಮೂ
ದಲಿಸಿ ಲಗ್ಗೆಯ ಲಹರಿಯಲಿ ಪಡಿ
ತಳಿಸಿದರು ಪಾಂಚಾಲ ಸೃಂಜಯ ಮತ್ಸ್ಯ ಕೇಕೆಯರು ॥ ೨೯

ಬಲವ [1]ಕಲಿ[1]ಯೇಱಿಸಿ ಛಡಾಳದೊ
ಳುಲಿವ ಪಟಹ ಮೃದಂಗ ಕಹಳಾ
ವಳಿಯ ಬೊಗ್ಗಿನ ಬೊಬ್ಬಿಱಿವ ನಿಸ್ಸಾಳ ಕೋಟಿಗಳ ।
ತಳಿತ ಝಲ್ಲರಿಗಳ ಪತಾಕಾ
ವಳಿಯ ಬಲಿದು ಪವಾಡಿಗಳ ಕಳ
ಕಳದ ಕೈವಾರದಲಿ ಕವಿದರು ದ್ರೋಣನಿದಿರಿನಲಿ ॥ ೩೦

ಅರಿ ಬಲದ ಘಟ್ಟಣೆಯ ಬಿಱು[2]ಬಿ[2]ನ
ಬರವನೀಕ್ಷಿಸಿ ಪೂತು ಪಾಂಚಾ
ಲರ ಸಘಾಡಿಕೆ ಸಾಹಸಿಕರ್ಕೈ [3]ಹಾ ಮಹಾದೇವ[3] ।

---

[1] ಹುರಿ (ತ). [2] ಸಿ (ಟ.ಚ.ದ.ನ.ಪ). [3] ಲೇಸು ಲೇಸೆನುತ (ಟ.ತ.ಪ.ನ).

ದೊರೆಯಲೇ ಬಳಿಕೇನು ಪಾಂಡವ
ರರಸಿಯಯ್ಯನು ದ್ರುಪದನಲ್ಲಾ
ಹರಯೆನುತ ಗಹಗಹಿಸಿ ತಲೆದೂಗಿದನು ಕಲಿ ದ್ರೋಣ ॥ ೩೧

ಇರುಳುಗಳ್ಳನ ಕೂಡೆ ಸೇರಿದ
ಮರುಳಿನಂತಿರೆ ನೀವು ರಣದಲಿ
ತಱಿಸಿಕೊಂಬಿರಿ ಹಾಯ್ದು ರವದಿರು ನಿಮ್ಮನೆಡೆಯೊಡ್ಡಿ ।
ಮರಳಿರೈ ಕೈಕೆಯರು ಮತ್ಸ್ಯರು
ಬಿರುದ ಸೃಂಜಯರಕಟಕಟ ಖೂ
ಳರು ವೃಥಾ ನಿಮಗೇಕೆ ಸಾವೆನುತಿರ್ದನಾ ದ್ರೋಣ ॥ ೩೨

ಬಿಲ್ಲ ಕೊಪ್ಪಿನ ಮೇಲೆ ಚಾಚಿದ
ಗಲ್ಲದುಪಹಾಸದ ನುಡಿಯ ಮ್ಯೊ
ಭುಲ್ಲಣೆಯ ರೋಮಾಂಚನದ ಚಡ್ಡಣೆಯ ಚೇತನದ ।
ಗೆಲ್ಲದಲಿ ಘಾಡಿಸಿದ ಚಿತ್ತದ
ಕೆಲ್ಲೆಗಂಗಳ ನಗೆಯ ಚೌಪಟ
ಮಲ್ಲನಿದ್ದನು ರಿಪುಬಲವ ಲೆಕ್ಕಿಸದೆ ಕಲಿ ದ್ರೋಣ ॥ ೩೩

ಕೆಣಕಿದರು ಪಾಂಚಾಲ ನಾಯಕ
ರಣಕಿಗನ ಕೈಕೊಳ್ಳದುರೆ ಸಂ
ದಣಿಸಿದರು ಸಮರಥರು ಕವಿದರು ರಾಯ ರಾವುತರು ।
ಕಣ್[1]ಗೆದಱು[1] ಹೊದ್ದಿದರು ಜೋದರು
ಕುಣಿದು ಕಾಲಾಳೌಕಿತೊಂದೇ
ಕ್ಷಣದೊಳನಿಬರನೊರಸಿದನು ಬೆರಸಿದನು ದೊರೆಗಳಲಿ ॥ ೩೪

ಅಡಸಿದರು ಚತುರಂಗ ಬಲವನು
ಕಡಿದು ಹರಹಿ ವಿರಾಟನನು ಜವ
ಗಿಡಿಸಿ ದ್ರುಪದನನೆಚ್ಚು ವಿರಥರ ಮಾಡಿ ಕೈಕೆಯರ ।
ನಡೆದು ಬರೆ ನಿಮಿಷದಲಿ ಬಲವವ
ಗಡಿಸಿ ಹೊಕ್ಕುದು ಮಸಗಿದಂಬುಧಿ
ವಡಬನನು [2]ಮೊಗೆದಂತೆ[2] ಮುತ್ತಿತು ಕಳಶ ಸಂಭವನ ॥ ೩೫

---

[1] ಗಱೆದು (ಟ.ತ.ದ.ನ.ಪ). [2] ಹೊಗುವಂತೆ (ಟ.ಪ).

ಮತ್ತೆ ಮುಱಿದನು ವೈರಿ ಬಲದಲಿ
ಹತ್ತು ಸಾವಿರ ಕರಿ ಘಟೆಯನೈ
ವತ್ತು ಸಾವಿರ ಹಯವನಿರ್ಛಾಸಿರ ಮಹಾರಥರ ।
ಹತ್ತು ಕೋಟಿ ಪದಾತಿಯನು ಕೈ
ವರ್ತಿಸಿದನಂತಕನವರಿಗಿವ
ರತ್ತ ಬಿಟ್ಟನು ರಥವನಾ ದ್ರುಪದಾದಿ ನಾಯಕರ ॥ ೩೬

ಆಳನೊಪ್ಪಿಸಿ ಜಾಱದಿರು ಪಾಂ
ಚಾಲಪತಿ ಘಡ ನಿಲ್ಲೆನುತ ಶರ
ಜಾಲದಲಿ ಹೂಳಿದನು ದ್ರುಪದನ ಕೆಲದ ಬಲದವರ ।
ಖೂಳ ಘಡ ಹಾರುವರು ಬಱಿ ಮಾ
ತಾಳಿಗಳು ತಾ[1]ವೇಕೆ[1] ನಾವೇ
ಕಾಳುತನ ತನಗೆತ್ತಲೆನುತಿದಿರಾದನಾ ದ್ರುಪದ ॥ ೩೭

ಹಿಂದ ನೆನೆಯಾ ಖೂಳ ನಾವಾ
ರೆಂದು ಮಱೆದಾ ಸಾಕದಂತಿರ
ಲೊಂದನಲ್ಲದೆ ನಿನ್ನ ತಲೆಗೆರಡಂಬ ತೊಡಚಿದರೆ ।
ಇಂದು ನಿನ್ನಯ ಬಾಯ ತಂಬುಲ
ತಿಂದವನು ನೋಡೆನುತ ಹೆಱೆಯಂ
ಬಿಂದ ಕಡಿದಿಳುಹಿದನು ಪಾಂಚಾಲಾಧಿಪನ ಶಿರವ ॥ ೩೮

ದೊರೆಯುಳಿದನೇ ಸ್ವಾಮಿ ದ್ರೋಹರು
ತಿರುಗಿಯೆನೆ ಪಾಂಚಾಲರಲಿ ಹ
ನ್ನೆರಡು ಸಾವಿರ ರಾಜಪುತ್ರರು ಜಱೆದು ಜೋಡಿಸಿತು ।
ಹರಿಬವೆಮ್ಮದು ಸಾರಿ ನೀವೆಂ
ದರಸು ಮಕ್ಕಳ ನಿಲಿಸಿ ಬಿಲುಗೊಂ
ಡುರವಣಿಸಿ ತಡೆದನು ವಿರಾಟನು ಕಳಶ ಸಂಭವನ ॥ ೩೯*

ಅಡಸಿ ಗಿರಿಗಳ ನುಂಗುವನ ಬಾಯ್
ಹಿಡಿಯದಿಹುದೇ ಹಣ್ಣು ಹಂಪಲ
ಬಡ ವಿರಾಟನನಾರು ಬಲ್ಲರು ದ್ರೋಣನಿದಿರಿನಲಿ ।

---

[1] ವತ್ತು (ತ.ನ). * ಈ ಪದ್ಯವು (ಟ) ಪ್ರತಿಯಲ್ಲಿಲ್ಲ.

ನಡೆದು ಬಹುದನು ಕಂಡೆವಾ[1]ಗಲೆ[1]
ಮಡಿದನೆಂಬುದ[2]ನಱಿಯೆವೈ[2] ಬಿಲು
ಡುಡುಕಿ ಕುಂತೀಭೋಜ ಹೊಕ್ಕನು ಮಿಕ್ಕನವರುಗಳ ॥ ೪೦

ಅವರ ಹರಿಬವ ಬೇಡಿ ಸೃಂಜಯ
ರವಗಡಿಸಿದರು ಕೈಕೆಯರು ನೃಪ
ನಿವಹದಗಣಿತ ಚೈದ್ಯ ಯಾದವ ಮಗಧ ಮಾಳವರು ।
ವಿವಿಧ ವಾದ್ಯ ನಿನಾದ ಗಜ ಹಯ
ರವ ರಥ ಧ್ವನಿ ಜಗದ ಜಂತ್ರವ
ತಿವಿದು ಕೆದಱೆ ವಿರೋಧಿ ಬಲ ಕೆಣಕಿದುದು ಕಳಶಜನ ॥ ೪೧

ಕೇಳಿದೆನು ರಭಸವನು ಬಲು ಕೆಂ
ಧೂಳಿಯನು ಕಂಡೆನು ವಿರೋಧಿಗ
ಳಾಳ ಕಂಡೆನು ಕಾಣೆನಿತ್ತಲು ಕಳಶ ಸಂಭವನ ।
ಕೇಳಿದೀ ನಿಮಿಷಾರ್ಧದಲಿ ಕೆಂ
ಧೂಳ ಕಾಣೆನು ಕಾಣೆನರಿಭೂ
ಪಾಲರನು ಕೇಳರಸ ಕಂಡೆನು ಚಾಪ ಧೂರ್ಜಟಿಯ ॥ ೪೨

ಅರಸು ಮಕ್ಕಳು ಮತ್ಸ್ಯ ಪಾಂಚಾ
ಲರಲಿ ಕೈಕೆಯ ಚೈದ್ಯ [3]ಯಾದವ
ತುರುಕ ಬರ್ಬರ ಗೌಳ ಮಾಗಧ ಪಾರಿಯಾತ್ರರಲಿ[3] ।
ಉರುಳಿತೊಂದೇ [4]ಲಕ್ಷವು[4]ಳಿದೀ
ಕರಿ ವರೂಥ ಪದಾತಿ ತುರಗವ
ನರಸ ಲೆಕ್ಕಿಸಲಾರು ಬಲ್ಲರು ವೈರಿ ಸೇನೆಯಲಿ ॥ ೪೩

ಮುಱಿದುದಾ ಬಲವಿಳೆಯೊಡೆಯ ಬೊ
ಬ್ಬಿಱಿದುದೀ ಬಲವಪಜಯದ ಮಳೆ
ಗಱೆದುದವರಿಗೆ ಹಱಿದುದಿವರಿಗೆ ಸರ್ಪರಜ್ಜುಭಯ ।
ತೆರಳಿತಾಚೆಯ ಥಟ್ಟು ಮುಂದಣಿ
ಗುರವಣಿಸಿತೀ ಯೊಡ್ಡು ಕೌರವ
ರರಸನುತ್ಸಾಹವನು ಬಣ್ಣಿಸಲಱಿಯೆ ನಾನೆಂದ ॥ ೪೪

---

[1] ವಗ (ಕ). [2] ಕಾಣೆವೈ (ತ). [3] ಮಾಗಧ ತುರಕ ಖರ್ಪರ ಸಿಂಹಳರು ನರಪಾರಿಯಾತ್ರಕರು (ಕ), ತುರುಕ ಬರ್ಬರ ಚೀನಮಾಳವ ಪಾರಿಯಾತ್ರರಲಿ (ಟ.ದ). [4] ಕೋಟಿಯು (ತ.ನ).

ಭೂರಿ ವಿರಹಾಗ್ನಿಯಲಿ ಲೋಚನ
ವಾರಿಯಾಜ್ಯಾಹುತಿಗಳಲಿ ರಿಪು
ಮಾರಣಾಧ್ವರವೆಸೆದುದಿರುಳು ರಥಾಂಗ ದೀಕ್ಷಿತನ ।
ತಾರಕೆಯ ಮುರಿವುಗಳು ಕುಣಿವ ಸ
ಮೀರಣನ ಶಶಿಯೆಡೆಗೆ ರಜನೀ
ನಾರಿ ತೋಳೆಡೆಗೊಟ್ಟಳಂಬುಜಬಂಧು ಹೊರವಂಟ ॥ ೪೫

ಹದಿನೇಳನೆಯ ಸಂಧಿ ಮುಗಿದುದು

ಹದಿನೆಂಟನೆಯ ಸಂಧಿ

ಸೂಚನೆ ॥ ರಿಪು ಬಲವ ಗ[1]ಲುವ[1]ಲ್ಲಿ ಶಾಪಾ
ದಪಿ ಶರಾದಪಿಯೆಂಬ ಜಯಲೋ
ಲುಪನು ಸಂಗ್ರಾಮದಲಿ ಮಡಿದನು ಪುತ್ರ [2]ಮೋಹ[2]ದಲಿ ॥

ಸಾಲದೇ ಸಮರಂಗವಿರುಳಿನ
ಕಾಳೆಗದ ಜಯ ನಮ್ಮದರಿ ಭೂ
ಪಾಲಕನ ಥಟ್ಟಿನಲಿ ಮಡಿದುದು ಬೇಹ ಬೇಹವರು ।
ಮೇಲುಗಾಳೆಗ ನಮ್ಮದೀಸಱ
ಮೇಲೆ ತೆಗೆಸುವುದತಿ ಮಥನದಲಿ
ಕಾಳಹುದು ಬಳಿಕೆನಲು ನೃಪತಿಗೆ ನುಡಿದನಾಚಾರ್ಯ ॥ ೧

ಅವನಿಪಾಲರು ಕಂಗಳಿಂದವೆ
ಕಿವಿಗೆ ಕರವೊಳ್ಳಿದರು ಕಂಡುದ
ನವರು ನಂಬರು ಕೊಂಡೆಯರ ನುಡಿಗೇಳ್ದು ನಂಬುವರು ।
ನಿವಗೆ ಹೇಳುವುದಲ್ಲ ಲೋಕದ
ಹವಣನೆಂದೆವು ನಾವು ಪಾಂಡವ
ರವರು ನಿನ್ನವರೆಂಬುದನು ನೀನಿಂದು ನೋಡೆಂದ ॥ ೨

ಬಿಲ್ಲನೊದಱಿಸಿ ವೈರಿ ಭಟರಿಗೆ
ಚೆಲ್ಲಿದನು ಭೀತಿಯನು ಬಱಿಸಿಡಿ
ಲೆಲ್ಲಿ ತುಡುಕುವುದಾರು ಬಲ್ಲರು ದ್ರೋಣನುರವಣೆಯ ।
ಘಲ್ಲಣೆಯ ಖುರಪುಟದ ತುರಗದ
ಹಲ್ಲಣೆಯ ಹೇಷಿತಕೆ ಹಗೆಯೆದೆ
ಝಲ್ಲೆನಲು ಕಣೆ ಜಾಡಿ ಕವಿದುದು ಕಟಕದಗಲದಲಿ ॥ ೩

ಇಳೆಯೊಳದುಭುತವಿದು ಕೃತಾಂತನ
ಫಲಿತ ಶಾಳೀವನವ ಮುತ್ತಿದ
ಗಿಳಿಗಳೋ [3]ಆಚಾರ್ಯ[3]ನಂಬುಗಳೋ ಮಹಾದೇವ ।

---

[1] ಲಿದ (ಕ.ಗ.ಚ), ಲುತ (ದ). [2] ಶೋಕ (ಟ.ದ). [3] ಮೇಣ್ ದ್ರೋಣ (ಟ.ದ), ಗಾಢಾಯ್ಲ (ಚ.ತ.ನ.ಪ).

[1]ನಿಳಿನಿಳಿಲು ಛುಗಿಲೆಂಬ ಛಿಳಿಛಿಳಿ
ಛಿಳಿಛಿಟಿಲು ಛೋರೆಂಬ ಖಣಿಖಟಿ
ಖಳಿಲುಖಳಿಲೆಂಬಂಬುಗಳ ದನಿ ತುಂಬಿತಂಬರವ[1] ॥ ೪

ಕಡಿದು ಬೀಳುವ ಕೈದುಗಳನರೆ
ಗಡಿದು ಜೋಲುವ ಜೋಡುಗಳ ನೆಱೆ
ಸಿಡಿದು ಹಾಱುವ ಸೀಸಕದ ನುಗ್ಗಾದ ಹಲಗೆಗಳ ।
ಉಡಿದ ಸಿಂಧದ ನೆಲಕೆ ಹರಹಿದ
ಕೊಡೆಯ ಚಮರದ ತಾಱು ಥಟ್ಟಿಗೆ
ಕೆಡೆದ ಚಾತುರ್ಬಲವನಭಿವರ್ಣಿಸುವನಾರೆಂದ ॥ ೫

ಅಳಿದವೈನೂಱಾನೆ ಮುಗ್ಗುಲ
ನೆಲಕೆ ಕೀಲಿಸಿ ಪಾಡಿಗೈದವು
ಬಲುಗುದುರೆ ಹದಿನೈದು ಸಾವಿರವೇಳು ನೂಱು ರಥ ।
ಮಲಗಿದವು ಕಾಲಾಳು ಲೆಕ್ಕದ
ಕಲೆಯ ತೊಡಸಿತು ರಾಜಪುತ್ರರು
ಹಲಬರವರಲಿ ಹೊಯ್ದು ಹೊಕ್ಕರು ಸುರರ ಪಟ್ಟಣವ ॥ ೬

ಸಾಲ ಮೇಘದ ಮನೆಗಳಿಗೆ ಬಿಱು
ಗಾಳಿ ಬಿದ್ದಿನನಾಗಿ ಬರಲವ
ರಾಲಯದ ಸಿರಿ ಮೆಱೆವುದೇ ಧೃತರಾಷ್ಟ್ರ ಚಿತ್ತಯಿಸು ।
[2]ಬೀಳ[2]ಹೊಯ್ದರು ಹೊಕ್ಕು ಭೂಮೀ
ಪಾಲನೆಯನಿವರೊಲ್ಲೆವೆಂಬವೊ
ಲೂಳಿಗವ ಮಾಡಿದನು ಪರಬಲದೊಳಗೆ ಕಲಿ ದ್ರೋಣ ॥ ೭

ಮುಱಿದು ಬರುತಿದೆ ಸೇನೆ ಸಾಕೀ
ಪರಿಯ ಸ್ವೈರಣೆ ನಿಮ್ಮ ಮಾವನ
ಕುಱಿದಱಿಗೆ ಖತಿಗೊಂಡು ಕಾದಿ ವಿರಾಟ ಕೈಕೆಯರು ।
ತುಱುಗಿದರು ತೆತ್ತೀಸರಲಿ ತೆಗೆ
ಮಱೆಯ ಮಾತೇ ವಿಜಯ ಲಕ್ಷ್ಮಿಯ
ಸೆಱಗ ಹಿಡಿದನು ದ್ರೋಣನೆಂದರು ಚರರು ಭೂಪತಿಗೆ ॥ ೮

---

[1] ನಿಳಿನಿಟಿಲು ನಿಟಿಲೆಂಬ ಛಳಿಛಳಿ
ಛಳಿಛಿಟಿಲು ಛುಗಿಲೆಂಬ ಸಂಗರ
ದೊಳದ್ಭುತರಸದ ಧ್ವನಿಗಳು ತುಂಬಿತಂಬರವ ॥ (ಚ) [2] ಸಾಲ (ಕ.ಗ.ಟ).

ಹೊಳೆ ಹೊಳೆದು ತಂಬುಲದ ರಸದಲಿ
ಮುಳುಗಿ ಮೂಡುವ ಥಗೆಯ ತೊಡೆಹದ
ಮೆಲುನಗೆಯ ಕಳವಳವನರೆ ಮುಕ್ಕುಳಿಸಿದಾಲಿಗಳ |
ಹಿಳಿದ ಥಲದ ವಿಡಾಯಿ ಧೈರ್ಯದ
ತಳಿತ ಭೀತಿಗೆ ಕಾಲುವ್ರೇಳೆಯಾ
ದಳಿಮನದ ಭೂಪಾಲನಿರವನು ಕಂಡನಾ ಪಾರ್ಥ || ೯

ನಾಯಿಗಳ ಹೊಯ್' ನೂಕು ರಣದಲಿ
ಸಾಯಬೇಡಾ ಕ್ಷತ್ರಿಯರು ತಾ
ವಾಯುಧಂಗಳ ಹಿಡಿದರೋ ಮೇಣೇಕದಂಡಿಗಳೊ |
ಜೀಯ ಖಾತಿಯಿದೇಕೆ ಬೀಳಲಿ
ನಾಯಕರು ನಿನಗೇನು ಹರನಡ
ಹಾಯಲಿಂದರಿ ಬಲವನುರುಹುವೆನೆಂದನಾ ಪಾರ್ಥ || ೧೦

ನಿಲ್ಲು ಫಲುಗುಣ ನಿನ್ನ ಪರಿಯಂ
ತೆಲ್ಲಿಯದು ರಣವಕಟ ಹಾರುವ
ನಲ್ಲಿ ಕೆಲಬರ ಹೊಯ್ದು ಕೊಂದನು ಬಿನುಗು ಬಿಚ್ಚಟೆಯ |
ಬಲ್ಲೆನಾತನ ಬಲುಹನೀಶ್ವರ
ನಲ್ಲಿ ಹರಿಮೇಖಳೆಯೆ ಸಾಕಿ
ನ್ನೆಲ್ಲವೇತಕೆ ಯೆನುತ ಧೃಷ್ಟದ್ಯುಮ್ನನಸುವಾದ || ೧೧

ನೇಮವಾಯಿತು ಸಾತ್ಯಕಿಗೆ ಶ್ರುತ
ಸೋಮಕಾದಿ ಕುಮಾರರಿಗೆ ಸಂ
ಗ್ರಾಮ ವೀರ ಶಿಖಂಡಿ ಸೃಂಜಯ ಚೇಕಿತಾನರಿಗೆ |
ಆ ಮಹಾರಥರೈದಿದರು ಘನ
ತೋಮರಾದಿ ತುಱುಗಿದ ವರೂಥ[1]
ಸ್ತೋಮದಲಿ ಬಹುವಿಧದ ವಾದ್ಯ ವಿಡಾಯಿ ರಭಸದಲಿ || ೧೨

ಸರಕಟಸಿ ನೂಕಿತು ಚತುರ್ಬಲ
ವರರೆ ಹಾರುವನೆಲ್ಲಿ ಯಾವೆಡೆ
ದೊರೆ ಸುಯೋಧನನೆಲ್ಲಿ ರಾಧೆಯ ಮಗನ ಬರಹೇಳು |

[1] ದಲಿವರೂಥ ನಿಚಯ (ಕ), ದಲಿ ತುರುಗಿನಮಹಾನೃಪ (ಗ), ದಲಿ ತುರುಗದ ಪದಾತಿ (ಟ.ದ), ವತುರುಗಿತು ವರೂಥ (ಚ), ದಲಿ ತುರುಗಿದ ಪದಾತಿ (ತ.ಪ).

ಗುರು ಸುತನ ಕರೆ ಕಾದ ಹೇಳೋ
ದುರುಳ ದುಶ್ಶಾಸನನನೆನುತ
ಬ್ಬರಿಸಿ ಕವಿದುದು ವೈರಿ ಬಲವಾಚಾರ್ಯನಿದಿರಿನಲಿ ॥ ೧೩

ಅಂಗವಣೆಯೊಳ್ಳಿತು ಮಹಾದೇ
ವಂಗೆ ಮೊಗಸುವಡರಿದು ಮೊದಲಲಿ
ಸಿಂಗದಾಯತದಂಬು ಸುಳಿದರೆ ಮೊಲನ ಮುಂಚುವಿರಿ ।
ಭಂಗವಿಲ್ಲದೆ ಬಿದ್ದ ನಿಮ್ಮ
ಯ್ಯಂಗೆ ಹಳಿವನು ಹೊಱಿಸದಿಹ ಮನ
ದಂಗವಣೆಯುಂಟಾಗೆ ಮೆಚ್ಚುವೆನೆಂದನಾ ದ್ರೋಣ ॥ ೧೪

ಗಳಹತನ ನಿಮ್ಮಲ್ಲಿ ನೆಲೆ ನೀವ್
ಕಲಿತ ವಿದ್ಯ[1]ವು[1] ಮಾತಿನಲಿ ನೀವ್
[2]ಗೆಲುವುದಿದು[2] ತಪ್ಪಲ್ಲ ಮುಖದಿಂ ದ್ವಿಜರು ಜನಿಸಿದಿರಿ ।
ಗೆಲವು ತೋಳಿಂದೆಮಗೆ ಜನ್ಮ
ಸ್ಥಳವಲೇ ಭುಜವರಸುಗಳಿಗಿ
ನ್ನಳುಕದಿದಿರಲಿ ನಿಂದಿರಾದಡೆ ಗೆಲವು ನಿಮಗೆಂದ ॥ ೧೫

ಎನ್ನು ಮತ್ತೊಮ್ಮೆನ್ನು ತನ್ನಾ
ಣೆನ್ನು ಗೆಲವೇ ನಮಗೆ ನಿಂದರೆ
ನಿನ್ನ ಸಮ್ಮುಖದಲಿ ಮಹಾದೇವಹುದು ಬಳಿಕೇನು ।
ತನ್ನಲುಂಟೇ ಖರೆಯತನ ಬಱಿ
ದೆನ್ನನಿವನಿದ ಹಲವು ಬಾರಿಯ
ಮುನ್ನ ಬಲ್ಲೈ ನೀನೆನುತ ಸಾರಥಿಯ ಕೈವೊಯ್ದು ॥ ೧೬

ಈತ ಸೇನಾಪತಿ ಕರ್ಣಾ ತಾ
ನೀತನೈವರ ಮೈದುನನು ವಿ
ಖ್ಯಾತನಿವ ಪಾಂಚಾಲ ಕುಲದಲಿ ದ್ರುಪದ ತನುಜನಿವ ।
ಈತ ಸಾತ್ಯಕಿ ಯಾದವರ ಕುಲ
ದಾತನೀತ ಶಿಖಂಡಿ ಮೊದಲಾ
ದೀತಗಳು ನೆಱೆ [3]ಖರೆಯ[3]ರೆಂದನು ನಗುತ ಸಾರಥಿಗೆ ॥ ೧೭

---

[1] ವೆ (ಗ). [2] ಗೆಲಿದರಿದು (ಕ), ಗೆಲುವಿರಿದು (ಚ.ನ). [3] ವೀರ (ಟ.ದ).

ಮುಟ್ಟಿ ಬಂದುದು ಸೇನೆ ಕವಿದುದು
ಕಟ್ಟಳವಿಯಲಿ ಕಲಿಗಳೆದು ಬಳಿ
ಕಟ್ಟಿ ತಿಂಬ ಮಹಾಂತಕಂಗೌತಣವ ಹೇಳ್ವಂತೆ
ಕಟ್ಟಯೊಡೆದಂಬುಧಿಯೊ ಮೇಣು[6] ಜಗ
ಜಟ್ಟಿ ಸುರಿದಂಬುಗಳೊ ನಿಮಿಷಕೆ
ಕೆಟ್ಟುದಾಚೆಯ ಬಲದ ತರಹರವರಸ ಕೇಳೆಂದ ॥ ೧೮

ನುಡಿಗೆ ಮುಂಚುವ ಬಾಣ ಮಾರುತ
[1]ನಡಸಿ ಬೀಸುವ ಲಾಗು[1] ತಲೆಗಳ
ತೊಡ[2]ಬೆ[2]ಗಳಚುವ [3]ವೇಗವನು ಬಣ್ಣಿಸು[3]ವರೆನ್ನಳವೆ ।
ಕಡಲ ಕಡಹದಲುರಿವ ಗರಳವ
ನುಡುಗಿದವರಿವರೋ ಶಿವಾಯೆಂ
ದೊಡನೊಡನೆ ಪಡೆ ನಡುಗಲೊರಸಿದನಾ ಮಹಾರಥರ ॥ ೧೯

ಕರಿಗಳೈಸಾವಿರ ತುರಂಗಮ
ವೆರಡು ಸಾವಿರ[4]ವೆಂಟು[4] ಸಾವಿರ
ವರ [5]ವರೂಥದ[5] ಥಟ್ಟು ಮುಱಿದುದು ಲಕ್ಷ ಪಾಯದಳ ।
ಅರಸುಗಳು ಮೂನೂಱು ಪುನರಪಿ
ಕರಿ ತುರಗ ರಥ ಮತ್ತೆ ಮೂವ
ತ್ತೆರಡು ಸಾವಿರವಳಿದು[6]ದರಿ ಪಾಂಚಾಲ[6] ಸೇನೆಯಲಿ ॥ ೨೦

ಮತ್ತೆ ಕವಿದುದು ಹೆಣನ ತುಳಿದೊ
ತ್ತೊತ್ತೆಯಲಿ ರಿಪುಸೇನೆ ಮಂಜಿನ
ಮುತ್ತಿಗೆಯ ರವಿಯಂತೆ ಕಾಣೆನು ಕಳಶ ಸಂಭವನ ।
ಮತ್ತೆ ನಿಮಿಷಾರ್ಧದಲಿ ಕಾಲನ
ತುತ್ತು ಜೋಡಿಸಿತೇನನೆಂಬೆನು
ಹತ್ತು ಕೋಟಿಯನಿಳುಹಿದನು ರಿಪು ಚಾತುರಂಗದಲಿ ॥ ೨೧

ಘಾಸಿಯಾದುದು ಸೇನೆ ಸುಡಲೆನು
ತಾ ಸುಭಟರಿದಿರಾಗಿ ಕಾದಿದ
ರೈಸೆ ಬಳಿಕೇನವರ ಸತ್ವ ತ್ರಾಣವೇನಲ್ಲಿ ।

---

[1] ನಡೆಸುವ ಬಾಗು (ಟ). [2] ಚಿ (ಗ.ಜ.ನ.ಪ). [3] ಲೆಕ್ಕಗಳ ಗಡ ಣಿಸುವ (ಟ.ದ). [4] ವೆರಡು (ಚ.ದ), ನಾಲ್ಕು (ಟ). [5] ಮಹಾರಥ (ಕ.ಗ.ಟ). [6] ದಾಪಾಂಡವರ (ಚ).

ಸೂಸುಗಣೆಗಳ ಸೊಗಡು ಹೊಯ್ದುದಪ
ಹಾಸಕೊಳಗಾದರು ಮಹಾರಥ
ರೀಸು ಭಂಗಕೆ ಬಂದುದಿಲ್ಲ ನೃಪಾಲ ಕೇಳೆಂದ ॥ ೨೨

ಕಂಡುದಿವರನು ರಾಯ ಮೋಹರ
ವಂಡುಗೊಂಡುದು[1] ದೊರೆಗಳಿದು ಕೋ
ದಂಡರುದ್ರನ ರಣ ಕಣಾ ತಾವೇನನೊದಗುವರು ।
ಉಂಡ ಬಾಸಣದೇಱು ಮದ್ದಿನ
ಗಂಡನೋ ದ್ರೋಣಾಸ್ತ್ರವನು ಸವಿ
ಗಂಡನೋ ಸಾತ್ಯಕಿಯೆನುತ ಗರ್ಜಿಸಿದ[2]ನಾ ಭೀಮ[2] ॥ ೨೩

ನುಡಿದು ಭಂಗಿಸಲೇಕೆ ಸದರವ
ಕೊಡುವುದಾಹವವೊಮ್ಮೆ ಮಗುಳವ
ಗಡಿಸುವುದು ವಿಕ್ರಮಕೆ ಕುಂದೇನಿದು ಮುಹೂರ್ತ ವಶ ।
ಪಡೆ ಸವೆದುದಿನ್ನೇನೆನುತ ಬಿಲ
ದುಡುಕಿ ಹೊಕ್ಕನು ಪಾರ್ಥನನಿಲಜ
ನೊಡನೆ ಬಳಿಸಂಧಿಸಿತು [3]ಸನ್ನಾಹ[3]ದಲಿ ಪರಿವಾರ ॥ ೨೪

ಭೀತಿ ಮಾಣಲಿ ಭೀಮ ಫಲುಗುಣ
ರಾತುಕೊಂಡರು ಬವರವನು ನೆಱೆ
ಸೋತವರು ಸಂವರಿಸಿ ಕೊಂಬುದೆನುತ್ತ ಚರರುಲಿಯೆ ।
ಚಾತುರಂಗದ ಚರಣ ಹತಿ ನಿ
ರ್ಧೂತ ಧೂಳೀಮಯವಖಿಳ ದಿಗು
ಜಾತವೆನೆ ಥಟ್ಟಣೆಯಲೇಱಿತು ಪಾಂಡುಸುತ ಸೇನೆ ॥ ೨೫

ಆಳಿಯೋ ನಿಮಗೆನ್ನ ಸರಳಿಂ
ದಾಳು ಕುದುರೆಯ ಕೊಲಿಸುವುದು ನಿಮ
ಗಾಳುತನವುಂಟೆಂಬ ಗರ್ವವನಿಲ್ಲಿ ತೋಱಿಸಿರೆ ।
ಆಳು ನೋಡುತ್ತಿರಲಿ ನಮ್ಮೀ
ಕಾಳೆಗವನೆಲೆ ಪಾರ್ಥ ಪವನಜ
ಹೇಳೆನುತ ಕೈವರ್ತಿಸಿದನಂಬುಗಳಿಗಿವರೊಡಲ ॥ ೨೬

---

[1] ಡರೆ (ಕ.ಟ.ನ). [2] ನಾಚಾರ್ಯ (ಕ.ಟ.ನ). [3] ಸಂಗ್ರಾಮ (ಟ).

ನರನನೆಚ್ಚನು ಪವನಜನ ತನು
ಬಿರಿಯಲೆಚ್ಚನು ಸಾರಥಿಗಳಿ
ಬ್ಬರಲಿ ಹೂಳಿದನಂಬ ನೆಱೆ ನೋಯಿಸಿದ ರಥ ಹಯವ ।
ನರನ ಕಣೆಯನು ಭೀಮನಂಬನು
ಹರೆಗಡಿದು ಮಗುಳೆಚ್ಚನವರನು
ಸರಳ ಪುನರಪಿ ಸವಱಿ ಸೆಕ್ಕಿದನೊಡಲೊಳಂಬುಗಳ ॥ ೨೭

ದಿಟ್ಟಿ ಮುಷ್ಟಿಯ ಸರಿಸದಲಿ ತಲೆ
ಮುಟ್ಟು [1]ಕವಿದರು[1] ಭೀಮ ಫಲುಗುಣ
ರಿಟ್ಟ ತೊಡರಿನೊಳಾರು ಸಿಲುಕರು ದಿವಿಜ ದನುಜರಲಿ ।
ನೆಟ್ಟನೈದುವ ಹಿಳುಕುಗಳ ತಱಿ
ದೊಟ್ಟಿದನು ದೆಖ್ಖಾಯಿಯಲಿ ಗಱಿ
ಗಟ್ಟಿತೀತನ ಖಾತಿ ಮಿಱಿದುದು ಕೇಣವಿಲ್ಲೆನಿಸಿ ॥ ೨೮

ರಾಯನನು ಬರಹೇಳು ನಾವ್ ಕೈ
ಗಾಯೆವೋ ಕಾಯಿದೆವೊ ಕಾಣಲಿ
ಬಾಯಿ ಬಡಿಕರು ಬಂದು ನೋಡಲಿ ಕರ್ಣ ಶಕುನಿಗಳು ।
ಆಯುಧವ ಹಿಡಿದವರು ಮೇಣ್ವ
ರಾಯತದೊಳೊಡವೆರಸಿ ನೋಡಲಿ
ರಾಯನಾಣೆಯೆನುತ್ತ ಮೂದಲಿಸಿದನು ತನ್ನವರ ॥ ೨೯

ಬಾಲ ಸೂರ್ಯನ ಪೋಲ್ ಪ್ರತಿಕ್ಷಣ
ದೇಳಿಗೆಯ ತೇಜದ ವಿ[2]ಕಾ[2]ರ ಚ
ಡಾಳಿಸಿತು ವಿಕ್ರಮದ ಝಳ ಜಗವಳುಕೆ ಝೊಂಪಿಸಿತು ।
ಹೇಳಲೇನರ್ಜುನನ ಭೀಮನ
ಸೋಲವದು ತಾ ಮೃತ್ಯುವೀ ಪರಿ
ಕಾಳೆಗವ ನಾನಱಿಯೆನಮರಾಸುರರ ಧಟ್ಟನಲಿ ॥ ೩೦

ಸಾಕು ನಿಮಗಾಗದು ವೃಥಾ ನೀ
ವೇಕಹಂಕರಿಸುವಿರಿ ಸೇನಾ
ನೀಕ ಹೊದ್ದಲಿ ಹೊಗಲಿ ಧೃಷ್ಟದ್ಯುಮ್ನ ಮೊದಲಾಗಿ ।

[1] ಕರೆದನು (ಗ.ಚ.ದ.ನ). [2] ಪಾ (ತ.ಪ).

ಆಕೆವಾಳರು ನಿಲಲಿ ಕುಪಿತ ಪಿ
ನಾಕಿಯಱಿಯಾ ದ್ರೋಣನೆನುತ ನ
ರಾಕೃತಿಯ ಪರಬೊಮ್ಮ ರೂಪನು ತಿರುಹಿದನು ರಥವ ॥ ೩೧

ಮೇಲೆ ಬಿದ್ದುದು ಮುಳಿಸಿನಲಿ ಪಾಂ
ಚಾಲರಾಯನ ಥಟ್ಟು ನಿಶಿತ ಶ
ರಾಳಿಯಲಿ ಹೂಳಿದನು ಧೃಷ್ಟದ್ಯುಮ್ನನಂಬರವ ।
ಬಾಲಕರಲೇ ಖಡ್ಗಧಾರೆಯ
ಮೇಲೆ ಮೋಹಿದ ಮಧುವ ಸವಿಯಲಿ
ನಾಲಗೆಯಲಿವರೊಲ್ಲರೆಂದನು ನಗುತ ಕಲಿ ದ್ರೋಣ ॥ ೩೨

ತೆಱಹ ಕೊಟ್ಟೊಳಹೊಗಿಸಿ ಸದೆದನು
ಬಱಸಿಡಿಲು ಜಡಿವಂತೆ ರಿಪು ಬಲ
ಪೊಱಲಿ ಕೆಡೆದುದು ಘಾಯವಡೆದುದು ಜೇಹ ನಾಯಕರು ।
ದುಱುದುಱಿಪ ತಲೆಮಿದುಳ ದಂಡೆಯು
ಹಱಿಗರುಳ ನೆಣವಸೆಯ ಮೂಳೆಯು
ಮುಱಿಕುಗಳ ಕಡಿಖಂಡ ಮಯವಾಯ್ತಖಿಳ ಚತುರಂಗ ॥ ೩೩

ಬೆರಳ ಬಾಯ್ಗಳ ಬಿಸುಟ ಕೈದುಗ
ಳೆರೆಗಿರಿದ ಹಲ್ಲುಗಳ ಕೂಡಿದ
ಕರಪುಟದ ಬಿಡುದಲೆಯ ಬಸಿವೇಱುಗಳ ಶೋಣಿತದ ।
ನರಳುವಾರೋಹಕರ ರಾವ್ತರ
ವರ ಮಹಾರಥ ಪಾಯದಳದು
ಬ್ಬರದ ಭಂಗವನೇನನೆಂಬೆನು ವೈರಿ ಸೇನೆಯಲಿ ॥ ೩೪

ಮುಂದೆ ಹೊಗುವತಿಬಳರು ಹಾರಿತು
ಹಿಂದಣವರನು ಹಿಂದೆ ನಿಲುವರು
ಮುಂದಣವರಾಸೆಯಲಿ ನಿಂದುದು ಪಾರ್ಥ ಪರಿಯಂತ ।
ಅಂದು ಪಾರ್ಥನು ಕೃಷ್ಣ ಬಲದಲಿ
ನಿಂದನೇವೇಳುವೆನು ನಿನ್ನವ
ರೆಂದು ಗೆಲ್ಲರು [1]ಗಾಹು[1] ಗತಕವನುಳಿದು ಕಾದುವರೆ ॥ ೩೫

[1] ದ್ರೋಣ (ನ).

ಆಱು ಸಾವಿರ ತೇರು ಗಜ ಹದಿ
ನಾಱು ಸಾವಿರ ಲಕ್ಷ ಕುದುರೆಗ
ಳಾಱು ಕೋಟಿ ಪದಾತಿ ಮುಗ್ಗಿತು ಮತ್ತೆ ಸಂದಣಿಸಿ ।
ಆಱು ಲಕ್ಷ ತುರಂಗ ನೃಪರೈ
ನೂಱು ಗಜ ಘಟೆ ಲಕ್ಷ ರಥ ಹದಿ
[1]ಮೂ[1]ಱು ಸಾವಿರವಳಿದುದರಿ ಪಾಂಚಾಲ ಸೇನೆಯಲಿ ॥ ೩೬

ಅಂಗವಿಸುವವರಿಲ್ಲ ಭಟರಿಗೆ
ಭಂಗವಿಕ್ಕಿತು ಕೌರವೇಂದ್ರಗೆ
ಸಂಗರದ ಸಿರಿ ಸೊಗಸಿನಲಿ ಕಡೆಗಣ್ಣ ಸೂಸಿದಳು ।
ಮುಂಗುಡಿಯಲಿನ್ನಾರು ನಮಗಾ
ವಂಗದಲಿ ಜಯ[2]ವೇನು ಹದನ[2]ರ
ಸಂಗೆ ಬಿನ್ನಹ ಮಾಡಿಯೆಂದರು ನಿಖಿಳ ಮಂತ್ರಿಗಳು ॥ ೩೭

ಕರಸಿದನು ಹರಿ ಧರ್ಮಪುತ್ರನ
ನರಸ ಕೇಳಿಂದಿನಲಿ ಗುರುವನು
ಸರಳ ಮೊನೆಯಲಿ ಗೆಲಲು ಸೂಕದು ಭೂತನಾಥಂಗೆ ।
ತೆರಳಿ ಬರುತಿದೆ ನಮ್ಮ ಬಲ ಸಂ
ಗರದ ಜಯವಹುದೆಂತು ಹೇಳೈ
ಧರಣಿ ಪತಿ ನೀನೆನಲು ನೀವೇ ಬಲ್ಲಿರಿದನೆಂದ ॥ ೩೮

ಧುರದ ಜಯವಹುದೊಂದು ಪರಿಯಲಿ
ನಿರುತವಲ್ಲದ ನುಡಿಯ ನುಡಿದರೆ
ಪರಿಹರಿಸ ಬಹುದೆಂದನಸುರಾರಾತಿ ನಸುನಗುತ ।
ನರನದೆಂತೆನೆ ಗುರುತನುಜ ಸಂ
ಗರದೊಳೊಱಗಿದನೆಂದು ದ್ರೋಣಂ
ಗಱುಹು ಫಲುಗುಣ ಮನದೊಳಳುಕದೆ ಬೇಗ ಮಾಡೆಂದ ॥ ೩೯

ಕಿವಿಯ ಮುಚ್ಚಿದನರ್ಜುನನು ಹರಿ
ಯವಗಡಿಸೆ ಕೈಕೊಂಡನರಸನು
ಪವನಸುತನಾ ಮಾತ ಕೊಂಡನು ಹೊಕ್ಕನಾಹವವ ।

---

[1] ನಾ (ಗ.ಟ). [2] ವೆಂದನುತಲ (ಟ).

ತವಕದಲಿ ತೆಗೆಪೆಸುತ ರಿಪು ಶರ
ನಿವಹವನು ಖಂಡಿಸುತಲಿಂದಿನ
ಬವರದಲಿ [1]ಕಡಿವಡೆದುದಶ್ವತ್ಥಾಮ ಕೇಳೆಂದ[1] ‖ ೪೦

ಶಿವ ಶಿವಾ ಕರ್ಣಜ್ವರಾಯುತ
ರವಪಿದೆತ್ತಣವೋ ಕುಮಾರನ
ತಿವಿದರಾರೋ ಕಾನಿದದುಭುತವೆನುತ ತನ್ನೊಳಗೆ |
ತವಕಿಸುತ ಕೇಳಿದನು ವೃಕೋದರ
ನಿವ ದುರಾತ್ಮನು ತನ್ನ ಮಗ[2]ನಾ[2]
ಶಿವನೊಡನೆ ಸಮಜೋಳಿ ಹುಸಿ ಜೋಗೆಂದನಾ ದ್ರೋಣ ‖ ೪೧

ಮತ್ತೆ ಮಸೆದುದು ಖಾತಿ ಕರ್ಬೊಗೆ
ಸುತ್ತಿದುಸು[3]ರಲಿ[3] ಮೀಸೆಗಡಿದೌ
ಡೊತ್ತಿ ಸೆಳೆದನು ಶರವನೆಬ್ಬನು ಪವನ ನಂದನನ |
ಹತ್ತೆಗಡಿದನು ಭೀಮ [4]ಮುಗುಳಿವ[4]
ನೊತ್ತಿ ಹೊಕ್ಕರೆ ಕೈ ನೆರವ ಹಾ
ರುತ್ತ ಮುರಿದನು ಬಳಿಕ ಧೃಷ್ಟದ್ಯುಮ್ನನಿದಿರಾದ ‖ ೪೨

[5]ಎ[5]ನಿತು ಬಾರಿ ಪಲಾಯನದ ಸಿರಿ
ನಿನಗೆ ಸೇರಿತು ವೀರ ಭಂಡನೊ
ಳೆನಗೆ ನೂಕದು ಸಾ[6]ಕು[6] ಧೃಷ್ಟದ್ಯುಮ್ನ ನಿಲ್ಲೆನುತ |
ಅನಿಲ ಜವದಲಿ ರಥವ ಬಿಟ್ಟನು
ಜನಪತಿಯ ಮೋಹರಕೆ ಕವಿದುದು
ತನತನಗೆ ರಾಯನ ವಿಪತ್ತಿನೊಳಖಿಳ ಭಟನಿಕರ ‖ ೪೩

ಒಲೆದು ಗಜವಿಟ್ಟಣಿಸಿದವು ತಲೆ
ವಲಗೆಯಲಿ ಕಲಿ ಪಾಯದಳ ಪಡಿ
ತಳಿಸಿತೊಳಹೊಕ್ಕೌಂಕಿದವು ಬದ್ಧರದ ಬಂಡಿಗಳು |
ಸೆಳೆದಡಾಯ್ದದ ರಾವುತರು ಕೈ
ನಿಲುಕಿದರು ಮುತ್ತಿದರು ಪರಿಮಂ
ಡಳಿಸಿ ಬೊಬ್ಬಿಱಿದಾರಿದರು ಸಿಕ್ಕಿದನು ಹಗೆಯೆನುತ ‖ ೪೪

---

1 ಬಸವಳಿದುದಶ್ವತ್ಥಾಮಗಜವೆಂದ (ಕ). 2 ನೇ (ಕ.ಗ.ಟ.ಚ). 3 ರಿನ (ಕ.ತ). 4 ನಿಪಮೆ (ಕ), ಮುಗುಳಪ (ಚ.ನ). 5 ಇ (ಕ.ಗ.ಚ). 6 ರಿ (ತ), ಕ್ರೈ (ಚ).

ಸಾರಥಿಯ ತುಡುಕಿದರು ತಿವಿದರು
ತೇರ ಕುದುರೆಯನಿಭದ ಬರಿಕೈ
ತೇರ ಹಿಡಿದವು ಘಲ್ಲಿಸಿದವನುಕರುಷ ಕೂಬರವ ।
[1]ಭಾರಿ ಯಿಾಚಿನ ಮೇಲೆ ಬಿದ್ದವು[1]
ವಾರುವಂಗಳ ಖುರ ನಿಕರವಸಿ
ಧಾರೆ ಮೊಗದಲಿ [2]ಮಿಂಚಿ[2]ದವು ಮುತ್ತಿದವು ಕಳಶಜನ ॥ ೪೫

[3] ದ್ರೋಹಿ ಸಿಲುಕಿದನೆನುತೆ ಜೀವ
ಗ್ರಾಹವ್ರೋ[3] ಸಾಹಸ ವಿಚಾರಿಸು
ಬೇಹವರನೆನುತೊಱಲಿ ಧೃಷ್ಟದ್ಯುಮ್ನನಿದಿರಾಗೆ ।
ಸಾಹಸಿಕರಳುಕಿದರು ಕೌರವ
ಮೋಹರದ ಮೊನೆಯಾಳುಗಳು ಸ
ನ್ನಾಹದಲಿ ಪಡಿತಳಿಸಿ ಕರ್ಣ ಕೃಪಾದಿ ನಾಯಕರು ॥ ೪೬

ಗಾಳ ಗಂಟಲಲಿಳಿವುದೇ ಮ
ತ್ಸ್ಯಾಳಿಗ[1]ಕಟೀ[1] ದೊದ್ದೆ ಕವಿದರೆ
ಕೋಲ ಗುರು ಕಳವಳಿಸುವನೆ [5]ಬಯಸುವನೆ[5] ಕೆಲಬಲನ ।
ಮೇಲುಗಾಣದೆ ಕವಿದಡಿದಿರೇ
ಬಾಲ ಹರಿಣನ ಹಿಂಡು ಹೆಬ್ಬುಲಿ
ಗಾಳ ತತ್ತರಿದಱಿದು ತಳಪಟ ಮಾಡಿದನು ದ್ರೋಣ. ॥ ೪೭

ಆರ ನೆರವಿಯೊಳಂಧಕಾರದ
ಭಾರವನು ರವಿ ಗೆಲುವನಿನ್ನೀ
ವೈರಿ ಬಲ ಭಂಜನಕೆ ಗುರು [6]ಹಂಗಹನೆ[6] ಕೆಲಬಲಕೆ ।
ಭೂರಿ ರಿಪು ಚತುರಂಗ ಬಲ ಸಂ
ಹಾರದಲಿ ಒಱವೆದ್ದ ರಕುತದ
ಪೂರದಲಿ ಮುಳುಗಿದರು [7]ಪಾಂಚಾಲಾದಿ[7] ನಾಯಕರು ॥ ೪೮

[1] ಭಾರವಿಸಿ ಮೇಲೆ ಬಿದ್ದಪು (ಕ), ಭಾರಣೆಯು ಬಲ ಮೇಲೆ ಬಿದ್ದುದು, (ಗ.ಚ), ಭಾರವಿಸಿ ಮೇಲಿಕ್ಕಿ ಬಿದ್ದುದು (ಟ). [2] ಚಿಮ್ಮಿ (ಕ). [3] ದ್ರೋಹಿ ಸಿಲುಕಿದನಿನ್ನು ಜೀವಗ್ರಹಣವ್ರೊ (ಗ) ದ್ರೋಹಿಸಿಲುಕಿದನೆಲವ್ರೊ ಜೀವಗ್ರಾಹಿಯೋ (ಟ.ದ). [1] ಳಬಲು (ಸ.ಕ). [5] ಹಾರವನೆ (ಗ.). [6] ಹಂಗಿಗನೆ (ಚ) ಹಾರುವನೆ (ಟ.ದ). [7] ಕರ್ಣಕೃಪಾದಿ (ಕ) ಧರ್ಮಸುತಾದಿ (ಚ.ಪ)

ಘಾಯವಾಯ್ತರ್ಜುನಗೆ ಮಿಗೆ ಪೂ
ರಾಯದೇಱಿನೊಳೊದೆದು ಕೊಂಡರು
ವಾಯುತನುಜ ಶಿಖಂಡಿ ಸಾತ್ಯಕಿ ದ್ರುಪದ ನಂದನರು ।
ಬಾಯ ಬಿಟ್ಟುದು ಭೀತಿಯಲಿ ಕೌಂ
ತೇಯಸುತರಿನ್ನುಳಿದ ಸುಭಟರ
ನಾಯಕರ ಪಾಡೇನು [1]ನ[1]ಸಿದುದು ಪಾಂಡುಸುತ ಸೇನೆ ॥ ೪೯

ಮೊದಲಲೌಕಿದ ಚಾತುರಂಗವ
ಸದೆದನೊಂದೇ ಲಕ್ಷವನು ಮಿಾ
ಱಿದರೆ ಮೋದಿದನೆಂಟು ಲಕ್ಷವನೊಂದು ನಿಮಿಷದಲಿ ।
ಕದನದಲಿ [2]ದಿಗ್ದೇವಿಯರಿಗಿ
ಕ್ಕಿದನು ಲಕ್ಷವನೇಳು[2] ಲಕ್ಷವ
ನೊದಗಿಸಿದನಂತಕನ ಪುರಿಗವನೀಶ ಕೇಳೆಂದ ॥ ೫೦

ಧಾರುಣೀಶರು ಮಡಿದರೊಂದೇ
ಸಾರಿಗೆಯಲೈನೂಱು ಮತ್ತೆ ಮ
ಹಾರಥರು ಮೂನೂಱು ಪುನರಪಿ [3]ನೂಱು ನಾನೂಱು[3] ।
ಮಾರಿ ಬಿಱುದೇಗಿದಳು ಯಮನವ
ರಾಱಿದೊಯ್ಯಲು ನಾಕದಲಿ ಹೊರ
ಕೇರಿಗಟ್ಟಿದುದೆನಲು ಕೊಂದನು ರಿಪು ಚತುರ್ಬಲವ ॥ ೫೧

ಇಳಿದರಿತ್ತಲು ಗಗನದಿಂ ಹೊಳೆ
ಹೊಳೆವ ಧಾಳದ ಝೂಡಿಯಲಿ ಜಗ
ಮುಳುಗೆ ಭಸ್ಮವಿಭೂಷಿತಾಂಗದ ಜಡಿವ ಕೆಂಜೆಡೆಯ ।
ಪುಲಿದೊಗಲ ಸುಲಿಪಲ್ಲ ಮುಕ್ತಾ
ವಳಿಯ ಮಣಿ ಜಪಮಾಲಿಕೆಯ ನಿ
ರ್ಮಳ ತಪೋಧನರೈದಿದರು ಸಂಗ್ರಾಮ ಭೂಮಿಯನು ॥ ೫೨

ಅತ್ರಿ ಭಾರದ್ವಾಜ ವಿಶ್ವಾ
ಮಿತ್ರ ಗೌತಮ ಕಣ್ವ ಕಶ್ಯಪ
ಮಿತ್ರಸೂನು ವಸಿಷ್ಠ ಗಾರ್ಗ್ಯಾಂಗಿರಸ ಭಾರ್ಗವರು ।

---

[1] ನು (ಕ). [2] ನೆಱೆ ದಿಗ್ಬಲಿಯನಿಕ್ಕಿದನು ಲಕ್ಷವನೇಳು (ಟ).
[3] ನೂಱು ಮುನ್ನೂಱು (ಗ.ಚ) ನೂಱು ನೂಱಾಗಿ (ಟ) ನೂಱು ನೂಱಾಱು (ತ).

[1]ಅತ್ರಿಸುತ ವರ ವಾಲಖಿಲ್ಯರು[1]
ಚಿತ್ರಚರಿತರು ಬಂದರಲ್ಲಿಗೆ
ಮಿತ್ರಭಾವದಲವರನಭಿವಂದಿಸಿದನಾಚಾರ್ಯ ॥ ೫೩

ವರ ಮುನೀಶ್ವರರವನಿಯಲಿ ಮೂ
ವರಿಗೆ ಗೋಚರವಾದರಿತ್ತಲು
ಮುರ ವಿರೋಧಿಗೆ ನರಗೆ ಕುರುಸೇನಾಧಿನಾಥಂಗೆ ।
ಅಱಿಯರುಳಿದವರೀತನಿಂ ಸ
ತ್ಕರಿಸಿಕೊಂಡರು ನುಡಿದರಾ ಮುನಿ
ವರರು ಕಡಿದರು ಕೌರವಾನ್ವಯ ಕಲ್ಪಭೂರುಹವ ॥ ೫೪

ಪಾತಕವಲಾ ದ್ರೋಣ ನಿನಗೀ
ಭೂತ ಹಿಂಸೆಯದೇಕೆ ಪಾರ್ಥಿವ
ಜಾತಿಯಲಿ [2]ಜನಿಸಿದವರೀ ನಿನ್ನಂತೆ ನಿರ್ದಯರೆ[2] ।
ಸೋತರೇನದು ಖುಷಿತನಕಪ
ಖ್ಯಾತಿಯೇ ಶಸ್ತ್ರೋಪಜೀವನ
ವೇತಕಿದು [3]ನಿನ[3]ಗೆಂದು ಭಾರದ್ವಾಜ ಮುನಿ ನುಡಿದ ॥ ೫೫

ಲೋಕವೆಂಬುದು ವರ್ಣಧರ್ಮವ
ನೌಕಿ ನಡೆವುದು ವೈದಿಕಕೆ ನಾ
ವಾಕೆವಾಳರು ತಪ್ಪಿ ನಡೆದರೆ ಭ್ರಮಿಸುವರು ಬುಧರು ।
ಲೋಕ ನಮ್ಮನುದಾಹರಿಸುವುದು
ಕಾಕನೇ ಬಳಸುವುದು ದುರ್ಯಶ
ವೇಕೆ ನಿಮಗಿದು ವಿಹಿತಕರ್ಮಶ್ರುತಿ ಪರಿತ್ಯಾಗ ॥ ೫೬

ಶ್ರುತಿ ಪಠಣವೋ ತರ್ಪಣವೊ ಮೇ
ಣತಿಥಿ ಪೂಜೆಯೊ ಭೂತಯಜ್ಞವೊ
ಹುತವಹಾರಾಧನೆಯೊ ರಣವೀ ಯ್ವೈಯ್ದರೊಳಗೇನು ।
ಶ್ರುತಿ ತದರ್ಥಸ್ಮೃತಿಗಳಲಿ ಪಂ
ಡಿತರು ನಡೆವುದ ಮಾದು ಮೂರ್ಖರ
ಗತಿಯನನುಕರಿಸಿದರೆ ಬಳಿಕ ವಿಶೇಷವೇನೆಂದ ॥ ೫೭

---

[1] ಮೈತ್ರಮುಷಿವರಪಾಲವಿಾಕಿಂಯು (ಕ.), ಸತ್ರಿಗಳು ವರವಾಲಖಿಲ್ಯರು (ಚ.), ಸತ್ರಿಗಳು ಸನ್ಮಾರ್ಗಶೀಲರು (ಟ.ದ). [2] ನಿನ್ನಂತೆ ನಿರ್ದಯರಿಲ್ಲ ಜನಿಸಿದರು (ಕ). [3] ನಮ (ಪ-ತ).

ಆದುದವಿವೇಕದಲಿ [1]ಸತ್ಪಥ[1]
ವೈದಿಕಾತಿಕ್ರಮಣವಿನ್ನು ಗ
ತೋದಕದಲುಜುಟೆ [2]ಸೇತು ಸಂಬಂಧದಲಿ[2] ಫಲವೇನು ।
ಈ ದುರಾಗ್ರಹ ನಿಲಲಿ ಹಾಯಿಕು
ಕೈದುವನು [3]ಸುಸಮಾಧಿ[3]ಯೋಗದ
ಲೈದು ನಿಜವನು ದೇಹ ನಿಸ್ಪೃಹನಾಗು ನೀನೆಂದ ॥ ೫೮

ದೇಹವಿದು ಭೂತೇಂದ್ರಿಯಾದಿಯ
ಗೇಹವುಪಚಿತ ಕರ್ಮಫಲ ಸಂ
ದೋಹದಲಿ ತಿರುಗುವುವು ಸುರ ನರ ತಿರ್ಯಗಾದಿಯಲಿ ।
ದೇಹ ಕರಣಾದಿ ಪ್ರಪಂಚವು
[4]ನಾ[4]ಹಮೆನಲಳಿದುಳಿದ ನಿತ್ಯನಿ
[5]ರೀಹ ವಿಮಳ[5]ಜ್ಞಾನ ರೂಪನು ನಿನ್ನ ನೋಡೆಂದ ॥ ೫೯

ನನೆದುದಂತಃಕರಣ ರೋಮಾಂ
ಚನದಲಾನಂದಾಶ್ರುಜಲದಲಿ
ನನೆದು ಹೊಂಪುಳಿಯೋಗಿ ಕಣ್ಣಿವೆ ಮುಚ್ಚಿ ಹೊರೆಹೆಚ್ಚಿ ।
ನೆನೆದೆನೆನ್ನನು ನಿಮ್ಮ ಪದ ದರು
ಶನದಿ ಧನ್ಯನು ಬಿಜಯ ಮಾಡುವು
ದೆನುತ ಕಂದೆಱೆದೀಕ್ಷಿಸಿದನಂದುಭಯ ಸೈನಿಕವ ॥ ೬೦

ತಿರುಗಿದುದು ಮುನಿ ನಿಕರವತ್ತಲು
[6]ಮರಳಿತೀತ[6]ನ ಬುದ್ಧಿಯಿತ್ತಲು
ತೆರೆಯ ಹಿಡಿದುದು ಮಱವೆ ಸಮ್ಯಜ್ಞಾನ ದೀ[7]ಧಿತಿ[7]ಗೆ ।
ಅರಸನನು ಬೆಸಗೊಂಬ ತನುಜನ
ಮರಣ ಹುಸಿಯೋ ದಿಟವೊ ಭೀಮನ
ಸೊರಹ ನಂಬೆನೆನುತ್ತ ರಾಯನನಱಸುತೈತಂದ ॥ ೬೧

ಎಲೆ ಯುಧಿಷ್ಠಿರ ನನ್ನ ಸುತನೇ
ನಳಿದನೇ ಹುಸಿಯಲ್ಲಲೇ ನಿ
ರ್ಮಳ ವಚೋನಿಧಿ ನೀನು ಹೇಳೆನಲಸುರಹರ ನಗುತ ।

---

[1] ದುಷ್ಪಥ (ತ ಪ). [2] ಸೇತುಸಂದರ್ಭದಲಿ (ಚ.ಟ.ದ), ಸೇತುಸಂತರ್ಪಣದಲಿ (ನ). [3] ಸುಷಮ್ನಾದಿ (ಕ ಗ). [4] ಸೋ (ಕ.), ಗಾ (ಚ.ಟ.ದ). [5] ಗೂಹನಿರ್ಮಳಜ್ಞಾನ (ಟ ದ). [6] ತಿರುಗಿತಾತನ (ಕ), ಮುರಿದುದೀತನ(ತ). [7] ಪ್ತಿಕೆ (ಕ.ಗ).

ಎಲೆಲೆ ನುಡಿಯಾ ಪಾಪಿ ಕದನದೊ
ಳಳಿದುದಶ್ವತ್ಥಾಮನೆಂಬ
ಗ್ಗಳೆಯ ಕರಿ ಮಾಳವರ ಥಟ್ಟಿನೊಳಂಜ ಬೇಡೆಂದ ॥ ೬೨

ಆದರಶ್ವತ್ಥಾಮ ಗಜವಿದಿ
ರಾದುದಳಿದುದು ದಿಟವೆನಲು ಬಿಸು
ಸುಯ್ದು ನರಸನ ನುಡಿಗೆ ನಂಬಿದನಕಟ ಮಗನೆನುತ ।
ಕೈದು ಕಯ್ಯಲಿ ಜಾಱೆ ಝೊಂಪಿಸಿ
ಖೇದದಲಿ ಕಾತರಿಸಿ ಚಿತ್ತವಿ
ಭೇದದಲಿ ಕಳವಳಿಸಿ ಕ[1]ರೆ[1]ದನು ರೋಷ [2]ತಾಮಸವ[2] ॥ ೬೩

ಬಿಲುದುಡುಕಿ ಬಲು ಸರಳ ತಿರುವಾಯ್
ಗೊಳಿಸಿ ಮಲೆತನು ಮಾರ್ಬಲಕೆ ಬಲೆ
ಕಳಚಿದರೆ [3]ಮೃಗ ಬಿದ್ದು[3]ದಿಱುಬಿನ ಕುಳಿಯೊಳೆಂಬಂತೆ ।
ತಿಳುಹಿ ಹೋದರು ಮುನಿಗಳೀತನ
ತಿಳಿವು ತೊಟ್ಟುದು ಮಱವೆಯನು ಮುಂ
ಕೊಳಿಸಿ ಮೊಗೆದನು ಮತ್ತೆ ಪಾಂಡವ ಸೈನ್ಯ ಸಾಗರವ ॥ ೬೪

ತಿರುಗಿ ಭೀಮನನೆಚ್ಚನಿತ್ತಲು
ನರನ ಮಸೆಗಾಣಿಸಿದನರಸನ
ಹೊರೆಯ ಬಿರುದರ [4]ಬಸಿಯ[4]ಲೆಚ್ಚನು ವಾಮ ದಕ್ಷಿಣವ ।
ಮುರಳಿ ಧೃಷ್ಟದ್ಯುಮ್ನ ಸಾತ್ಯಕಿ
ವರ ಯುಧಾಮನ್ಯೂತ್ತಮೌಂಜಸ
ರರಸು ಮಕ್ಕಳ ಹಲಬರನು ಮುಱಿಯೆಚ್ಚು ಬೊಬ್ಬಿಱಿದ ॥ ೬೫

ಈಸು ಭರದಲಿ ಭೂತ ಹಿಂಸಾ
ದೋಷವನು ನೆಱೆ ಮಾಡಿ ಮಕ್ಕಳಿ
ಗೋಸುಗವಲೇ ಹಣವ ಗಳಿಸುವುದಾತ ತಾನಳಿಯೆ ।
[5]ಆಸೆಯಿದಱೊಳಗೇಕೆ ಧುರದಾ
ವೇಶವಳಿಯದು[5] ಶಿವ ಶಿವಾ ಸುತ
ನಾಶವನು ಬಗೆಗೊಳ್ಳನೆಂದನು ಪವನಸುತ ನಗುತ ॥ ೬೬

[1] ಳೆ (ಕ.ಗ.ಟ) [2] ಪಾವಕನ (ಕ) [3] ಕಾಲುದ್ದ (ಕ.ಗ) [4] ಬೀಳ (ಟ).
[5] ಆಶೆಯಿದರೊಳಗೆಂದು ರಣದೊಳಗಾಶೆಯಾದುದು(ಕ), ಆಶೆಯೇನಿದರೊಳಗೆ ಮಱೆ ದಾವೇಶವಳಿಯದು (ಟ.ದ), ಆಶೆಯೇನಿದರೊಳಗೆ ನಿಮಗೆ ದುರಾಶೆಯುಳಿಯದು (ನ)

ಕೇಳಿದನು ಕಡು ನೊಂದನಡಿಗಡಿ
ಗಾಲಿ ನೀರೇಱಿದವು ಕೈಯಲಿ
ಕೋಲು ಬಿಲು ಸಡಲಿದವು [1]ಸಾಕೀ ದೇಹವೇಕೆನುತ[1] ।
ಮೇಲು ದುಗುಡದ [2]ಮೊಗದಲವನೀ[2]
ಪಾಲ ಕರ್ಣ ಕೃಪಾದಿ ಭಟರಿಗೆ
ಹೇಳಿದನು ಮಗನಳಿದನಸ್ತ್ರತ್ಯಾಗ ತನಗೆಂದು ॥ ೬೭

ಎನುತ ರಥದೊಳು ರಚಿಸಿ ಪದ್ಮಾ
ಸನವನಿಂದ್ರಿಯ ಕರಣ ವೃತ್ತಿಯ
ನನಿತುವನು ತಡೆದೆತ್ತಿ ಮೂಲಾಧಾರ ಮಾರುತನ ।
ಇನ ಶಶಿಗಳೊಂದಾಗೆ [3]ನಾಡಿಗ
ಳನಿಲ ನಿಕರವನುಗಿದು ಬಿಂದು
ಧ್ವನಿ ಕಳಾಪರಿ[3]ಲುಳಿತನೆಸೆದನು ವರ ಸಮಾಧಿಯಲಿ ॥ ೬೮

ನಾಸಿಕಾಗ್ರದಲಿಟ್ಟ ಕಂಗಳ
ಸೂಸದುಸುರಿನ ಶಶಿ ಕಿರಣ ಪೀ
ಯೂಷ ಪಾನದ ರೋಮ ಪುಳಕದ ಗುಡಿಯ [4]ಬೀಡುಗಳ[4] ।
ಆ ಸುಷುಮ್ನಾನಾಡಿಯಲಿ ಕಾ
ಳಾಶಿಸಿದ ಪವನನ ಸಮಾಧಿ ವಿ
ಳಾಸನೆಸೆದನು ಸೌಖ್ಯ [5]ಭಾವದ[5] ಜಡಿವ ಝೊಮ್ಮಿನಲಿ ॥ ೬೯

ತನ್ನೊಳಿತರವನಿತರದೊಳು ನೆಱೆ
ತನ್ನನೀಕ್ಷಿಸಿ ತಾನು ತನ್ನಿಂ
ದನ್ಯವೆರಡಱೊಳೈಕ್ಯವೆಂಬುಪಚರಿತ ಭಾವವನು ।
ತನ್ನೊಳಗೆ ಹುಸಿಯೆಂದು ನಿತ್ಯ[6]ನ[6]
ನನ್ಯ[7]ನ[7]ಮಳಜ್ಞಾನರೂಪವೆ
ತನ್ನ ನಿಜವೆಂದಱಿದು ತಾನಾಗಿರ್ದನಾ ದ್ರೋಣ ॥ ೭೦

---

[1] ಸಾಹಸವಿನ್ನಿದೇಕೆನುತ (ಟ). [2] ಮನದಿನವನೀ (ಕ), ಮೊಗದಿನವನೀ (ತ) [3] ನುಡಿಗಳವನಜಕರ ವನುಬಿಗಿದು ಬಿಂದು ಧ್ವನಿಕಳಾಪರಿ (ಕ), ನಾಡಿಗಳೂತುವನು ತಡೆದೆತ್ತಿನಾದ ಬಿಂಧು ಧ್ವನಿಕಳಾಪರಿ (ನ). [4] ಬಿಡುಹುಗಳ (ಕ.ಗ) [5] ಭರದಲಿ (ಟ.ದ) [6] ವ (ಕ.ಗ.ಟ) [7] ವಿ (ಕ.ಗ.ಟ)

ಒಡೆದು ನಡು ನೆತ್ತಿಯನು ಝುಳಪಿಸಿ
ಕಡುವೆಳಗು ಥಳಥಳಿಸಿ ತರಣಿಯು
ತುಡುಕಿ ಹಾಯ್ದುದು ರಶ್ಮಿ ರಂಜಿಸಿತಖಿಳ ದಿಗುತಟವ ।
[1]ಕು[1]ಡಿವೆಳಗನಸುರಾರಿ ಮುನಿಗಳ
ಗಡಣವರ್ಜುನ ಕೃಪರು ಕಂಡರು
ಪಡೆಯೊಳಗೆ ತಾನುಳಿಯೆ ಕಂಡವರಿಲ್ಲ ಕೇಳೆಂದ ॥ ೭೧

ತೀರಿತೇ ಮಗನುಬ್ಬಟೆಯು ಜ
ಜ್ಝಾರತನವಾಚಾರ್ಯನಳಿದನ
ದಾರು [2]ನಮಗಾಪ್ತಿಗರು[2] ದೊರೆಯಿನ್ನಾರು ಸಂಗರಕೆ ।
ಆರು ನಿಮಗಿದ್ದೇಗುವರು ರಣ
ವೀರರಗ್ಗದ ದೈವವೇ ಮನ
ವಾರೆ ಮೆಚ್ಚಿ[3]ಹುದವರನಿನ್ನೇನರಸ ಕೇಳೆಂದ[3] ॥ ೭೨

ಹದಿನೆಂಟನೆಯ ಸಂಧಿ ಮುಗಿದುದು

[1] ಇ (ಕ.ಗ.ಚ.ಟ) [2] ನಿನಗಾಪತ್ತಿಗರು (ಕ.ಗ.ಟ.ಚ) [3] ಹನವರ ಗದು
ಗಿನ ವೀರನಾರಯಣ (ಗ.ತ.ಪ)

ಹತ್ತೊಂಬತ್ತನೆಯ ಸಂಧಿ

ಸೂಚನೆ॥ ರಾಯಕಟಕವ ಬೆದಱಿಸಿದ ನಾ
ರಾಯಣಾಸ್ತ್ರದ ಬಾಧೆಯನು ಕಮ
ಲಾಯತಾಂಬಕ ನಿಲಿಸಿ ಸಾತ್ಮೈಸಿದನು ಪಾಂಡವರ ॥

ಕೇಳು ಧೃತರಾಷ್ಟ್ರಾವನಿಪ ಗುರು
ಬೀಳುಕೊಟ್ಟನು ದೇಹವನು ನ
ಮ್ಮಾಳ ವಿಧಿಯೇನಪಜಯದ ತವನಿಧಿಯಲೇ ನಮಗೆ ।
ಮೇಲೆ ಬಂದುದು ಕಷ್ಟವರಿ ಭೂ
ಪಾಲರಿಗೆ ಕೇಳಿದನು ಖಳ ಪಾಂ
ಚಾಲಸುತನೈತಂದನಲ್ಲಿಗೆ ಜಡಿ[1]ವಡಾಯುಧದಿ[1] ॥ ೧

ಐದಿ ಮುಂದಲೆವಿಡಿದು ಬಾಗಿಸಿ
ಕೊಯ್ದನಾತನ ಕೊರಳನೆಡದಲಿ
ಹೊಯ್ದು ಮುಱಿದನು ಬರಿಯಲಪ್ಪಳಿಸಿದನು [2]ಬೆನ್ನೆ[2]ಲುವ ।
ಕೈದಣಿಯೆ ಕಡಿ ಖಂಡ ಮಯವೆನೆ
ಹೊಯ್ದು ರಥದಲಿ ಕೆದಱಿ ಜಡಿದನ
ಡಾಯ್ದವನು ಕಡುಗೋಪದಲಿ ನೋಡಿದನು ರಿಪು ಶಿರವ ॥ ೨

ಎಲೆಲೆ ಪಾತಕಿ ಹೆಣನ ಹೊಯ್ದರೆ
ಬಲುಗಡಿಯ ನೀನೆಂಬರೇ ಸುಡು
ಹೊಲೆಯರಿದಕಂಗೈಸುವರೆ ತಾ ರಾಜ[3]ಸೂನು[3]ಗಡ ।
ಅಳಿದನಾದರೆ ನಿನ್ನ ಭಾಗ್ಯವು
ಉಳಿದಡೀತನ ಮಗನು ನಿನ್ನಯ
ಕುಲದ ತಲೆ ಚೆಂಡಾಡಿದಲ್ಲದೆ ಬಱಿದೆ ಬಿಡನೆಂದ ॥ ೩

ಎಂದ ಸೂತನ ಬಾಯ ಹೊಱಕ
ಯ್ಯಿಂದ ಹೊಯ್ದನು ಹಡಪದವರನು
ಹಿಂದಣಾಪ್ತರನಖಿಳ ಚಮರಚ್ಛತ್ರ ಧಾರಿಗಳ ।

[1] ದ ಖಡುಗದಲಿ (ಗ. ಟ. ದ. ನ). [2] ಬದಿಯೆ (ಕ). [3] ಪುತ್ರ (ಕ).

ಮುಂದುವರಿದೊಡೆ ತಿವಿದು ಮುಱಿದನು
ಮಂದಮತಿ ಬಳಿಕವನ ಸುಡು ಸುಡ
ಲೆಂದು ಧೃಷ್ಟದ್ಯುಮ್ನನನು ನೆಱೆ ಬೈದುದಖಿಳ ಜನ ॥ ೪

ಕಡಿಕುಗಳನಾಯ್ದುಱಿಸಿ ರಥದೊಳು
ಗುಡಿಸಿ ಸಿಂಧವನೆತ್ತಿ ಸಾರಥಿ
ತುಡುಕಿ [1]ವಾಘೆಯ ಮುರುಹಿ ಮರಳಿಚಿ ರಥದ ಕುದುರೆಗಳ[1] ।
ತಡೆಯದಶ್ವತ್ಥಾಮನಲ್ಲಿಗೆ
ನಡೆದು ಬರುತಿರೆ ಕಂಡು ಮನದಲಿ
ಕಡು ನಿರೋಧವ ಹಿಡಿದು ಚಿಂತಿಸುತಿರ್ದನಾ ದ್ರೌಣಿ ॥ ೫

ಏನಿದಚ್ಚರಿ ಕೌರವೇಂದ್ರನ
ಸೇನೆ ತಲೆಕೆಳಗಾಗುತಿದೆ ರಿಪು
ಸೇನೆ ಬೊಬ್ಬಿಱಿದಾರುತಿದೆ ಮಡಿದಾತನಾವವನೊ ।
ಸೇನೆಗೊಡೆಯನು ಬೊಪ್ಪನಿದು ತಾ
ನೇನು ರಥವೇ ಬಱಿದೆ ಬರುತಿದೆ
ಹಾನಿ ಜನಕಂಗಾಯ್ತೊ ಶಿವ ಶಿವ ಎಂದನಾ ದ್ರೌಣಿ ॥ ೬

ತಂದು ಸಾರಥಿ ರಥವನೀತನ
ಮುಂದೆ [2]ನಿಲಿಸಿದ[2] ಬಿದ್ದನಂಘ್ರಿಯೊ
ಳೆಂದು [3]ಗೋಳಿಟ್ಟೊಱಲಿದುದು ಕಳಶಜನ ಪರಿವಾರ[3] ।
ತಂದೆಯ್ಯೈದನೆ ಚಾಪ[4]ವೇದ[4] ಮು
ಕುಂದನೈದನೆ ನಿನ್ನ ಕಾಣಲು
ಬಂದನಯ್ಯನನಪ್ಪಿಕೊಳು ಮಾತಾಡಿ ನೋಡೆಂದ ॥ ೭

ಕೂಡೆ ಹಱಿಹಂಚಾದ ತಂದೆಯ
ಗೂಡ ನೋಡದ ಮುನ್ನ ಕಂಬನಿ
ಮೂಡಿ ಮುಳುಗಿದವಾಲಿ ಕಾಣವು ಪಿತೃ ಕಳೇವರವ ।

---

[1] ವಾಘೆಯ ಮರಳಿಚಿದನಾರಥದ ಕುದುರೆಗಳ (ಟ. ದ. ನ). [2] ಬಿಟ್ಟನು (ಕ), ಬಿಸುಟನು (ಟ. ದ. ನ). [3] ಗೋಳಿಟ್ಟಳುತ ಕಳಶಜನಾಪ್ತಪರಿವಾರ (ಕ. ಗ), ಗೋಳಿಟ್ಟಳುತ ಕಳಶಜನಾಪ್ತಜನಸಹಿತ (ಟ.ದ). [4] ವಿದ್ಯ (ಸ. ಕ).

ನೋಡಲೆಳಸದ ಮುನ್ನ ಕಿಡಿಗಳ
ಝಾಡಿಯನು ಕಣ್ಣುಗುಳಿದವು ಮಿಗೆ
ನೋ[1]ಡಿದ[1]ಶ್ವತ್ಥಾಮ [2]ಕಾಣನು ಮುಂದೆ ಪರ[2]ಬಲವ ॥ ೮

ಅದ್ದನಳಲಿನ ಜಲಧಿಯೊಳು ಮುರಿ
ದೆದ್ದು ಕೋಪಾನಳನ ಝಳದಲಿ
ಬಿದ್ದು ನನೆದನು ನೀರಿನಲಿ ಕಾಹೇಱಿ ಕಿಚ್ಚಿನಲಿ ।
ಗೆದ್ದುದುದಕವನನಲನನಲನ
ನದ್ದಿತುದಕವದೊಂದನೊಂದನು
ಕದ್ದುವೆರಡಱ ಹೋರಟೆಗೆ ಗುರು ಸೂನು ಬೆಂಡಾದ ॥ ೯

ಕೆದಱಿ ಹೊರಳುವ ಸಾರಥಿಯನೆ
ತ್ತಿದನು ರಣ ವೃತ್ತಾಂತವನು ಕೇ
ಳಿದನು [3]ಶ[3]ಮೆ ಸ್ಥೈರಣೆ ವಿವೇಕವ ನೂಕಿದನು [4]ಸೆಱಗೆ[4] ।
ಒದೆದನಳಲನು ರೋಮ [5]ಹರುಷವ[5]
ಹೊದೆದು ಹೊರೆ ಹೆಚ್ಚಿದನು ಕಾಹೇ
ಱಿದನು [6]ಕಲಿ ಮನವಳುಕಿ ತಗ್ಗಿತು ರೋಷ ಭಾವದಲಿ[6] ॥ ೧೦

ಚಟುಳ ಕೋಪಾಗ್ನಿಯಲಿ ನಾಸಾ
ಪುಟದ ಸುಯ್ಲ[7]ಲಿ ವಿಸ್ಫುಲಿಂಗೋ
ತ್ಕಟ[7] ಸಮಾಧಿಗಳಿದ್ದಲಲಿ [8]ನಿ[8]ಗ್ರಹ ಕಟಾ[9]ಹ[9]ದಲಿ ।
ಪಟು[10]ತರದ[10]ಬಾಹು ಪ್ರತಾಪದ
[11]ಪು[11]ಟವನೆತ್ತದೆ ಮಾಣನೆನ[12]ಲು
ತ್ಕಟಿಸು[12]ತಿರ್ದುದು ರೌದ್ರ ವೀರಾ[13]ಭ್ಯುದಯ ಸನ್ನಾಹ[13] ॥ ೧೧

ನೊಂದ ಜವನೋ ಜಗವನುರುಹಲು
ಬಂದ ಶಿವನೋ ಕಂಬದಿಂದೊಗೆ
ತಂದ ರೌದ್ರಾಟೋಪ ಮಾನವ ರೂಪ ಕೇಸರಿಯೊ ।

---

[1] ಡುತ (ಟ). [2] ಕಂಡನುಮುಂದೆರಿಪು (ಟ). [3] ಕ್ಷ (ಟ. ದ. ನ). [4] ಕೆಲಕೆ (ತ), ಕಡೆಗೆ (ನ). [5] ಪುಳಕವ (ತ. ನ. ಪ). [6] ಕೋಪ ದಲಮಮು ತಗ್ಗಿದ ಶೌರ್ಯಭಾರದಲಿ (ತ. ಪ). [7] ನು ತೀವಿ ಚಾಪಸ್ಫುಟ. [8] ವಿ (ಕ. ಗ. ಚ). [9] ಕ್ಷ (ಸ. ಟ). [10] ಕಠಿಣ (ಕ. ಗ. ಚ. ನ). [11] ಘ (ಕ. ಗ. ಚ). [12] ತೂಕಡಿಸು (ಕ. ಗ). [13] ದ್ಭುತದ ರಸ ಲಹರಿ (ಕ. ಗ. ಟ).

ತಂದೆಯುಳಲಿಗನಿರವು ವಿಶ್ವವ
ನೊಂದು ನಿಮಿಷಕೆ ಸುಡುವುದೋ ಹಾ
ಯೆಂದುದಮರಾನೀಕವೆಲೆ ಭೂಪಾಲ ಕೇಳೆಂದ ॥ ೧೨

[1]ಮುರುಹಿದನು ಮಿಾಸೆಯನು[1] ಕಣ್ಣುಗ
ಳರಳಿದವು ಹೊಗೆ ಸುತ್ತಿ ಸುಯ್ಲಲಿ
ಸುರಿದುದುರಿ ಹುಬ್ಬುಗಳನುಱೆ ಬಿಗಿದೌಡನೊಡೆಯೊತ್ತಿ ।
ಬೆರಳ ತುದಿಯಲಿ ಬೊಬ್ಬಿಱಿದು ಹರಿ
ಶರಕೆ ಕೈ ನೀಡಿದನು ಕಲ್ಪದ
ಹರನ ಪೋಲು ಹರ ರೂಪ ಹೊಂ[2]ಗಿ[2]ದನಧಿಕ ರೋಷದಲಿ ॥ ೧೩

ದನುಜಹರ ಮಂತ್ರವನು ಮನದಲಿ
ನೆನೆದು ಕೈ ನೀಡಿದನು ತುದಿಯಂ
ಬಿನಲಿ ತುಱುಗಿದ ಕಿಡಿಯ ಬಿಱು ಕೇಸುರಿಯ [3]ಧಾಳಿ[3]ಗಳ ।
ತನಿಪೊಗರ ಬಲುಪೊಗೆಯ ಹೊರಳಿಯ
ಕನಕರಸ ರೇಖಾವಳಿಯ ಮೈ
ಮಿನುಗುಗಳ ಹೊಂಗಱಿಯ ನಾರಾಯಣ ಮಹಾಶರಕೆ ॥ ೧೪

ಪ್ರಳಯ ಮೇಘವನೊ[4]ಡೆವ ರವಿ ಮಂ
ಡಲ ಸಹಸ್ರದ[4]ರಶ್ಮಿಯೋ ಜಗ
ದಳವಿನಲಿ ಝೊಂಪಿಸುವ ಹರನುರಿಗಣ್ಣ [5]ದೀಧಿತಿಯೊ[5] ।
ಮುಳಿದ ನರಕೇಸರಿಯ ದಾಡೆಯ
ಥಳಥಳತ್ಕಾರವೊ ಮಹಾಸ್ತ್ರದ
ಬೆಳ[6]ಗೊ[6] ಹೆಸರಿಡಲಾರು ಬಲ್ಲರು ಭೂಪ ಕೇಳೆಂದ ॥ ೧೫

ಸರಳ ಚೂಣಿಯ ಝಳದೊಳಗೆ ಸಾ
ವಿರ ನಿದಾಘದ ಸೂರ್ಯರುಬ್ಬಟೆ
ಕರಗಿ ಹೋಯಿತು ಬಾಯಿಧಾರೆಯ ಕಿಡಿಯ [7]ಧಾಳಿ[7]ಯಲಿ ।
ಬಱಸಿಡಿಲ ಶತಕೋಟಿ ಸೀದವು
[8]ನಿಱುಪೊಗರ ಕಬ್ಬೊಗೆಯ ಕಿಡಿಯಲಿ
ನೆರೆದ[8]ವಂತ್ಯದ ಮೇಘವೆನೆ ಝುಗಝುಗಿಸಿತಮಳಾಸ್ತ್ರ ॥ ೧೬

---

[1] ಉರಿಯುಮುಕ್ಕುಳಿಸುತ್ತ (ಟ. ದ). [2] ದಿ (ಚ. ಟ. ದ. ನ). [3] ದಾಡೆ (ಟ. ದ). [4] ದೆದ ಕಲ್ಪದಲುಲಿದಧಾರಾ (ಕ). [5] ಬಲುವೆಳಗೊ (ಕ). [6] ಗ (ಟ). [7] ಚೂಣಿ (ಕ. ಗ. ಚ). [8] ಗಿರಿಯೊಗೆಯಲುರವಣಿಸುವುರಿಯುಲಿ ಬಱತ (ಟ. ದ), ನಿಱುಪೊಗರಲುರವಣಿಸುವುರಿಯುಲಿ ಬಱತ (ತ).

ಒಳಗೆ ಜಲಚರವೊ[1]ದಱ[1] ಕುದಿದುದು
ಜಲಧಿ ಕಾದುದು ಧರಣಿ [2]ಸೀ[2]ದುದು
ಕುಲಗಿರಿಗಳುಱೆ ಸಿಡಿದು ಸೀಕರಿವೋಯ್ತು ವನ[3]ನಿಕರ[3] ।
ನೆಲಕೆ ದಾಡೆಯ ಕೊಟ್ಟು ಕುಂಭ
ಸ್ಥಳವ ತೆಗೆದವು ದಿಗಿಭ ತತಿ [4]ಹೆಡೆ
ನಳಿಯೆ[4] ಮಣಿಗಳಲಾಂತನವನಿಯನುರಗಪತಿಯಂದು ॥ ೧೭

ಗುಳವ ಕೊಯ್ದಿಳುಹಿದರು ಕರಿ ಸಂ
ಕುಳದಲಾರೋಹಕರು ಜೋಡನು
ಕಳಚಿ ಬಿಸುಟರು ರಾವುತರು [5]ಹಕ್ಕರಿಕೆಗಳು ಸಹಿತ[5] ।
ಝಳದ ಝಾಡಿಗೆ ಬೆವರಿ ವಸನಾಂ
ಚಲದ ಗಾಳಿಗೆ ಮೊಗವನೆತ್ತಿದ
ರಳುಕಿ ಕಣ್ ಕೋರೈಸಿ ಮಮ್ಮಲ ಮಱುಗಿತುಭಯಬಲ ॥ ೧೮

ಮೇಲು ಜಗವೇಳೋಡಿದವು ಧ್ರುವ
ನಾಲಯಕೆ ನೆಲೆದಪ್ಪಿದುದು ಗ್ರಹ
ಮಾಲೆ ತಾರಾರಾಸಿ [6]ಜೋಯಿಸ[6]ರೋದು ಹುಸಿಯಾಯ್ತು ।
[7]ಧಾಳಿಡುವ ಸೆಗಳಿಯಲಿ[7] ತಳ ಪಾ
ತಾಳಕದ್ದುದು ಕಮಲಜಾಂಡದ
ಮೇಲಣಾವರಣಾಂಬು ಕುದಿದುದು ಹೇಳಲೇನೆಂದ ॥ ೧೯

ಒಡೆಯರಿಲ್ಲಾ ಜಗಕೆ ಲೋಗರ
ಸುಡುವರೊಪ್ಪಿಸಿಕೊಡುವರೇ ನಾ
ನೊಡೆಯ ಫಡ ತಾನೊಡೆಯರೆಂಬರು ಮೂವರೀ ಜಗಕೆ ।
ನುಡಿಯರೀ ಹೊತ್ತಿನಲಿ ನಮಗಿ
ನ್ನೊಡೆಯರಾರಿನ್ನಾರ ಬಸುಱೊಳ
ಗಡಗುವೆವು ಶಿವ ಶಿವ ಎನುತ ತಲ್ಲಣಿಸಿತಮರಗಣ ॥ ೨೦

---

[1] ಱಲಿ (ಕ). [2] ಸಿಡಿ (ಟ. ತ. ಪ). [3] ಚಯ (ಟ. ದ).
[4] ಹೆಡೆನೆಗೆಯೆ (ಕ), ಹೆಡೆಮುಳಿಯೆ (ಗ), ಹೆಡೆಹಿಳಿಯೆ (ಟ. ದ). [5] ಇಳಿದೋಡಿದರು ಹಯವ (ಕ). [6] ಜೋತಿಷ (ಕ. ಗ. ದ). [7] ಜಾಳಿಸಿದ ಸೆಖಳಿಯಲಿ (ಕ. ಗ).

ಕವಿದ ಕೌರವ ಬಲದ ಸುಮ್ಮಾ
ನವನು ತವ್ಕೆಂಜಿಕೆಯನಾ ಭ್ಯೆ
ರವನ ಭಾರಿಯ ಸರಳ ಸೊಗಡಿಗೆ [1]ಬೇವ[1] ಮೂಜಗವ ।
ಅವರು ಕಂಡರು ಖಾತಿಯಲಿ ಪಾಂ
ಡವರು ಧೃಷ್ಟದ್ಯುಮ್ನನನು ತವ
ತವಗೆ ಬೈದರು ಪಾಪಿ ಲೋಕವ ಕೊಂದೆ ನೀನೆನುತ ॥ ೨೧

ಅಕಟ ಗುರುಹತ್ಯಾಮಹಾಪಾ
ತಕವನೇ ನೆಱೆ ಮಾಡಿತಲ್ಲದೆ
ಸಕಲ ಲೋಕದ ಬೇರುಗೊಲೆಗೆಲೆ ಪಾಪಿ ನೀನಾದೈ ।
[2]ವಿಕಟ ವಿಕ್ರಮು[2] ವಿಸ್ಫುಲಿಂಗ
ಪ್ರಕರದಲಿ ಧಗಧಗಿಸುತಿದೆ ಸಾ
ಯಕವ ನಿಲಿಸಾ ನೀನೆನುತ ಭಂಗಿಸಿತು ಪರಿವಾರ ॥ ೨೨

ಅವನ ಗುರುತನವೇನು ವಿಪ್ರಾ
ಧಮನಲಾ ಶಸ್ತ್ರೋಪಜೀವ[3]ನ
ನಿ[3]ವನು ಋಷಿಯೇ ದ್ರೋಣವಧೆಯನ್ಯಾಯವೇ ತನಗೆ ।
ಇವನು ತಮ್ಮಯ್ಯನನು ನೆಱೆ ಪರಿ
ಭವಿಸನೇ ಚಿಕ್ಕಂದು ನಿಮಗೇ
ಕಿವನನಿಱಿದರೆ ಖಾತಿಯೆಂದನು ದ್ರುಪದಸುತ ಮುಳಿದು ॥ ೨೩

ಅವಗಡಿಸಲೇಕಗ್ರಜನ್ಮ
ಬ್ರುವನೆ ಕಟಕಾಚಾರ್ಯನೆಲೆ ನೀ
ನವರಿವರ[4]ನೆಂಬಂತೆ[4] ನುಡಿವರೆ ಗುರುವಲಾ ನಿನಗೆ ।
ಇವರಿಗೀ ನುಡಿ[5]ಯುಱಿಸಿತೇನಿದು
ಶಿವ ಶಿವಾ ಗುರುನಿಂದೆಯನು ಕೇ
ಳುವರು ನಾವಲ್ಲೆನುತ ಸಾತ್ಯಕಿ ಮುಚ್ಚಿದನು ಕಿವಿಯ ॥ ೨೪

ಗುರುವಿಘಾತಕರಾವು ತಾನತಿ
ಗುರುಪದೋಪಾಸಕನು ತನ್ನನು
ಕರೆದರಾರಿದಕೆಂದು ಧೃಷ್ಟದ್ಯುಮ್ನನುರಿದೇಳೆ ।

---

[1] ಸಿಡಿವ (ಚ). [2] ವಿಕಟವಿಷಮ (ಟ. ದ), ಪ್ರಕಟವಿಶ್ರಮ (ನ). [3] ಕನ (ಗ), ಕವಿ (ಟ. ದ), ವಿತ (ನ). [4] ನುಡಿವಂತೆ (ಕ. ಚ). [5] ಸೊಗ (ಟ. ತ).

ದುರುಳತನವಾರೊಡನೆಯೋ ಬಾ
ಹಿರ ಮಹಾಪಾತಕಿಯನೊದೆದಿ
ಟ್ಟೊರಸುವೆನು ತಾನೆನುತ ಸಾತ್ಯಕಿ ಖಂಡೆಯವ[1]ನುಗಿದ[1] || ೨೫

ಎಲೆಲೆ ಹಿಡಿಹಿಡಿ ಸಾತ್ಯಕಿಯನೊಳ
ಗೊಳಗೆ ತೋಟಿಯೆ ಜಾಗು ಕೌರವ
ಬಲದವರ ಬೂತಾಟವಾಯಿತೆ ನಮ್ಮ ಥಟ್ಟಿನಲಿ |
ನಿಲಿಸೆನುತ ನೃಪನೊಱಲೆ ಕವಿದೆಡೆ
ಗಲಿಸಿ ಹಿಡಿದನು ಭೀಮನೀತನ
ಬಲುಭುಜವನೌಚಿದನು ಕೊಂಡನು ಕಯ್ಯ ಖಂಡೆಯವ || ೨೬

ಸೆಳೆದನೊಱೆಯುಲಡಾಯುಧವನ
ವ್ವಳಿಸಿದನು ಪಾಂಚಾಲಸುತನೀ
ಗಳಹನನು ಬಿಡು ಭೀಮ ಕೊಡು ಸಾತ್ಯಕಿಯ ಖಂಡೆಯವ |
ಎಲವೋ ಸಾತ್ಯಕಿ ಕೃಷ್ಣದೇವರಿ
ಗಳುಕಿ ಸೈರಿಸಿದರೆ ದೊಠಾರಿಸಿ
ಗೆಲನುಡಿವೆ ಹೆಡತಲೆಯಲುಗಿವೆನು ನಿನ್ನ ನಾಲಗೆಯ || ೨೭

ತನ್ನೊಳಿದ್ದವಗುಣವ ನೋಡದೆ
ಚುನ್ನವಾಡುವನಿದಿರನೆಲವೋ
ನಿನ್ನ ಹೋಲುವರಾರು [2]ಬಾಹಿರ[2] ಭಂಡರವನಿಯಲಿ |
ನಿನ್ನೆ ಶಸ್ತ್ರವ ಬಿಸುಟ ಯೋಗವಿ
ಪನ್ನನನು ನೀನೇನ ಮಾಡಿದೆ
ನಿನ್ನ ಶೋಧಿಸಿ ಬಳಿಕ ಪರರನು ಹಳಿವುದೇನೆಂದ || ೨೮

ಮಿಡುಕಿದನು ಸಾತ್ಯಕಿ ವೃಕೋದರ
ನೊಡೆಯವಚಿದನು ಮತ್ತೆ ಪವನಜ
ಬಿಡು ನಿನಗೆ ನೃಪನಾಣೆ ಕುಡಿವೆನು ಖಳನ ಶೋಣಿತವ |
ಬಿಡು ಬಿಡಕಟಾ ಭೀಮ ಸಾತ್ಯಕಿ
ಹಿಡಿ ಹಿಡಿಯ ಹಮ್ಮೈಸುವನು ಬಿಡು
ತೊಡಕಿ ನೋಡಲಿಯೆನುತ ಧೃಷ್ಟದ್ಯುಮ್ನನಳ್ಳಿಱಿದ || ೨೯

---

[1] ಜಡಿದ (ಕ). [2] ಭಾರಿಯ (ಗ. ಟ. ತ. ಪ), ಭೂರಿಯ (ಚ).

ಮುಳಿದು ಯಾದವ ಸೇನೆ ಕೈದುವ
ಸೆಳೆದುದಾ ಪಾಂಚಾಲನಾಯಕ
ರುಲಿದು ನಿಂದುದು ಕಂಡನಸು[1]ರಧ್ವಂಸಿ[1] ನಸುನಗುತ ।
ಎಲೆಲೆ ಪಾಪಿಗಳಿರ ವೃಥಾ ತ
ಮ್ಮೊಳಗೆ ತೋಟಿ ಶರಾಗ್ನಿಯಿತ್ತಲು
ಮೊಳಗುತದೆ ಕೆಡೆಬೀಳಹೊಯ್[6] ಹೊಯ್[6] ಕುನ್ನಿಗಳನೆಂದ ॥ ೩೦

ಬೇಱೆ ತಮಗೊಂದಾಳುತನವುರಿ
ಸೂಱೆಗೊಳುತಿದೆ ಜಗವನಿತ್ತಲು
ಕೌಱಿಡುವ ಕಾಲಾಗ್ನಿಯಿದೆ ಕಬ್ಬೊಗೆಯ [2]ಕವಚ[2]ದಲಿ ।
ತೋಱಲಾಪರೆ ಬಾಹು ಸತ್ವವ
ತೋಱಿರೈ ದಿಟ ಪಂಥದೋಲೆಯ
ಕಾಱರಹಿರೆನುತಸುರರಿಪು ಗಜಬಜವ ನಿಲಿಸಿದನು ॥ ೩೧

ಇತ್ತ ಲೋಕದ ಕಂಗಳೆವೆಗಳು
ಕೆತ್ತವಳ್ಳಿಱಿವುರಿಯ [3]ಜಾ[3]ಳಿಗೆ
[4]ತೆತ್ತಿಸಿತು[4] ಹರಿದಶ್ವ [5]ಶತ[5]ವನು ಶಿವ ಮಹಾದೇವ ।
ಕಿತ್ತು ಶರವನು ತೂಗಿ ಬಿಲ್ಲಿಗೆ
ತೆತ್ತಿಸಿದನುಱೆ ಸೇದಿ [6]ತೋಱಿಹ[6]
ತುತ್ತು ನಿನಗರಿ ಸೇನೆ ಹೋಗೆನುತೆಚ್ಚು ಬೊಬ್ಬಿಱಿದ ॥ ೩೨

[7]ಜಗದ ಹುಯ್ಯಲು[7] ಜಡಿಯಲಭ್ರದ
ಲಗಿದು ಕೌರವ ಸೇನೆ ಹರುಷದ
ಸೊಗಸಿನಲಿ ಮೈಮಱೆಯೆ ಕೃಷ್ಣಾದಿಗಳು ಕೈಮಱೆಯೆ ।
ಹೊಗೆಯ ಹೊರಳಿಯ ಕಿಡಿಯ ಥಟ್ಟಿನ
ತಗೆದುರಿಯ ತೆಕ್ಕೆಯಲಿ ಧಗಧಗ
ಧಗಿಸಿ ಧಾಳಿಟ್ಟುದು ಮಹಾಶರವಹಿತ ಮೋಹರಕೆ ॥ ೩೩

ಹಾ ಮುರಾಂತಕ ಹಾ ಯುಧಿಷ್ಠಿರ
ಹಾ ಮರುತ್ಸುತ ಹಾ ಧನಂಜಯ
ಹಾ ಮಗನೆ ಹಾ ತಂದೆ ಹಾ ಒಡವುಟ್ಟಿದನೆ ಯೆನುತ ।

---

[1] ರಾರಾತಿ (ಟ. ದ). [2] ತವಕ (ಗ.ಟ.ದ). [3] ಧಾ (ಕ). [4] ಮುತ್ತಿದವು (ಕ. ಗ. ಟ. ಚ). [5] ತನು (ತ). [6] ತೋಱಿಯ (ಕ. ಚ). [7] ಝುಗೆಯುಹೊಯ್ಲಲಿ (ನ).

ಭೂಮಿ ತೆಱೆಯಳೆ ಬಾಯನಕಟಕ
ಟಾ ಮಹೋದಧಿ ದೂರವಿನ್ನೇ
ನೀ ಮಹಾಸ್ತ್ರಕೆ ಸಿಕ್ಕಿದೆವೆಯೆಂದೊಱಲಿತರಿ ಸೇನೆ ॥ ೩೪

ಕಳವಳಿಸಿತರಿ ಸೇನೆ ಚೂಣಿಯ
ಕೊಳುಗಿಡಿಯ ಸೆಖೆ ತಾಗಿ ಸುಭಟಾ
ವಳಿಯ ಮಿಾಸೆಗಳುರಿಯೆ ನೆಱೆ ಕಂದಿದವು ಮೋಱೆಗಳು ।
ಬಲದ ಸುತ್ತಲು ಕಟ್ಟಿತುರಿ ಕೆಂ
ಬೆಳಗು ಕುಡಿದವು ಕರ್ಬೊಗೆಗಳ
ಗ್ಗಳದ ಬಾಣದ ಬಂದಿಯಲಿ ಸಿಲುಕಿತ್ತು ರಿಪು ಸೇನೆ ॥ ೩೫

ಝುಳಕೆ ಘೀಳಿಟ್ಟೊಱಲಿದವು ಕರಿ
ಕುಳ ತುರಂಗದ ಘಟ್ಟು ಖುರದಲಿ
ನೆಲನ ಹೊಯ್ದುವ್ವಳಿಸಿದವು ರಾವುತರನೀಡಾಡಿ ।
ಬಲು [1]ರಥವನಸಬಡಿದು[1] ಸೂತನ
ನಿಳುಹಿ ಹಯವ್ಯೋಡಿದವು [2]ಮು
ಮ್ಮುಳಿಸಿ ತನಿಗುದಿಗುದಿದು ಕೋ[2]ಟಲೆಗೊಂಡುದರಿ ಸೇನೆ ॥ ೩೬

ವಾಯಕಂಜದಿರಂಜದಿರಿ ಘಡ
ಬಾಯ ಬಿಟ್ಟರೆ ಹೋಹುದೇ ನಿ
ಮ್ಮಾಯುಷಕೆ ಹೊಣೆ ತಾನು ಹೇಳಿತ ಮಾಡಿ ಬೇಗದಲಿ ।
ಆಯುಧಂಗಳ ಬಿಸು[3]ಟು ಕರಿ ರಥ
ಜಾಯಿಲಂ[3]ಗಳನಿಳಿದು ಬದುಕುವು
ಪಾಯವೆಂದಸುರಾರಿ ಸಾಱಿದನಂದು [4]ಕೈ ನೆಗಹಿ[4] ॥ ೩೭

ಕಳಿದ ಹೂವಿನ ತೊಡಬೆಯೋ ಕುಸಿ
ದಲೆಯ ಬಿಟ್ಟಿಯ ಭಾರವೋ ನಿ
ರ್ಮಳನ ಚಿತ್ತದ ಖತಿಯೊ ದಾನವ್ಯಸನಿಯೊಡವೆಗಳೊ ।
ನಳಿನ ನಾಭನ ಮಾತು ಹಿಂಚಿತು
ಕಳಚಿದವು ಕೈದುಗಳು ಕೈಗಳ
ಲುಳಿವುಪಾಯದ ಜೋಡ ತೊಟ್ಟುದು ಪಾಂಡುಸುತ ಸೇನೆ ॥ ೩೮

---

[1] ಭುಜರನೊಡೆದುಳಿದು (ಗ. ಟ. ದ. ನ). [2] ಕಾಲಾಳಳವಿ ಮುಮ್ಮುಳಿಮು ಸುಗಿಕೂಳ್ಗುದಿ (ಗ), ಮುಮ್ಮುಳಿತವಾದುದು ಮಸಗಿಕೂಳ್ಗುದಿ (ತ. ಪ). [3] ರಥವಾಯಜಂ (ಟ. ದ. ನ), ವಾನಾಯಜಂ (ತ). [4] ನಿಜಬಲಕೆ (ಕ).

ಬೀತ ಕೈದುಗಳಖಿಳ ದಳಸಂ
ಘಾತವನು ಬಾಣಾಗ್ನಿ ಬೆರಸಿತು
ಪೂತು ಭಂಡರಿರೆನುತ ಬಿಟ್ಟುದು ಬಾಣವರಿ ಭಟರ ।
ಆತನಾವೆಡೆ ಧರ್ಮಜನು ವಿ
ಖ್ಯಾತನರ್ಜುನನನಿಲಸುತ ಮಾ
ದ್ರೀತನುಜರೆಂದೆನುತ ಹೊಕ್ಕುದು ರಾಜ ಮೋಹರವ ॥ ೩೯

ಹರಿಯ ಬಯ್ಗುಳು ಬೆದಱಿಸಲು ನೃಪ
ನಿರೆ ನಿರಾಯುಧನಾಗಿ ಮಾದ್ರೀ
ಯರು ಶಿಖಂಡಿ [1]ಯುಯುತ್ಸು ಸಾತ್ಯಕಿ ಸೃಂಜಯಾದಿಗಳು[1] ।
ಕರದ ಕದಪಿನ ತಳಿತ ಮುಸುಕಿನ
[2]ಮುರಿದ ಮೋರೆಯ[2] ಮುಂದೆ [3]ಹರಹಿದ[3]
ತರತರದ ಕೈದುಗಳ ಸುಭಟರ ಕಂಡುದಮಳಾಸ್ತ್ರ ॥ ೪೦

ಏಕೆ ನಾಚಿಕೆ ಧರ್ಮಹಾನಿ
ವ್ಯಾಕುಳತೆಯಿನ್ನೇಕೆ ವೈದಿಕ
ಲೌಕಿಕವದೇಗುವುವು [4]ಜೀವವ್ರಯಕೆ ಕುಲವುಂಟೆ[4] ।
ಏಕೆ ಭಯ ನಮಗಿನ್ನು ಕೈದುವ
ನೂಕಿದವರನು ಹೆಂಗುಸನು ತಾ
ಸೋಕಿದರೆ ಮುರಹರನ ಪದದಾಣೆಂದುದಮಳಾಸ್ತ್ರ ॥ ೪೧

ಇವರೊಳುಂಟೇ ಕೈದುವೊತ್ತವ
ರವರನಱುಸುವೆನೆನುತ ಬರಲಾ
ಪವನಸುತನನು ಥಟ್ಟಿಸಿದನಾ ದನುಜರಿಪು ಮುಳಿದು ।
ಅವನಿಗಿಳಿದೀಡಾಡಿ ಕಳೆ ಕೈ
ದುವನು ತಾ ಮೊದಲಾಗಿ ನಿಂದಂ
ದವನು ನೋಡೆನಲನಿಲಸುತ ನಸುನಗುತಲಿಂತೆಂದ ॥ ೪೨

ದೇಹ ಕೀರ್ತಿಗಳೊಳಗೆ ನಿಲುವುದು
ದೇಹವೋ ಕೀರ್ತಿಯೊ ಮುರಾಂತಕ
ಬೇಹುದನು ಬೆಸಸಿದಡೆ [5]ಮಾಡೆನು ಬಲ್ಲಿರೆ[5]ನ್ನನುವ ।

---

[1] ಕುಮಾರಕರು ಪಾಂಚಾಲನಂದನರು (ಸ.ಕ). [2] ಹುದಿದವೋನದ (ಸ. ಕ). [3] ಹಸರದ (ಕ). [4] ಜೀವವ್ರಯಕೆ ಕಲಿಯುಂಟೆ (ಕ), ಜೀವನ್ಯಾಯ ಕೊಲಲುಂಟೆ (ಟ.ದ), ಜೀವವ್ಯಯಕೆ ಫಲವುಂಟೆ (ತ.ಪ). [5] ನಾನೇಬಲ್ಲೆನೆ (ಕ).

ಗಾಹು ಗತಕದಲುಳಿವ ಧರ್ಮ
ದ್ರೋಹಿ ತಾನಲ್ಲಿನ್ನು ನೋಡಾ
ಸಾಹಸವನೆನುತಿತ್ತ ಮುರಿದನು ಸರಳ ಸಮ್ಮುಖಕೆ ॥ ೪೩

ಪೂತು ಪಾಯಿಕು ಭೀಮ [1]ನೆರದೀ[1]
ಬೂತು ಬಲದಲಿ ವೀರ ನೀನಹೆ
ಯೇತಕಿವದಿರು ಗಂಡು ಜೋಹದ ಗರುವ ಸೂಳೆಯರು ।
ಸೋತಡೆಯು ಜಯ ನಿನ್ನದೆನುತ ವಿ
ಧೂತಧೂಮದಿ ಕಿಡಿಯ ಝಾಡಿಗ
ಳೀತನನು ಮುಸುಕಿದವು ಚುಂಬಿಸಿತಂಬು ಪವನಜನ ॥ ೪೪

ಗಿರಿಯ ಮುತ್ತಿದ ಮುಗಿಲ ವೋಲು ಹೊಗೆ
ಹೊರಳಿಗಟ್ಟಿತು ಮೇಲೆ ದಳ್ಳುರಿ
ಧರಧುರದಲೊಳಬೀಳುತಿದ್ದವು ಕಿಡಿಯ [2]ಚೂಣಿಯಲಿ[2] ।
ಉರಿಯೊಳದ್ದೆ ತಮ್ಮ ಹಾಯೆಂ
ದರಸ ಮೊದಲಾದಖಿಳ ಭೂಪರು
ಕರದ [3]ಬಿಱುವೊಯ್ಲುಗಳ ಬಾಯವರೊಱಲಿ ಹೊರಳಿದರು[3] ॥ ೪೫

ವಾಯುಸುತ ಹಾ ಯೆನುತ ಫಲುಗುಣ
ಬಾಯಬಿಡೆ ಹರಿ ಜಱೆದನಳುವನ
ಬಾಯ ನೋಡಾ ಬೇಗ ತೊಡು ತೊಡು ವರುಣ ಮಾರ್ಗಣವ ।
ಸಾಯಲಱಿಯನು ಭೀಮನೆನೆ ನಾ
ರಾಯಣನ ನುಡಿಯಿಂದ ಮುನ್ನ ಜ
ಲಾಯತಾಸ್ತ್ರವನರ್ಜುನನು ಗಾಂಡಿವದಲುಗುಳಿಸಿದ ॥ ೪೬

ಹೊಗೆಯನೊದೆದೊಳಬಿದ್ದು ಕಿಡಿಗಳ
ನುಗಿದು ದಳ್ಳುರಿದುಱುಗಲನು ತನಿ
ಬಿಗಿದು ಭೀಮನ ರಥದ ಸುತ್ತಲು ಸೂಸಿ ತೆರೆ ಮಸಗೆ ।
ಹಗೆಯನೆನಗಿದಿರೊಡ್ಡಿ ಜುಣುಗಲು
ಬಗೆದರೇ ಖಂಡೆಯದ ಮೊನೆಯಲಿ
ಮಗುಳಿಚುವರೇ ತನ್ನನೆನುತುರವಣಿಸಿತಮಳಾಸ್ತ್ರ ॥ ೪೭

---

[1] ನಿಂದೀ (ಟ. ದ). [2] ಗಡಣದಲಿ (ಟ. ದ). [3] ಬಾಯ್‌ಹೊಯ್ಲುಗಳಲಿ ಹೊರಳಿದುದಖಿಳಪರಿವಾರ (ಟ. ದ).

ಉಱುಬಿದವು ಕೇಸುರಿಗಳುದಕವ
ಸುಱಿದುವೊಣಗಿಲುಗಿಡಿಯು ಹಬ್ಬುಗೆ
ಹೊಱಗೆ ಮಸಗಿತು ಮುಸುಕಿತುದಕದ ಬಾಣವಕ್ಕುಡಿಸೆ ।
ಒಱತೆಯಾಱಿತು ವರುಣ ಶರ ಬಾ
ಯಱತು ನೀರಡಿಸಿದುದು ಭೀಮನ
ಸೆಱಗ ಹಿಡಿದಳು ಮೃತ್ಯುವವನೀಪಾಲ ಕೇಳೆಂದ ॥ ೪೮

ಆವ ಶರವಿದ್ದೇಗುವುದು ಮೈ
ಗಾವನಸುರಾಂತಕನಲ್ಲೈ ತಾ
ನಾವ ವಹಿಲದೊಳುರಿಯೊ[1]ಳೆಡೆಹಾಯ್ದು[1]ನಿಲಜನ ತೆಗೆದ ।
ನಾವಱಿಯೆವಾ ಪವನಜನ ಶ
ಸ್ತ್ರಾವಳಿಯನಾ ಫಲುಗುಣನ ಗಾಂ
ಡೀವವನು ಹರಿ ಸೆಳೆದುಕೊಂಡನು ಬಿಸುಟನವನಿಯಲಿ ॥ ೪೯

ಮುರಿಮುರಿದು ಕಬ್ಬೊಗೆಯ ಹೊದಱಿನ
ಹೊರಳಿ ಹರೆದುದು ಸೂಸುಗಿಡಿಗಳ
ನೆರವಿ ನಸಿದುದು ನಿಮಿರ್ದ ಹೊಂಗಱಿಯಂಬು ಹೊಳೆಹೊಳೆದು ।
ಮುರಹರನ ಪಾದಾರವಿಂದದ
ಹೊರೆಯೊಳಡಗಿತು ಹೋಯ್ತು ಭಯವು
ಬ್ಬರದೊಳಗೆ ಬೊಬ್ಬಿಱಿದವುರು ನಿಸ್ಸಾಳ ಕೋಟಿಗಳು ॥ ೫೦

ಜಗದುಸುರು ಪಸರಿಸಿತು ಹರುಷದ
ಹೊಗರು ಮಸಗಿತು ರಿಪು ನೃಪರ ನಿ
ನ್ನಗಡು ಮಗನುತ್ಸಾಹವದ್ದುದು ಖೇದ ಪಂಕದಲಿ ।
ಹೊಗೆವ ಮೋಱೆಯ ಕಯ್ಯ ಗಲ್ಲದ
ಬಿಗಿದ ಬೆಱಗಿನ ಖತಿಯೊಳುಸುರುವ
ನಗೆಯೊಳಶ್ವತ್ಥಾಮನಿದ್ದನು ಮೊಗದ ಮೋನದಲಿ ॥ ೫೧

ಏನು ಮಾಡುವೆನಿನ್ನು ಭಾಗ್ಯವಿ
ಹೀನನಕಟಾ ಕೌರವನು ಸುರ
ಧೇನು ನೆಱೆ ಗೊಡ್ಡಾಯ್ತು ಸುರತರು ಕಾಡ ಮರನಾಯ್ತು ।

---

1 ಳೆಡೆಬಿದ್ದು (ಕ.ಚ.ಟ).

ಹಾನಿಯಿವದಿರಿಗೊಲಿದುದಾರಿ
ದ್ದೇನಹುದು ಪರದೈವದನುಸಂ
ಧಾನವತ್ತಲು ಸುಡಲೆನುತ ತಿರುಗಿದನು ಪಾಳೆಯಕೆ ॥ ೫೨

ಬಂದು ವೇದವ್ಯಾಸಮುನಿ ಗುರು
ನಂದ[1]ನಂಗಱುಹಿ[1]ದನು ಪಾರ್ಥ ಮು
ಕುಂದರನು ಪೂರ್ವದಲಿ ನರನಾರಾಯಣಾಹ್ವಯದ ।
ಸಂದ ಋಷಿಗಳು ಭೂಮಿ ಭಾರವ
ನೊಂದುಪಾಯದಲಪಹರಿಸಲೈ
ತಂದ ಹದನನು ತಿಳುಹಿ ಬಂದನು ಫಲುಗುಣನ ಹೊರೆಗೆ ॥ ೫೩

ನರನ ಚಿತ್ತಗ್ಲಾನಿಯನು ಪರಿ
ಹರಿಸಿದನು ಶೂಲದಲಿ ಮುಂಕೊಂ
ಡರಿ ಬಲವನಿಱಿದಾತನಾರೆನಲಿಂದುಧರನೆಂದು ।
ಹರನ ಕರುಣದ ಹದನನೀತಂ
ಗೊರೆದು ಶತರುದ್ರೀಯವನು ವಿ
ಸ್ತರಿಸಿ ಬಿಜಯಂಗೈದನಾ ಮುನಿಪತಿ ನಿಜಾಶ್ರಮಕೆ ॥ ೫೪

ಬಿಸುಟ ಕೈದುಗಳೆಲ್ಲವನು ಕೈ
ವಶವ ಮಾಡಿತು ಸೇನೆ ಲಜ್ಜಾ
ರಸಕೆ ಗುಱಿಯಾಯ್ತೊಮ್ಮೆ ಮರಳಿದು ಹರುಷಮಯ ರಸಕೆ ।
ಮುಸುಕುದಲೆಯಲಿ ಮುರಿದುದದು ಭಯ
ರಸದ ರಹಿಯಲಿ ತಿರುಗಿತಿದು ರವಿ
ಮುಸುಡ ತಿರುಹಿ ವಿರಾಗದಲಿ ಬೀಳ್ಕೊಟ್ಟನಂಬರವ ॥ ೫೫*

---

[1] ನನಸಂತೈಸಿ (ಪ.ತ). * ೫೫ನೆಯ ಪದ್ಯವಾದಮೇಲೆ ಈ ಕೆಳಗಿನ ಪದ್ಯವು (ಗ) ಪ್ರತಿಯಲ್ಲಿ ಮಾತ್ರ ಇದೆ :—

ಜರಿದುದೈ ಕುರುಸೇನೆ ಕಂಗನೆ
ಕರಗಿ ಕೌರವ ನಮ್ಮ ದಳವನು
ತೆರಸು ಭಾಸ್ಕರ ನಂದನಾನೆಂಬ ಸಮಯದಲಿ ।
ತರಣಿ ಪಶ್ಚಿಮಕಿಳಿದನಾಬಲ
ವೆರಡು ತೆಗೆದೆವು ಸನ್ನೆಯಲಿ ಬಳಿ
ಕರಸ ಪಾಂಡವರೊಸಗೆಯನು ಬಣ್ಣಿಸುವರಾರೆಂದ ॥

ಆವ ಶರದಲಿ ಕೊಱತೆ ನಿನ್ನವ
ರಾವ ಬಲದಲಿ ಕುಂದು ಭುವನದೊ
ಳಾವನೈ ಸಮಜೋಳಿ ನಿನ್ನರಮನೆಯ ಸುಭಟರಿಗೆ ।
ಆವನಿದ್ದೇನಹುದು ಜಗದಧಿ
ದೈವದಲಿ ಸೆಣಸಿದಿರಿ ಪಾಂಡವ
ಜೀವಿಯೆಂದಱಿದಱಿದು ಗದುಗಿನ ವೀರ ನಾರಯಣ ॥ ೫೭*

ಹತ್ತೊಂಬತ್ತನೆಯ ಸಂಧಿ ಮುಗಿದುದು.

ಶ್ರೀಮದಚಿಂತ್ಯ ಗದುಗಿನ ವೀರನಾರಾಯಣನ ಚರಣಾರವಿಂದ ಮಕರಂದ
ಮಧುಪಾನ ಪರಿಪುಷ್ಟ ವಚಷ್ಷಟ್ಪದೀನಿಕಾಯ ಶ್ರೀಮತ್ಕುಮಾರ
ವ್ಯಾಸಯೋಗೀಂದ್ರ ವಿರಚಿತಮಪ್ಪ ಕರ್ಣಾಟ ಭಾರತ
ಕಥಾಮಂಜರಿಯೊಳ್ ದ್ರೋಣಪರ್ವಂ ಸಮಾಪ್ತಂ.

* ೫೭ನೆಯ ಪದ್ಯವಾದಮೇಲೆ (ಕ) ಪ್ರತಿಯಲ್ಲಿ ಮಾತ್ರ ಈ ಕೆಳಗಿನ ಪದ್ಯವು ಹೆಚ್ಚಾಗಿದೆ :—

ವಿಪ್ರರೀ ಕಥೆಗೇಳೆ ವೇದಪ
ವಿತ್ರರಹರು ಮಹಾವಿಭೂತಿಯು
ಕ್ಷತ್ರಿಯರು ಕೇಳಿದರೆ ಶೌರ್ಯಸಮರ್ಥರೆನಿಸುವರು ।
ಅರ್ಥಪತಿಯೆನಿಸುವರು ವೈಶ್ಯ ಚ
ತುರ್ಥಕರು ಧನ ಧಾನ್ಯದಿಂ ಸಾ
ಮುದ್ರಿಯೆನಿಸುಗು ಫಲಿದು ಭಾರತ ಕಥೆಯ ಕೇಳ್ವರಿಗೆ ॥

ಪರಿಶಿಷ್ಟ

ದ್ರೋಣಪರ್ವವನ್ನು ಶೋಧಿಸುವುದಕ್ಕೆ ಉಪಯೋಗಿಸಿಕೊಂಡಿರುವ ಎಲ್ಲ ಮಾತೃಕೆಗಳಲ್ಲೂ ಇಲ್ಲದೆ ಕೆಲವು ಮಾತೃಕೆಗಳಲ್ಲಿ ಮಾತ್ರ ಇರುವ, ಮೂಲಗ್ರಂಥಕ್ಕೆ ಸೇರಿರಲಾರವೆಂದು ತೋರಿಬಂದಿರುವ ಪದ್ಯಗಳನ್ನು ಈ ಕೆಳಗೆ ಕೊಟ್ಟಿದೆ.*

ನಾಲ್ಕನೆಯ ಸಂಧಿಯಲ್ಲಿ ೧೭ನೆಯ ಪದ್ಯವಾದಮೇಲೆ (ಕ.ಗ). ಪ್ರತಿಗಳಲ್ಲಿ ಮಾತ್ರ ಈ ಕೆಳಗಿನ ನಾಲ್ಕು ಪದ್ಯಗಳು ಹೆಚ್ಚಾಗಿವೆ.--

ತೊಡರನೈರಾವತಕೆ ಬಾಪುಲಿ
ಗಡಣದಲಿ ಬಂಧಿಸಿದ ವಾಮನ
ಪಡಿದೊಗಲ ಹಾಹೆಗಳ ವಾಮನ ಕುಮುದ ಮೊದಲಾಗಿ
ಪೊಡವಿಯೋ ತಾನೆಗಳಿಗಿಕ್ಕುವ
ಖಡುಗ ಲೌಡಿಯು ಬೀಸು ಕೈಗಳ
ನಡಸಿ ನಿರಿಸಿದನಿಬ್ಬಗಿಯ ಕಾಯುವನಬುಜ ವಳಯದ ||

ಇಡಿದ ತಳಪಟವರಿಗೆ ಹೊಜನು
ತ್ತಡಸಿ ಕವಿವಾ ಬಿಲ್ಲು ಬಿಲ್ಲಿನ
ಬಿಡೆಯೊಳೌಕಿದ ಮುಸುಂಡಿ ಸಲ್ಲಪ ಶಕುತಿ ಸಬಳದಲಿ |
ಅಡಸಿ ಚಾಚಿದ ಶೂಲಿಗೆಯು ರಥ
ಗಡಣೆಯಲಿ ಕರಿಘಟೆಗೆ ಜೋದರು
ಕಡುದು ನೂಕಿದರಮಮ ತೇಜಿಯ ನಿಲಿಸಿ ಮೋಹಿಸಿದ ||

ಮೊಗಕೆ ಮೋಹುವ ಚೌರಿಗಳ ಸಾ
ಲುಗಿವ ಪಲ್ಲವ ಸತ್ತಿಗೆಯ ಝಾ
ಡಿಗಳೊಳಗೆ ಕೈಗಾಯ್ದು ನಿಂದನು ಕರ್ಣ ಬಿಲುದೆಗೆದು |
ಜಗದ ಜಾಣರು ಸೀಮೆಯಲಿ ಹಳ
ವಿಗೆಯ ನೆಟ್ಟರು ನೃಪ ಮಹಾರಥ
ರೊಗೆದು ನಿಂದುದು ಶಲ್ಯ ಕೃತವರ್ಮಾದಿ ಪಟುಭಟರು ||

ಕುರುಳ ಕೊಂತದ ಡಂಕಣಿಯ ಸೀ
ಗುರಿಯ ಸೌರಂಭದಲಿ ಸಮರಕೆ
ಹರನ ಹೋಲುವಯಾತ ನಿಂದನು ಮೊದಲ ಬಾಗಿಲಲಿ
ಬರಿಗೆ ಕವಚವ ಬಿಗಿದು ಬಿಲ್ಲಿನ
ತಿರುವ ನೇವರಿಸುತ್ತ ಜುಂಜಿನ
ದುರುಳ ನಿಂದನು ಶಕುನಿ ಚಕ್ರದ ಮೊದಲ ಬಾಗಿಲಲಿ ||

---

* ಈ ಪದ್ಯಗಳಿಗೆ ಹೆಚ್ಚು ಮಾತೃಕೆಗಳ ಸಹಾಯ ದೊರೆಯದೇ ಇದ್ದುದರಿಂದ ಇವುಗಳನ್ನು ಶೋಧಿಸದೆ ಮಾತೃಕೆಗಳಲ್ಲಿ ಇರುವಹಾಗೆಯೇ ಕೊಟ್ಟಿದೆ

೨೦ನೆಯ ಪದ್ಯವಾದಮೇಲೆ (ಕ.ಗ). ಪ್ರತಿಗಳಲ್ಲಿ ಮಾತ್ರ ಕೆಳಗಿನ ನಾಲ್ಕು ಪದ್ಯಗಳು ಹೆಚ್ಚಾಗಿವೆ.—

ಭಟರ ಬಿಲು ಝೇಂಕಾರ ಹೊಯ್ಲಿನ
ಪಟಹದಬ್ಬರ ಲಗ್ಗೆ ಸೂಳಿನ
ಪಟುಭಟರ ಬೊಬ್ಬೆಗಳ ಘನ ತಂಬಟದ ಬಿರು ದನಿಯ ।
ಪಟುಭಟರ ಬೊಬ್ಬೆಗಳಲುಬ್ಬುವ
ಕಟಕದುರವಣೆ ತಪೆಯಲಾದುದು
ನಿಟಿಲ ನಯನನ ದಿನದೆಕೊಂದಗುವ ಕಡಲ ನಡುಗಿಸಿತು ॥

ಜವನಣಲು ಮೃತ್ಯುವಿನ ತಾಳಿಗೆ
ಬವರ ಭೈರವನದಟು ಕಂಠೀ
ರವನ ದಾಡೆಗಳಿಬುಬು ಭುಜಗನ ನಾಲಗೆಯ ಬಿಙುಃ
ಹವಣೆ ಘೇಗಳುವಡರದು ಬಿಟಿ ಸಿಡಿ
ಲವನಿಗಿಳಿದುದೊ ವಡಬವಹ್ನಿಯೊ
ಳವನಿಯಲಿ ಹೊಸತೆನಲು ಚಕ್ರವ್ಯೂಹ ರಂಜಿಸಿತು ॥

ಕಾಲರುದ್ರನ ಕೈಯ ಶೂಲಸ್ಥಂ
ಕಾಲಭೈರವ ಹಿಡಿವ ಬಿರು ಕರ
ವಾಳೊ ಪ್ರಳಯಾಂತಕನ ಕೋಣದ ಕೋಡ ಹೊಯ್ಲುಗಳೊ ।
ಹೋಲಿಸುವಡದು ಮೃತ್ಯುವಿನ ಗೋ
ನಾಳಿ ಹೊಗುವಡೆ ಕಡಲ ನಡುಸುಳಿ
ಕಾಳಮೇಘದ ಮೊತ್ತವೆನೆ ರಂಜಿಸಿದುದಾ ವ್ಯೂಹ ॥

ಮೊಳಗಿದವು ನಿಸ್ಸಾಳ ಕಡಲ
ವ್ವಳಿಸುವಂತಿರೆ ಮೊಱುವ ಭೇರಿಯ
ಘುಳುಘುಳುಧ್ವನಿ ಕೂಡೆ ಬಂದುದು ಕಮಠಜಾಂಡಪುಟ ।
ಉಲಿವ ತೇಜಿಯ ಝುಂಕೆಗಳ ಗೊಂ
ದಳದ ಕರ ಘಟೆ ಗಜಘಗಳ ವೆ
ಗ್ಗಳದ ದಂತಿಯ ಬೃಂಹಿತದ ಕೌರವಸೈನ್ಯ ಶರಧಿಯಲಿ ॥

೩೬ ನೆಯ ಪದ್ಯವಾದಮೇಲೆ ಈ ಕೆಳಗಿನ ಎರಡು ಪದ್ಯಗಳಲ್ಲಿ ಮೊದಲ ನೆಯದು (ಗ) ಪ್ರತಿಯಲ್ಲಿಯೂ ಎರಡನೆಯದು (ಕ.ಗ.ನ.ಬ) ಪ್ರತಿಗಳಲ್ಲಿಯೂ ಹೆಚ್ಚಾಗಿವೆ.—

ಕುಸುರಿದಱಿವೆನು ಸಮರ ಮಧ್ಯದೊ
ಳುಸುರ ತೆಗಬಗೆ ಮಾಡುವೆನು ಮ
ತ್ತಸುವನಿಳುಹುವೆನೆನ್ನೊಡನೆ ತೊಡಕಿದ ಮಹಾರಥರ ।
ಹೊಸ ಪರಿಯ ತೋಱುವೆನು ಲೋಕ
ಕ್ಕಸದಳನು ತಾನೆಸಗಿ ಕೊಂಬೆನು
ವಸುಮತೀಶ್ವರ ಕೇಳು ಭಾಷೆಯನೆಂದನಭಿಮನ್ಯು ॥

ಜವನ ಜಕ್ಕುಲಿಸುವರನೇಕರು
ಶಿವನ ಮಾರ್ಗದ ವೀರರಿಹರದು
ನವಗೆ ಸಹಿತಳವಲ್ಲ ನೀನೆಂತಲ್ಲಿ ಪಟುಭಟರ ।
ತಿವಿದು ಹೊಗುವ್ಯೆ ಮಗನೆ ನಿನ್ನತಿ
ಶಯ (?) ದ ನುಡಿಯಂತಿರಲೆನುತ ತ
ಕ್ಕವಿಸಿ ಮೋಹದ ಕಡಲೊಳವನಿಪ ಮೂಡಿ ಮುಳುಗಿದನು ॥

೪೧ ನೆಯ ಪದ್ಯವಾದ ಮೇಲೆ ಕೆಳಗಿನ ಪದ್ಯಗಳು (ಕ.ಗ.ಟ.ದ) ಪ್ರತಿಗಳಲ್ಲಿ ಹೆಚ್ಚಾಗಿವೆ.—

ಮಗನೆ ರಾಯರ ದಳಕೆ ನಿನ್ನನು
ಮಗುವನಱಿದಱಿದೆಂತು ಕಳುಹುವೆ
ನಗೆಯ ತಹರೇ ಭೀಮ ಪೇಳ್ವೆ ಶಿಶುಗೆ ಬುದ್ಧಿಯನು ।
ಅಗಣಿತದ ಶಿಶುವಿವನು ಕೋಟಿಯ
ವಿಗಡರಿದಿರಿಗೆ ನೂಕಲಾಱೆನು
ಹಗೆಯ ಗೆಲವನು ಸುಡಲಿ ಧರಣಿಯನೊಲ್ಲೆ ನಾನೆಂದ ॥

ಏಕೆ ನಿಮಗೀ ಚಿಂತೆ ವ್ಯೆರಿಯ
ತಾಕುವೆನು ಕೊಡು ವೀಳೆಯವ ಬಿಡು
ಕಾಕ ಬಳಸುವ ಹಿರಿದ ಗಳಹುವ ಮಗನೆ ತಾ ನಿಮಗೆ ।
ನೂಕಿ ನೋಡಾ ತನ್ನ ಕರಿ ಕಮ
ಲಾಕರವ ಕಲಕುವ ಪ್ರೆಲರಿಗಳ
ಜೋಕೆಯನು ಜರುಹುವೆನು ಭಾಷೆಯ ಬರಿಸಿ ಕಳುಹೆಂದ ॥

ಬೇಡ ಮಗನೇ ವ್ಯೆರಿ ನಾಯಕ
ವಾದಿಗಳು ವೆಗ್ಗಳರು ನಿನ್ನನು
ಬೇಡಿಕೊಂಬೆನು ತನಗೆ ನೂಕದು ನಿನಗೆಯಸದಳವು ।
ನೋಡ ನೋಡಲು ಕೊಲುವ ಮಾರಿಯ
ಕೇಡನಿದ ನಾ ನೋಡಲಾಱೆನು
ಕಾಡದಿಹುವ್ಯೆ ಕಂದ ನೀನೆನುತಿದ್ದನಾ ಭೀಮ ॥

ತುಡುಕಿ ವಜ್ರವ ವಾಸವನು ತ
ನ್ನೊಡನೆ ಸಮರಕೆ ಬರಲಿ ಮುಕ್ಕಂ
ಜೆಡೆಯ ಕೊಡಲಿಯ ರಾಮನಿಂದದಿರಾಗಿ ನಡೆತರಲಿ ।
ಕಡೆಗೆ ಮುರರಿಪು ಸಹಿತಲರ್ಜುನ
ತಡೆಯದೊಮ್ಮಿಗೆ ಬರಲಿ ಗೆಲವನು
ಪಡೆಯದಿದ್ದರೆ ನಿನ್ನ ಮಗನಲ್ಲೆನ್ನ ಕಳುಹೆಂದ ॥

೪೩ನೆಯ ಪದ್ಯವಾದ ಮೇಲೆ (ಕ.ಗ.ಚ.ನ) ಪ್ರತಿಗಳಲ್ಲಿ ಈ ಕೆಳಗಿನ ಪದ್ಯಗಳು ಹೆಚ್ಚಾಗಿವೆ.—

ಎಂದು ಹರಸಿಯೆ ಕಳುಹುವುದು ಬೇ
ಡೆಂದಡೆಯು ಕುರು ಬಲದ ಸುಭಟರ
ಕೊಂದೆನಲ್ಲದೆ ಮಾಣೆ ಮಾಣ್ಬಡೆ ನಿಮ್ಮ ಮೇಲಾಣೆ ।

ಎಂದು ಪಾದವ ಮುಟ್ಟಿ ಭೀಮಗೆ
ವಂದಿಸುತ ಸಹದೇವ ನಕುಲರ
ಗಂದು ಶಿಶುವಡಿಗೆಱಗಿ ನೇಮವ ಕೊಂಡನಾಹವಕೆ ॥

ಮಡಿಯ ಸಂವರಿಸುತ್ತ ಪಾರ್ಥನ
ಮಡದಿ ಹರಿತಂದಳು ಕುಮಾರನ
ಬಿಡದೆ ಬಿಗಿಯಪ್ಪಿದಳು ಮರಣವ ನೆನೆವರೇ ಮಗನೆ ।
ಮಿಡುಕಲಮ್ಮರೆ ಹಿರಿಯ ತಂದೆಗ
ಳೊಡಬಡರು ಮೋಹರವ ಬಯಸುವ
ಕಡುಮನದ ಕಾತರಿಗತನ ಬೇಡೆಂದಳಿಂದುಮುಖಿ ॥

ನಲಿವು ಹಿಂಗಿದ ತಾಯ ಕಂಗಳ
ಜಲವ ಸೆಱಗಿನೊಳೊರಸಿದನು ಪದ
ತಳನ ನೆತ್ತಿಯೊಳಾಂತು ಕಡುಹಿನ ಮನದ ಖತಿಯೋಱೆ ॥
ನೆಳೆದು ಖಡುಗವ ಜಡಿದು ರಣದ
ಗ್ಗಳೆಯ ಪರಿವಾರಕ್ಕೆ ಕೈ ಮುಗಿ
ದಳಲ ಕಡೆತೊಱು ಕೆಡಹಿದನು ನಿಜಗೋತ್ರ ಬಾಂಧವರ ॥

ಸೇಸೆಗಳ ತುಂಬಿದರು ನಯನಜ
ಲಾಂಬುರಪತೋಲಾಟದರು ಸಂ
ತೋಷಿಗಳು ಮುಱುಗಿದರು ಉತ್ತರೇ ರಮಣನನು ಹರಸಿ ॥
ಈ ಸಮಯದಲಿ ವೈರಿಮಕುಟ ವಿ
ಳಾಸರತ್ನವ ತಂದು ಕೊಡುವುದು
ಭಾಷೆಯನು ಸಲಿಸರಸ ಗೆಲು ಹೋಗೆಂದಳಿಂದುಮುಖಿ ॥

೫೧ನೆಯ ಪದ್ಯವಾದ ಮೇಲೆ (ಕ) ಪ್ರತಿಯಲ್ಲಿ ಕೆಳಗಿನ ಮೂಱು ಪದ್ಯಗಳು ಹೆಚ್ಚಾಗಿವೆ.—

ತೆತ್ತಿಸಿದ ನವರತುನದಿಂದಲಿ
ಮುತ್ತಿನುಂಡೆಯ ಜಾಳೆಯಂಗಳ
ಪತ್ತಿ ಪಚ್ಚೆಯ ಹಲಗೆ ಪವಳದ ಕಡೆದ ಬೋದಿಗೆಯ ।
ಎತ್ತ ನೋಡಿದಡತ್ತ ಹೇಮದ
ಪುತ್ತಳಿಯ ಸಾಲುಗಳ ಚಿತ್ರದ
ಪತ್ರದಲೆಸೆವ ರಥಕಳಶ ಮೇಲೆಸೆಯೆ (?) ॥

ಮಿಳಿರ್ವ ಹಳವಿಗೆ ಬಿಳಿಯ ಚಾಮರ
ಪೊಳೆವ ಸಿಂಧದ ದಿಗುವಳಯದಲಿ
ಪೆಱೆ (?) ದ ವಾಕಾಶದಲಿ ಮಿಂಚುವ ಧ್ವಜಪತಾಕಿಗಳ ।
ಬಳಿಯಲೈತಂದರು ಕುಮಾರನ
ರಣ (?) ವಿಜಯನಾಗೆಂದು ಬಿರುದಾ
ವಳಿಯನಂಗವಿಸುತ್ತ ಮಂಗಳ ರಭಸ ವೊಳಗುತಿರೆ ॥

ಬಾಲನೀ ಬಂದನು ಕುಮಾರ
ವ್ಯಾಳ ಅಹಿತ ಪಂಬಾಲನೀ
........ಬಂದನೈ ಎಂದೊದಱುದವು ಕಹಳೆಗಳು ।
........ಗೆಯು ಕೊಂಬಿನಹಿತ
ಹೇಳುವರೆ ಹದಿನಾಲ್ಕು ಲೋಕದ
ಬಾಲನೈದಿದನಮಮ ಚಕ್ರವ್ಯೂಹ ಭೇದವನು ॥

ತಡೆಯಲಹುದೇ ತಾಯೆ ರಿಪುಗಳ
ತಡೆಗಡಿದು ಸುಖಿಯಾಗು ರಣದ
ಗ್ಗಳೆಯ ಸುಭಟರ ಜಯಿಸು ಧುರಕೋಳಾಹಳಿಗನೆನಿಸು ।
ಹಿಡಿದ ಛಲ ಗೆಲು ಹಗೆಯ ಜಯಸಿರಿ
ಗೊಡೆಯನಾಗೆಂದೆನ್ನ ಹರಸದೆ
ಎಡಹುಗುವರೇ ತಾಯೆ ಎನೆನುತಿದ್ದನಭಿಮನ್ಯು ॥

ಕಲಕುವೆನು ರಿಪು ಸಾಗರವನಂ
ಜಲಿಪೆನಹಿತ ಕುಮಾರ ಶುಕವ
ತಲೆಯನರಿವೆನು ಸುರರುಘೇಯೆನೆ ಬೀದಿವರಿವರಿದು ।
ಗೆಲವ ಸೋಱೆಯ ಕೊಂಬೆನಿಂದಿನ
ಛಲವ ಮನ್ನಿಸದಿದ್ದೆನಾದರೆ
ಫಲುಗುಣಗೆ ನಿಮಗೆಂತು ಜನಿಸಿದೆ ತಾಯೆ ಹೇಳೆಂದ ॥

೫೦ನೆಯ ಪದ್ಯವಾದಮೇಲೆ (ಚ) ಪ್ರತಿಯಲ್ಲಿ [1] ಮುಟಿಯ ಸಾವರಿಸುತ್ತ [1] ಎಂದು ಮೊದಲಾದ ಮೂಱು ಪದ್ಯಗಳವೆ. (ಕ.ಗ) ಪ್ರತಿಗಳಲ್ಲಿ ಈ ಕೆಳಗಿನ ಪದ್ಯಗಳಿವೆ. —

ತರಿಸಿ ಮೆಱೆವ ಸುವರ್ಣ ರಥದೊಳು
ತುರಗವನು ಹೂಡಿದನು ಜಯ ಸಂ
ಗರದ ನಿಕರದ ಶಸ್ತ್ರತತಿಗಳ ಹೊದಱ ಹೊದೆಮುಗುಚಿ ।
ಬರಿಗೆ ಕವಚವ ಬಿಗಿದು ಬಿಲ್ಲಿನ
ತಿರುವನೇವರಿಸಿದನು ಕಡು ಬಲು
ಸರಳ ಸೆಳೆದನು ಬಾಲಕನು ಸಮರಾಂಗಕನುವಾದ ॥

ತಾಯಿಗೆಱಗಿಯೆ ಹರಸಿ ಸೇಸೆಯ
ತಾಯೆನಲು ಕಂಬನಿಯ ಕಡಲಿನೊ
ಳಾ ಯುವತಿ ನನೆದಳು ಕುಮಾರನ ನಿಲಿಸಲಳವಡದೆ ।
ಸಾಯ ಬಯಸಿದೆ ಮಗನೆ ವಿಧಿ ನಿನ
ಗಾಯುಷವ ಕಿಱಿದಾಗಿ ಕೊಟ್ಟನು
ಕಾಯಲಾಱೆನು ತನ್ನ ಜೀವವನೆಂದಳಿಂದುಮುಖಿ ॥

---

[1] ೨೭೮ ನೆಯ ಪುಟವನ್ನು ನೋಡಿ.

ಅಯ್ದನೆಯ ಸಂಧಿಯಲ್ಲಿ ೧ನೆಯ ಪದ್ಯವಾದಮೇಲೆ (ಕ.ಗ). ಪ್ರತಿಗಳಲ್ಲಿ ಈ ಕೆಳಗಿನ ಪದ್ಯಗಳು ಹೆಚ್ಚಾಗಿವೆ.—

ಒಡೆದುದೀ ಬ್ರಹ್ಮಾಂಡಮಂಡಲ
ಗಡಗಡನೆ ನಡುಗಿದುದು ಧನು ಜೇ
ವೊಡೆಯೆ ಮಾರ್ಬಲದವರು ಕೆಡೆದರು ತಾಱು ಥಟ್ಟಿನಲಿ ।
ಅಡಸಿ ಕಣೆಗಳು ಮುಕ್ಕುಱುಕಿ ಮುಂ
ಗುಡಿಯಲ್ಕೈತರೆ ಅರಿ ಸಮೂಹವ
ಕಡಿದು ಪರಹುತ ಹೊಕ್ಕ ಪದ್ಮದ ಮೊದಲ ಬಾಗಿಲನು ॥

ಬಾಗಿಲಲಿ ಸೈಂಧವನ ಸೇನಾ
ಸಾಗರವ ಮುಕ್ಕುಳಿಸಿದನು ಕೈ
ಲಾಗು ಮಿಗೆ ಸರಳೈದಱಿಂದೆಚ್ಚನು ಜಯದ್ರಥನ ।
ತೂಗಿ ಕಡೆದೆಗದೆಚ್ಚು ಗರುಡಿಯ
ಲಾಗುಕಾಱನ ರಥವ ಮುಱಿದನು
ಮೇಗಣಮರರು ಪೂತು ಪಾಯ್ಕನೆ ಕೆಣಕಿದನು ಬಲವ ॥

ಬಾಲಕನನೊಳಿಗವ ಮಾಡಿವ
ನೊಳಿಗವ ನಿಲಿಸೆಂದು ರಿಪುಗಳು
ಮೇಲುಗಾಳೆಗಕಳುಕಿ ನಿಂದರು ಬವರವನೆ ಕಂಡು ।
ಆಳಿನಲಿ ತಾಗಿದರು ವಿಂಧ ನೃ
ಪಾಲಕಾದಿಗಳೆಂಬರಿಗೆ ಕೆಂ
ಗೋಲ ಮಳೆಯನು ಕಱೆದರಾಯುಧ ಸಮರ ಸಾಹಸರು ॥

ಕೆಣಕಿ ತಾಗಿದ ಸಿಂಧುರಾಯನ
ಮಣಿರಥವ ಮುಱಿಯೆಚ್ಚು ಮಗಧನ
ಹೆಣನ ದಾವಣಿಗೆಡೆಹಿದನು ಸಮರಂಗ ಭೂಮಿಯಲಿ ।
ರಣವ ಸಾಕೆನಿಸಿದನು ಕಂಡುದ
ನೆಣಿಸಲತಿರಥರೊಂದು ಮುಂಚುವ
ಅಣಕಿಗರ ಮುಱಿಯೆಚ್ಚು ಹೊಕ್ಕನು ಶಕ್ರಸುತ ಸೂನು ॥

ಹೆಱತೆಗೆದು ಹೆಣಗಿದರು ರಿಪುಭಟ
ನುಱುಬೆಗಣೆಗಳ ಬಾತಿಯಲಿ ಮುಂ
ಕೊಱಸಿ ತಲೆವರಿಗೆಯಲಿ ಅಂತುದು ಖಂಡೆಯದ ಪಟುಭಟರು ।
ತಱಿದ ತಲೆಗಳನಡಸಿತಾ ರಥ
ಹರಿಸಬಹುದೇ ಯೆನಲು ಮೋಹರ
ದುಱುಬ ಹೊಕ್ಕನು ತಱುಬಿ ನಿಂದನು ಶಕ್ರಸುತ ಸೂನು ॥

ಆಱನೆಯ ಸಂಧಿಯಲ್ಲಿ ೫೧ನೆಯ ಪದ್ಯವಾದಮೇಲೆ (ಕ.ಗ). ಪ್ರತಿಗಳಲ್ಲಿ ಈ ಕೆಳಗಿನ ಎಲ್ಲಾ ಪದ್ಯಗಳೂ (ಟ.ಚ.ದ.ನ.ಪ). ಪ್ರತಿಗಳಲ್ಲಿ ಮೊದಲ ಎರಡು ಪದ್ಯಗಳೂ ಹೆಚ್ಚಾಗಿವೆ.—

ಸೇನೆ ಮುರಿದುದು ಮಕುಟವರ್ಧನ
ರಾನಲವುಕ್ಕವರಿಲ್ಲ ಪಾರ್ಥನ
ಸೂನು ರಣದಲಿ ಬೀದಿವರಿದನು ಗದೆಯ ತಿರುಹಿಸುತ ।
ಮಾನನಿಧಿಗಳು ಮುಂದುಗೆಟ್ಟರಿ
ದೇನು ಸಾಹಸ ಶಿಶುವಿಗೆನೆ ಮದ
ದಾನೆಗಳ ಹದಿನೆಂಟು ಸಾವಿರ ಘಟೆಯ ನೂಕಿದರು ॥

ಮದಕರಿಗಳುರವಣೆಗೆ ಮೇದಿನಿ
ಯದಿರಿತೆನೆ ನಡೆದುದು ಮಹಾದೇ
ವದಟರುರವಣಿಸಿದರು ಬಲು ಗಜಘಟೆಯ ನಾಯಕರು ।
ಪದಹತಿಯ ಕೆಂಧೂಳಿಯಮರರ
ಬೆದಱಿಸಿತು ಪರಬಲದ ಜೋಧರು
ಕದನದಲಿ ಬಿಱುಸರಳ ಮಳೆಗಱೆದೌಕಿದರು ಭಟನ ॥

ಈಡಿಱಿದವವಸಿಯಲಿ ವಿತಳದೊ
ಳಾಡಿದವು ಕಾಂಬೋಜರೊಳು ಕಟಿ
ದಾಡಿದವು ಕೈಲಾಸಪರ್ವತ ಮಂದರಾದ್ರಿಗಳು ।
ಕೋಡಿನೊಳು ಹೊತ್ತೆತ್ತಿ ಕೆಡಹುವ
ಝಾಡಿಯುರವಣಿಸಿತ್ತು ಕಿಡಿಗಳ
ಕೂಡೆ ಸುರಿಯುತ ಬರಲು ನಸು ನಗುತಿದ್ದನಭಿಮನ್ಯು ॥

ಭುಜವ ಹೊಯ್ದನು ಮೇಲಣಮರ
ವ್ರಜವುಘೇ ಯೆನೆ ನಡೆದು ಬಿಱುಬಿದ
ನಿಜ ಗದೆಯಲೊಳಹೊಕ್ಕು ಹೊಯ್ದನು ಗಜದ ಮಸ್ತಕವ ।
ಗಜದ ಗಾವಳಿ ಕೋದನೂಱಿಯ
ವಜಿತ ದಂತವ್ರಾತವನು ಗಜ
ಬಜಿಸಿ ತಿವಿದನು ಕರಿಘಟೆಯ ಹದಿನೆಂಟು ಸಾವಿರವ ॥

ಹೊಡೆದನಮಮ ಕುಮಾರ ಬಱಿ
ಸಿಡಿಲಡಸಿದಂತಾಯ್ತು ಕರಿಗಳ
ಗಡಣ ಕೆಡೆದವು ಮಸ್ತಕದ ಬಳೆ ಹಱಿದು ಕಳಚಿದವು ।
ಸಿಡಿದು ಕುಲಗಿರಿ ಬಿದ್ದುದೆನೆ
ಕಡಿಫಡೆದು ಕೂಗ್ಗೆಸಱಾಯ್ತು
ಬಗೆ(?)ದುದು ಕವಿ ಕುಮಾರವ್ಯಾಸ ಹೊಗಳುವಡಱಿಯೆ ನಾನೆಂದ ॥

ಹಿಂದೆ ಪಡಿಬಲವಿಲ್ಲ ಧನು (?)
ವೊಂದಿಲ್ಲ ರಥವಿಲ್ಲಹಿತ ರಾಯರ
ಮಂದಿಯನು ಗದೆಯಿಂದ ಸದೆದನಿದೇನು ಸಾಹಸವೊ ।
ಎಂದು ದಿವಿಜರ ಕೈಯ ಗಲ್ಲದ
ಲಂದು ಬೆಱಗಾಗಿರಲು ಹೇಸದೆ
ಕೊಂದನಕ್ಷೋಣಿಯನು ಆ ಗದೆಯಿಂದ ಹೊಯ್'ಹೊಯ್ದು ॥

ಗುರುಸುತನ ಸಾರಥಿಯು ಮಾದ್ರೇ
ಶ್ವರನ ರಥವನು ಕೃಪನ ತೇರಿನ
ತುರಗವನು ಕೆಡೆಯೊಯ್ದು ದ್ರೋಣನ ರಥವ ಹುಡಿಮಾಡಿ ।
ಅರಸನೇಱಿದ ಕರಿಗೆ ಹೊಯ್ದನು
ಮರಳಿ ದುಶ್ಶಾಸನನ ಮುಖವನು
ಚರಣ ತಳದಿಂದೊದ್ದು ಹೊಯ್ದನು ಮತ್ತೆ ರವಿಸುತನ ॥

ಆಱನೆಯ ಸಂಧಿಯಲ್ಲಿ ೫೫ನೆಯ ಪದ್ಯವಾದಮೇಲೆ (ಗ) ಪ್ರತಿಯಲ್ಲಿ ಈ ಕೆಳಗಿನ ಪದ್ಯಗಳು ಹೆಚ್ಚಾಗಿವೆ. —

ಕರವೆರಡ ಕಡಿವಡೆದಡಿವನೋ
ಸರಿಸದರೆಯಟ್ಟಿದನು ಗಾಲಿಯ
ಭರದಿ ತಿರುಹಿಟ್ಟಿ ಕೊಂದನತುಳ ಭುಜ ಬಲರ (?) ।
ಹರಿಯ ಚಾಪಳ ಚಕ್ರವಸುರರ
ಶಿರವನರಿವಂದದಲಿ ರಿಪು ಮೋ
ಹರದ ತಲೆಗಳ ಹರಹಿದನು ಚತುರಂಗ ಚಾಪಟನು ॥

ಅಸಮ ಪದ್ಮವ್ಯೂಹವನು ದಂ
ಡಿಸಿಯೆ ಧೂಳೀಪಟವ ಮಾಡಿದು
ಹೆಸರುವಡೆದತಿಖಳರ ನಡೆಗೆಡಹಿದನು ರಣದೊಳಗೆ ।
ಕುಸರಿದಱಿದನು ವಿಷಮ ವೀರರ
ವಸದಳದ ಕರಿಘಟೆಯ ಕೊಂದನು
ಬಸಿಯ ನೆತ್ತರು ಕಡಲುವರಿದುದು ಕೂಡೆ ರಣದೊಳಗೆ ॥

ಮುರಹರನು ತನ್ನಳಿಯನಿಂದಿನ
ಧುರದೊಳಗೆ ಕರವಱಿದನೆಂಬುದ
ನಱಿದು ಚಕ್ರಕೆ ಬೆಸಸೆ ಬಂದುದೊ ಎನುತ ಬಲವೆದಱಿ ।
ಹರಿಹರಿದು ಹರಿ ಚಕ್ರದಿಂದಿಡ
ಲಱಿದುದರಿಭಟರಥಟರನು
ಕರಿ ತುರಗ ರಥ ಕಾಲಾಳ ನಿಮಿಷದಲರಸ ಕೇಳೆಂದ ॥

ಏಳನೆಯ ಸಂಧಿಯಲ್ಲಿ ೪ನೆಯ ಪದ್ಯವಾದಮೇಲೆ (ಗ) ಪ್ರತಿಯಲ್ಲಿ ಈ ಕೆಳಗಿನ ಪದ್ಯಗಳು ಹೆಚ್ಚಾಗಿವೆ.—

ಅಲಗನೊಡಲೊಳು ತೊಳಸಿದಂತಿರೆ
ಬಳಲಿದನು ಭೂಪಾಲ ಭೀಮನು
ಮಲಗಿದನು ಮೋಹಾತಿರೇಕದ ಬೀಜವಂಕುರಿಸೆ ।
ಅಳಲ ಕಡಲಲಿ ಮುಳುಗಿದರು ಕಳ
ಕಳಿಸಿದರು ತಮತಮಗೆ ರಾಯನ
ಬಳಿಗೆ ಬಂದುದು ದುಗುಡ ಭರದಲಿ ನಿಖಿಳ ಪರಿವಾರ ॥

ಶಿಶುವಲಾ ಹದಿನಾಲ್ಕು ವರ್ಷದ
ಪಸುಳೆಯನು ರಿಪುಬಲದ ಮುಂದಿ (?)
ರಿಸಿಯಲಗು ಧಾರೆಯ ಮೊನೆಗೆ ನೂಕಿಯ ತಾನೆ ಕೊಲಿಸಿದೆನು ।
ವಸುಮತಿಯನಿನ್ನೊಲ್ಲೆ ನಾ ಪರ
ವಶವಹೆನಿನ್ನೆನುತ ಶೋಕಿಸಿ (?)
ಬಸವಳಿದು ಮಗ ಭಾವ ಹೃದಯವನು ನುಗಿದಡಾವರಿಸೆ ॥

ಅರಸ ಕಂಬನಿಗಳನು ಸೆರಗಿನೊ
ಳೊರಸಿದನು ಕಾಳೆಗಕೆ ನೂಕಿಯೆ
ತರುಣನನು ಕೊಲಿಸಿದೆನಲಾ ನನ್ನಂತೆ ಲೋಕದಲಿ ।
ಪರಮ ಪಾತಕರಿಲ್ಲ ನರರಲ
ಧರೆಯ ಲೋಲುಪ್ತಿಯಲಿ ಕಂದನ
ಮರಣವನು ಕಾಣಿಸಿದೆನೆನುತವನೀಶ ಬಿಸುಸುಯ್ದು ॥

ಏಳನೆಯ ಸಂಧಿಯಾದಮೇಲೆ (ಕ.ಗ.ಪ.ಬ) ಪ್ರತಿಗಳಲ್ಲಿ ಈ ಕೆಳಗಿನ ರಗಳೆಯು ಹೆಚ್ಚಾಗಿದೆ.—

ಹಾ ಮಗನೆ ಅಭಿಮನ್ಯು ಕುಮಾರಾ । ಹಾ ಮಹಿನೋದಾರ ಗಂಭೀರಾ ॥
ರಣದಲಿ ಕಾದುವ ಹರಯವೆ ಕಂದ । ಸೆಣಸುವ ವೈರಿಗೆ ವಡಬ ನಿವ್ಯಂದ ॥
ಗಲ್ಲವ ಪಿಡಿದರೆ ಬಜೆ ಹಾಯ್ದಪುದೊ । ಎಲ್ಲಿಯ ಕಾಳೆಗ ನಿನಗಾದಪುದೊ ॥
ಚಕ್ರವ್ಯೂಹವಿದೆತ್ತಣ ಮಾರಿ । ವಿಕ್ರಮದಲಿ ನೀ ಮಡಿದೆ ಉದಾರಿ ॥
ಶಶಿವಂಶದ ಸಂತತಿಗಿನ್ನಾರೋ । ವಸುಧಾತಳಕಿನ್ನೊಡೆಯರದಾರೊ ॥
ಶಿಶು ನೀನಱುವೈ ಕಾಳೆಗದನುವ । ಅಸದಳ ಕೌರವ ಭೂಪನ ಮನವ ॥
ಸಿಂಹದ ಮಱಿ ಶರಭನ ಹಿಂಡಿನಲಿ । ಅಂಗೈಸಿದರುಳಿವುದೆ ತೊಂಡಿನಲಿ ॥
ನೀನಿಲ್ಲದೆ ಅರಮನೆಯೊಪ್ಪುವುದೆ । ನೀನಿಲ್ಲದೆ ಪಾಳೆಯವೊಪ್ಪುವುದೇ ॥
. . . .
ನೀನಿಲ್ಲದೆ ಪಾರ್ಥಗೆ ಗೆಲವಹುದೇ । ನೀನಿಲ್ಲದೆ ಚೌಕಿಗೆಯೊಪ್ಪುವುದೆ ॥
. . . .
ಮುಖವನು ತೋಱಭಿಮನ್ಯು ಕುಮಾರ । ಅಖಿಳಾವನಿಯೊಳು ರಿಪುಸಂಹಾರ ॥
ಬಾಲಕ್ರೀಡೆಯೊಳಾಡುವುದೆತ್ತ । ಕಾಳೆಗದೊಳು ಮಡಿವುದಿದೆತ್ತ ॥
ಶಿಶು ನಿನಗಲ್ಲಿಯ ಧೀರಾಳಾಪ । . . . .
. . . . . . ಕೊಲಿಸಿದರು । ಕಂದನನಿದು ಕಾರಣ ಸಾಕಿದರು ॥
ದೇವ ನಿಮ್ಮ ಮಾವನು ಅಸುರಾರಿ । ಭಾವನ ಕಂಡರೆ ಶಂಬರ ವೈರಿ ॥
ಹಡೆದಾತನು ಮೂಲೋಕದ ಗಂಡ । ಮಡಿದುದು ವಿಧಿಯೋ ರಣದುದ್ದಂಡ ॥
ಹಿರಿಯಯ್ಯನು ಭೀಷ್ಮಾದಿಗಳಿರಲು । ಇಱಿದವೆ ಮಗನೆ ಹಗೆಗಳ ಸರಳು ॥
ಏಕೊಬ್ಬನೆ ನೀ ರಣದಲಿ ನಿಂದೆ । ನಾಕದ ರಾಯರ ನಗರಿಗೆ ಸಂದೆ ॥
ದ್ರುಪದ ವಿರಾಟಾದಿಗಳವರೆಲ್ಲ । ತರಳನನೊಪ್ಪಿಸಿ ಕೊಲಿಸಿದರೆಲ್ಲ ॥
ವಿಪರೀತವಲಾ ನಿನ್ನಯ ಮರಣ । ರಿಪುಭಟರದಟರು ನಿನ್ನಯ ಹವಣ ॥
ಈ ಸಾತ್ಯಕಿ ನಕುಲಾದಿಗಳಿರಲು । ಸೋಮಕುಲದ ದ್ರುಪದಾದಿಗಳಿರಲು ॥

ಮಗನನು ಮುಂದಿಟ್ಟುರೆ ಕೊಲಿಸಿದರು।ಹಗೆಯಲ್ಲಿಗೆ ಮಗನನು ನೂಕಿದರು ॥
ಅತಿ ಮೋಹವಲಾ ಪುತ್ರನ ಶೋಕ । ಮತಿವಂತನೆ ತೋಱಾ ನಿಜ ರೂಪ ॥
ಹದಿನಾಲ್ಕನೆ ವರುಷದ ಬಾಲಕನೆ । ವಿಧಿಯೋ ರಣದಲಿ ಮಡಿವುದು ನಿನಗೆ ॥
ದಳ್ಳುರಿಯೊಡ್ಡಿನಲೊಂದು ಪತಂಗ । ನಿಲ್ಲದೆ ಮಡಿವುದು ರಣದಲಿ ಭಂಗ ॥
ಕಾಲನ ಜಂಗುಳಿಯುಸವಳವದಕೆ । ಕಾಲನನಂಗೈಸುವುದೇ ಧುರಕೆ ॥
ಎಲೆ ಧರ್ಮಜ ನೀನೇ ಕೈಕೊಟ್ಟು । ಕಂದನ ಕಳುಹಿದಿರೈ ಮನಗೊಟ್ಟು ॥
ನರ ನಡೆದನಲಾ ಕಾಳೆಗಕಂದು । ಬಾಲನ ಕೊಳುಗುಳಕಿಕ್ಕಿದರಿಂದು ॥
ಪರಿವಾರವನಾರೈ ನಂಬುವರು । ಧುರದೊಳದಾರೈ ನಿನ್ನನು ನಂಬುವರು ॥
ಹಲವರು ಮಂದಿಗಳೊಬ್ಬನೆ ಶಿಶುವ । ಕಳುಹಿ ಕೊಲಿಸಿದಿರಲ್ಲಾ ಮಗನಸುವ ॥
ಎನುತಂ ಗನೆ ಭೂಮಿಗೆ ಪೊಡೆವಡೆದು।ವನಿತೆ ಹೊರಳಿದಳು ಶೋಕವ ತಾಳ್ದು ॥
ಮುಡಿ ಹುಡಿಯಾಯ್ತು ಮೋಲುದು ಸಡಲಿ।ಉಡುಪತಿಯಂದದ ಮುಖ ನಸು ಮಸುಳಿ
ನಳಿತೋಳನು ಕೆದಱಿದಳವನಿಯಲಿ । ಹಲುಬಿದಳಭಿಮನ್ಯುವಿನಳಲಿನಲಿ ॥
ಹಾ ಶಶಿಕುಲದರಸುಗಳ ಲಲಾಮ । ಹಾ ಸಮರಂಗಕೆ ಪ್ರಳಯದ ಭೀಮ ॥
ಎಂದಭಿಮನ್ಯು ಕುಮಾರನ ನೆನೆನೆನೆದು । ಸಂದಣಿಸುವ ಕಂಬನಿಯೊಳು ನನೆದು ॥
ಅಳಲಿದಳಾ ದ್ರೌಪದಿ ಬಂದು । ದ್ರುಪದ ವಿರಾಟನ ಸತಿಯರು ಬಂದು ॥
ತರುಣಿಯ ಬಹು ದುಃಖವ ನಿಲಿಸಿದರು । ತನಯನ ತಾವೆಲ್ಲರು ನೆನೆನೆನೆದು ॥
ಎಳೆವಾಳೆಯ ಸಸಿಯನು ಕಡಿದಂತೆ । ಸಲೆ ಕುಂದಿದಳಾ ಕುವರನ ಕಾಂತೆ ॥
ನಯನ ಜಲಸಾಗರದೊಳು ನನೆದು । ಭಯ ಮಿಗೆ ಕಂದನ ಹಲುಬಿದಳಂದು ॥
ಅರಮನೆಯೊಳು ಕೋಳಾಹಳವಾಗೆ । ಪರಿವಾರವು ಘನ ಶೋಕಿತಮಾಗೆ ॥
ಅವರವರಳಲನು ಸಂತಯಿಸುತ್ತ । ಯಮರಾಜನ ಮಗ ಹಂಬಲಿಸುತ್ತ ॥
ಮುಸುಕನಿಕ್ಕಿ ಬಲುದುಗುಡವ ತಾಳ್ದು । ವಸುಧಾಪತಿ ನೆಱೆ ಚಿಂತೆಯ ತಾಳ್ದು ॥
ಮನದೊಳು ಧೈರ್ಯವ ಮುಪ್ಪುರಿಗೊಂಡು।ಮುನಿಯ ಮತವ ಮನದೊಳಗಿಂಬಿಟ್ಟು
ತರುಣಿಯ ಸಂತೈಸಿ ಕಳುಹಿದನು । . . . .
ಗುರು ಹಿರಿಯರು ಭೀಷ್ಮಾದಿಗಳೆಲ್ಲಾ । ತನಯನ ಬಹು ದುಃಖವ ತಾಳಿದರು ॥
ಸಮಸಪ್ತಕರಿರುಳಿನ ಕಾಳೆಗದಿ । ಸಹದೇವ ಪಾರ್ಥರು ಸಮರವ ಗಲಿದು ॥
ಸಿರಿಯರಸನ ಶ್ರೀ ಚರಣವ ನೆನೆದು । ಕರುಣಿಸಿ ರೂಪವ ತಾ ಕೈಕೊಂಡು ॥
ತೇರು ತುರಗ ಗಜ ಕಾಲಾಳುಗಳ । ತೇಜನ ಮನ್ನಿಯ ಮಂಡಲೇಶ್ವರರ ॥
ಮನ್ನಿಸುತಸುರಾರಿಯ ಕರುಣದಲಿ । ತಿರುಗಿದರೈ ತಮ್ಮಯ ಪಾಳೆಯಕೆ ॥
ಬರುತಿರೆ ಬಂದವು ಫಲುಗುಣಗಾಗ । ಅವಶಕುನವು ಅಲಸಿರೆಯಡಿಯಿಡಲು ॥
ಮುಪ್ಪುರಿಗೊಂಡಿತು ಮನದೊಳು ಶೋಕ।ತನುವಿಲಿ ಮುಱಿದವು ತನಯನ ಸರಳು॥
ನಯನ ಜಲಧಾರೆಗಳುಕ್ಕತಲಿ । ಬೆಸಸೆಂದನು ಅಸುರಾರಿಯ ಕಲಿ ಪಾರ್ಥ ॥

ರಗಳೆ ಮುಗಿದುದು.

ಎಂಟನೆಯ ಸಂಧಿಯಲ್ಲಿ ೩೮ನೆಯ ಪದ್ಯವಾದ ಮೇಲೆ (೧) ಪ್ರತಿಯಲ್ಲಿ ಈ ಕೆಳಗಿನ ಪದ್ಯಗಳು ಹೆಚ್ಚಾಗಿವೆ.—

ಅಳುವಿದನ ಪರಸತಿಗೆ ದ್ವಿಜ ಸಂ
ಕುಳವ ದೂಷಿಸಿದವನ ಕ್ರೋದೊಡ
ಗಲಿಸಿದನು ಗುರುನಿಂದಕನನನಾಚಾರವಂತಕನ ।

ಬಳಸಿ ಖಳರೊಳನಾಡಿದನ ದು
ಷ್ಕುಲಜನನು ಕರಸಿದನ ಬಡ
ಕಲಿಸಿದಾತನ ಕೊಲ್ಲದಿರ್ದಡ ನಾಳೆ ಸೈಂಧವನ ||

ಶೀತಕಂಜುವ ದ್ವಿಜನ ರಣವಿ (?)
ಘಾತಿಗಂಜುವ ಕ್ಷತ್ರಿಯನ ತಾ
ಸೋತುಮೃಷ್ಟಾನ್ನವನು ಸಾಕ್ಷಿಯಲುಂಬ ಪಾತಕಿಯ |
ಪ್ರೀತಿಯಲಿ ಪೆಣ್ಣಿತ್ತ ಮಾವನೊ
ಳಾತು ನೆಱೆ ಜೀವಿಸುವ ಮನುಜನ
ಪಾತಕವು ತನಗಾಗಲಾ ಸೈಂಧವನ ಕೊಲ್ಲದಡೆ ||

ಹಲವು ಮಾತೇನಿನ್ನು ಹಗೆವನ
ತಲೆಯನರಿವೆನು ನಾಳೆ ತರಣಿಯ
ಸುಳಿವು ಹಿಂಗದ ಮುನ್ನ ಕೊಲುವೆನು ಕಲಿ ಜಯದ್ರಥನ |
ಉಳಿದನಾದರೆ ಬಳಿಕ ವಹ್ನಿಯ
ಕಳೆಗೆ ಜೀವವನೊಪ್ಪಿಸುವೆನೆಂ
ದಲಘುಭುಜಬಲ ಪಾರ್ಥ ನುಡಿದನು ನೃಪತಿಯಿದಿರಿನಲಿ ||

ಒಂಬತ್ತನೆಯ ಸಂಧಿಯಲ್ಲಿ ೩ನೆಯ ಪದ್ಯವಾದ ಮೇಲೆ (ಟ) ಪ್ರತಿಯಲ್ಲಿ ಈ ಕೆಳಗಿನ ಪದ್ಯವು ಹೆಚ್ಚಾಗಿದೆ.—

ಕುಱಿಯ ಮಾಂಸದ ಕೋಳಿ ಕೋಣನ
ಮುಱಿದಲೆಯ ಮಾಸಲಿನ ರಕುತದ
ಜುಱುಜುಱಿನ ದೊಂಡೆಯಲಿ ಕಲಸಿದ ಕೂಳ ಮುದ್ದೆಗಳ |
ಅರಿ ನೃಪಾಲರ ಪಾಳೆಯದೊಳಾ
ಯಿತ್ತರುಳು ಮನೆಮನೆಗಳಲಿ ಶಸ್ತ್ರೋ
ತ್ಕರಸಮಾರಾಧನೆಯೊಳಿದ್ದುದು ಕೂಡೆ ನೃಪ ಕಟಕ ||

೩ನೆಯ ಪದ್ಯವಾದ ಮೇಲೆ (ದ) ಪ್ರತಿಯಲ್ಲಿ ಹೆಚ್ಚಾಗಿರುವ ಪದ್ಯಗಳು.

ಅರಿ ಮಹೀಶರನಟ್ಟಿ ನುಂಗುವ
ಗರಳದೊಬ್ಬುಳಿಕೆಗಳೊ ಭಯಂ
ಕರದ ಕಾಲನ ತೋಮರಪ್ರಾ ಭೈರವನ ಶಕ್ತಿಗಳೊ |
ಧರಧುರದಿ ಹೊಳೆ ಹೊಳೆವ ಶಸ್ತ್ರದ
ಕೆರಳಿಕೆಗಳೊದವಿದವು ತರಣಿಗ
ಳುರವಣೆಯನುಗುಳಿದವೆನಲು ರಂಜಿಸಿತು ರಜನಿಯಲಿ ||

ಉಚಿತದಲಿ ಕೊಂಡೊಯ್ದು ಶೂಲಿಯ
ವಚನದಲಿ ಕಳುಹಿಸುವೆನೆಂದಾ
ಶಚಿಯ ಗಂಡನ ಮಗನನೀಶನ ಪದವ ಕಾಣಿಸಿದ |

ಹರಿಯು ಬವರವನುಚಿತದಲಿ ಶಂ
ಕರನು ತಿಳಿದರ್ಜುನಗೆ ಶಸ್ತ್ರೋ
ತ್ಕರದ ಪರಿವಿಡಿಗಳನು ಸಾಂಗೋಪಾಂಗವೆನೆ ತಿಳುಹಿ ||

೧೦ನೆಯ ಪದ್ಯವಾದ ಮೇಲೆ (ಟ.ನ) ಪ್ರತಿಗಳಲ್ಲಿ ಹೆಚ್ಚಾಗಿರುವ ಪದ್ಯ

ಎನೆ ಹಸಾದವೆನುತ್ತ ನಿಜಕರ
ವನಜಕಳುಕಿದನಾದ ಸೇನಾ
ವನಧಿ ಮಿಗೆ ಗರ್ಜಿಸಿದವೆನೆ ಶೋದಯದ ಸಮಯದಲಿ |
ವನರುಹಾಕ್ಷ ವಿಶೇಷದಲಿ ಸಂ
ಜನಿಸಿ ಶಯ್ಯನಿನಾದ ಭೂಪರ
ವನಜಲಧಿ ದೆಖ್ಖಾಳದಲಿ ಜಯ ಘಂಟೆಯೊದಱುದವು ||

೧೧ನೆಯ ಪದ್ಯವಾದ ಮೇಲೆ ಮೇಲಿನ (ಟ.ನ) ಪ್ರತಿಗಳಲ್ಲಿ ಹೆಚ್ಚಾಗಿರುವ ಪದ್ಯಗಳು.—

ವಾರುವನು ಹಲ್ಲಣಿಸಿ ಗುಳವನು
ವಾರಣಕೆ ಬೀಸಿದರು ತೇಜಿಯ
ತೇರ ನೊಗನನು ಹಾಯ್ಕಿ ಕೈದುವ ಕೊಳಲಿ ಕಾಲಾಳು |
ವೀರರನು ಬರಹೇಳು ನೆರೆಯಲಿ
ಬಾರದಾಹವವೆಂದೆನುತ ಕೈ
ವಾರವನೆ ನೆಱೆ ಕಾಂಬೆನೆಂಬಬ್ಬರಣೆ ರಂಜಿಸಿತು ||

ಎಲೆಲೆ ಹೋಗಲಿ ಹೋಗಲಿದಿರಲಿ
ಸುಳಿಯಬೇಡಾ ಸಾರು ಸಾರೆಂಬ
ಲುಲಿಗಳು ಮದದಾನೆ ತುಳಿದಾಡಿದವು ಬೀದಿಯಲಿ |
ಮುಳಿದು ತುರಗದ ವಾಸನೆಯಲಿ
ವ್ವಳಿಸಿ ಗಗನವನಡರೆ ಹಾಯ್ದವು
ಖಳಿಖಟಿಲ ಶಬ್ದವ ಖುರದಲಿ ಚಟುಳ ತೇಜಿಗಳು ||

ಪ್ರಳಯ ಜಲನಿಧಿ ರಭಸಗೊಟ್ಟಿದ
ಹೊಳಕೆಯನೆ ನಿಸ್ಸಾಳ ತತಿಗಳು
ಮೊಳಗಿದವು ಪಟುಭಟರ ಬೈದವು ಕೊಂಬು ಕಹಳೆಗಳು |
ಗುಳವ ಹೊಯ್ದಾನೆಗಳು ನೆರೆದವು
ತಳಪಟಕೆ ಮೋಹರಿಸಿ ತುರಗದ
ದಳದ ದುವ್ವಾಳಿಗಳು ಮುಂದಿಯ ಬೆಟಿಗ ಕೂಡಿದವು ||

ತೊಳೆವ ಸೂರ್ಯಗೆ ರಥದ ಘನಸಂ
ಕುಳದ ಸಂದಣಿಯಾಯ್ತು ಭೂಪರ
ವಿಳಯದಲ ಸಂಬಾಳಿ ಪಾಯವಧಾರುಗಳ ರಭಸ |

ತುಳುಕಿದವು ರತ್ನಾರತಿಯ ಬೆಳಕು
ಗಳು ಭೂಪರ ಕಟಕವೆರಡಱ
ಕಳಕಳಿಕೆ ಕಲ್ಪಾಂತರುದ್ರನ ಗಜಱು ಗಾಢಿಸಿತು ||

೧೫ನೆಯ ಪದ್ಯವಾದಮೇಲೆ (ಟ.ನ) ಪ್ರತಿಗಳಲ್ಲಿ ಹೆಚ್ಚಾಗಿರುವ ಪದ್ಯ.—

ತುರಗ ನಾಗ ವರೂಥದಲಿ ನೃಪ
ವರರಲಂಕೃತರಾಗಿ ದ್ರೋಣನ
ಬಿರುದ ಧೃಷ್ಟದ್ಯುಮ್ನನಿಳಯದ ಮುಂದೆ ಸಂದಣಿಸಿ |
ಎರಡು ಬಲದಲಿ ನಾಯಕರು ಸಂ
ವರಣೆಯುವರನು ಕಂಡು ಕಣಕರು
ವೆರಸಿ ನೋಡಿದರಿತ್ತರವರಾಕ್ಷೇಪದುದ್ಘಗೊರೆಯ ||

೨೧ನೆಯ ಪದ್ಯವಾದಮೇಲೆ (ಟ.ನ) ಪ್ರತಿಗಳಲ್ಲಿ ಹೆಚ್ಚಾಗಿರುವ ಪದ್ಯ —

ಪಳಹರದ ಪಲ್ಲವದ ಸತ್ತಿಗೆಯ
ಗಳವಿದಾಯಿಯಲರಬಿರುದ ಡೆಂ
ಕಳಿಯ ಸೀಗುರಿ ಪ್ರೌದರುಗಳ ತೋಮರದ ಸಂದಣಿಯ |
ಬಲ ತುರಂಗದ ಗಜಘಟೆಯ ಸಂ
ಕುಳದ ರಾಜಕುಮಾರಕರ ಮಂ
ಡಳಿಯೊಳಗೆ ಗರ್ಭಾಕೃತಿಯ ಮೋಹರಿಸಿದನು ಕಲಿ ದ್ರೋಣ ||

೨೫ನೆಯ ಪದ್ಯವಾದಮೇಲೆ ಮೇಲಿನ ಪ್ರತಿಗಳಲ್ಲಿ ಹೆಚ್ಚಾಗಿರುವ ಪದ್ಯ.—

ಬಲದಿ ತಳಿತ ಪತಾಕೆಯಬ್ಬರ
ದೊಳಗ ಮುಱಿದವು ಗಗನ ಗಂಗೆಯ
ಹಲವು ಕಾಲುವೆದೆಗೆದವನೆ ಝೂಟಿಸಿದ ಝಲ್ಲರಿಯ |
ಬಳಗವತ್ತೆಸೆದವು ಜಯದ್ರಥ
ನಳವಿಗೊಂಡಾ ನಿಶಾಂಧಕಾರದ (?)
ಸುಳಿವು ತಾನೆನೆ ಮುಱಿದುದಖಿಳವ್ಯೂಹ ರಚನೆಯಲಿ ||

೩೭ನೆಯ ಪದ್ಯವಾದಮೇಲೆ (ಗ.ಟ.ದ) ಪ್ರತಿಗಳಲ್ಲಿ ಹೆಚ್ಚಾಗಿರುವ ಪದ್ಯಗಳು.

ಸುರರಿಗಸದಳವೀ ಮಹಾಮೋ
ಹರದ ತೋಱಿಕೆ ತನ್ನ ಬಗೆಯುದೆ
ತರಳನಿದಿರಲಿ ತಿರುಗುವುದೆ ಆಚಾರ್ಯನೊಡ್ಡವಣೆ |
ಧರಣಿ ನೆಱೆಯದು ಪದಹತಿಗೆ ಹರ
ಹರ ಇದೆತ್ತಣ ದಳಘು ಮಾರಿಯ
ತೆರಳಿಕೆಯೊ ಮರು ಭಾಪೆನುತ ಹೊಗಳಿದನು ಕಲಿ ಪಾರ್ಥ ||

ಕುರುಬಲದ ಬೆಳವಿಗೆಯ ಬೆಳಸಿನ
ಹರಹನೀಕ್ಷಿಸಿ ಸರಳ ಬಿಡಲಾ
ಗರಸವ್ಕೆದಿತು ಸುರಪ ಯಮ ಪರಿವಾರವಂದಿನಲಿ |

ಸುರ ನಗರಿಯಲಿ ಯಮನ ಪುರಿಯಲಿ
ಥರಥರದ ಕೇರಿಗಳ ಸಲೆ ಸಿಂ
ಗರಿಸಿದರು ಸಂಗರಕೆ ಸಮ್ಮುಖವಾದನಾ ಪಾರ್ಥ ॥

೩೮ನೆಯ ಪದ್ಯವಾದಮೇಲೆ (ಟ.ದ) ಪ್ರತಿಗಳಲ್ಲಿ ಹೆಚ್ಚಾಗಿರುವ ಪದ್ಯಗಳು.

ಮರಳು ಫಲುಗುಣ ನಿನ್ನ ಕಂದನ
ಮರಣದೊಡನೊಡನಳಿಯದಿರು ಕಾ
ತರಿಸೆ ಫಲವಿನ್ನಿಲ್ಲ ಸೈಂಧವ ನಿನಗಗೋಚರನು ।
ಧರೆಯ ಲಂಪಟದಿಂದ ಬಾಣಕೆ
ಕೊರಳ ತೆಱದಿರು ತೊಲಗು ತೊಲಗೆಂ
ದರಿ ರಥನ ಕೆಣಕಿದನಲೈ ಧೃತರಾಷ್ಟ್ರ ಕೇಳೆಂದ ॥

ಫಡ ತೊಲಗು ಕೌರವ ಕ್ರತಾಂತನ
ಪಡೆಗೆ ಪಾರಣೆಯಾಗಳೀಗಳೆ
ನಡೆಸುವೆನು ನಾಕಕ್ಕೆ ನೆಱೆದ ಮಹಾರಥಾವಳಿಯ ।
ಬಿಡು ಮನವನಿದಿರಾಗು ಸೋತಡೆ
ತೊಡು ಪಥವ ನಿನ್ನುದರ ರಕ್ತವ
ಕುಡಿವ ಭಟ ಬೇಱೆನ್ನ ಕಾಡದಿರೆನುತ ತೆಗೆದೆಚ್ಚ ॥

ತರಹರಿಸಿ ಸರಳೈದಱಲಿ ರಿಪು
ನರನನೆಚ್ಚನು ಕೌರವಾನುಜ
ನೆರಡು ಶರದಲಿ ಪಾರ್ಥನೆಚ್ಚನು ವೈರಿಯಂಬುಗಳ ।
ಸರಳುತೀರಲು ಕಿತ್ತು ಸುರಗಿಯ
ಲುರವಣಿಸೆ ಕೂರಂಬಿನಲಿ ಮೊನೆ
ಸುರಗಿಯನು ಖಂಡಿಸಿದನರ್ಜುನನ ಸಮರದಲಿ ॥

೪೬ನೆಯ ಪದ್ಯವಾದಮೇಲೆ (ಟ.ನ) ಪ್ರತಿಗಳಲ್ಲಿ ಹೆಚ್ಚಾಗಿರುವ ಪದ್ಯಗಳು

ಸರಳ ತೆಗೆತೆಗೆದೆಸುತ ದ್ರೋಣನ
ಚರಣ ಕಮಲಕೆ ಕವಿದವೊಗ್ಗಿನ
ಸರಳು ತಾವೂದಗಿದವು ಕವಿದವು ಅರಳ ಮಳೆಯಂತೆ ।
ಗುರು ಕಿರೀಟಿಯನೆಸಲು ಪಾರ್ಥನೆ
ಹೊರೆಗೆ ಹೋದರೆ ಹಿಂಗುವುವು ಸಂ
ಗರದ ಸೌರಂಭದಲಿ ಬಳಲಿದರುಭಯನಾಯಕರು ॥

ಧುರದೊಳಾಂತಡೆ ಕಲ್ಪಶತವನು
ಮರಳಲೀಯನು ದ್ರೋಣನಿಂದಿನ
ಸರಸಿಜಾಕ್ಷನ ಸಾಕ್ಷಿಯಲಿ ಸೈಂಧವನ ಸಾಧಿಸುವ ।
ಬರವು ತನಗಲ್ಲದಡೆ ತಪ್ಪದು
ಸುರರ ಪದವೆಲೆ ಕೃಷ್ಣವಾಘೆಯು
ತಿರುಹಿಕೊಳ್ಳಡಹಯವನೆಂದನು ನಗುತ ಕಲಿ ಪಾರ್ಥ ॥

ತುರಗವನು ಚಪ್ಪರಿಸಿ ವಾಘೆಯು
ತಿರುಹಿ ಯೆಡ ವಾಘೆಯಲಿ ಸೂಚಿಸಿ
ಹರಿ ರಥವ ದೂವ್ವಾಳಿಸಿದನಾ ಬಾಹು ಪಾಶದಲಿ ।
ಅರರೆ ನರ ಜಾಱಿದನು ಭೋಂಕನೆ
ತರಳನಿವನೇ ಪೂತು ಸಾರಥಿ
ತುರಿತವೆಂತೆನೆ ನೂಕಿದನು ಫಲುಗುಣನ ಸಮ್ಮುಖಕೆ ॥

ಅಸುರಹರನೋಜೆಯಲಿ ಮೆಲ್ಲನೆ
ನುಸುಳಿದರೆ ಕೈಕೊಂಬ ದ್ರೋಣನ
ಹೆಸರನಱಿಯಾ ಪಾರ್ಥ ಧೂರ್ತನ ರಣಕೆ ಧೂರ್ಜಟಿಯು ।
ಎಸುಗೆಯೆಂತೆಮ್ಮೊಡನೆ ತೋಱಿಸು
ಸಹಸಮುಳ್ಳರೆ ಬಳಿಕೆನಲು ಬಾಣವ
ಮುಸುಕಿದರೆ ಮುರುಳಹಿರೆನುತ ಕೈಕೊಂಡನಾ ದ್ರೋಣ ॥

ಕಳನನತ್ತಲು ಹೋಗಲೀಯ್ಯದೆ
ಕಲಶಜನ ಕಾಲಾಟದಾಹವ
ದೊಳಗೆ ವಿಗಡಿಸಿ ಹೋಗಲೀಯನು ಗುರು ಸಮಗ್ರಬಲ ।
ತಿಳಿಯಲಿದು ತಪ್ಪಲ್ಲ ಗರ್ವಕೆ
ಕಳಲುವರು ವಿನಯಕ್ಕೆ ಕೊಡವರು
ತಲೆಯನಿದು ಹಿರಿಯರಿಗೆ ಗುಣವೆನುತೆಚ್ಚನಾ ಪಾರ್ಥ ॥

ಹತ್ತನೆಯ ಸಂಧಿಯಲ್ಲಿ ೧೭ನೆಯ ಪದ್ಯವಾದಮೇಲೆ (ಟ.ನ) ಪ್ರತಿಗಳಲ್ಲಿ ಈ ಕೆಳಗಿನ ಪದ್ಯಗಳು ಹೆಚ್ಚಾಗಿವೆ.—

ತೂಳಿದವು ಬರಿಕೈಗಳಲಿ ಕರ
ವಾಳ ಪಟ್ಟೆಯ ಲೌಡೆಯಲಿ ನೆಲ
ನೇಳೆ ನಡೆದವು ತಡೆದರರ್ಜುನನುರವಣೆಯ ರಥವ ।
ಮೇಲೆ ಕವಿ ಕವಿದೆಸುವ ಜೋದಾ
ಳಾಳಿ ವಿಲು ಕೆದಱಿದವು ಬೀಸರಿ
ಗೋಲನದ್ಭುತ ಸಮರವಾಯಿತು ಮತ್ತೆ ಪಾರ್ಥಂಗೆ ॥

ಅಳವಿದಪ್ಪದೆ ದಂತಿ ಘಟೆಗಳ
ನಳುಕದೆಚ್ಚನು ಶಿರವ ತಾಗಿದ
ಹಿಳುಕು ಪಂಚಕದಿಂದ ಬಿದ್ದುವು ಕರಿಗಳೆಡೆಗೆಡೆಯೆ ।
ತುಳುಕುವರಿಗೆಯೆ ಗುಳವ ವಜ್ರದ
ನಲಗ ಮುಱಿಯೊಡೆಯೆಚ್ಚು ಜೋದರ
ತಲೆಗಳನು ತುಂಡಿಸಿದನಿಭವನು ಹೊಕ್ಕು ಬೀದಿಯಲಿ ॥

೧೯ನೆಯ ಪದ್ಯವಾದಮೇಲೆ (ಟ.ನ) ಪ್ರತಿಗಳಲ್ಲಿ ಹೆಚ್ಚಾಗಿರುವ ಪದ್ಯಗಳು.—

ಇತ್ತಲರ್ಜುನನಹಿತ ಬಲದೊ
ತ್ತೊತ್ತೆಯನು ಸವಱುತ್ತಲಿರೆ ಬಳಿ
ಕಿತ್ತಲೀ ದ್ರೋಣನು ವಿರೋಧಿ ಮಹೀಶರನು ಕೆಣಕಿ ।

ಮುತ್ತಿದನು ಪಾಂಡವರ ಬಲ ಕೈ
ವರ್ತಿಸಿದನಂತಕನ ನಗರಿಗೆ
ತತ್ತಸಮರಕೆ ಹೊಕ್ಕರಾ ದ್ರುಪದಾದಿ ನಾಯಕರು ||

ಕೇಳು ಜನಮೇಜಯ ಧರಿತ್ರೀ
ಪಾಲ ದ್ರೋಣನು ಹೊಕ್ಕುರಿಪಿ ಪಾಂ
ಚಾಲರನು ಭಯಗೊಳಿಸಿದನು ಸಾತ್ಯಕಿ ವಿರಾಟರನು |
ಕಾಳೆಗಕೆ ಮೋಹರಿಸಿದವರವ
ರೂಳಿಗಕೆ ರಿಪು ಬಲ ಶರಧಿ ಕ
ಲ್ಲೋಲ ಮಸಗಿತು ಭೀಮಸೇನಾದಿಗಳು ತಾಗಿದರು ||

ನಕುಲ ಧೃಷ್ಟದ್ಯುಮ್ನ ವರ ಸಾ
ತ್ಯಕಿ ವಿರಾಟ ದ್ರುಪದಸುತ ಮ
ತ್ಸ್ಯಕನಸುತ ಸಹದೇವ ಪಾಂಚಜನ ಭೀಮನಂದನರು |
ಸಕಲ ಮೋಹರ ಸಹಿತ ಸಮರೋ
ದ್ಯುಕುತ ಕಲಶಾತ್ಮಜನ ಮೊನೆಯಲಿ
ಚಕಿತ ಚಾಪ ಶಿಳೀಮುಖರು ಮಾಟಾಂತರೊಗ್ಗಿನಲಿ ||

ಇವರೊಡನೆ ಗುರು ಕೆರಳಿ ಮಹದಾ
ಹವವ ಮಾಡಿದನಿತ್ತಲಿತ್ತಲು
ಕವಿದನರ್ಜುನನಸಮ ಗರ್ಭವ್ಯೂಹ ಮೋಹರವ |
ವಿವಿಧ ವಿವಧಾಂಕುರದ ನಾರಾ
ಚವನು ಕಾಣಿಸಿ ಕರ್ಣ ಮೊದಲಾ
ದವರ ಮುಂದಿರುಹಿಸಿದು ಗರ್ಭವ್ಯೂಹವನು ಮುರಿದ ||

೨೮ನೆಯ ಪದ್ಯವಾದಮೇಲೆ (ಟ.ನ) ಪ್ರತಿಗಳಲ್ಲಿ ಹೆಚ್ಚಾಗಿರುವ ಪದ್ಯ.—

ನೋಡುತಿರ್ದುದು ವೈರಿಬಲ ಮಾ
ತಾಡಲಮ್ಮದು ಪಾರ್ಥನುಬ್ಬಟೆ
ಘಾಡತನವೇನೆಂಬೆನೈ ಕುರುರಾಯ ಚಿತ್ತವಿಸು |
ನೋಡಲಚ್ಚರಿಯಾಗೆ ಧರಣಿಯ
ನೀಡಿರಿದು ನಿಜ ತುರಗದಳವಿಗೆ
ಜೇಡ ಕುಳಿಯನು ತೆಗೆದನರ್ಜುನನಸಮ ಸಮರದಲಿ ||

೩೨ನೆಯ ಪದ್ಯವಾದಮೇಲೆ ಮೇಲಿನ ಪ್ರತಿಗಳಲ್ಲಿ ಹೆಚ್ಚಾಗಿರುವ ಪದ್ಯ.—

ಸೀಸಕವನಿಳುಹಿದನು ಕವಚವ
ನೋಸರಿಸಿ ಮೊಚ್ಚೆಯವ ತೆಗೆ
ದಾಸುರಾರಿ ತುರಗಾವಳಿಯ ಸಂಕಲೆಗಳನು ಕಳಚಿದನು (?) |
ಆ ಸಮರ್ಥರು ನೋಡುತಿರೆ ರಣ
ದಾಸಜಿನ ತುರಗವನು ಉದಕ ನಿ
ವೇಶದಲಿ ಹೊಗಿಸಿದನು ನಿಮಿಷದಲವರ ಮನ ದಣಿಯೆ ||

೩೮ನೆಯ ಪದ್ಯವಾದಮೇಲೆ (ಗ.ಟ.ದ) ಪ್ರತಿಗಳಲ್ಲಿ ಹೆಚ್ಚಾಗಿರುವ ಪದ್ಯ. —

ಚಟುಳ ಹಯ ಖುರಪುಟದಿ ತೋರ್ಪ
ನಿಟಿಲ ನಿರ್ಗಮ ಧಾಳಧೂಳೀ
ಪಟಲ ದೂಸರ ಸಕಲ ಜನವಸುರಾರಿ ನಲವಿನಲಿ ।
ಪಟುಗತಿಯ ಗರುವಾಹಿಯಲಿ ನಂ
ಘಟಿಸಿ ಹಯವನು ಸುಳಿಸಿದನು ಚೌ
ಪಟದಲೊಯ್ಯಾರಿಸುತ ಮಿಗೆ ಬೋಳೈಸಿದನು ರಥವ ॥

೪೪ನೆಯ ಪದ್ಯವಾದಮೇಲೆ (ಟ. ನ) ಪ್ರತಿಗಳಲ್ಲಿ ಹೆಚ್ಚಾಗಿರುವ ಪದ್ಯ.—

ಉಲಿವಲಮ್ಮುವರಿಲ್ಲ ಬವರಕೆ
ನಿಲುವ ಚೂಣಿಗರಲ್ಲ ಮುಂಬಿಗೆ
ಹೊಳಕಬಲ್ಲವರಿಲ್ಲ ನಮ್ಮಯ ಬಲದ ನಾಯಕರು ।
ಚೆಲಿಸಿದರ್ಜುನನಾವ ತಪದಲಿ
ಬಳಲಿ ಕರುಣಾಳುಗಳ ದೇವನ
ನೊಲಿಸಿಕೊಂಡನೊ ಶಿವ ಶಿವೆಂದನು ದ್ರೋಣ ಕುರುಪತಿಗೆ ॥

೭೦ನೆಯ ಪದ್ಯವಾದಮೇಲೆ (ಟ. ನ) ಪ್ರತಿಗಳಲ್ಲಿ ಹೆಚ್ಚಾಗಿರುವ ಪದ್ಯಗಳು.—

ಸುರಪನಡವಿಯ ಸುಟ್ಟ ಗರ್ವದ
ಧುರಕೆ ಬಿಡುವ್ವುದು ಮಂಡಲೀಕರ
ಶಿರವ ಶೀಳಿದ ಗೆಲವ ತೆಗೆ ಗೋಗ್ರಹಣದಲಿ ಕೆಲರಾ ।
ಮರಳು ಮಾಡಿದ ಮಹಿಮೆಯನು ಮರೆ
ಮರಳು ಮರಳೆಲೆ ಪಾರ್ಥ ಹುತವಹ
ನರಮನೆಗೆ ನಡೆಯೆನುತ ತೆಗೆದೆಚ್ಚರು ಮಹಾರಥರು ॥

ಪೂತುರೇ ಕಲಿ ಪಾರ್ಥ ದೇವ
ವ್ರತಕ್ಕಚ್ಚರಿ ನಿನ್ನ ಬಲುಮೆ ಮ
ಹೀತಳಕೆ ಪೊಸತಹುದೆ ಬಿಲುವಿದ್ಯಾತಿಶಯತನಕೆ ।
ಆತುಕೊಳ್ಳೆಂತ್ರ ಕೋಲುಗಳ ಕೈ
ಯಾತವದಕಣಿಗಳಿಗೆವುಗ್ರಭ
ಟಾತಿಶಯರಾರೆನುತ ತೆಗೆದೆಚ್ಚರು ಮಹಾರಥರು ॥

೭೧ನೆಯ ಪದ್ಯವಾದಮೇಲೆ (ಟ. ನ) ಪ್ರತಿಗಳಲ್ಲಿ ಹೆಚ್ಚಾಗಿರುವ ಪದ್ಯ. —

ವಿರಥನಾದನು ಧರ್ಮಜನು ಸಂ
ಗರಕೆ ಮೊಖದಿರುಹಿದನು ನಕುಲನು
ತಿರುಗಿದನು ಸಹದೇವನಟ್ಟೈಸಿದನು ದ್ರುಪದಾಂಕ ।
ಸರಿದನಾ ಹೈಡಿಂಬಿ ಸಾತ್ಯಕಿ
ಬಿರುದ ಧೃಷ್ಟದ್ಯುಮ್ನನೆಂಬಿಸಿ
ಬರಿಗೆ ಪಲಾಯನವಾಯ್ತು ಕಳಶಜನಾಹವಾಗ್ರದಲಿ ॥

೭೨ನೆಯ ಪದ್ಯವಾದಮೇಲೆ (ಟ.ದ) ಪ್ರತಿಗಳಲ್ಲಿ ಹೆಚ್ಚಾಗಿರುವ ಪದ್ಯ.—

ಗುರು ಯುಧಿಷ್ಠಿರರಿಗೆ ಮಹಾಸಂ
ಗರವು ಗಾಢಿಸೆ ಕಂಡು ಫಲುಗುಣ
ನುರವಣಿಸಿ ತಾಗಿದನು ಮೇಣ್ ಕಲಶಜನ ರಥವ ।
ಹರಿಸುತನ ಕೈಗುಣವನೀಕ್ಷಿಸಿ
ಮರಳಿ ಪಾರ್ಥಯು ಕೊಂಡು ರಥವನು
ತಿರುಹಿದನು ಕಲಿ ದ್ರೋಣನೆಲೆ ಧೃತರಾಷ್ಟ್ರ ಕೇಳೆಂದ ॥

ಹನ್ನೊಂದನೆಯ ಸಂಧಿಯಲ್ಲಿ ೧೦ನೆಯ ಪದ್ಯವಾದಮೇಲೆ (ಟ. ತ. ದ) ಪ್ರತಿಗಳಲ್ಲಿ ಈ ಕೆಳಗಿನ ಪದ್ಯವು ಹೆಚ್ಚಾಗಿದೆ.—

ಅಸಮ ಸಮರದಲಖಿಳ ಭೂಭುಜ
ರಸುವ ಬಿಡಿಸಿದ ತೇರು ಕರಿಗಳ
ಕುಸುರಿದಱಿದನು ಹಯವ ಕೊಂದನು ಸರಳ ಸಾರದಲಿ ।
ನುಸುಳಲನಿಲಂಗರಿದೆನಲು
ಪಸರಿಸಿದನಹಿತರ ತಲೆಯನಭ್ರದೊ
ಳಸಮಬಲ ಕಾದಿದನು ಕಟ್ಟಾಳುಗಳು ಕೈಗೆಡಲು ॥

೧೨ನೆಯ ಪದ್ಯವಾದಮೇಲೆ (ಜ. ಟ. ತ.ದ) ಪ್ರತಿಗಳಲ್ಲಿ ಹೆಚ್ಚಾಗಿರುವ ಪದ್ಯ.—

ಹರಿದವರುಣ ಜಲೌಘವಭ್ರಕೆ
ಸಿರದ ಸಂದಣಿಯಾಯ್ತು ಸಾತ್ಯಕಿ
ನರ ವೃಕೋದರನಿಂದವಗ್ಗಳನೆನುತ ಬಲ ಬೆದಱೆ ।
ಉರವಣಿಸೆ ಜಲಸಿಂಧನೆಂಬರಿ
ಬಿರುದನಿಭಸೇನೆಯನು ನೂಕಿಸಿ
ಸರಳ ಮಳೆಗರೆವುತ್ತ ತಡೆದನು ಸಾತ್ಯಕಿಯ ರಥವ ॥

೧೪ನೆಯ ಪದ್ಯವಾದಮೇಲೆ (ತ.ಟ.ದ) ಪ್ರತಿಗಳಲ್ಲಿ ಹೆಚ್ಚಾಗಿರುವ ಪದ್ಯ.—

ಉರವಣಿಸಿ ಕೃತವರ್ಮನಂಬಿನ
ಸರಳ ಸುರಿವುತ ಕೆಣಕಿ ಕೈಕೊಂ
ಡರಿ ಭಟಾಗ್ರಣಿ ಮೆಚ್ಚಲೆಚ್ಚನು ಗೊಂಚಿನಂಬಿನಲಿ ।
ಅರರೆ ಕವಿದುದು ಶಕ್ರತನುಜನ
ಗರುಡಿಯುಹುದೋ ಬಲ್ಲೆನೆನುತಹ
ಶೌರ್ಯವದ್ಭುತವಾಯ್ತು ಸಾತ್ಯಕಿಯುಂಬನೊಡೆಯೆಚ್ಚ ॥

೧೭ನೆಯ ಪದ್ಯವಾದಮೇಲೆ (ಚ.ಟ.ದ) ಪ್ರತಿಗಳಲ್ಲಿ ಹೆಚ್ಚಾಗಿರುವ ಪದ್ಯ.—

ಕವಿದವಾನೆಗಳಲ್ಲಿ ರಾವುತರು
ರವಣಿಸಿದರು (?) ತಿವಿದರಂಬಿನ
ಸವಿಯ ಸಾರದಲವಘಟಿಸಿದರು ಸಬಳಿಗರು ।

ಸವಗ ಖಂಡಿಸಲೊಱಗಿದರು ಬಿ
ಲ್ಲವರು ಬಿಟ್ಟಿಱುಗಾಱರಾತನ
ಜವಗೆಡಿಸಿದರು ನಾಲ್ಕು ಕಡೆಯಲಿ ಮುಸುಕಿತರಿ ಸೇನೆ ||

ಹನ್ನೆರಡನೆಯ ಸಂಧಿಯಲ್ಲಿ ೪ನೆಯ ಪದ್ಯವಾದಮೇಲೆ (ಟ) ಪ್ರತಿಯಲ್ಲಿ ಹೆಚ್ಚಾಗಿರುವ ಪದ್ಯ.—

ವಿದಿತವರ್ಜುನನಿರಲು ನಮ್ಮ
ಭ್ಯುದಯವಾತನ ಮರಣವವರ
ಭ್ಯುದಯ ವಿದಕೇನಾಯ್ತೆಂಬುದನರುಹು ತನಗೆನಲು |
ಮದವದರಿಭಟ ಭೈರವಂಗಾ
ಕದನದುತ್ಸವವಾಯ್ತು ಭೂಪನ
ಪದಕೆಱಗಿ ಕೈಕೊಂಡನಣ್ಣನ ನಿರುಪಮಾಜ್ಞೆಯನು ||

೫ನೆಯ ಪದ್ಯವಾದಮೇಲೆ (ಟ.ತ) ಪ್ರತಿಗಳಲ್ಲಿ ಹೆಚ್ಚಾಗಿರುವ ಪದ್ಯ.—

ದೇವ ಕೌರವರಾಯ ಕಾನನ
ದಾವ ಶಿಖಿ ನಿಶ್ಶಂಕ ಘನ ಸಮ
ರಾವನೀಚೌಪಟ ವಿರೋಧಿ ಮನೋಜ ಜಯರುದ್ರ |
ದೇವಕುಲ ಸಂಭಾವ ಭೂಭುಜ
ರಾವು ರಾಜಪುರಟ್ಟ ಸುಸ್ಥಿರ
ಜೀವಿ ಭಾಪೆಂದೊದಱುತಿರ್ದುದು ಭಟ್ಟ ಸಂದೋಹ ||

೯ನೆಯ ಪದ್ಯವಾದಮೇಲೆ (ತ) ಪ್ರತಿಯಲ್ಲಿ ಹೆಚ್ಚಾಗಿರುವ ಪದ್ಯ.—

ಮಾರಿ ಬಾಯ್ದೆಱೆದಳೋ ಮಹಾದೇ
ವಾರದೀ ಬಲವೆನುತ ಕೌರವ
ವೀರರೊಳು ಗುಜುಗುಜಿಸಿ ತಲ್ಲಣಿಸಿತ್ತು ರಿಪುಸೇನೆ |
ಮಾರುತನ ರಿಪು ಮೇಘ ಪಟಲದ
ಸಾರಥನೊ ಪವನಜನ ಧುರ ಪರಿ
ವಾರಕುಳಿವಿಲ್ಲೆನುತ ಗಜಬಜಿಸಿತು ರಿಪುವ್ರಾತ ||

೨೧ನೆಯ ಪದ್ಯವಾದಮೇಲೆ (ಟ) ಪ್ರತಿಯಲ್ಲಿ ಹೆಚ್ಚಾಗಿರುವ ಪದ್ಯ.—

ಕಡಿದನಾನೆಯ ಕೊರಳುಗಳನರೆ
ಗಡಿದನಾರೋಹಕರ ಕಾಯವ
ನಡಗುದಱಿದನು ಸಮರದೊಳಗಿದಿರಾದ ಪಟುಭಟರ |
ಗಿಡಿಗನಿದಿರಾದಹಿಯ ಪೋಲು ವಂ
ಗಡದ ಮೋಹರವಳಿದುದನಿಲಜ
ನೊಡನೆ ಸಮ್ಮುಖವಾದವರಿಗೀ ಯಮನ ನಗರಿಯಲಿ ||

ಪದಿಮೂರನೆಯ ಸಂಧಿಯಲ್ಲಿ ೨ನೆಯ ಪದ್ಯವಾದಮೇಲೆ (ಟ.ದ) ಪ್ರತಿಗಳಲ್ಲಿ ಹೆಚ್ಚಾಗಿರುವ ಪದ್ಯ.—

ಅಹುದಹುದು ಕಲಿ ಭೀಮ ಸಮರದ
ಸಹಸಿಗಳ ಲೆಕ್ಕಿಸೆನು ನೀನತಿ
ಸಹಸಿಗಸುವನು ತೆಱವೆಯೆಂಬುದನಱಿಯಲಾ ಕೇಳ್ದು ।
ಒಹಿ ಮನದಲೆಸೆವಸ್ತ್ರ ತತಿಯನು
ವಹಿಲದಲಿ ಕೈಕೊಳಿಸ ಮುದದಲಿ
ಗಹಗಹಿಸಿ ಗರುವಾಯಿಯನುಪಮ ಪವನಜನ ಮೇಲೆ ॥

೯ನೆಯ ಪದ್ಯವಾದಮೇಲೆ (ಟ) ಪ್ರತಿಯಲ್ಲಿ ಹೆಚ್ಚಾಗಿರುವ ಪದ್ಯ.—

ಇಲ್ಲಿ ಕುಱಿದಱಿಯಾಯ್ತು ಹಯತತಿ
ಯಲ್ಲಿ ಪಲ್ಲಟವಾಯ್ತು ದಂತಿಗ
ಳಿಲ್ಲಿ ಕಿಗ್ಗಡಲಿಟ್ಟು ಹರಿದುದು ಶೋಣಿತಾಂಬು ನಿಧಿ ।
ಇಲ್ಲಿ ರಥ ಕಾಲಾಳು ಕರುಳಿನ
ಬಳ್ಳಿಯಿರುಬಿನೊಳಿಂದು ಕಾಲಿಡ
ಲಿಲ್ಲ ತಾನಿದು ಪವನಜನ ಪಥವೆನುತ ನಡೆತಂದ ॥

೧೯ನೆಯ ಪದ್ಯವಾದಮೇಲೆ (ಟ) ಪ್ರತಿಯಲ್ಲಿ ಹೆಚ್ಚಾಗಿರುವ ಪದ್ಯ.—

ಮುಱಿದು ಸೇನಾನಾಯಕರು ಕು
ಕ್ಕುರಿಸಿದರು ಕಲಿ ಭೀಮಸೇನನ
ಬಿಱುಬನಾನುವರಲ್ಲೆನಲು ಕಲಿ ಕರ್ಣನಿದಿರಾಗಿ ।
ತಱುಬಿದನು ದಿವ್ಯಾಸ್ತ್ರವನು ನಿ
ನ್ನುಱುಬು ಬೇಡೆಲೆ ಬಿಲುಗರುವವನು
ಮಱೆಯದಿರು ಫಡ ತೊಲಗು ತೊಲಗೆಂದೆನುತ ಮಾಱಾಂತ ॥

೨೦ನೆಯ ಪದ್ಯವಾದಮೇಲೆ (ಟ) ಪ್ರತಿಯಲ್ಲಿ ಹೆಚ್ಚಾಗಿರುವ ಪದ್ಯ.—

ಹೊಳೆವ ಕಂಗೆಂಪುಗಳ ಮೌಳಿಯ
ಲಲಿತ ರತ್ನದ ರೋಚಿಗಳ ಗಜ
ಗಲಿಸುವಂಬಿನ ವಾಯಿಧಾರೆಯ ಕಿಡಿಯ ಕಾಂತಿಗಳ ।
ಥಳಥಳಿಸೆ ಮುಂಕೊಂಡು ಕರ್ಣನ
ಕೊಳುಗುಳದನಹಹತ್ಯ ದಾವಾ
ನಳನುರುಜ್ವಾಲೆಗಳೆನಲು ಹೊಕ್ಕನು ಮಹಾಹವವ ॥

೨೧ನೆಯ ಪದ್ಯವಾದಮೇಲೆ (ಟ.ದ) ಪ್ರತಿಗಳಲ್ಲಿ ಹೆಚ್ಚಾಗಿರುವ ಪದ್ಯ.—

ರಾಯನೊಡವೆಯ ಸವಿಸವಿದುಪುಂ
ಬಾಯತಿಕೆ ನಿನಗಹುದು ಸಭೆಯಲಿ
ಬಾಯ ಬನ್ನಣೆಯಧಿಕ ವೀರಾಳಾಪ ನಿನಗಹುದು ।

ಗಾಯಕರು ಪಾಠಕರಿಗೊಡವೆಯ
ಬೀಯಮಾಡಿದು ಭಳಿರೆ ಭಾಪೆಂ
ದಾಯತಿಕೆ ರಾವವೆನ್ನುತುಱುಬಿದನು ಕಲಿ ಭೀಮ ॥

೪೯ನೆಯ ಪದ್ಯವಾದಮೇಲೆ (ಟ.ದ) ಪ್ರತಿಗಳಲ್ಲಿ ಹೆಚ್ಚಾಗಿರುವ ಪದ್ಯ.—

ತೂಗಿ ತೆಗೆದೆಚ್ಚನು ಕೃತಾಂತನ
ರಾಗವುಬ್ಬರಿಸುವ ಪ್ರಲರುಣಜ
ಲೌಘವನೇನನೆಂಬೆನ್ನೆ ಹೊನಲಿಟ್ಟುದುದರದಲ |
ತೂಗಿ ಥಟ್ಟುಗಿದಹಿತ ಸೇನೆಯ
ರೋಗರವರಸುಗಳು ಕುಡಿ ಬಿರು
ದೇಗಿದವು ಬಾಣೌಘವನೆ ರಿಪು ಗಾಲಿ ಮಸಗಿದವು ॥

ಹದಿನಾಲ್ಕನೆಯ ಸಂಧಿಯಲ್ಲಿ ೩೨ನೆಯ ಪದ್ಯವಾದಮೇಲೆ (ಗ) ಪ್ರತಿಯಲ್ಲಿ ಹೆಚ್ಚಾಗಿರುವ ಪದ್ಯಗಳು.—

ಹರನ ಭಾರಣೆಯುದಟರಂಧಾ
ಸುರನ ಸುವ್ರತೆ ಹಿರಣ್ಯಕನ ಧಿ
ಕ್ಕರಣೆ ತಾರಕನುಗ್ರ ತೀವ್ರತೆ ರಾವಣನ ಮುನಿಸು |
ವರ ರಘುಜ ಶರ ನಿರುತ ಲಕ್ಷ್ಮಣ
ನುರುವ ಶರಸಂಧಾನ ಧಿವಿಜೇ
ಶ್ವರನ ಭಾರಣೆ ವಿವಿಧ ಶರವಳವಟ್ಟುದರ್ಜುನಗೆ ॥

ಎಂದು ಮುರಹರ ಹೊಗಳುತಿರೆ ಕವಿ
ತಂದೆಸುವ ಸುಭಟರುಗಳಾ ಗುರು
ನಂದನಾದಿ ಮಹಾರಥರು ನರಳೊಂದನೊಂದುಗಿದು |
ಸಂದಣಿಸೆ ಬಾಣಗಳ ಕೈಮೆಯಲಿ
ಮುಂದೆ ಹಿಂದೆಡಬಲದ ಶೈಲದ
ಬೃಂದ ಮೇರುವಿನಂತೆ ಮೆಱೆದರಿ ಬಲವ ತಱಿದನು ನರನು ನಿಮಿಷದಲಿ? ॥

ನೊಂದನಾ ಕೃಪನಖಿಳ ಮೋಹರ
ದಂದವಳಿದುದು ಬಿಲ್ಲಗುರುವಿನ
ನಂದನನು ಮಸೆಗಂಡ ದುಶ್ಶಾಸನನು ಪ್ರೈಮುಱಿದ |
ಸಿಂಧುರಾಜನ ಬಳಿಗೆ ಸರಿಯಲು
ನಿಂದು ಕರ್ಣನನೆರಡು ಬಾಣದಿ
ದಂದುಗಕೆ ನಿಲಿಸಿದನು ಪಾರ್ಥನು ನಿಮಿಷ ಮಾತ್ರದಲಿ ॥

೩೭ನೆಯ ಪದ್ಯವಾದಮೇಲೆ (ದ) ಪ್ರತಿಯಲ್ಲಿ ಹೆಚ್ಚಾಗಿರುವ ಪದ್ಯಗಳು.—

ಮುರಮಥನ ಬಿನ್ನಹವು ರವಿ ತಾ
ನಿರದೆ ಪಡುವಲು ಸಾರ್ದ ಸೈಂಧವ
ನಿರವು ನೆಲೆಯಾಗದು ಮಹಾದೇವೆನುತ ರಥವಿಳಿದು |

ಹರಿಯು ನೀನೋಡನುತ ವಜ್ರದ
ಸರಳ ಕಿವಿವರೆಗುಗಿದು ಚಪುಕಕೆ
ಧರಣಿಯನು ಸೀಳಿದನು ನಿಮಿಷಾರ್ಧದಲಿ ಕಲಿ ಪಾರ್ಥ ॥

ಉರಿಯ ಬಾಣವ ತೊಡಚಿ ಕುಂಡದ
ಉರಿಯನನುಮಾಡಿಸಿತು . . ನಯ
ಹಿರಿಯ ಧರ್ಮಜ ಭೀಮರಿಗೆ ನಮಿಸಿದನು ಮನದೊಳಗೆ ।
ಸುರಪತಿಗೆ ಕೈಮುಗಿದು ದಿಕ್ಪಾ
ಲರಿಗೆ ವಂದಿಸಿ ಕೃಷ್ಣದೇವನ
ಚರಣ ಧೂಳಿಯ ಶಿರದೊಳಗೆ ಧರಿಸಿದನು ಕಲಿ ಪಾರ್ಥ ॥

ಮರಣ ಕಾಲದಿ ನಿನ್ನ ನಾಮ
ಸ್ಮರಣ ಮಾತ್ರದಿ ಸಕಲ ದುರಿತವು
ಹರದು ವೀರಸ್ವರ್ಗವಹುದಿದು ವೇದ ಸಿದ್ಧವಲೆ ।
ಹರಿಯೆ ನೀನೊಡೆನುತ ಕುಂಡವ
ನೆರಡು ಬಳಸನುವಂದು ದೇವನ
ಪರಮ ಮೂರ್ತಿಯ ಮನದೊಳಗೆ ಧರಿಸಿದನು ಕಲಿ ಪಾರ್ಥ ॥

ಮುರಮಥನ ಬೆಱಗಾಗೆ ಸುರಪತಿ
ನರನ ಕೇಡನು ಕಂಡು ಮನದಲಿ
ಮಱುಗಿದನು ಕಪಿ ಕುಲ ಲಲಾಮನು ಶಿರವನಾಗೊಲಿದು ।
ಹರಹರಾ ಸುತಶೋಕವಾವನ
ಹುರಳು ಗೆಡಿಸದು ಪೂತುರೇ ಯೆಂ
ದರೆಗಳಿಗೆ ಕಂಬನಿಯ ಕಡಲೊಳಗಾಳ್ದನಾ ಹನುಮ ॥